Downloaded from https:// www.studiestoday.com

ಹೈಯರ್ ಸೆಕೆಂಡರಿ

# ಕನ್ನಡ

HIGHER SECONDARY

# KANNADA

ತರಗತಿ

XI

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

Downloaded from https:// www.studiestoday.com

Downloaded from https:// www.studiestoday.com

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧ ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2014
Typesetting : SCERT
Lay out : SCERT
Cover design : SCERT
Printed at : Centre for Advanced Printing and Training, Thiruvananthapuram-695013
© Department of Education, Government of Kerala



Downloaded from https:// www.studiestoday.com

Downloaded from https:// www.studiestoday.com

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ ಭಾವನೆಗಳನ್ನೂ ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು, ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ ಎಂದು ಹಾರೈಸುತ್ತಾ.

ಪ್ರೀತಿಪೂರ್ವಕ ಹಾರೈಕೆಗಳೊಂದಿಗೆ,

**ಪ್ರೊ. ಕೆ.ಎ. ಹಾಶಿಂ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ



Downloaded from https:// www.studiestoday.com

Downloaded from https:// www.studiestoday.com

# ಭಾರತದ ಸಂವಿಧಾನ

## ಭಾಗ IV(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.


Downloaded from https:// www.studiestoday.com

Downloaded from https:// www.studiestoday.com

# TEXTBOOK DEVELOPMENT TEAM

## KANNADA
## STANDARD XI

### Participants
S. Baby, HSST (Jr.) Kannada, GHSS Kasaragod

A. Bharathi, HSST (Jr.) Kannada, GHSS Angadimogar

Dr. B. Gopalakrishna Bhat, PRINCIPAL, GHSS Paivalike

A.K. Preetham, HSST (Jr.) Kannada, BARHSS Bovikana

K. Ravikumar, HSST (Jr.) Kannada, GHSS Kumbla

K. Shahul Hameed, HSST (Jr.) Kannada, GVHSS Mulleria

K. Sreenivasa Ballullaya, HSST (Jr.) Kannada, GHSS Adoor

K.K. Vijayalaxmi, HSST (Jr.) Kannada, GHSS Mogral Puthur

### Experts
Dr. M. Rama, Rtd. Professor, Kerala Universtity, Thiruvanathapuram.

Dr. Srikrishna Bhat, Rtd. Professor, Govt. College, Kasaragod.

Dr. U. Maheshwari, HOD, Kannada Dept., Govt. College, Kasaragod.

Sreenatha A., Vice Principal, Govt. college, Kasaragod.

### External Experts
Dr. Subrahmanya Bhat, Rtd. HOD, Kannada, Govt. college, Kasaragod.

Padmanabha Poojari K., Rtd. Professor Kannada, Govt. college, Kasaragod.

### Artists
Dinesh Holla, Artist, Mangalore

Venkata Bhat, Artist, Edneer, Kasaragod.

### Academic Co-ordinator
Dr. C. Bhamini, Research Officer, SCERT, Thiruvananthapuram

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

Downloaded from https:// www.studiestoday.com

Downloaded from https:// www.studiestoday.com

# ಅನುಕ್ರಮಣಿಕೆ

ಪುಟ ಸಂಖ್ಯೆ

1. **ವರ್ಣನಾವಿಲಾಸ** 7–26
   - ಸುಗ್ಗಿ ಬರುತಿದೆ
   - ಕಡಲ ಒಡಲು
   - ಇದು ಬರಿ ಬೆಳಗಲ್ಲೋ ಅಣ್ಣಾ!

2. **ಜನ – ಜಾನಪದ** 27–48
   - ಇದ್ಯ ಬಲ್ಲವಗೆ ಭಯವುಂಟೆ
   - ಅಪ್ರತಿಮ ಪ್ರತಿನಾಯಕ ಶೇಣಿ
   - ಭೂತಾರಾಧನೆ ಮತ್ತು ತೆಯ್ಯಂ

3. **ಸಮಾಜ ದರ್ಶನ** 49–114
   - ಮೂಢನಂಬಿಕೆಗಳ ಬೇಡಿನಲ್ಲಿ
   - ಮಂಕುತಿಮ್ಮನ ಕಗ್ಗ
   - ಬಕ

4. **ಅರಿವು – ಕುರುಹು** 115–148
   - ಸುನಾಮಿಯ ಹಾಡು
   - ಒಸರು
   - ಬ್ಲೆನ್‌ಹೀಮ್ ಕದನ
   - ಹುಗ್ಗಿ


5. **ಹಿಂದಣ ಹೆಜ್ಜೆ** 149–172
   - ನಿನ್ನಯ ವೀರಶೈವರ ನೋಯಿಸೆನು
   - ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ
   - ವಚನಗಳು
   - ವಟವೃಕ್ಷಮೇ ಸಾಕ್ಷಿ

Downloaded from https:// www.studiestoday.com

Downloaded from https:// www.studiestoday.com

# ವರ್ಣನಾವಿಲಾಸ

ಭಾವವು ಭಾಷೆಯಲ್ಲಿ ಮೈತಳೆಯುವಾಗ ಅನೇಕ ಸಂದರ್ಭಗಳಲ್ಲಿ ವರ್ಣನೆಯನ್ನು ಆಶ್ರಯಿಸುತ್ತದೆ. ಅದು ಪ್ರಕೃತಿಯ ಸೌಂದರ್ಯಾನುಭೂತಿಯಿಂದ ಹೊಮ್ಮಿದ ಕವಿತೆಯಿರಬಹುದು, ಪ್ರವಾಸದ ವೇಳೆ ಕಂಡುಂಡ ವಿಶಿಷ್ಟ ಅನುಭವವಿರಬಹುದು, ಸುಂದರವಾದ ರಸಪೂರ್ಣವಾದ ಕವಿತೆಯ ಓದಿನಿಂದ ದಕ್ಕಿದ ಆನಂದವಿರಬಹುದು ಅಥವಾ ಕವಿ, ಕವಯಿತ್ರಿಯು ಭಾವಕೋಶದಲ್ಲಿ ಮುದ್ರೆಯೊತ್ತಿದ ವ್ಯಕ್ತಿತ್ವದ ಪ್ರಭಾವಳಿ ಇರಬಹುದು. ಭಾವವು ಕಲ್ಪನೆಯೊಂದಿಗೆ ಬೆರೆತು ವರ್ಣನಾವಿಲಾಸದಿಂದ ಓದುಗರಿಗೆ ಸಂತೋಷವನ್ನು ನೀಡುತ್ತದೆ. ಅಂತಹ ಗದ್ಯ ಹಾಗೂ ಪದ್ಯದ ಮಾದರಿಗಳು ಈ ಭಾಗದಲ್ಲಿವೆ.





Downloaded from https:// www.studiestoday.com

Downloaded from https:// www.studiestoday.com

# ಸುಗ್ಗಿ ಬರುತಿದೆ

**ಕುವೆಂಪು**

ನಿಸರ್ಗದ ಜೀವರಾಶಿಗಳೆಲ್ಲ ಭಗವಂತನ ಸೃಷ್ಟಿ. ಆಧ್ಯಾತ್ಮಿಕ ಪಿಪಾಸೆಯಿಂದ ಪ್ರೇರಿತರಾದ ಅನುಭಾವಿಗಳು ಪ್ರಕೃತಿಯಲ್ಲೇ ಭಗವಂತನನ್ನು ಅನ್ವೇಷಿಸುತ್ತಾ ಸಕಲ ಸೃಷ್ಟಿಯಲ್ಲಿ ಭಗವತ್ ಸ್ವರೂಪವನ್ನು ಕಾಣುತ್ತಾರೆ. ಮನುಷ್ಯ ಮಾಗಿದಂತೆಲ್ಲ ತನ್ನ ಸುತ್ತಲೂ ಸೌಂದರ್ಯದ ಭಾವಲೋಕವನ್ನು ನಿರ್ಮಿಸಬಲ್ಲ. ಅನುಭಾವಿಗಳಂತೆ ಅನುಭಾವಲೋಕವನ್ನು ಸೃಷ್ಟಿಸಬಲ್ಲ. ಅನುಭಾವಿಗಳಂತೆ ಪ್ರಕೃತಿಕವಿಗಳೂ ನಿಸರ್ಗವನ್ನು ಆರಾಧನಾ ಭಾವದಿಂದ ಕಾಣುತ್ತಾರೆ. ಕವಿ ಕುವೆಂಪು ಅವರು 'ಪ್ರಕೃತಿಯ ಆರಾಧನೆಯೇ ಪರಮನ ಆರಾಧನೆ' ಎಂದು ನಂಬಿದವರು. ಅವರ 'ಸುಗ್ಗಿ ಬರುತಿದೆ' ಕವನದಲ್ಲಿ ಇದೇ ಆಶಯವನ್ನು ಕಾಣಬಹುದು.



ಅಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ
ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗಸೊಗವ ತರುತಿದೆ
ಕಣಿವೆಯಿಳಿದು ತೆಮರನೇರಿ,
ತರುಗಳಲ್ಲಿ ತಳಿರ ಹೇರಿ,
ಹೊಸತು ಜೀವಕಳೆಯ ಬೀರಿ
ಸುಗ್ಗಿ ಮೂಡುತಿರುವುದು
ಬನದ ಬಿನದದಿನಿದು ನಿನದ ಮನದೊಳಾಡುತಿರುವುದು

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ,
ಮತ್ತ ಮಧು ಮಾಸವಿದು ಬನ್ನಿರೆಂದು ಸಾರುತ,
ಜಾರುತಿಹುದು ಮಾಗಿ ಚಳಿ
ಕುಸುಮಿಸಿರುವ ಲತೆಗಳಲಿ
ಮೊರೆಯುತಿಹವು ಸೊಕ್ಕಿದಳಿ
ಮುಕ್ತಜೀವರಂದದಿ
ಉಲಿಯೆ ಪಿಕ, ಗಳವೆ ಶುಕ, ಸುಗ್ಗಿ ಬಂದಿತಂದದಿ



Downloaded from https:// www.studiestoday.com

Downloaded from https:// www.studiestoday.com

ಮಾಮರಂಗಳಲಿ ವಿಹಂಗತತಿಯ ನಿಸ್ವನಂಗಳಿಂ,
ತಳಿರ ಸೊಂಪನಲರ ಜೊಂಪನಾಂತ ಬನಬನಂಗಳಿಂ,
ನಲಿವ ಪಚ್ಚೆಯುಡೆಯನುಟ್ಟು,
ಅರಳಿದರಳುಗಳನು ತೊಟ್ಟು,
ಹಿಮದ ಮಣಿಯ ಮಾಲೆಯಿಟ್ಟು
ತಣಿದು ಸೋಲೆ ಕಣ್ಮನಂ
ಕರೆವಳೋವಿ ಬನದ ದೇವಿ ತನ್ನ ಸುಗ್ಗಿಯಾಣ್ಮನಂ

ಹಾರಿ ಮರೆವ ಜಾರಿ ಹರಿವ ತೊರೆಯ ತಂಪು ದಡದೊಳು,
ಮೇಲೆ ಭಾನು ತೇಲೆ, ನಾನು ಕುಳಿತು ಮರದ ಬುಡದೊಳು
ತಿರೆಯ ಸಿರಿಯ ನೋಡುತಿರುವೆ;
ಕುರಿತು ಹಾಡ ಹಾಡುತಿರುವೆ;
ಸೊಬಗಿನೊಡನೆ ಕೂಡುತಿರುವೆ
ಕರಗಿ ಮುಳುಗಿ ತೇಲುತ
ತೊರೆದ ಗಂಡನೆದುರುಗೊಂಡ ಕೋಮಲೆಯನು ಹೋಲುತ

ತುರುಗಳೆಲ್ಲ ಮೇಯೆ, ಗೊಲ್ಲ ಬಸಿರಿಮರದ ನೆಳಲಲಿ
ಮಲಗಿಸಿಹನು ಮಧುವನವನು ಮುದವನುಲಿವ ಕೊಳಲಲಿ
ನಿಂತು ಮೇವ ಮರೆತುಬಿಟ್ಟು,
ಕಿವಿಯನೆರಡ ನೆಟ್ಟಗಿಟ್ಟು
ಗೊಲ್ಲನೆಡೆಗೆ ದಿಟ್ಟಿಯಿಟ್ಟು
ಬರೆದ ಚಿತ್ರದಂದದಿ
ಗವಿಗಳೆಲ್ಲ ಸವಿಯ ಸೊಲ್ಲನಾಲಿಸಿಹವು ಚಂದದಿ

ಗಿರಿಗಳಿರಾ, ತೊರೆಗಳಿರಾ, ಎಲೆ ವಿಹಂಗಮಗಳಿರಾ,
ತರುಗಳಿರಾ, ಬನಗಳಿರಾ, ಮಗಮಗಿಪ ಸುಮಗಳಿರಾ,
ಸೊಬಗೆ ನನ್ನಿ ಎಂದು ಸಾರಿ;
ನನ್ನಿಯೆ ಸೊಬಗೆಂದು ತೋರಿ;
ಸೊಗದ ಸೊದೆಯ ತಿರೆಗೆ ಬೀರಿ;
ಒಲ್ಮೆ ಸೊಬಗು ಸೊಗದಲಿ
ಪರಮಪುರುಷನಮಲ ಹರುಷವಿಹುದು ಸಾರಿ ಜಗದಲಿ




Downloaded from https:// www.studiestoday.com

Downloaded from https:// www.studiestoday.com

ಮಧುವೆ ಬಾರ ಮುದವ ತಾರ ನೀನೆ ದೇವದೂತನು
ಪರದ ಚಿಂತೆ ಮರೆಯದಂತೆ ಕಳುಹುವನು ವಿಧಾತನು
ಬುವಿಯ ಸಿಂಗರಿಸುತ ಬಾರ
ಪರದ ಬೆಳಕನಿಳೆಗೆ ತಾರ
ಸೊಬಗೆ ಶಿವನು ಎಂದು ಸಾರ
ಬಾರ ಶಕ್ತಿದಾಯಕ
ಹಳತ ಕೂಡಿ ಹೊಸತು ಮಾಡಿ ಬಾರೆಲೆ ಋತುನಾಯಕ

## ಕುವೆಂಪು



ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು (೧೯೦೪ – ೧೯೯೪) ಕನ್ನಡ ನವೋದಯ ಕಾಲದ ಹರಿಕಾರರಲ್ಲಿ ಒಬ್ಬರು. ಕುವೆಂಪು ಎಂಬುದು ಇವರ ಕಾವ್ಯನಾಮ. ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ವೈಚಾರಿಕ ಪ್ರಜ್ಞೆ, ಸಾಮಾಜಿಕ ಕಳಕಳಿ, ನಿಸರ್ಗ ಪ್ರೇಮ – ಇವು ಕುವೆಂಪು ಸಾಹಿತ್ಯದಲ್ಲಿ ಕಂಡುಬರುವ ಅಂಶಗಳಾಗಿವೆ. ನವಿಲು, ಕಲಾಸುಂದರಿ, ಪಕ್ಷಿಕಾಶಿ, ಅನಿಕೇತನ, ಕೋಗಿಲೆ ಮತ್ತು ಸೋವಿಯತ್ ರಷ್ಯಾ (ಭಾವಗೀತೆ), ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿ), ಮಲೆನಾಡಿನ ಚಿತ್ರಗಳು (ಪ್ರಬಂಧ), ವಿಭೂತಿ ಪೂಜೆ, ರಸೋ ವೈಸಃ, ಕಾವ್ಯವಿಹಾರ (ವಿಮರ್ಶೆ), ಶೂದ್ರ ತಪಸ್ವಿ, ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್, ರಕ್ತಾಕ್ಷಿ (ನಾಟಕ), ನೆನಪಿನ ದೋಣಿಯಲ್ಲಿ (ಆತ್ಮಚರಿತ್ರೆ) ಮೊದಲಾದವು ಇವರ ಪ್ರಸಿದ್ಧ ಕೃತಿಗಳು. ಮಹಾಛಂದಸ್ಸಿನಲ್ಲಿರುವ 'ಶ್ರೀರಾಮಾಯಣ ದರ್ಶನಂ' ಎಂಬ ಇವರ ಮಹಾಕಾವ್ಯಕ್ಕೆ ಕನ್ನಡದ ಮೊತ್ತಮೊದಲ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಅಲ್ಲದೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕರತ್ನ ಪ್ರಶಸ್ತಿ ಮೊದಲಾದವುಗಳಿಗೆ ಇವರು ಪಾತ್ರರಾಗಿದ್ದಾರೆ.

ಪ್ರಸ್ತುತ ಕವಿತೆಯನ್ನು ಇವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಲಾಗಿದೆ. ಇದರಲ್ಲಿ ಮೂರು ಮೂರು ಮಾತ್ರೆಗಳ ನಿಯತವಾದ ಓಟ, ಏಳು ಸಾಲಿನ ಆಕರ್ಷಕ ಹಂಚಿಕೆ, ಪ್ರಾಸದ ಔಚಿತ್ಯಪೂರ್ಣ ಬಳಕೆ ಹಾಗೂ ಗೇಯತೆಗಳಿವೆ. ಋತುಮಾನವನ್ನನುಸರಿಸಿ ಬದಲಾಗುತ್ತಾ ಬರುತ್ತಿರುವ ನಿಸರ್ಗದ ವ್ಯಾಪಾರದಲ್ಲಿ ಸುಗ್ಗಿಯ ವೈಭವವನ್ನು ಕಂಡ ಕವಿಯ ಸಂಭ್ರಮವನ್ನು ಇಲ್ಲಿ ಕಾಣಬಹುದು. ಭಾವೋತ್ಕಟತೆಯಿಂದ ಕೂಡಿದ ವರ್ಣನೆಯಲ್ಲಿ ಕವಿಯ ಸೌಂದರ್ಯಾನುಭೂತಿ ಇದೆ.



Downloaded from https:// www.studiestoday.com

Downloaded from https:// www.studiestoday.com

## ಶಬ್ದಾರ್ಥ ವಿವರಣೆ

ತಿರೆ – ಭೂಮಿ; ತೆಮರು – ದಿನ್ನೆ; ಬಿನದ – ವಿನೋದ; ನಿನದ – ಧ್ವನಿ;

ಬಂಡು –ಜೇನು; ಅಳಿ –ದುಂಬಿ; ಶುಕ – ಗಿಳಿ; ಪಿಕ – ಕೋಗಿಲೆ;

ವಿಹಂಗ– ಹಕ್ಕಿ, ಆಕಾಶಗಾಮಿ; ಗಳವು – ಗಳಹು, ಹೇಳಿದ್ದನ್ನೇ ಹೇಳಿಕೊಳ್ಳುವುದು;

ತತಿ – ಸಮೂಹ; ಅಲರು – ಹೂ; ಉಡೆ – ಉಡುಗೆ; ತುರು – ದನ;

ಸೊಲ್ಲು – ಮಾತು; ಸೊದೆ– ಸುಧೆ, ಅಮೃತ; ಇಳೆ – ಭೂಮಿ.

## ಸಂಕ್ಷಿಪ್ತವಾಗಿ ಬರೆಯಿರಿ

- ಸುಗ್ಗಿಯಾಗಮನದಿಂದ ನಿಸರ್ಗದಲ್ಲಾದ ಬದಲಾವಣೆಗಳಾವುವು?
- 'ಅಡಿಯ ಗೆಜ್ಜೆ ನಡುಗೆ ಹೆಜ್ಜೆಯಿಡುತ ಸುಗ್ಗಿ ಬರುತಿದೆ ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗ ಸೊಗವ ತರುತಿದೆ' ಈ ಸಾಲುಗಳಲ್ಲಿ ಕಾಣುವ ಪ್ರಾಸ ಪದಗಳ ಪ್ರಯೋಗದ ಸೌಂದರ್ಯವನ್ನು ಗುರುತಿಸಿರಿ. ಇಂತಹ ಸಾಲುಗಳನ್ನು ಈ ಕವನದಿಂದ ಸಂಗ್ರಹಿಸಿ ಬರೆಯಿರಿ.

## ಚಟುವಟಿಕೆಗಳು

- 'ಸುಗ್ಗಿ ಬರುತಿದೆ' ಕವಿತೆಯ ಆಸ್ವಾದನ ಟಿಪ್ಪಣಿ ಬರೆಯಿರಿ.
- ಪ್ರಕೃತಿಯ ಸೊಬಗನ್ನು ವರ್ಣಿಸುವ ಒಂದು ಕವನವನ್ನು ರಚಿಸಿರಿ.
- 'ಸುಗ್ಗಿ ಬರುತಿದೆ' ಕವನವನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ ದೃಶ್ಯಗಳನ್ನು ಸಂಯೋಜಿಸಿ ಧ್ವನಿಮುದ್ರಿಸಿಕೊಂಡು ಒಂದು ದೃಶ್ಯಾತ್ಮಕ ಕಾವ್ಯವನ್ನಾಗಿಸಿರಿ.



Downloaded from https:// www.studiestoday.com

Downloaded from https:// www.studiestoday.com

- ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.
  - ಬಿನದದಿನಿದು
  - ಪಚ್ಚೆಯುಡೆ
  - ಮುದವನುಲಿವ
  - ಕರೆವಳೋವಿ
  - ಪರಮಪುರುಷನಮಲ

## ಭಾಷಾಭ್ಯಾಸ

- ಸಂಸ್ಕೃತ ಭಾಷೆಯಿಂದ ಪದಗಳನ್ನು ಸ್ವೀಕರಿಸಿಕೊಂಡು ಕನ್ನಡ ಭಾಷೆಯ ಜಾಯಮಾನಕ್ಕೆ ಅನುಗುಣವಾಗಿ ಬದಲಾಗುವುದನ್ನು ಕಾಣಬಹುದು.

  ಉದಾ : ಸ್ವರ್ಗ (ಸಂಸ್ಕೃತ) – ಸಗ್ಗ (ಕನ್ನಡ)

  ಹೀಗೆ ಬದಲಾವಣೆಗೊಂಡ ರೂಪಗಳನ್ನು ತದ್ಭವಗಳೆನ್ನುವರು. ಇಂತಹ ಪದಗಳನ್ನು ಕವನದಿಂದ ಗುರುತಿಸಿ ಪಟ್ಟಿ ಮಾಡಿರಿ.

| ಸಂಸ್ಕೃತ | ತದ್ಭವ |
|---|---|
| | |



Downloaded from https:// www.studiestoday.com


Downloaded from https:// www.studiestoday.com

# ಕಡಲ್ ಒಡಲ್

ಕಾವ್ಯ ಲಕ್ಷಣದಲ್ಲಿ ಹೇಳಿರುವ ಅಷ್ಟಾದಶ ವರ್ಣನೆಗಳಲ್ಲಿ ಕಡಲಿನ ವರ್ಣನೆಯೂ ಒಂದು. ಕಡಲು ಸೃಷ್ಟಿಯ ವಿಸ್ಮಯ. ಅದು ಅನೇಕ ನಿಗೂಢತೆಗಳ ವಿಚಿತ್ರ ಲೋಕ. ಮೂರ್ತ ಅನುಭವದ ದೃಶ್ಯಾತ್ಮಕ ನಿರೂಪಣೆಯಾಗಿರುವ ಪ್ರವಾಸ ಕಥನದ ಈ ಭಾಗದಲ್ಲಿ ಅಂಡಮಾನಿನ ಕಡಲಿನಾಳದಲ್ಲಿರುವ ಅಪೂರ್ವ ಜೀವಿಗಳ ವರ್ಣನೆ ಇದೆ.

ಕಡಲೊಳಗಿನ ಜೀವರಾಶಿಯು ಭೂಮಿ ಮೇಲಿರುವುದಕ್ಕಿಂತಲೂ ಹೆಚ್ಚು ವೈವಿಧ್ಯಮಯ. ದಿನನಿತ್ಯ ಟನ್ನುಗಟ್ಟಲೆ ಆಹಾರವನ್ನು ಮನುಷ್ಯಹೊಟ್ಟೆಗೆ ಬಡಿಸುತ್ತಿರುವ ಕಡಲು ತಾಯಿಯಂತೆ. ಸಮುದ್ರವನ್ನು ರಾಜಗೀಜ ಎಂದು ಬಣ್ಣಿಸಿದ ಕವಿಗಳು, ಬಹುಶಃ ಮೀನು ಹಿಡಿದವರೂ ಅಲ್ಲ, ತಿಂದವರೂ ಅಲ್ಲ; ಬೆಸ್ತರಿಗೆ ಕಡಲು, ಕಡಲಮ್ಮ. ಮಲ್ಪೆಯ ಮೀನುಗಾರರ ದೋಣಿಗಳನ್ನು ಕಂಡಮೇಲೆಯೇ, ಘಟ್ಟದ ಮೇಲಿನ ನನ್ನಂತವರಿಗೆ, ರೈತರಿಗೆ ಭೂಮಿಯಷ್ಟೆ ಮುಖ್ಯವಾದ ಇನ್ನೊಂದು ವಸ್ತು ಇದೆ ಎಂದು ತಿಳಿದಿದ್ದು; ಅಡಿಗೆ ಮನೆಯ ಕತ್ತಲ ಕೋಣೆಯಲ್ಲಿ ಉಪ್ಪಾಗಿ ಅಡಗಿರುವ ಸಮುದ್ರ, ವಾಸ್ತವದಲ್ಲಿ ಇಡೀ ಭೂಮಿಯನ್ನು ಆವರಿಸಿ ಹರಡಿರುವ ಮಹಾನೀಲ ಚಾಪೆ. ಅದು ಎಷ್ಟು ಸಾಹಸಿಗಳನ್ನು ತನ್ನ ಆಡುಂಬೊಲಕ್ಕೆ ಆಹ್ವಾನಿಸಿದೆ? ಎಷ್ಟೆಷ್ಟು ಹಡಗುಗಳ ಗರ್ವ ಮುರಿದು ತನ್ನ ತಳಕ್ಕೆ ಹಾಕಿಕೊಂಡಿದೆ? ಬೇಂದ್ರೆ ತಮ್ಮ ಒಂದು ಕವಿತೆಯಲ್ಲಿ ಭೂಮಿತಾಯಿಯನ್ನು 'ಮೊದಲಗಿತ್ತಿಯಂತೆ ಮೆರೆಯುತಿಹೆ ತಾಯೀ' ಎಂದು ಬಣ್ಣಿಸುತ್ತಾರೆ. ಈ ಬಣ್ಣನೆ ಲಗತ್ತಾಗುವುದು ಕಡಲಿಗೆಯೇ.

ಅಂಡಮಾನಿನ ಕಡಲ ಜೀವಿಗಳಲ್ಲಿ ನನಗೆ ತಟ್ಟನೆ ನೆನಪಾಗುವುದು ಅವುಗಳ ಚಿತ್ರ ವಿಚಿತ್ರ ರೂಪಕ್ಕಿಂತ, ಅವುಗಳ ವರ್ಣವೈವಿಧ್ಯ. ಯಾರೋ ಕಲಾವಿದ, ಮೀನುಗಳನ್ನೆಲ್ಲ ಹಿಡಿದು ಕೂರಿಸಿಕೊಂಡು, ತನ್ನ





Downloaded from https:// www.studiestoday.com

Downloaded from https:// www.studiestoday.com

ಹುಚ್ಚು ಕಲ್ಪನೆಯಲ್ಲಿ ಬಣ್ಣ ಬಳಿದು, 'ಹೋಗಿ ಆಟವಾಡಿ ಬನ್ನಿ' ಎಂದು ಕಳುಹಿಸುತ್ತಿರಬಹುದು ಅನ್ನಿಸುವಷ್ಟು ಬಣ್ಣ ಬಣ್ಣದ ಮೀನುಗಳು. ಹೋಳಿಯಲ್ಲಿ ಬಣ್ಣವಾಡಿ ಬಂದವರಂತೆ ಕೆಲವಿದ್ದವು. ಕಾಮನಬಿಲ್ಲಿನ ತುಂಡುಗಳಂತಹ ಪುಟ್ಟ ಮೀನುಗಳಂತೂ, ತಮಗೆ ಚೆಲುವು ಇರುವ ಅರಿವೇ ಇಲ್ಲದ ಬುಡಕಟ್ಟು ಹುಡುಗಿಯರಂತೆ ಅಡ್ಡಾಡುತ್ತಿದ್ದವು. ಅಂಡಮಾನಿನ ಕಡಲಿನಲ್ಲಿ ಸಾಮಾನ್ಯವಾಗಿ ಕಾಣುವ ಮೀನೆಂದರೆ ಸಾರ್ಜೆಂಟ್. ಹಳದಿ ಕಪ್ಪು ಬಣ್ಣಗಳ ಪಟ್ಟಿಗಳಿರುವ ಅವಕ್ಕೆ ನಾಲ್ಕು ಕಪ್ಪು ಚುಕ್ಕೆಗಳಿರುವುದು ಕಾರಣವಿರಬೇಕು. ಸಾರ್ಜೆಂಟ್ ಮೀನುಗಳು ಗುಂಪಾಗಿ ಸೈನಿಕರ ಶಿಸ್ತಿನಲ್ಲಿ ಚಲಿಸುತ್ತ, ಚಕ್ಕನೆ ಮೈ ಹೊರಳಿಸಿ ದಿಕ್ಕು ಬದಲಿಸುತ್ತ, ಮಿನುಗುತ್ತ ಇದ್ದವು.

ವಾಸ್ತವವಾಗಿ ನಾವು ಚೆಲುವಾದ ಮೀನುಗಳನ್ನು ಕಂಡಿದ್ದು ರೆಡ್‌ಸ್ಕಿನ್ ದ್ವೀಪದಲ್ಲಿ. ವಂಡೂರು ರಾಷ್ಟ್ರೀಯ ಉದ್ಯಾನದಲ್ಲಿ ರೆಡ್‌ಸ್ಕಿನ್ ಜಾಲಿಬಾಯ್ ಸಿಂಕ್ ಮುಂತಾದ ಹವಳ ದ್ವೀಪಗಳು ಸೇರುತ್ತವೆ. ಪುಟ್ಟದ್ವೀಪವಾದ ರೆಡ್‌ಸ್ಕಿನ್, ಅದ್ಭುತ ಹವಳ ಪೊದೆಗಳಿರುವ ಜಾಗ. ಗಾಜುತಳದ ದೋಣಿಯಲ್ಲಿ ಹವಳ ಬಳ್ಳಿಗಳನ್ನು ತೋರಿಸುತ್ತಾರೆ. ನಿಜವಾಗಿ ಹವಳಗಳನ್ನು ನೋಡಬೇಕೆಂದರೆ ಸ್ಕೂಬಾ ಡೈವಿಂಗ್ ಮಾಡಬೇಕು. ಅಂದರೆ, ಆಮ್ಲಜನಕದ ಸಿಲಿಂಡರನ್ನು ಬೆನ್ನಿಗೆ ಕಟ್ಟಿಕೊಂಡು ಈಜುಡುಗೆಯಲ್ಲಿ ನೀರಿನ ಆಳಕ್ಕೆ ಹೋಗಬೇಕು. ಇದನ್ನು ಮಾಡಲು ತರಬೇತಿ ಬೇಕು. ಒಂದು ಖಾಸಗಿ ಸ್ಕೂಬಾ ಡೈವಿಂಗ್ ಕ್ಲಬ್ಬನ್ನು ಸುಮ್ಮನೆ ಸಂಪರ್ಕಿಸಿದೆವು. ಅವರು ತಲಾ ಒಬ್ಬೊಬ್ಬರಿಗೆ ಎರಡು ಸಾವಿರ ಫೀಸು ಕೇಳಿದರು. ದೋಣಿಯಲ್ಲಿ ದೂರ ಕಡಲಿಗೆ ಕರೆದುಕೊಂಡುಹೋಗಿ ಅನಂತರ ನೀರಿನಾಳಕ್ಕೆ ಕರೆದುಕೊಂಡು ಹೋಗುವುದು, ಒಂದೆರಡು ಗಂಟೆ ಸುತ್ತಾಡಿಸುವುದು ಅವರ ಉದ್ದೇಶ. ಮಹಾ ಚೌಕಾಸಿಗಳಾದ ನಾವು ತಲಾ ಸಾವಿರ ರೂಪಾಯಿ ಕೊಡಲು ಸಿದ್ಧರಾದೆವು. ಆದರೆ ನಮ್ಮಲ್ಲಿ ಕೆಲವು ಭಿನ್ನಮತೀಯರು, ಸ್ಕೂಬಾ ಡೈವಿಂಗ್ ಮಾಡಲು ಒಪ್ಪಲಿಲ್ಲ. 'ನೀರಿನಾಳಕ್ಕೆ ಹೋದವರು ಮೇಲೆ ಬರುತ್ತಾರೆಂದು ಯಾವ ಗ್ಯಾರಂಟಿ? ವಾಪಾಸು ಮನೆಗೆ ಹೋಗಿ ಮಕ್ಕಳು ಮರಿ ಮುಖ ನೋಡೋಣ' ಎಂದು ಬುದ್ಧಿ ಹೇಳಿ ಬಾಯಿ ಮುಚ್ಚಿಸಿದರು.

ರೆಡ್‌ಸ್ಕಿನಲ್ಲಿ ಮುಳುಗು ಮುಖವಾಡ ಧರಿಸಿಕೊಂಡು, ನೀರಿನಲ್ಲಿ ಮುಖ ಮುಳುಗಿಸಿ ಕಡಲುಬೆಳೆದ ಬೆಳೆಯನ್ನು ನೋಡುವ ಮತ್ತೊಂದು ವ್ಯವಸ್ಥೆ ಇದೆ. ಮೈಯನ್ನು ಟ್ಯೂಬಿನಂತಹ ಈಜು ಬುರುಡೆಯ ಒಳಗೆ ತೂರಿಸಿ, ತೇಲುತ್ತ ನೀರೊಳಗಿನ ಹವಳದ ಪೊದೆಗಳನ್ನು ನೋಡಬಹುದು. ತೇಲುವ ಹೆಣಗಳನ್ನು ಹಗುರವಾಗಿ ಎಳೆದುಕೊಂಡು ಹೋಗುವಂತೆ, ಒಬ್ಬ ಪರಿಣಿತ ಈಜುಗಾರ ಟ್ಯೂಬಿನ ಮೇಲೆ ಮಲಗಿದ ನಮ್ಮ ದೇಹವನ್ನು ಎಳೆದುಕೊಂಡು ಈಜುತ್ತ, ಹವಳಗಳಿರುವ ಕಡೆಯಲ್ಲೆಲ್ಲ ಕರೆದುಕೊಂಡುಹೋಗುತ್ತಿದ್ದ. ನಾನು ಬೆಳ್ಳಗೆ



Downloaded from https:// www.studiestoday.com

Downloaded from https:// www.studiestoday.com

ಸುಣ್ಣದಿಂದ ಮಾಡಿದಂತಿದ್ದ ಹವಳಗಳನ್ನು ಮ್ಯೂಸಿಯಂಗಳಲ್ಲಿ ನೋಡಿದ್ದೆ. ನೀರಿನ ಒಳಗೆ ನೋಡಿರಲಿಲ್ಲ; ನಿಜವಾಗಿಯೂ ಅದೊಂದು ಸಮುದ್ರದಲ್ಲಿನ ಹೂದೋಟ. ಈ ಮಾಯಾಲೋಕದ ತೋಟದಲ್ಲಿ ಹೆಸರಿಸಲಾಗದ ಬಣ್ಣಗಳನ್ನು ಕಾಣಬಹುದಿತ್ತು.

ಬಳ್ಳಿ, ಪೊದೆ ಎಂದು ಹೇಳಿದರೂ ಹವಳವು ವಾಸ್ತವವಾಗಿ ಒಂದು ಪ್ರಾಣಿ. ಅಲೆಗಳ ಅಬ್ಬರವಿಲ್ಲದ ಆಳವಿಲ್ಲದ ನೀರಿನೊಳಗೆ ಬಂಡೆಮೇಲೆ ಅಂಟಿಕೊಂಡು ಬೆಳೆಯುವ ಜೀವಿ. ಹವಳಗಳನ್ನು ಪ್ರಾಣಿ ಎಂಬುದನ್ನು ನಂಬುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ. ಇವು ಬಾಯಿ ಬಳಿಯಿರುವ ಸೂಕ್ಷ್ಮ ರೋಮಗಳ ಮೂಲಕ ನೀರಿನಲ್ಲಿರುವ ಸೂಕ್ಷ್ಮಜೀವಿಗಳನ್ನು ಕಬಳಿಸುತ್ತವೆ. ಹವಳಗಳು ಒಂದೆಡೆ ಸೇರಿ ಕಟ್ಟುವ ಊರುಗಳನ್ನು 'ಕೋರಲ್ ಕಾಲನಿ' ಎಂದು ಕರೆಯುವರು. ಅವರಿವರು ಬಂದು ಕಾಲನಿ ಮಾಡಿಕೊಂಡು ನೆಲೆಸುವುದನ್ನೇ ಕಾಣುತ್ತ ಬಂದಿರುವ ಅಂಡಮಾನಿಗೆ ನಿಜವಾದ ಮೂಲನಿವಾಸಿಗಳು ಈ ಕಡಲ ಜೀವಿಗಳೇ. ಚೆಂದದಲ್ಲಿ ಒಂದಕ್ಕೊಂದು ಸ್ಪರ್ಧಿಸುವಂತೆ ಈ ಕಾಲನಿಗಳು ಸೃಷ್ಟಿಯಾಗಿದ್ದವು. ಹೂಕೋಸಿನಂತೆ, ಕಡವೆಯ ಕೊಂಬಿನಂತೆ, ಮಾರುದ್ದದ ಸಿಗರೇಟುಗಳಂತೆ, ಹಬ್ಬಕ್ಕೆ ಸಿಂಗರಿಸಿದ ಮಂಟಪದಂತೆ, ಜಾತ್ರೆಯಲ್ಲಿ ಜೋಡಿಸಿದ ತಿಂಡಿಯಂಗಡಿಯಂತೆ, ಮಕ್ಕಳು ಬರೆದ ಚಿತ್ರದಂತೆ, ಊಹಾತೀತ ಆಕಾರಗಳು. ಕಡಲ ಭರತವಿಳಿದಾಗ ಮಾತ್ರ ಅವು ಮುನಿಸಿಪಾಲಿಟಿಯವರು ಊರ ಹೊರಗೆ ಹಾಕಿದ ಕಸದ ಗುಪ್ಪೆಗಳಂತೆ ಕಾಣುತ್ತಿದ್ದವು.

ರೆಡ್‌ಸ್ಕಿನ್‌ನಲ್ಲಿ ನೂರಾರು ಬಗೆಯ ಹವಳ ಮೀನುಗಳು ಇದ್ದವು. ಅದರಲ್ಲೂ ಹವಳ ಜಾತಿಗೇ ಸೇರಿದ ಸೀಅನಿಮೋನ್ ಪೊದರಿನೊಳಗೆ ವಾಸಿಸುವ ಕೆಂಪು ಏಂಜೆಲ್ ಮೀನುಗಳು ಯಥೇಚ್ಛ. ಮಾಯಾಬಜಾರು ಸಿನಿಮಾಗಳಲ್ಲಿರುವಂತೆ ಅಲುಗಾಡದ ಸೀಅನಿಮೋನ್ ಪೊದೆಗಳಲ್ಲಿ, ಜೂಲು ಬಟ್ಟೆ ತೊಟ್ಟಂತಹ ಕೇಸರಿ ಬಣ್ಣದ ಏಂಜೆಲ್ ಮೀನುಗಳು ಆಡುತ್ತಿದ್ದವು. ಸೀಅನಿಮೋನ್ ಎಂದರೆ ನೋಡಲು ಹುಲ್ಲಿನ ತೆಂಡೆಯಂತಿರುವ ಪ್ರಾಣಿ. ಅಂಡಮಾನಿನ ಕಡಲಲ್ಲಿ ಇರುವ ಬಹುತೇಕ ಪ್ರಾಣಿಗಳು ಹೀಗೆ ಕಣ್ಣಿಗೆ ಮೋಸ ಮಾಡುವಂತಹವು. ಕುಂಡದಾಕಾರದಲ್ಲಿರುವ ಸೀಅನಿಮೋನ್ ಬಂಡೆಗೆ ತಳವನ್ನು ಗಟ್ಟಿಯಾಗಿ ತಗುಲಿಸಿಕೊಂಡು, ಮೇಲೆ ಶ್ಯಾವಿಗೆಯಂತಹ ನೂರಾರು ಬಾಹುಗಳನ್ನು ಅಲುಗಾಡಿಸುತ್ತ ಇರುತ್ತದೆ. ನೀರಿನ ಹೊಯ್ದಾಟಕ್ಕೆ ಇವು ಅಲುಗುತ್ತಿವೆ ಅನಿಸುತ್ತದೆ. ಆದರೆ ನಿಜವಾಗಿ ಸೂಕ್ಷ್ಮಜೀವಿಗಳ ಬೇಟೆಯಾಡಲು ತಮ್ಮ ಕೈಗಳನ್ನು





Downloaded from https:// www.studiestoday.com

Downloaded from https:// www.studiestoday.com

ನೀರಿನಲ್ಲಿ ತಡಕಾಡುವ ರೀತಿ ಇದು. ಬ್ರಿಟಿಷರ ಮಾಯಾವಿ ಬುದ್ಧಿ! ಅನಿಮೋನುಗಳ ಪಾರದರ್ಶಕ ಬಾಹುಗಳ ನಡುವೆ ಕಣ್ಣಿಟ್ಟು ನೋಡಿದರೆ ಜ್ವಾಲಾಮುಖಿಯ ತುದಿಯಂತಹ ಮನುಷ್ಯರ ತುಟಿಯಾಕಾರದ ಬಾಯಿ ಇರುತ್ತದೆ. ನೋಡಲು ಅರಳಿದ ಹೂವಿನಂತಿರುವ ಇದರ ಬಾಹುಗಳು, ಬೇಟೆ ಬಂದೊಡನೆ ತಾವರೆ ಮೊಗ್ಗಿನಂತೆ ಮುಚ್ಚಿಕೊಂಡು, ಬೇಟೆಯನ್ನು ಹಿಡಿದು ಈ ಬಾಯಿಗೆ ತಳ್ಳುತ್ತವೆ. ಎರಡು ಹೊತ್ತಿನ ಊಟ ಸಂಪಾದನೆಗಾಗಿ ಅನಿಮೋನ್ ಮಾಡಿಕೊಂಡಿರುವ ಈ ವರ್ಣರಂಜಕ ಜೂಲೇ, ಪುಟ್ಟಮೀನುಗಳಿಗೆ ಬಚ್ಚಿಟ್ಟುಕೊಂಡು ಝೂಟಾಟವಾಡಲು ಹುಲ್ಲು ಬಣವೆಯಾಗಿತ್ತು. ಮೈಕೈ ಸುತ್ತ ಆಡುತ್ತಿದ್ದ ಮೀನುಗಳು ಮುಳುಗಿಕೊಂಡು ಹತ್ತಿರ ಹೋಗುತ್ತಿದ್ದ ನಮ್ಮನ್ನು ಕಚ್ಚುತ್ತಿದ್ದವು. ಈ ಕಚ್ಚುವಿಕೆ ಕಚಗುಳಿಯಂತೆ ಹಿತವಾಗೇನಿರಲಿಲ್ಲ. ಅದರಲ್ಲೂ ಒಂದು ಏಂಜೆಲ್ ಮೀನು ಅದರ 'ಮನೆ'ಯ ಬಳಿ ಹೋದಾಗಲೆಲ್ಲ ಭಾರಿ ಪ್ರತಿಭಟನೆ ತೋರುತ್ತಿತ್ತು. ಚಕಾರನೆ ಬಂದು ಸಣ್ಣ ಉಗುರುಗಳಲ್ಲಿ ಚಿಗುಟಿದಂತೆ ಕಚ್ಚುತ್ತಿತ್ತು. ಈ ಕಚ್ಚು ಸುಂದರಿಯ ಪ್ರತಿಭಟನೆಗೆ ಹಿಂದೆ ಸರಿಯಬೇಕಾಯಿತು.

ಅಂಡಮಾನಿನಲ್ಲಿ ಬಣ್ಣದ ಮೀನುಗಳನ್ನು ನೋಡಲು ದೂರ ದ್ವೀಪಗಳಿಗೇ ಹೋಗಬೇಕಿಲ್ಲ. ಅವು ಯಾವ ದಂಡೆಯಲ್ಲೂ ಇವೆ. ಸೆಲ್ಯುಲಾರ್ ಜೈಲಿನ ನೇರ ಕೆಳಗಿದ್ದ ನಾವು ಉಳಿದುಕೊಂಡಿದ್ದ ಮುನಿಸಿಪಲ್ ಗೆಸ್ಟ್‌ಹೌಸಿನ ಕಡಲದಂಡೆಯಲ್ಲೂ ಇದ್ದವು. ಅಲ್ಲಿ ಭರತವಿದ್ದಾಗ ನೀರು ಬಂದು ತುಂಬಿಕೊಳ್ಳುವಂತೆ ಒಂದು ದೊಡ್ಡ ಕೊಳವನ್ನು ಕಡಲೊಳಗೇ ಕಟ್ಟಿ, ಅದರಲ್ಲಿ ಅಂಡಮಾನಿನ ಎಲ್ಲಾ ಬಗೆಯ ಕಡಲಜಂತುಗಳನ್ನು ಬಿಟ್ಟಿದ್ದರು. ಕಡಲಿಗೂ ಕೊಳಕ್ಕೂ ನಡುವೆ ಸಣ್ಣ ನಡೆಸೇತುವೆ. ಬೆಳಕು ಹರಿಯುವುದೇ ತಡ ಈ ಕಡಲಕೊಳಕ್ಕೆ ಹಾಜರಿ ಹಾಕುವುದು ನಮ್ಮ ದಿನಚರಿಯಾಯಿತು.

ವಿಚಿತ್ರ ಜೀವನ ಎಂದರೆ ಸೀ ಅರ್ಚಿನ್ (ಕಡಲಕುಡಿಕೆ) ಗಳದ್ದು. ಇವನ್ನು ಮಾಯಾಬಂದರಿನ ಕಡಲಲ್ಲಿ ಕಂಡೆವು. ಇವು ಅಲೆ ಬಂದು ರಭಸವಾಗಿ ಅಪ್ಪಳಿಸುವಂತಹ ತೆರೆದ ಕಡಲ ದಂಡೆಯಲ್ಲಿ ಇರುವುದಿಲ್ಲ. ಕೆರೆಯಂತೆ ನೀರು ನಿಂತುಕೊಳ್ಳುವ ಕೊಲ್ಲಿಗಳಲ್ಲಿ ಇರುತ್ತವೆ. ಸಾಮಾನ್ಯವಾಗಿ ಹವಳಗಳಿರುವ ಪರಿಸರದಲ್ಲೇ ಅರ್ಚಿನ್‌ಗಳ ವಾಸ. ಮಾಯಾಬಂದರಿನ ಸುತ್ತಲ ಅಬ್ಬರವಿಲ್ಲದ ದಂಡೆಗಳು, ಬಂಡೆಗಳಿಂದ ಕೂಡಿ ಪೊಟರೆಗಳಾಗಿವೆ. ಈ ಬಂಡೆಗಳ ಮೇಲೆ ಕೆತ್ತಿದ ಪ್ರಾಣಿಗಳೋ ಎಂಬಂತೆ ಅರ್ಚಿನ್‌ಗಳೂ ಶೆಲ್ಲುಗಳೂ ಹವಳಗಳೂ ಇವೆ. ನಕ್ಷತ್ರ ಮೀನು ಜಾತಿಗೆ ಸೇರಿದ





Downloaded from https:// www.studiestoday.com

Downloaded from https:// www.studiestoday.com

ಅರ್ಚಿನ್‌ಗಳು ಮೈತುಂಬ ಕೊಳೆತ ಮುಳ್ಳು ಸಿಕ್ಕಿಸಿದ ಚೆಂಡಿನಂತೆ ಇದ್ದವು. ಅಮೇರಿಕಾದ ಸ್ವಾತಂತ್ರ್ಯದೇವಿಯ ಕಿರೀಟದಂತೆ ಇರುವ ಬಂಡೆಗೆ ಹತ್ತಿಕೊಂಡಿದ್ದವು.

ಇವುಗಳ ಸಂಗಾತಿಗಳೆಂದರೆ, ಸೀಶೆಲ್ಲುಗಳು, ಇವುಗಳ ಗಾತ್ರ ಅಂಗೈ ಅಗಲದಿಂದ ಶುರುವಾದರೆ ದೊಡ್ಡ ಬಾನಿಯಗಲದ ವರೆಗೂ ಇರುತ್ತದೆ. ನೀಲಿ ಕೆಂಪು ಬಣ್ಣದ ಮಕಮಲ್ಲನ್ನು ಕತ್ತರಿಸಿ ಬಂಡೆಗೆ ಸಿಕ್ಕಿಸಿದೆ ಎಂಬಂತೆ ಗಟ್ಟಿಯಾಗಿ ತಗುಲಿಕೊಂಡಿರುವ ಈ ಚಿಪ್ಪುಗಳನ್ನು ಜೀವಿಗಳು ಎಂದು ಕರೆಯುವುದೇ ಕಷ್ಟ. ಕಡ್ಡಿಯಿಂದ ಮುಟ್ಟಿದಾಗ ಪಿಚಕ್ಕನೆ ನೀರು ಚಿಮ್ಮಿಸಿ ಮುಚ್ಚಿಕೊಳ್ಳುತ್ತವೆ. ಆಗಲೆ ಇವಕ್ಕೆ ಜೀವವಿದೆ ಎಂದು ಗೊತ್ತಾಗುವುದು. ಇವಕ್ಕೆ ಊಟ ಏನು? ನಮ್ಮ ವಿಜ್ಞಾನಿ ಗಣ ಅವರಿಗೆ ಕೇಳಿದೆ. ಸೀಅನಿಮೋನಿಗಳಂತೆಯೇ ನೀರಿನೊಳಗಿನ ಅತಿ ಸೂಕ್ಷ್ಮಜೀವಿಗಳನ್ನು ತಮ್ಮ ಸ್ಪಂಜಿನಂತಹ ದೇಹದಿಂದ ಹಿಡಿದು ತಿನ್ನುತ್ತವೆ ಎಂದು ಹೇಳಿದರು. ಹೊಟ್ಟೆ ಹೊರೆಯಲು ಎಷ್ಟೊಂದು ವೇಷ? ಒಂದು ಜೀವವನ್ನು ಹಿಡಿಯಲು ಮತ್ತೊಂದು ಜೀವ ತೋರಿಸುವ ಈ ಜಾಣ್ಮೆಯೇ ಕಡಲ ಜೀವಿಗಳ ಲೋಕವನ್ನು ಕೋಲಾಹಲಕರ ಮಾಡಿರುವುದು.



ಮಾಯಾಬಂದರಿನಲ್ಲಿ ಇರುವಾಗ ಕಡಲನ್ನು ಅದರ ದಡದಲ್ಲೇ ಬಹಳ ಕಾಲ ನೋಡುವ ಅವಕಾಶ ಸಿಕ್ಕಿತು. ಸಣ್ಣ ಬೆಟ್ಟದ ಮೇಲಿರುವ ಅಲ್ಲಿನ ಗೆಸ್ಟ್‌ಹೌಸಿನ ಹಿಂಬದಿ, ದಂಡೆಗೆ ಇಳಿವಂತೆ ಮೆಟ್ಟಿಲು ಮಾಡಿ, ಕಡಲವೀಕ್ಷಣೆ ಮಾಡಲು ಗಾರೆಯ ಅಟ್ಟಣೆ ಕಟ್ಟಲಾಗಿದೆ. ಕಡಲದಂಡೆಯೆಂದರೆ ಅದೇನು ಇಳಿದು ಚೆಲ್ಲಾಟವಾಡುವಂತಹ ಮರಳ ಬೀಚಲ್ಲ. ಬಾವಿಯಂತೆ ಆಳನೀರಿನ ಕಡಿದಾದ ತೀರ. ನೀರು ಭಟ್ಟಿಯಿಳಿಸಿದ ಶರಾಬಿನಂತೆ, ಅಮೃತಶಿಲೆ ಕರಗಿಸಿ ಎರಕ ಹೊಯ್ದಂತೆ, ತನ್ನ ಒಳಗಿನ ಯಾವುದನ್ನೂ ಮರೆಮಾಚದೆ ಅಂಗೈಯಲ್ಲಿರಿಸಿ ತೋರುವಂತೆ, ಶುಭ್ರ. ಸುತ್ತಮುತ್ತ ಒಂದರ ಮೇಲೆ ಮತ್ತೊಂದು ಒರಗಿರುವಂತಹ ಸಣ್ಣ ಬೆಟ್ಟಗಳ ನಡುವಣ ಕೊಲ್ಲಿ ಇದಾಗಿರುವುದರಿಂದ, ಅಲೆಗಳ ಅಬ್ಬರವೂ ಇಲ್ಲ. ಅಲೆಗಳು ದಣಿದು ಸೋತು ಆರಾಮ ಪಡೆಯಲು ಬಂದವೇನೋ ಎಂಬಂತೆ ಚುಳುಕ್ ಪುಳುಕ್ ಲಯದಲ್ಲಿ ಆಡುತ್ತ ಇರುತ್ತವೆ. ಇಲ್ಲಿನ ಜಲಮಂಟಪದಲ್ಲಿ ನಿಂತುಬಿಟ್ಟರೆ, ಅಂಡಮಾನಿನ ಕಡಲೊಳಗೆ ಇರುವ ತರಾವರಿ ಮೀನುಗಳು ಬಂದು ಮುಖ ತೋರಿಸಿ ಹೋಗುತ್ತವೆ.



Downloaded from https:// www.studiestoday.com

Downloaded from https:// www.studiestoday.com

ನಾವು ಮಾಯಾಬಂದರಿನಲ್ಲಿ ಇದ್ದಷ್ಟು ದಿನವೂ ಇಲ್ಲಿ ಗಂಟೆಗಟ್ಟಲೆ ನಿಂತು ಮೀನುಗಳ ಆಟವನ್ನು ಕಂಡೆವು. ಅದೊಂದು ಹವಳ ಪೊದೆಗಳು ತುಂಬಿದ ಕಡಲ ಮಡು. ಅದರಲ್ಲೂ ರಾತ್ರಿಯ ಹೊತ್ತಲ್ಲಿ ದೀಪದ ಬೆಳಕಲ್ಲಿ ನೂರಾರು ಜಾತಿಯ ಮೀನುಗಳು ಆ ಮಡುವಿನಲ್ಲಿ ಆಡಲು ಬರುತ್ತಿದ್ದವು.

ನಾವು ಹಡಗಲ್ಲಿ ಬರುವಾಗ ಮೊದಲ ದಿನ ಸಮುದ್ರ ತನಗೆ ತಾನೆ ಸುಂದರವಾಗಿತ್ತು. ಒಮ್ಮೆ ಕಂಡ ಹಾಗೆ ಮತ್ತೊಮ್ಮೆ ಇಲ್ಲ. ಎಷ್ಟು ಕಂಡರೂ ಮನಸ್ಸಿಗೆ ದಣಿವು ಇಲ್ಲ. ಎರಡನೇ ದಿನ ಕಡಲು ಬರೀ ಅಲುಗಾಡುವ ನೀರಾಗಿ ಅದರ ಬಣ್ಣ ಬದಲಾಗದ ವಿಧಿಯಾಗಿ ಕಾಣುತ್ತಿತ್ತು. ಮೇಲೆಯೋ ಹಕ್ಕಿ ಹಾರಾಟವಿಲ್ಲದ ಖಾಲಿ ಖಾಲಿ ಆಗಸ. ಇದರ ಲಯವನ್ನು ಮುರಿಯುವ ಮತ್ತೊಂದು ಚಲನೆ ಬೇಕೆನಿಸುತ್ತಿತ್ತು. ನೀರೊಳಗಿಂದ ಧುತ್ತನೆ ಯಾವುದಾದರೂ ದೊಡ್ಡ ಮೀನು ತಲೆ ಎತ್ತಿ ನಿಲ್ಲಬಾರದೇ, ಕೊನೆಪಕ್ಷ ಯಾವುದಾದರೂ ಬಿರುಗಾಳಿಯಾದರೂ ಬೀಸಬಾರದೇ ಅನ್ನಿಸುತ್ತಿತ್ತು. ಆಗ ನೀರಿನ ಏಕತಾನವನ್ನು ಮುರಿಯುತ್ತಿದ್ದ ಏಕೈಕ ಜೀವಿಗಳೆಂದರೆ ಹಾರುವ ಮೀನುಗಳು. ಹಡಗು ನೀರನ್ನು ಸೀಳಿ ನುಗ್ಗಿದೊಡನೆ ಅಡಿಯುದ್ದದ ನೂರಾರು ಮೀನುಗಳು, ಬೆದರಿದಂತೆ ಚಿಲ್ಲನೆ ನೀರಿನಿಂದ ಜಿಗಿದು, ನೂರಾರು ಮೀಟರ್‌ಗಳಷ್ಟು ದೂರ ಚಿಮ್ಮಿ ಹಾರಿ, ಹೊಯ್ದಾಡುವ ಅಲೆಗಳಲ್ಲಿ ಬಿದ್ದು ಲೀನವಾಗುತ್ತಿದ್ದವು. ಅವಕ್ಕೆ ಹಕ್ಕಿಯಂತೆ ರೆಕ್ಕೆಗಳಿರಲಿಲ್ಲ. ತಮ್ಮ ಕಿವುರುಗಳನ್ನೇ ರೆಕ್ಕೆಯಂತೆ ಬಳಸಿ ಹಾರಿ ಪಾರಾಗುತ್ತಿದ್ದವು.

ಭೂಮಿಗೆ ಸಮೀಪದ ಕಡಲಲ್ಲಿ ಇರದೇ ಸಾವಿರಾರು ಅಡಿ ಆಳದ ನಡುಗಡಲಿನಲ್ಲಿ ಮಾತ್ರ ಪುಟ್ಟ ಹಾರುವ ಮೀನುಗಳು! ಇದಕ್ಕೆ ವಿರುದ್ಧವಾಗಿ, ಭೂಮಿ ಸಮೀಪದ ಆಳವಿಲ್ಲದ ತೀರಗಳಲ್ಲಿ ಬೃಹದಾಕಾರದ ಡಾಲ್ಫಿನ್ನುಗಳು; ಕಡಲಬಾಳಿಗೆ ಅದರದೇ ಕಾರಣಗಳಿವೆ.



ಅಂಡಮಾನಿನಲ್ಲಿ ಇರುವಷ್ಟು ದಿನವೂ ಡಾಲ್ಫಿನ್ನುಗಳು ನಮಗೆ ದರ್ಶನ ಕೊಡಲಿಲ್ಲ. ಬರುವಾಗ, ಹಡಗು ಬಂಗಾಳ ಕೊಲ್ಲಿಯ ವಿಶಾಲ ಕಡಲಿಗೆ ಪ್ರವೇಶಿಸುವ ಮುನ್ನ, ಅನೇಕ ದ್ವೀಪಗಳನ್ನು ಬಳಸಿಕೊಂಡು ಬರುತ್ತದೆ. ಅದು ಮೊದಲು ರಾಸ್ ದ್ವೀಪವನ್ನು ಬಳಸುತ್ತದೆ. ನಮ್ಮ ಹಡಗು ಎಬ್ಬಿಸುವ ಅಲೆಗಳ ಹೊಡೆತದಿಂದ



Downloaded from https:// www.studiestoday.com

Downloaded from https:// www.studiestoday.com

ದೋಣಿಗಳನ್ನು ಉಳಿಸಿಕೊಳ್ಳಲು ಮೀನುಗಾರರು ದೂರ ಸರಿದಿದ್ದರೂ ಅವರ ನಾವೆಗಳು ಕಾಣುತ್ತಿದ್ದವು. ಪೋರ್ಟ್‌ಬ್ಲೇರಿನ ಮನೆ ಬಂದರು ಹಡಗುಗಳು ದೂರವಾಗುತ್ತ, ಹ್ಯಾರಿಯಟ್ ಪರ್ವತ ಮಸುಕಾಗುತ್ತ ಇದ್ದವು. ಇನ್ನೂ ತಂತಮ್ಮ ಕೋಣೆಗಳಿಗೆ ಹೋಗದೆ ಹೆಚ್ಚಿನ ಪ್ರಯಾಣಿಕರು ಡೆಕ್ಕಿನ ಮೇಲೆಯೇ ಇದ್ದರು. ಸಾಯುವುದರೊಳಗೆ ಮತ್ತೊಮ್ಮೆ ಬರುತ್ತೇವೋ ಇಲ್ಲವೋ, ಬಹುಶಃ ಇದೇ ಕಡೆಯ ಭೇಟಿಯಾಗಬಹುದು ಎಂದುಕೊಂಡು, ಅಂಡಮಾನನ್ನು ಕಣ್ಣೊಳಗೆ ತುಂಬಿಕೊಳ್ಳುತ್ತ ಇರುವಾಗ, ಇದ್ದಕ್ಕಿದ್ದಂತೆ ಅರುಣ 'ಡಾಲ್ಫಿನ್ ಡಾಲ್ಫಿನ್' ಎಂದು ಕೂಗಿದಂತಾಯಿತು. ನೋಡಿದರೆ ನೀಲ ಜಲದೊಳಗಿಂದ ಐದಾರು ಕಪ್ಪು ಮೂತಿಗಳು ತಟ್ಟನೆ ಕಾಣಿಸಿಕೊಂಡವು. ಲೇಜಿಮ್ ಆಟಗಾರರಂತೆ ನೀರಿನಿಂದ ತಲೆಯೆತ್ತಿ ಮುಳುಗಿಸಿ, ತಲೆಯೆತ್ತಿ ಮುಳುಗಿಸಿ, ಹಡಗಿನ ಸಮಾಂತರವಾಗಿ ಕೊಂಚದೂರ ಬಂದವು. ಯಾವ ಸಂವೇದನೆಯೂ ಇಲ್ಲದಂತೆ ಹಡಗು, ಸಾಗಬೇಕಾದ ದೂರದಾರಿಯನ್ನು ನೆನೆದು, ಗಂಭೀರವಾಗಿ ನಡೆಯತೊಡಗಿದ್ದನ್ನು ಕಂಡೋ ಏನೋ, ಅವು ಹಡಗಿನಿಂದ ದೂರವಾಗುತ್ತ ಮರೆಯಾದವು. ಡಾಲ್ಫಿನ್ನುಗಳು ಮಿಂಚಿನಂತೆ ತೋರಿ ಮಾಯವಾದರೂ, ಅಂಡಮಾನನ್ನು ಬಿಟ್ಟು ಬರುತ್ತಿರುವ ನಮಗೆ ಹೇಳಿದ ವಿದಾಯ ಎಂದು ಭಾವಿಸಿ ಖುಷಿಯಾಯಿತು.

*ಸಂಗ್ರಹ : ಅಂಡಮಾನ್ ಕನಸು*

*ರಹಮತ್ ತರೀಕರೆ*

**ರಹಮತ್ ತರೀಕರೆ**



ರಹಮತ್ ತರೀಕರೆಯವರು ದಲಿತ ಬಂಡಾಯ ಪಂಥದ ಲೇಖಕರಲ್ಲಿ ಒಬ್ಬರು. ಕನ್ನಡ ಸಂಶೋಧನೆ ಮತ್ತು ವಿಮರ್ಶಾ ಕ್ಷೇತ್ರಗಳಲ್ಲಿ ಕೃಷಿ ಮಾಡುತ್ತಿರುವ ಇವರು ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಪ್ರತಿ ಸಂಸ್ಕೃತಿ (ವಿಮರ್ಶೆ), ಮರದೊಳಗಣ ಕಿಚ್ಚು (ಸಂಸ್ಕೃತಿ ಚಿಂತನೆ), ಕರ್ನಾಟಕದ ಸೂಫಿಗಳು (ಸಂಶೋಧನೆ), ಕನ್ನಡ ಸಾಹಿತ್ಯ ಮೀಮಾಂಸೆ, ಕವಿರಾಜಮಾರ್ಗ, ಐವರು ಹೇಳಿದ ಜನಪದ ಕಥೆಗಳು(ಸಂಪಾದನೆ), ಅಂಡಮಾನ್ ಕನಸು (ಪ್ರವಾಸ ಕಥನ), ವಸಾಹತು ಪ್ರಜ್ಞೆ ಮತ್ತು ವಿಮೋಚನೆ (ಅನುವಾದ) ಮೊದಲಾದವುಗಳು ಇವರ ಪ್ರಮುಖ ಕೃತಿಗಳು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಪ್ರಸ್ತುತ ಪಾಠಭಾಗವನ್ನು ಇವರ 'ಅಂಡಮಾನ್ ಕನಸು' ಎಂಬ ಪ್ರವಾಸ ಕಥನದಿಂದ ಆಯ್ದುಕೊಳ್ಳಲಾಗಿದೆ.



Downloaded from https:// www.studiestoday.com

Downloaded from https:// www.studiestoday.com

## ಶಬ್ದಾರ್ಥ ವಿವರಣೆ

ಆಡುಂಬೊಲ – ಆಡುವ ಹೊಲ, ಆಟದ ಮೈದಾನ; ಲಗತ್ತು – ಹೊಂದಿಕೆ; ಜೂಲು – ಜೋಲು, ನೇತಾಡುವ, ಬಣವೆ – ರಾಶಿ, ಮೆದೆ; ಚಿಗುಟು – ಚಿವುಟು; ತರಾವರಿ – ವಿಧ ವಿಧ; ತೆಂಡೆ – ಕಂತೆ.

## ಸಂಕ್ಷಿಪ್ತವಾಗಿ ಬರೆಯಿರಿ

- ಅಂಡಮಾನಿನ ಕಡಲ ಜೀವಿಗಳ ವರ್ಣವೈವಿಧ್ಯವು ಚಿತ್ರಿತವಾದ ಬಗೆಯನ್ನು ವಿವರಿಸಿರಿ.
- ಲೇಖಕರು ಕಂಡ ರೆಡ್‌ಸ್ಕಿನ್ ಹವಳ ದ್ವೀಪದ ವೈಶಿಷ್ಟ್ಯಗಳನ್ನು ಬರೆಯಿರಿ.

## ಚಟುವಟಿಕೆ

- ಅಂಡಮಾನಿನ ಪ್ರವಾಸದ ಅನುಭವಗಳನ್ನು ಚಿತ್ರಿಸಿದ ಕಥನಭಾಗದ ನಿರೂಪಣ ವಿಧಾನ, ಭಾಷೆ, ಶೈಲಿ ಇವುಗಳನ್ನು ಪರಿಗಣಿಸಿಕೊಂಡು ಲೇಖಕರ ಗದ್ಯರಚನೆಯ ವೈಶಿಷ್ಟ್ಯಗಳ ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.
- ನೀವು ಸಂದರ್ಶಿಸಿದ ಪ್ರೇಕ್ಷಣೀಯ ಸ್ಥಳಗಳ ಕುರಿತಾಗಿರುವ ನಿಮ್ಮ ಅನುಭವಗಳನ್ನು ಇ–ಮೈಲ್ ಮೂಲಕ ಗೆಳೆಯನಿಗೆ ರವಾನಿಸಲು ವಿವರಣಾತ್ಮಕ ಪ್ರಬಂಧವೊಂದನ್ನು ತಯಾರಿಸಿರಿ.

## ಭಾಷಾಭ್ಯಾಸ

- ರಾಜಗೀಜ, ತಲೆಗಿಲೆ, ಊಟಗೀಟ

  ಮೇಲಿನ ಪದಗಳನ್ನು ಗಮನಿಸಿರಿ. ಈ ಜೋಡುಪದಗಳ ಗುಂಪಿನಲ್ಲಿ ಎರಡನೇ ಪದದ ಆರಂಭದಲ್ಲಿ 'ಗ'ಕಾರವಿರುತ್ತದೆ ಹಾಗೂ ಆ ಪದಕ್ಕೆ ಪ್ರತ್ಯೇಕವಾದ ಅರ್ಥವಿಲ್ಲ. ಇಂತಹ ಪದಗಳು ಕನ್ನಡದಲ್ಲಿ ಧಾರಾಳವಾಗಿ ಬಳಕೆಯಾಗುತ್ತವೆ. ಇಂತಹ ಜೋಡಿ ಪದಗಳನ್ನು ಪ್ರತಿಧ್ವನಿ ಪದಗಳು ಎನ್ನುತ್ತಾರೆ. ಈ ರೀತಿಯ ಇನ್ನಷ್ಟು ಪ್ರತಿಧ್ವನಿ ಪದಗಳನ್ನು ಸಂಗ್ರಹಿಸಿರಿ.

- ಕೆಳಗಿನ ವಾಕ್ಯವನ್ನು ಗಮನಿಸಿರಿ.

  ಉತ್ತಮವಾದ ಫಸಲನ್ನು ಪಡೆಯಬೇಕೆಂದು ರೈತನು ಸಮಯಕ್ಕೆ ಸರಿಯಾಗಿ ಗೊಬ್ಬರ ಹಾಕಿ ನೀರುಣಿಸಿದರೂ ಕಾಡುಪ್ರಾಣಿಗಳಿಂದ ತೊಂದರೆಯಾಗದಂತೆ ಎಚ್ಚರವಹಿಸಿದರೂ ಕಟಾವಿನ ಸಮಯದಲ್ಲಿ ವಿಪರೀತ ಮಳೆ ಬಂದುದರಿಂದ ಬೆಳೆಯೆಲ್ಲವೂ ನಾಶವಾಯಿತು.



Downloaded from https:// www.studiestoday.com

Downloaded from https:// www.studiestoday.com

ಮೇಲಿನ ವಾಕ್ಯವು ಮಿಶ್ರವಾಕ್ಯವಾಗಿದೆ. ಅದನ್ನು ಸರಳ ವಾಕ್ಯಗಳಾಗಿ ಈ ರೀತಿ ಬರೆಯಬಹುದು.

- ರೈತನು ಉತ್ತಮವಾದ ಫಸಲನ್ನು ಪಡೆಯಬೇಕೆಂದು ಸಮಯಕ್ಕೆ ಸರಿಯಾಗಿ ಗೊಬ್ಬರ ಹಾಕಿ ನೀರುಣಿಸಿದನು.
- ಕಾಡುಪ್ರಾಣಿಗಳಿಂದ ತೊಂದರೆಯಾಗದಂತೆ ಎಚ್ಚರವಹಿಸಿದನು.
- ಕಟಾವಿನ ಸಮಯದಲ್ಲಿ ವಿಪರೀತವಾದ ಮಳೆ ಬಂತು.
- ಬೆಳೆಯೆಲ್ಲವೂ ನಾಶವಾಯಿತು.

ಈ ಕೆಳಗಿನ ವಾಕ್ಯಗಳನ್ನು ಸರಳವಾಕ್ಯಗಳಾಗಿ ಬರೆಯಿರಿ.

- ಸುತ್ತಮುತ್ತ ಒಂದರಮೇಲೆ ಮತ್ತೊಂದು ಒರಗಿರುವಂತಹ ಸಣ್ಣ ಬೆಟ್ಟಗಳ ನಡುವಣಕೊಲ್ಲಿ ಇದಾಗಿರುವುದರಿಂದ ಅಲೆಗಳ ಅಬ್ಬರವೂ ಇಲ್ಲ.
- ಡೋಲ್ಫಿನ್‌ಗಳು ಮಿಂಚಿನಂತೆ ತೋರಿ ಮಾಯವಾದರೂ ಅಂಡಮಾನನ್ನು ಬಿಟ್ಟು ಬರುತ್ತಿರುವ ನಮಗೆ ಹೇಳಿದ ವಿದಾಯ ಎಂದು ಭಾವಿಸಿ ಖುಷಿಯಾಯಿತು.
- ಕಾಮನಬಿಲ್ಲಿನ ತುಂಡುಗಳಂತಹ ಪುಟ್ಟ ಮೀನುಗಳಂತೂ ತಮಗೆ ಚೆಲುವು ಇರುವ ಅರಿವೇ ಇಲ್ಲದ ಬುಡಕಟ್ಟು ಹುಡುಗಿಯರಂತೆ ಅಡ್ಡಾಡುತ್ತಿದ್ದವು.




Downloaded from https:// www.studiestoday.com

Downloaded from https:// www.studiestoday.com

# ಇದು ಬರಿ ಬೆಳಗಲ್ಲೋ ಅಣ್ಣಾ!

*ಡಾ. ಪ್ರಭುಶಂಕರ*

ಪ್ರಕೃತಿ ಸೌಂದರ್ಯದಿಂದ ಪರವಶನಾಗಿ ಕವಿ ಕವಿತೆಯನ್ನು ರಚಿಸಿದರೆ, ಆ ಕವಿತೆಯ ಸೌಂದರ್ಯವು ಸಹೃದಯನನ್ನು ಪರವಶನನ್ನಾಗಿಸುತ್ತದೆ. ಆ ಅನುಭವವನ್ನು ಶಬ್ದಗಳಲ್ಲಿ ನಿರೂಪಿಸಿದಾಗ ಅದು ಸೌಂದರ್ಯಾನುಭೂತಿಯ ರಸವಿಮರ್ಶೆಯಾಗುತ್ತದೆ. ಅದರ ಒಂದು ಮಾದರಿ ಇಲ್ಲಿದೆ.



ಬೆಳಗು – ಬೆಳದಿಂಗಳುಗಳ ವರ್ಣನೆ ಶ್ರೀ ಬೇಂದ್ರೆಯವರನ್ನು ಅಮರ ಭಾವಗೀತಕಾರರನ್ನಾಗಿಸಿದೆ. ಭಾವ ತೀವ್ರವಾಗಿ ಗಾನಪ್ರಧಾನವಾಗಿ ಅನನ್ಯ ಮನೋಹರತೆಯಿಂದ ವಿಶಿಷ್ಟತೆಯನ್ನು ಪಡಿದಿವೆ ಅವರ ಕವನಗಳು. ಈ ಕೆಲವು ದಶಕಗಳಲ್ಲಿ ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವ, ಸರ್ವಜನ ಮೋಹಕವಾಗಿರುವ ಕವನ ಅವರ 'ಬೆಳಗು'. ಅತ್ಯಂತ ಸರಳವಾದ ಅಚ್ಚಗನ್ನಡ ಪದಗಳಿಂದ ಅತ್ಯಪೂರ್ವವಾದ ವರ್ಣನೆ ಅನುಭವಗಳನ್ನು ಒಳಗೊಂಡಿರುವ ಈ ಕವನ ಆ ಕಾರಣಕ್ಕಾಗಿಯೇ ಸರ್ವಜನಪ್ರಿಯತೆಯನ್ನು ಪಡೆದಿದೆ.

ಮೂಡಲ ಮನೆಯಾ ಮುತ್ತಿನ ನೀರಿನ
ಎರಕsವಾ ಹೊಯ್ದಾ
ನುಣ್ಣ – ನೆರಕವಾ ಹೊಯ್ದ
ಬಾಗಿಲ ತೆರೆದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ – ಜಗವೆಲ್ಲಾ ತೊಯ್ದಾ.

ಎಂದು ಆರಂಭವಾಗುತ್ತದೆ ಕವನ. ಪ್ರಕೃತಿ ಪ್ರಿಯವಾದ ಕವಿಹೃದಯ ಎಂತಹ ಆತ್ಮೀಯತೆಯಿಂದ ಬೆಳಗಾಗುವ ದೃಶ್ಯವನ್ನು ಕಂಡಿದೆ, ಅನುಭವಿಸಿದೆ! ಮನೆಯ ಬಾಗಿಲನ್ನು ತೆರೆದು ಬೆಳಗಾಗ ನೀರೆರಚುವಂತೆ, ಮೂಡಲ ಮನೆಯ ಬಾಗಿಲು ತೆರೆದು ಮುತ್ತಿನ ನೀರಿನ ಸಂಸೇಚನೆಯಾಗುತ್ತಿದೆ. ಬೆಳಕು ಹರಿದು ಜಗವೆಲ್ಲಾ ತೊಯ್ದಿದೆ.

ರತ್ನದ ರಸದಾ ಕಾರಂಜೀಯೂ
ಪುಟಪುಟನೇ ಪುಟಿದು
ತಾನೇ–ಪುಟಪುಟನೇ ಪುಟಿದು



Downloaded from https:// www.studiestoday.com

Downloaded from https:// www.studiestoday.com

ಮಘ ಮಘಿಸುಽವಾ ಮುಗಿದಾ ಮೊಗ್ಗೀ
ಪಟಪಟನೇ ಒಡೆದು
ತಾನೇ–ಪಟಪಟನೇ ಒಡೆದು

ಬೇಂದ್ರೆಯವರ ಕಾವ್ಯ 'ಅಸ್ಪಷ್ಟ ಸುಂದರ ನಾದದಿಂದ ಬಂಧುರ' ಎರಡನೆಯ ಪದ್ಯಕ್ಕೆ ಈ ಮಾತು ಅನ್ವಯಿಸುತ್ತದೆ. ಪುಟಪುಟನೆ ಪುಟಿಯುವ ರಸದ ಕಾರಂಜಿ ಯಾವುದು ಎಂದು ಗೊತ್ತಿಲ್ಲ. ಆದರೆ ಶ್ರಾವಣದ ಸೂರ್ಯೋದಯವೆಂದು ಊಹಿಸುವುದಾದರೆ ಮೂಡಲಲ್ಲಿ ಬುಗ್ಗೆ ಚಿಮ್ಮುವ ಅನಂತ ವರ್ಣಗಳ ಮೇಳ ಎಂದು ಹೇಳಬಹುದು. ಹಾಗೆಯೇ ಸೂರ್ಯೋದಯವಾದೊಡನೆಯೇ – ಕವಿಸಮಯ ಹೇಳುವಂತೆ – ತಕ್ಷಣ ಮುಗಿದ ಮೊಗ್ಗುಗಳು ಅರಳುವುದೂ ಇಲ್ಲ ಪಟಪಟನೆ ಸದ್ದು ಮಾಡುವುದೂ ಇಲ್ಲ. ಹೂವರಳುವುದೂ ಅಷ್ಟೆ. ಮೌನವಾಗಿ, ದಿಢೀರನೆ ಗಮನಕ್ಕೆ ಬಾರದ ರೀತಿಯಲ್ಲಿ, ರಹಸ್ಯವಾಗಿ ನಡೆಯುವ ಮಂತ್ರಕ್ರಿಯೆ. ರವೀಂದ್ರರೆನ್ನುವಂತೆ ರಾತ್ರಿಯು ಮೊಗ್ಗನ್ನು ಅರಳಿಸಿ ಅದರ ಕೀರ್ತಿಯನ್ನು ಹಗಲಿಗೆ ಬಿಡುತ್ತದೆ. ಕವಿಯ ಸೂಕ್ಷ್ಮೇಂದ್ರಿಯವಾದರೋ ಮೊಗ್ಗು ಅರಳುವ ರಹಸ್ಯ ಕ್ರಿಯೆಯನ್ನು ನೋಡುತ್ತದೆ, ಆಲಿಸುತ್ತದೆ. ಮೂರನೆಯ ಚರಣ ಕವನಕ್ಕೆ ಉತ್ಕರ್ಷವನ್ನು ನೀಡುತ್ತದೆ.

ಎಲೆಗಳ ಮೇಲೇ ಹೂಗಳ ಒಳಗೇ
ಅಮೃತಽದಾ ಬಿಂದು
ಕಂಡವು – ಅಮೃತದಾ ಬಿಂದು
ಯಾರಿರಿಸಿರುವರು ಮುಗಿಲಮೇಲಿಂ
ದಿಲ್ಲಿಗೇ ತಂದು
ಈಗ–ಇಲ್ಲಿಗೇ ತಂದು

ಮುಂಜಾನೆಯ ಇಬ್ಬನಿ ಎಲೆಗಳ ಮೇಲೆ ಹೂಗಳ ಒಳಗೆ ತಂಗಿದೆ. ಇಬ್ಬನಿಯ ಹನಿಗಳು ಅಮೃತದ ಬಿಂದುವಿನಂತೆ ಇವೆ ಎಂದು ಹೇಳಲಿಲ್ಲ ಕವಿ; ಅಮೃತದ ಬಿಂದುವೇ ಇಲ್ಲಿದೆ ಎನ್ನುತ್ತಾರೆ. ಬೆಳಗಾಗುವುದು ಒಂದು ಸ್ವರ್ಗೀಯ ಕ್ರಿಯೆ. 'ಅಮೃತ ಬಿಂದು' ಎನ್ನುವುದು ಅದನ್ನೇ ಧ್ವನಿಸುತ್ತದೆ. ಕವಿ ಮುಗ್ಧರಾಗಿ ಕೇಳುತ್ತಾರೆ: "ಮುಗಿಲ ಮೇಲಿಂದ ಇಲ್ಲಿಗೆ ತಂದು ಯಾರು ಇದನ್ನು ಇರಿಸಿದ್ದಾರೆ?"

ಬೇಂದ್ರೆಯವರ ಸೂಕ್ಷ್ಮವಾದ ಕಲ್ಪನೆಗೆ ಸಾಕ್ಷಿ ನಾಲ್ಕನೆಯ ಚರಣ. ಹೂವಿನ ಎಸಳಿನ ಚವರಿಯನ್ನು ಗಾಳಿಯ ಕೈಯಲ್ಲಿಟ್ಟರಂತೆ; ಗಾಳಿ ದುಂಬಿಯ ಹಿಂಡಿನ ಮೈಗೆಲ್ಲಾ ಗಂಧವನ್ನು ಸವರಿತಂತೆ; ಅನಂತರ ಆ ದುಂಬಿಯ ಹಿಂಡನ್ನು ಹಾರಿಬಿಟ್ಟಿದ್ದಾರೆ.

ಮುಂದಿನ ಪದ್ಯ ಮತ್ತೆ ನಮಗೆ ಸಂತಸದ ಸೋಜಿಗವನ್ನು ನೀಡುತ್ತದೆ:

ಗಿಡಗಂಟೇಯಾ ಕೊರಳೊಳಗಿಂದ
ಹಕ್ಕೀಗಳ ಹಾಡು



Downloaded from https:// www.studiestoday.com

Downloaded from https:// www.studiestoday.com

ಹೊರಟಿತು–ಹಕ್ಕೀಗಳ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು ಕಾಡಿನಾ ನಾಡು

ಗಿಡಗಳಲ್ಲಿ ಕುಳಿತು ಹಕ್ಕಿ ಹಾಡಿದರೆ ಗಿಡಗಂಟೆಯ ಕೊರಳಿನಿಂದಲೇ ಹಾಡು ಮೂಡಿಬಂದಂತಾಯಿತಂತೆ. ಆ ಹಾಡು ಒಂದೇ ಕ್ಷಣದಲ್ಲಿ ಕಾಡುನಾಡೆಲ್ಲವನ್ನೂ ಗಂಧರ್ವರ ಸೀಮೆಯನ್ನಾಗಿ ಪರಿವರ್ತಿಸಿತು. ಹಾಡಿನ ಮಾಧುರ್ಯ–ಅದು ಸೃಷ್ಟಿಸಿದ ನೂತನ ಲೋಕ – ಈ ಎಲ್ಲವನ್ನೂ "ಗಂಧರ್ವರ ಸೀಮೆ" ಎನ್ನುವ ಮಾತು ಧ್ವನಿಸುತ್ತದೆ.

ಇದನ್ನು ಹಿಂಬಾಲಿಸಿ ಕವಿಯ ಮನ ಪಡೆದ ಅನುಭವವನ್ನು ಸೂಚಿಸುವ ಮಾತುಗಳು ಬರುತ್ತವೆ.

ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹ
ಸ್ಪರ್ಶಾ–ಪಡೆದೀತೀ ದೇಹ
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹ
ದೇವರ – ದೀ ಮನಸಿನ ಗೇಹ

ಕಣ್ಣು, ಕಿವಿ, ಮೂಗುಗಳಿಗೆ ಮಾತ್ರ ಮೀಸಲಾದ ಅನುಭವ ಸಕಲೇಂದ್ರಿಯಗಳನ್ನೂ ವ್ಯಾಪಿಸಿತು. ಈ ಆನಂದದ ಸ್ಪರ್ಶವನ್ನು ದೇಹ ಕೂಡ ಪಡೆಯಿತು. ಒಡನೆಯೇ ತನ್ಮಯತೆಯ ಅನುಭವವಾಯಿತು. ಈ ಮನಸಿನ ಮನೆ ದೇವರದ್ದು ಎಂಬ ಭಾವನೆ ಮೂಡಿತು. ಕೊನೆಯ ಚರಣ ಸುಂದರವಾದ ಮುಕ್ತಾಯವನ್ನು ಒದಗಿಸುತ್ತದೆ.

ಅರಿಯದು ಆಳವು ತಿಳಿಯದು ಮನವು
ಕಾಣಽದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರೀತಣ್ಣಾ,
ಇದು ಬರೀ ಬೆಳಗಲ್ಲೋ– ಅಣ್ಣಾ

ಅಮೃತದ ಬಿಂದುವನ್ನು ತಂದಿಟ್ಟವರು ಯಾರು? ಗಂಧರ್ವ ಸೀಮೆಯನ್ನಾಗಿ ಈ ಪರಿಚಿತ ಭೂಮಿಯನ್ನು ಪರಿವರ್ತಿಸಿದವರು ಯಾರು? ಎಂದು ಅಚ್ಚರಿಪಡುತ್ತಿದ್ದ ಮನಸ್ಸು ಒಂದು ಗಳಿಗೆ ಈ ಸೌಂದರ್ಯಾಸ್ವಾದನೆಯಲ್ಲಿ ತನ್ಮಯತೆಯನ್ನು ಪಡೆಯಿತು. ಮರುಕ್ಷಣ ಏನು? ಏನು! ಎಂದು ಪ್ರಶ್ನಿಸಿದಾಗ ಏನೋ ಎಂತೋ ತಿಳಿಯದಾಯಿತು. ಇದರ ಆಳವು ತಿಳಿವನ್ನು ಮೀರಿದುದು. ಈ ರಸಾನುಭವದಲ್ಲಿ ಮಿಂದ ಮನಸ್ಸಿಗೆ ಈಗ ಬಣ್ಣಗಳೂ



Downloaded from https:// www.studiestoday.com

Downloaded from https:// www.studiestoday.com

ಕಾಣಿಸುತ್ತಿಲ್ಲ. ಅದರ ಬದಲು "ಶಾಂತಿರಸವೇ ಪ್ರೀತಿಯಿಂದ ಮೈದೋರಿತಣ್ಣಾ, ಇದು ಬರೀ ಬೆಳಗಲ್ಲೋ ಅಣ್ಣಾ" ಎನ್ನುವ ಅನುಭವ ಒದಗುತ್ತಿದೆ.

ಪುನರುಕ್ತಿ ಮತ್ತು ನಾದಮಾಧುರ್ಯಗಳು ಈ ಕವನದ ಯಶಸ್ಸಿಗೆ ಬಹುಮಟ್ಟಿಗೆ ಸಹಾಯ ಮಾಡಿವೆ. ಕವಿ ಹೃದಯದ ಸರಳತೆ ಮುಗ್ಧತೆಗಳು ಕಲ್ಪನೆಯ ಶ್ರೀಮಂತಿಕೆಯೊಂದಿಗೆ ಸಮರಸವಾಗಿ ಎರಕಗೊಂಡಿವೆ.

**ಡಾ. ಪ್ರಭುಶಂಕರ**



ಕನ್ನಡದ ಪ್ರಸಿದ್ಧ ಲೇಖಕರಲ್ಲಿ ಒಬ್ಬರಾದ ಡಾ. ಪ್ರಭುಶಂಕರ ಅವರು ಮೈಸೂರಿನಲ್ಲಿ ಜನಿಸಿದರು (1929). ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಯನ್ನು ಚಿನ್ನದ ಪದಕದೊಂದಿಗೆ ಪಾಸಾದ (1951) ಇವರು ಭಾರತ ಸರಕಾರದ ವಿದ್ಯಾರ್ಥಿ ವೇತನ ಪಡೆದು ಮೂರು ವರ್ಷಗಳ ಕಾಲ ರಾಷ್ಟ್ರಕವಿ ಕುವೆಂಪು ಅವರ ಮಾರ್ಗದರ್ಶನದಲ್ಲಿ 'ಕನ್ನಡದಲ್ಲಿ ಭಾವಗೀತೆ' ಎಂಬ ಸಂಶೋಧನಾ ಮಹಾ ಪ್ರಬಂಧವನ್ನು ರಚಿಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪದವಿ ಗಳಿಸಿದರು (1959). ಇವರದು ಆ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಮೊತ್ತಮೊದಲ ಪಿ.ಎಚ್.ಡಿ. ಅಧ್ಯಯನವಾಗಿತ್ತು. 1950 ರಿಂದ 1962 ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು 1964ರಿಂದ 17 ವರ್ಷಗಳ ಕಾಲ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ನಿರ್ದೇಶಕರಾಗಿದ್ದರು.

'ಅಮೇರಿಕದಲ್ಲಿ ನಾನು ಮತ್ತು ಶಾಂತಿ' (ಪ್ರವಾಸ ಸಾಹಿತ್ಯ) 'ಭಾರತೀಯ ತತ್ವಶಾಸ್ತ್ರದ ರೂಪರೇಖೆಗಳು', 'ಉಪನಿಷತ್ತುಗಳ ಸಂದೇಶ' (ಅನುವಾದ), 'ಸಾಹಿತ್ಯ ಮತ್ತು ಆಧುನಿಕತೆ' (ವಿಮರ್ಶೆ), 'ಆಮ್ರಪಾಲಿ', 'ಅಂಗುಲಿಮಾಲ' (ನಾಟಕಗಳು), 'ನಿವೇದಿತ' (ಬಾಲಸಾಹಿತ್ಯ), 'ಚಿಂತೆ–ಚಿಂತನ' (ಪ್ರಬಂಧ), 'ಶರಣರ ನೂರೊಂದು ವಚನಗಳು' (ಸಂಪಾದನೆ) ಇವು ಇವರ ಮುಖ್ಯ ಕೃತಿಗಳಾಗಿವೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಗೊರೂರು ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ದೊರಕಿವೆ. ಪ್ರಸ್ತುತ ಲೇಖನವನ್ನು ಅವರ 'ಕನ್ನಡದಲ್ಲಿ ಭಾವಗೀತೆ' ಎಂಬ ಸಂಶೋಧನಾ ಪ್ರಬಂಧದಿಂದ ಆರಿಸಲಾಗಿದೆ.



## ಸಂಕ್ಷಿಪ್ತವಾಗಿ ಬರೆಯಿರಿ

- 'ಇದು ಬರಿ ಬೆಳಗಲ್ಲೋ ಅಣ್ಣಾ' – ಎಂದು ಬೇಂದ್ರೆಯವರು ಹೇಳಿದ ಈ ಸಾಲಿನ ಸ್ವಾರಸ್ಯವನ್ನು ಬರೆಯಿರಿ.
- 'ಬೆಳಗು ಅತ್ಯಂತ ಸರಳ ಅಚ್ಚಗನ್ನಡ ಪದಗಳಿಂದ ಅತ್ಯಪೂರ್ವವಾದ ವರ್ಣನೆ ಅನುಭವಗಳನ್ನು ಒಳಗೊಂಡಿರುವ ಕವನ' – ಈ ಮಾತನ್ನು ನೀವು ಒಪ್ಪುತ್ತೀರಾ? ಸಮರ್ಥಿಸಿ ಬರೆಯಿರಿ.



Downloaded from https:// www.studiestoday.com

Downloaded from https:// www.studiestoday.com

## ಚಟುವಟಿಕೆಗಳು

- ತರಗತಿಯಲ್ಲಿ ವಿದ್ಯಾರ್ಥಿಗಳು ರಚಿಸಿದ ಪ್ರಕೃತಿ ವರ್ಣನೆಯ ಕವನಗಳನ್ನು ಒಟ್ಟು ಸೇರಿಸಿ ಕವನ ಸಂಕಲನವೊಂದನ್ನು ತಯಾರಿಸಿ ಪ್ರಕಟಿಸಿರಿ.
- ಕುವೆಂಪುರವರ 'ಸುಗ್ಗಿ ಬರುತಿದೆ' ಕವನದ ವಿಮರ್ಶೆಯನ್ನು ಬರೆಯಿರಿ.

## ಕಲಿಕಾ ಸಾಧನೆಗಳು

- ಹೊಸಗನ್ನಡ ಕಾಲಘಟ್ಟದ ನವೋದಯ ಸಾಹಿತ್ಯ ರಚನೆಗಳನ್ನು ಓದಿ ವಿಶ್ಲೇಷಿಸಿ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತ ರೂಪದಲ್ಲಿ ಮಂಡಿಸುವುದು.
- ಕವಿತೆ, ಕಾವ್ಯಗಳಲ್ಲಿ ಮೂಡಿಬಂದಿರುವ ವರ್ಣನೆಗಳನ್ನು ಓದಿ ಆಸ್ವಾದಿಸಿ ವಿಮರ್ಶೆ, ಆಸ್ವಾದನ ಟಿಪ್ಪಣಿಗಳನ್ನು ತಯಾರಿಸುವುದು.
- ಓದಿದ ಗದ್ಯ ಪದ್ಯ ಕೃತಿಗಳ ವಸ್ತು, ಭಾಷೆ, ಶೈಲಿ ಮೊದಲಾದವುಗಳ ವೈವಿಧ್ಯಗಳನ್ನು ಗ್ರಹಿಸಿಕೊಂಡು ಬಹುಮುಖ ರಚನಾ ಸಾಮರ್ಥ್ಯವನ್ನು ಗ್ರಹಿಸುವುದು.
- ಪೂರಕ ಗ್ರಂಥಗಳು, ಇಂಟರ್‌ನೆಟ್ ಮೊದಲಾದವುಗಳಿಂದ ಮಾಹಿತಿ ಸಂಗ್ರಹಿಸಿ ಸ್ವರಚನೆಗೆ ಬೇಕಾದ ಭಾಷಾ ನೈಪುಣ್ಯವನ್ನು ಆರ್ಜಿಸಿಕೊಳ್ಳುವುದು.



Downloaded from https:// www.studiestoday.com

Downloaded from https:// www.studiestoday.com


# ಜನ-ಜಾನಪದ

ಮಾನವನ ಸಮಷ್ಟಿ ಜೀವನ ವಿಧಾನ, ಆತನ ಆಲೋಚನೆಗಳು, ಬದುಕಲ್ಲಿ ಅಳವಡಿಸಿಕೊಂಡ ಮೌಲ್ಯಗಳು – ಇವೆಲ್ಲವೂ ಒಟ್ಟಾಗಿ 'ಸಂಸ್ಕೃತಿ' ಎನಿಸಿಕೊಳ್ಳುತ್ತವೆ. ಸಂಸ್ಕೃತಿಯು ಸಾಹಿತ್ಯ ಕೃತಿಗಳಲ್ಲಿ, ವಿವಿಧ ಕಲಾರೂಪಗಳಲ್ಲಿ, ಆರಾಧನ ವಿಧಾನಗಳಲ್ಲಿ ಅಭಿವ್ಯಕ್ತವಾಗುತ್ತದೆ.

ಹಿಂದೆ ನಮ್ಮ ಹಳ್ಳಿಯ ಜನರು ಸಾಮಾನ್ಯವಾಗಿ ಅವಿದ್ಯಾವಂತರಾಗಿದ್ದರು. ಆದರೆ ಅಪಾರವಾದ ಜೀವನಾನುಭವ ಸಂಪತ್ತುಳ್ಳವರು. ತಮ್ಮ ಗ್ರಾಮೀಣ ಜೀವನದ ನೋವು ನಲಿವುಗಳನ್ನು ಕಾವ್ಯಾತ್ಮಕವಾಗಿ ಅಭಿವ್ಯಕ್ತಿ ಮಾಡಬಲ್ಲ ಸಾಮರ್ಥ್ಯವಂತರು. ಅವರ ಅಭಿವ್ಯಕ್ತಿ ಕೆಲವೊಮ್ಮೆ ಕಥೆಗಳಾಗಿ, ಒಗಟುಗಳಾಗಿ, ಗಾದೆಗಳಾಗಿ, ಲಾವಣಿಗಳಾಗಿ, ಹಾಡುಗಳಾಗಿ ಹೊರಹೊಮ್ಮುತ್ತಿದ್ದುವು. ಇವುಗಳಲ್ಲಿ ಗೀತೆಗಳದ್ದೇ ಬಹುದೊಡ್ಡ ಪಾಲಿದೆ. ಜನಪದರ ರಚನೆಗಳು ಜನಪದ ಸಾಹಿತ್ಯವೆಂಬ ಹೆಸರಿನಿಂದ ಗುರುತಿಸಲ್ಪಡುತ್ತವೆ.

ಪ್ರತಿಯೊಂದು ಜನಾಂಗಕ್ಕೂ ಅದರದ್ದೇ ಆದ ಕಲೆ, ಸಂಸ್ಕೃತಿ ಇರುತ್ತದೆ. ಕರಾವಳಿ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಯಕ್ಷಗಾನವು ಅಂಥ ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸುವ ಒಂದು ಕಲೆಯಾಗಿದೆ.

ಯಕ್ಷಗಾನದಲ್ಲಿ ಆಟ – ಕೂಟಗಳೆಂಬ ಎರಡು ಪ್ರಕಾರಗಳಿವೆ. ಪುರಾಣ ಪ್ರಪಂಚದ ಬೇರೆ ಬೇರೆ ಪಾತ್ರಗಳನ್ನು, ಸನ್ನಿವೇಶಗಳನ್ನು ಮಾತು, ಅಭಿನಯಗಳ ಮೂಲಕ ಚಿತ್ರಿಸಿ, ಕಥಾಭಿವ್ಯಕ್ತಿ ಮಾಡುವುದು ಇದರ ಉದ್ದೇಶ. 'ಯಕ್ಷಗಾನ ಶಕಪುರುಷರಲ್ಲಿ ಒಬ್ಬರಾದ ಶೇಣಿ ಗೋಪಾಲಕೃಷ್ಣ ಭಟ್ಟರದು ಪ್ರತಿನಾಯಕ ಪಾತ್ರ ನಿರೂಪಣೆಯಲ್ಲಿ ಎತ್ತಿದ ಕೈ. ಅವರ ಕುರಿತು ಪ್ರಸಿದ್ಧ ಯಕ್ಷಗಾನ ಪ್ರಸಂಗಕರ್ತೃ ಹಾಗೂ ಪ್ರಾಧ್ಯಾಪಕ ಅಮೃತ ಸೋಮೇಶ್ವರ ಅವರು 'ಅಪ್ರತಿಮ ಪ್ರತಿ ನಾಯಕ ಶೇಣಿ' ಎಂಬ ಲೇಖನದಲ್ಲಿ ಅರ್ಥಪೂರ್ಣವಾಗಿ ಬರೆದಿದ್ದಾರೆ.



ಆರಾಧನೆ ಅನಾದಿ ಕಾಲದಿಂದ ಬಂದ ಒಂದು ಸಂಪ್ರದಾಯ. ತುಳುನಾಡಿನಲ್ಲಿ ಭೂತಾರಾಧನೆ ಬಹು ಪ್ರಚಲಿತ. ಹಾಗೆಯೇ ಕೇರಳದ ಉತ್ತರ ಭಾಗದ ಕರಾವಳಿ ಪ್ರದೇಶದಲ್ಲಿ ತೆಯ್ಯಂ ಆರಾಧನೆ ಪ್ರಚಲಿತವಿದೆ. ಇವೆರಡೂ ಆರಾಧನೆಗಳ ತಾತ್ವಿಕ ಹಿನ್ನೆಲೆ ಒಂದೇ. ಅವುಗಳನ್ನು ತಿಳಿಯುವುದು ಸಾಂಸ್ಕೃತಿಕ ಸಮನ್ವಯ ದೃಷ್ಟಿಯಿಂದ ಮಹತ್ವಪೂರ್ಣವಾದುದಾಗಿದೆ.



Downloaded from https:// www.studiestoday.com

Downloaded from https:// www.studiestoday.com

# ಇದ್ದ್ಯ ಬಲ್ಲವಗೆ ಭಾಗ್ಯವಂತೆ

ಓದು ಬರಹ ಅರಿಯದ ಸಾಮಾನ್ಯ ಜನರು ತಾವು ಕಂಡುಂಡ ನೋವು – ನಲಿವು, ಪ್ರೀತಿ – ಪ್ರೇಮ, ಭಕ್ತಿ–ನೀತಿಗಳನ್ನು, ಕಥೆ, ಗೀತೆ, ಗಾದೆ, ಒಗಟು, ಮೊದಲಾದ ಸಾಹಿತ್ಯ ರೂಪಗಳಲ್ಲಿ ಜನಮನದಲ್ಲಿ ಅಪೂರ್ವ ಪ್ರಭಾವ ಬೀರಿದ್ದಾರೆ. ಹೀಗೆ ಅಜ್ಞಾತರು ರಚಿಸಿದ ಅಮರ ಸಾಹಿತ್ಯವೇ ಜನಪದ ಸಾಹಿತ್ಯ. ಇದು ಬಾಯಿಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದ ಸಾಹಿತ್ಯ.

ಜನಪದ ಗೀತೆಗಳಲ್ಲಿ ವೈವಿಧ್ಯಮಯ ಛಂದಸ್ಸಿದ್ದರೂ ಕನ್ನಡ ಛಂದಸ್ಸಿನ ತಾಯಿಬೇರಾಗಿರುವ ತ್ರಿಪದಿಗೇ ಅಗ್ರಸ್ಥಾನ. ಹಾಡುಗಬ್ಬವಾದ ತ್ರಿಪದಿಯು ಮೂರು ಪಾದಗಳಿಂದ ಕೂಡಿರುತ್ತದೆ. ಸರಳವೂ, ಸುಂದರವೂ, ಸುಲಲಿತವೂ ಆದ ನಡಿಗೆ ಇದಕ್ಕಿದೆ. ಇಲ್ಲಿ ನೀಡಲಾದ ಜನಪದ ಗೀತೆಗಳಲ್ಲಿ ತವರಿನ ಪ್ರೀತಿ, ವಿದ್ಯೆಯ ಬೆಲೆ ಹಾಗೂ ಸಾಮಾಜಿಕ ನೀತಿಗಳನ್ನು ಕಾಣಬಹುದು.



ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡಿಲಿರುವ ಕರಕೀಯ – ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ

ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ
ಚೆನ್ನಾಗಿ ಕಳಿತ ರಸಬಾಳೆ – ಹಣ್ಣಿಂತ
ಚೆನ್ನ ಕಾಣೆ ತಾಯಿ ಎದೆಹಾಲು

ತಂದೀಯ ನೆನೆದರೆ ತಂಗುಳು ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವ – ನೆನದರ
ಮಾಸಿದ ತಲೆಯು ಮಡಿಯಾಯ್ತು



Downloaded from https:// www.studiestoday.com

Downloaded from https:// www.studiestoday.com

ಏಳುತಾಲೇ ಎದ್ದು ಯಾರ‍್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳಾ – ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನು

ಕಸವ ಹೊಡೆದ ಕೈ ಕಸ್ತೂರಿ ನಾತಾವು
ಬಸವಣ್ಣ ನಿನ್ನ ಸೆಗಣಿಯ – ಬಳಿದ ಕೈ
ಎಸಳ ಯಾಲಕ್ಕಿ ಗೊನೆನಾತ

ಮಾರುದ್ದ ಪೈರಾಗಲಿ ಮೊಳದುದ್ದ ತೆನೆಯಾಗಲಿ
ಬಡವನ ಮನೆಗೆ ಸಿರಿಬರಲಿ – ಭೂಮಿತಾಯಿ
ಕಂದಯ್ನ ಹಸಿವು ಇಂಗೋಗ್ಲಿ

ನಿದ್ದಿಗೆ ಮದ್ದುಂಟೆ ಬುದ್ಧಿಗೆ ಕೇಡುಂಟೆ
ಇದ್ಯ ಬಲ್ಲವಗೆ ಭಯವುಂಟೆ– ದ್ಯಾವರೆ
ಮದ್ದುಂಟೆ ಜನನ ಮರಣಾಕೆ

ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ–ಕಂದಯ್ಯ
ಜೂಜಿಗೆ ಮನವ ಬಿಡದಿರು

ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು – ನನಕಂದ
ಜ್ಯೋತಿಯೆ ಆಗು ಜಗಕೆಲ್ಲ

ಸಂಗ್ರಹ : ಜನಪದ ಗೀತಾಂಜಲಿ
***ದೇ. ಜವರೇಗೌಡ***



Downloaded from https:// www.studiestoday.com

Downloaded from https:// www.studiestoday.com

## ದೇ. ಜವರೇಗೌಡ



ದೇ. ಜವರೇಗೌಡರು 1918ರಲ್ಲಿ ಕರ್ನಾಟಕದ ಮುದುಗೆರೆಯಲ್ಲಿ ಜನಿಸಿದರು. ತಂದೆ ದೇವೇಗೌಡ, ತಾಯಿ ಚೆನ್ನಮ್ಮ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿಯೂ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಧಿಕಾರಿಯಾಗಿಯೂ, ಕುಲಪತಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರು ಕನ್ನಡ ಅಧ್ಯಯನ ಸಂಸ್ಥೆಯ ಸ್ಥಾಪಕರಾಗಿ ಹಾಗೂ ಅದರ ನಿರ್ದೇಶಕರಾಗಿ ದುಡಿದಿದ್ದಾರೆ. ಇವರ 'ಪುನರುತ್ಥಾನ' ಕೃತಿಗೆ ಸೋವಿಯತ್ ಲ್ಯಾಂಡ್ ಪ್ರಶಸ್ತಿ ದೊರೆತಿದೆ. 1975ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ಪಡೆದರು. ಇವರ 'ತೆನೆ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರೆತಿದೆ. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತುಸಂಗ್ರಹಾಲಯ ಇವರ ಸಾಧನೆಗಳಲ್ಲಿ ಒಂದು.

### ಚಟುವಟಿಕೆಗಳು

- ಮೇಲಿನ ತ್ರಿಪದಿಗಳನ್ನು ತಾಳ– ಲಯ ಬದ್ಧವಾಗಿ ಹಾಡಿರಿ.
- ಪಾಠಭಾಗದಲ್ಲಿ ಬಂದಿರುವ ತ್ರಿಪದಿಗಳ ಆಶಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.
- ಗ್ರಾಮೀಣ ಬದುಕಿನ ಚಿತ್ರಣವಿರುವ ತ್ರಿಪದಿಗಳನ್ನು ಸಂಗ್ರಹಿಸಿ ಸಂಕಲನವೊಂದನ್ನು ತಯಾರಿಸಿರಿ.
- ಬೇಸಾಯಕ್ಕೆ ಸಂಬಂಧಿಸಿದ ತ್ರಿಪದಿಗಳನ್ನು ಸಂಗ್ರಹಿಸಿ ಅವುಗಳ ಆಧಾರದಲ್ಲಿ ಜನಪದರು ಕೃಷಿಗೆ ನೀಡಿದ ಮಹತ್ವವನ್ನು ತಿಳಿಯಪಡಿಸುವ ಲೇಖನವೊಂದನ್ನು ಬರೆದು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿರಿ.
- ಭತ್ತದ ಬೇಸಾಯಕ್ಕೆ ಸಂಬಂಧಿಸಿದಂತೆ ನೇಜಿ ಕೀಳುವಾಗ, ನೇಜಿ ನೆಡುವಾಗ ಹಾಡುವ ಜಾನಪದ ಕಾವ್ಯವನ್ನು ತುಳುಭಾಷೆಯಲ್ಲಿ ಪಾಡ್ದನಗಳೆಂದೂ ಕಬಿತೆಗಳೆಂದೂ ಕರೆಯಲಾಗುತ್ತದೆ. ನಿಮ್ಮ ಪರಿಸರದಲ್ಲಿರುವ ಅಂತಹ ಜನಪದ ಹಾಡುಗಳನ್ನು ಬಲ್ಲವರನ್ನು ಭೇಟಿ ಮಾಡಿ ಹಾಡುಗಳನ್ನು ಸಂಗ್ರಹಿಸಿ, ಧ್ವನಿ ಮುದ್ರಿಸಿಕೊಳ್ಳಿರಿ.

### ಭಾಷಾಭ್ಯಾಸ

- ತ್ರಿಪದಿಗಳಲ್ಲಿ ಬಂದಿರುವ ಈ ಕೆಳಗಿನ ಗ್ರಾಮ್ಯಪದಗಳ ಶಿಷ್ಟರೂಪವನ್ನು ಬರೆಯಿರಿ.
  ತಂದೀಯ, ನಿದ್ದಿ, ಹೊಳೆದಂಡಿ, ಇದ್ಯ, ಇಂಗೋಗ್ಲಿ, ಕಂದಯ್ನ.



Downloaded from https:// www.studiestoday.com

Downloaded from https:// www.studiestoday.com

# ಅಪ್ರತಿಮ ಪ್ರತಿನಾಯಕ ಶೇಣಿ

ಡಾ. ಅಮೃತ ಸೋಮೇಶ್ವರ



ರಂಗಭೂಮಿಯಲ್ಲಿ ನಾಯಕ ಮತ್ತು ಪ್ರತಿನಾಯಕ ಪಾತ್ರಗಳಲ್ಲಿ ಜನರು ನಾಯಕಪಾತ್ರಗಳನ್ನು ಮೆಚ್ಚಿಕೊಳ್ಳುವುದು ಸಹಜ. ಆದರೆ ತಮ್ಮ ಅಪ್ರತಿಮ ವಚೋವಿಲಾಸದಿಂದ ಪ್ರತಿನಾಯಕನ ಪಾತ್ರವನ್ನು ಜನಪ್ರಿಯವಾಗುವಂತೆ ಮಾಡಿದವರು ಹರಿದಾಸ ಶೇಣಿ ಗೋಪಾಲಕೃಷ್ಣ ಭಟ್ಟರು.

ಲೋಕ ವ್ಯಕ್ತಿಗಳನ್ನು ಕೇವಲ ಶಿಷ್ಟ– ದುಷ್ಟ ಎಂಬ ಸ್ಥೂಲ, ಸರಳ ಕಪ್ಪು ಬಿಳುಪು ವಿಭಜನೆಯಿಂದ ಸಮೀಕ್ಷಿಸಲು ಸಾಧ್ಯವಿಲ್ಲ. ಯಾವ ವ್ಯಕ್ತಿಯೂ ನೂರಕ್ಕೆ ನೂರು ಶುದ್ಧ ಸಾತ್ವಿಕರಾಗಿಯೋ, ಪೂರ್ಣ ದುಷ್ಟರಾಗಿಯೋ ಇರಲಾರರು. ಹಾಗೆ ನೋಡಿದರೆ ಪ್ರತಿ ವ್ಯಕ್ತಿಯಲ್ಲೂ ಅಷ್ಟಿಷ್ಟು ಸಂಕೀರ್ಣತೆ ಇದ್ದೇ ಇರುತ್ತದೆ. ದುಷ್ಟರೆನಿಸಿದವರಲ್ಲೂ ಎಲ್ಲೋ ಒಂದಿಷ್ಟು ಒಳ್ಳೆತನ ಇರಬಹುದು. ಯಕ್ಷಗಾನದಂಥ ರಂಗಭೂಮಿಯಲ್ಲಿ ಒಂದು 'ಖಳ' ಪಾತ್ರವನ್ನು ದುಷ್ಟ ಪಾತ್ರವಾಗಿಯೇ ಚಿತ್ರಿಸುವುದಕ್ಕೆ ದೊಡ್ಡ ಪ್ರತಿಭೆಯೇನೂ ಬೇಕಾಗಿಲ್ಲ. ಯಕ್ಷಗಾನದ ಸಾಮಾನ್ಯ ಕಸುಬುಗಾರಿಕೆಯ ತಿಳಿವು ಸಾಕಾಗುತ್ತದೆ. ಆದರೆ, ಖಳ ಪಾತ್ರವೆಂದು ಬಿಂಬಿಸಲ್ಪಟ್ಟ ಒಂದು ಪ್ರತಿನಾಯಕ ಪಾತ್ರದ ವ್ಯಕ್ತಿತ್ವದ ಒಳಮಗ್ಗುಲುಗಳನ್ನು ದರ್ಶಿಸಿ ಅಂಥ ಪಾತ್ರದ ವಿಶಿಷ್ಟ ಭಾವ ಸಂಕೀರ್ಣತೆಯನ್ನು ಮಾರ್ಮಿಕವಾಗಿ ಚಿತ್ರಿಸುವುದು ಅಸಾಧಾರಣ ಪ್ರತಿಭಾವಂತ ಕಲಾಕಾರರಿಗೆ ಮಾತ್ರ ಸಾಧ್ಯ. ತಮ್ಮ ಅಪ್ರತಿಮ ವಚೋವಿಲಾಸದಿಂದ ಐದಾರು ದಶಕಗಳವರೆಗೆ ಯಕ್ಷಗಾನ ರಂಗದಲ್ಲಿ ಮೆರೆದ ಹರಿದಾಸ ಶೇಣಿ ಗೋಪಾಲಕೃಷ್ಣಭಟ್ಟರದು ಆ ಬಗೆಯ ಪಾತ್ರ ಶೋಧನೆಯ ನಿತ್ಯನೂತನ ಪ್ರತಿಭೆ.

ನಾಲ್ಕೂ ಬಗೆಯ ನಾಯಕ ಪಾತ್ರಗಳನ್ನು ಶೇಣಿಯವರು ಅತ್ಯಂತ ಸಮರ್ಪಕವಾಗಿ ನಿರ್ವಹಿಸಲು ಸಮರ್ಥರಾಗಿದ್ದರೂ ಯಕ್ಷಗಾನ ಆಟದಲ್ಲಾಗಲಿ, ಕೂಟದಲ್ಲಾಗಲೀ



Downloaded from https:// www.studiestoday.com

Downloaded from https:// www.studiestoday.com

ಶೇಣಿಯವರು ಹೆಚ್ಚಾಗಿ ವಹಿಸಿದ್ದು ಅಥವಾ ಯಕ್ಷಗಾನ ರಸಿಕರು ಬಯಸಿದ್ದು ಹೆಚ್ಚಾಗಿ ಅವರ ಧೀರೋದ್ಧತ ಪ್ರತಿನಾಯಕ ಪಾತ್ರಗಳನ್ನೇ. ಉಪ್ಪು, ಹುಳಿ, ಖಾರ ತುಂಬಿದ ರೋಚಕ ಪಾತ್ರಗಳನ್ನೆ ಅವರು ಹೆಚ್ಚು ರಸವತ್ತಾಗಿ ರೂಪಿಸಬಲ್ಲರೆಂದೇ ಅನೇಕರ ಮೆಚ್ಚುಗೆಯ ಅಭಿಪ್ರಾಯವಾಗಿತ್ತು. ರಾವಣ, ಮಾಗಧ, ನರಕಾಸುರ, ಹಿರಣ್ಯ ಕಶಿಪು, ವಾಲಿ, ಕೌರವ, ಕರ್ಣ, ದುಷ್ಟ ಬುದ್ಧಿ ಮೊದಲಾದ ಭೂಮಿಕೆಗಳನ್ನು ಕಪ್ಪು– ಬಿಳುಪಿನ ಮಟ್ಟದ ಸರಳ ನಿರ್ವಹಣೆಯ ಬಗೆಯಿಂದ ಮೇಲೆತ್ತಿ, ಪುರಾಣಲೋಕದ ಆ ಕ್ರಿಯಾಶೀಲ ಪ್ರಚಂಡ ವ್ಯಕ್ತಿಗಳ ಸತ್ವ, ಸಾಮರ್ಥ್ಯಗಳ ಜತೆಗೆ, ಅವರ ಮನೋಲೋಕದ ಭಾವ ಸಂಘರ್ಷಗಳನ್ನು ಪರಿಣಾಮ ರಮಣೀಯವಾಗಿ ಶೇಣಿಯವರು ಚಿತ್ರಿಸುವ ವೈಖರಿಯೇ ವಿಶಿಷ್ಟವಾಗಿತ್ತು. ಅವರ ಮಹಾಪ್ರತಿಭೆಯ ಬೀಸಿನಲ್ಲಿ ಹೊಸ ಜೀವನೆತ್ತರು ತುಂಬಿಕೊಂಡು ಆ ಪಾತ್ರಗಳು ವಿಜೃಂಭಿಸಿದವು. ಹಾಗೆಂದು ಶೇಣಿಯವರು ಚುಟ್ಟಿಯಿಟ್ಟು ‘ಕೇಸರಿತಟ್ಟಿ’ ಕಿರೀಟ ಹೊತ್ತು ಕುಣಿಯಲಿಲ್ಲ. ಕುಣಿತವೂ ಅವರಲ್ಲಿರಲಿಲ್ಲ. ತಮ್ಮ ಅದ್ಭುತ ಕಂಠ ಸಿರಿಯ ವಾಚಿಕಾಭಿನಯ ವೈಖರಿಯಿಂದ, ಕುಣಿತವಿಲ್ಲದೆಯೂ ಎಲ್ಲ ಪಾತ್ರಗಳನ್ನು ರಂಗಸ್ಥಳದಲ್ಲಿ ಮೆರೆಸಿ ಅವರು ದಕ್ಕಿಸಿಕೊಂಡರು.

‘ಶೇಣಿಯವರು ರಾವಣ ಪಾತ್ರ ವಹಿಸಿದರೆ ಪ್ರೇಕ್ಷಕರು ನಿಷ್ಠಾಂತರ ಮಾಡಿ ರಾವಣ ಪಕ್ಷಕ್ಕೆ ಸೇರುವುದು ನಿಶ್ಚಯ’ ಎಂಬಂಥ ಆತಂಕಕಾರಿ ಉದ್ಗಾರಗಳನ್ನು ಕೆಲಮೊಮ್ಮೆ ಶೇಣಿಯವರ ಪಾತ್ರ ನಿರ್ವಹಣೆಯ ಕುರಿತಾಗಿ ಕೇಳಬಹುದಾಗಿತ್ತು. ಒಬ್ಬಿಬ್ಬರು ಮಠಪತಿಗಳು ಅವರಲ್ಲಿ ಖಳಪಾತ್ರಗಳ ಬದಲಿಗೆ ನಾಯಕಪಾತ್ರಗಳನ್ನೇ ವಹಿಸುವುದು ಉತ್ತಮವೆಂದು ‘ಬುದ್ಧಿ’ ಹೇಳಿದ್ದುಂಟು! ಇಂಥ ಅಭಿಪ್ರಾಯಗಳನ್ನು ಆಕ್ಷೇಪಗಳೆಂದು ತಿಳಿಯುವುದಕ್ಕಿಂತ ಅವರ ಕಲಾಕೌಶಲದ ಬಗೆಗಿನ ಪ್ರಶಂಸಾವಾಕ್ಯಗಳೆಂದೇ ಪರಿಗಣಿಸಬೇಕಾಗುತ್ತದೆ. ಇಷ್ಟಕ್ಕೂ, ಕೇವಲ ಪುರಾಣಕಥೆಯನ್ನು ತಿಳಿಯಬೇಕೆಂಬ ಉದ್ದೇಶದಿಂದಷ್ಟೇ ಯಾರೂ ಯಕ್ಷಗಾನಕ್ಕೆ ಹೋಗುವುದಲ್ಲ. ಪುರಾಣ ಲೋಕದ ಮರುಸೃಷ್ಟಿಯನ್ನು ರಂಗದಲ್ಲಿ ನೋಡಿ ರಸಾನಂದ ಪಡೆಯಲು ಹೋಗುತ್ತಾರೆ. ಅಂಥ ಪುನರ್ ಸೃಷ್ಟಿಯ ಶ್ರೇಷ್ಠತಮ ಸೃಷ್ಟಿಕರ್ತರು ಶೇಣಿಯವರು.

ತಾವು ವಹಿಸಿದ ಪ್ರತಿನಾಯಕ ಪಾತ್ರಗಳಲ್ಲಿ ತಮಗೆ ಹೆಚ್ಚು ಇಷ್ಟವಾದದ್ದು ರಾವಣನ ಪಾತ್ರವೆಂದು ಶೇಣಿಯವರೇ ಹೇಳಿದ್ದುಂಟು. ರಾವಣನ ದಶಮುಖತ್ವಕ್ಕೆ ಬಗೆಬಗೆಯ ವ್ಯಾಖ್ಯಾನವನ್ನು ಶೇಣಿಯವರು ಸಾಂದರ್ಭಿಕವಾಗಿ ಮಾಡಿದ್ದಿದೆ. ತನ್ನ ಹಾಗೂ ತನ್ನವರ ಅಸ್ತಿತ್ವ, ಅಸ್ಮಿತೆಗಳನ್ನು ನಿರಂತರ ಪ್ರಯತ್ನದಿಂದ ಸ್ಥಾಪಿಸಿದ ಹೋರಾಟಗಾರನಾಗಿ, ತಪೋಸಾಧಕ ಶಿವಭಕ್ತ ಶಿಖಾಮಣಿಯಾಗಿ, ಸರ್ವಭೋಗಭಾಗ್ಯಗಳ ಆಗರವಾದ



Downloaded from https:// www.studiestoday.com

Downloaded from https:// www.studiestoday.com

ಕನಕಲಂಕೆಯ ಸಾರ್ವಭೌಮನಾಗಿ, ಚತುರ್ದಶಭುವನದಲ್ಲಣ ಮಹಾತ್ವಾಕಾಂಕ್ಷಿ ಮಹಾವೀರನಾಗಿ, ಸೀತಾಪಹಾರ ಮಾಡಬೇಕಾಗಿ ಬಂದ ವಂಚಕನಾಗಿ, ಮರ್ಯಾದಾ ಪುರುಷೋತ್ತಮನೆನಿಸಿದ ಶ್ರೀರಾಮನ ಶತ್ರುವಾಗಿ, ಮಂಡೋದರಿಯಂಥ ಸಾಧ್ವಿಯ ಪತಿಯಾಗಿ, ಅತಿಕಾಯ, ಇಂದ್ರಜಿತು ಮೊದಲಾದ ವೀರಾಗ್ರಣಿಗಳ ತಂದೆಯಾಗಿ, ವಿಭೀಷಣನಂಥ ಸಾತ್ತ್ವಿಕನ ಅಣ್ಣನಾಗಿ ರಾವಣನ ವ್ಯಕ್ತಿತ್ವ ಪಡೆದಂಥ ವಿವಿಧ ಆಯಾಮಗಳನ್ನು ಬಹುಶಃ ಬೇರಾವ ಪಾತ್ರದಲ್ಲೂ ಅಷ್ಟರ ಪ್ರಮಾಣದಲ್ಲಿ ಕಾಣುವುದು ಅಸಾಧ್ಯ.

ರಾವಣನ ಚಿತ್ತರಂಗದಲ್ಲಿ ಆಗಾಗ ಮಸಗುತ್ತಿದ್ದ ತುಮುಲ, ಅಚಲ ಚಲದ ಮೇಲಾಟ, ಇಂದ್ರಜಿತುವನ್ನು ಕಳಕೊಂಡಾಗ ವಾತ್ಸಲ್ಯಮಯಿ ತಂದೆಯಾಗಿ ರಾವಣನ ವಿಲಾಪ, ಮಂಡೋದರಿಯೊಡನೆ, 'ಲಾಲಿಸು ಮಯತನುಜೆ ಮಚ್ಚರಿತವ' ಎಂದು ತನ್ನ ಒಳಗನ್ನು ಬಿಚ್ಚಿ ಆಡುವಿಕೆ, ವಿಭೀಷಣನನ್ನು ತ್ಯಜಿಸುವಲ್ಲಿ ತೋರಿದ ರಾಜಕೀಯ ದೂರದರ್ಶಿತ್ವ, ಒಂದು ವೇಳೆ ಶ್ರೀರಾಮನ ಬಾಣಕ್ಕೆ ಗುರಿಯಾದರೂ ತನ್ನ ದೇಹ ಅವನಿಗೆ ನಮಸ್ಕಾರವಾಗಿ ಮುಂದಕ್ಕೆ ಬಾಗಿ ಬೀಳಲಾರದು ಎಂಬ ಅಪ್ರತಿಮ ಆತ್ಮಪ್ರತಿಷ್ಠೆ, ವಿರೋಧ ಭಕ್ತನೆನಿಸಿ ಕೊನೆಯಲ್ಲಿ ಕೋದಂಡರಾಮನ ನಿಜವರಿತ ಮೋಕ್ಷಗಾಮಿ ಅತ್ಮಜ್ಞಾನಿಯ ಅಧ್ಯಾತ್ಮ ಇವುಗಳನ್ನು ಶೇಣಿಯವರು ಬಿಂಬಿಸುತ್ತಿದ್ದ ರೀತಿ ಸದಾಸ್ಮರಣೀಯ. ಅಲ್ಲಿ ಭಾವಬುದ್ಧಿಗಳ ರೋಚಕ ಸಂಗಮ ಏರ್ಪಡುತ್ತಿತ್ತು.

ಜರಾಸಂಧ – ಶೇಣಿಯವರು ಕಂಡರಿಸಿದ ಇನ್ನೊಂದು ಮಹತ್ತರ ಪಾತ್ರ 'ಆ ಶಬ್ದಕಿಳೆಯದುರಲಿತ್ತ' ಎಂಬ ಪದ್ಯಕ್ಕೆ 'ಆ ಶಬ್ದಕ್ಕೆ ಭೂಮಿ ನಡುಗುತ್ತಿತ್ತು. ಈ ಶಬ್ದಕ್ಕೆ ನಾನೇ ಅದುರುತ್ತಿದ್ದೇನೆ' ಎಂದು ಮಾತು ತೊಡಗುತ್ತ ಭೇರಿತ್ರಯ ಧ್ವಂಸದ ಭಯಾನಕತೆಯನ್ನೂ ಶಕುನಪೂರ್ಣತೆಯನ್ನೂ ಶೇಣಿ ಧ್ವನಿಸಿ ಬಿಡುತ್ತಾರೆ! ಅವರ ಮಾಗಧ, ಮಾರುವೇಷದಲ್ಲಿ ಬಂದ ಕೃಷ್ಣಭೀಮಾರ್ಜುನರನ್ನು ಮಾತನಾಡಿಸುವ ಪರಿ, ಅದರಲ್ಲೂ ಶ್ರೀಕೃಷ್ಣನಲ್ಲಿ ಸಂವಾದ ಬೆಳೆಸುವ ಸ್ವಾರಸ್ಯ, 'ತಿಳಿಯದಾದಿರೇ ನಮ್ಮ ಕಂಸಗೆ ಅಳಿಯನೀತನು' ಎಂಬಲ್ಲಿ ಮಾಡುವ ವ್ಯಂಗ್ಯ, 'ನೀನೂ ಗಂಡೂ ಅಲ್ಲ ಹೆಣ್ಣೂ ಅಲ್ಲ ಯಾವುದೋ ಅದು' ಎಂದು ಮಾಡುವ ನಿಂದಾಸ್ತುತಿಯಲ್ಲಿ ಅಡಗಿದ 'ತತ್ತ್ವ ಮಸಿ' ತತ್ತ್ವ, ದ್ವಂದ್ವ ಯುದ್ಧಕ್ಕೆ ಭೀಮನನ್ನೇ ಆಯ್ಕೆ ಮಾಡುವ ಅಸಾಮಾನ್ಯ ಘನತೆ ಇತ್ಯಾದಿಗಳು ಉಂಟುಮಾಡುತ್ತಿದ್ದ ರಸಪ್ರತೀತಿ ಅಸಾಧಾರಣವಾದದ್ದು. ಕಂಸನಾಗಿ ಶೇಣಿ ಕಾಣಿಸುವ ವಿಲಕ್ಷಣ ರಾಜಕಾರಣದ ವರಸೆ ಒಂದು ಬಗೆಯಾದರೆ, ಶುಂಭಾಸುರ, ಭಂಡಾಸುರ, ದಾರಿಕಾಸುರ ಮುಂತಾದ ರಾಕ್ಷಸರಾಜರ ಪಾತ್ರಗಳಿಗೆ ಒಂದಿಷ್ಟು ಭವ್ಯತಾನುಭೂತಿಯನ್ನೂ, ಗಾಂಭೀರ್ಯವನ್ನೂ ಕೊಡಮಾಡಿದ ಪ್ರತಿಭಾ ಕೌಶಲ ಬೇರೆ ಬಗೆಯದು. ಶೇಣಿಯವರ ದುರ್ಯೋಧನನ ರಾಜಕಾರ್ಯಪಟುತ್ವ,



Downloaded from https:// www.studiestoday.com

Downloaded from https:// www.studiestoday.com

ವಾದವೈಖರಿಗಳಿಗೆ ಯಾರಾದರೂ ತಲೆದೂಗಲೇಬೇಕು. ಸಾಮಾಜಿಕ ತಿರಸ್ಕಾರಕ್ಕೆ ಒಳಗಾದ ನೋವನ್ನು ನುಂಗಿ, ಆತ್ಮಾಭಿಮಾನವನ್ನೂ, ಶೌರ್ಯ, ತ್ಯಾಗಶೀಲತೆಗಳನ್ನೂ ಮೆರೆಯುತ್ತಿದ್ದ ಶೇಣಿಯವರ ಕರ್ಣದುಷ್ಟಚತುಷ್ಟಯಕ್ಕೆ ಸೇರಿದವನೆಂದು ಯಾರೂ ಹೇಳುವ ಹಾಗಿರಲಿಲ್ಲ. ಬದಲಾಗಿ ಮಹಾನುಭಾವನಾಗಿ ಗೋಚರಿಸುತ್ತಿದ್ದ. ಅವರ ದುಷ್ಟಬುದ್ಧಿಯಲ್ಲಿ ಸ್ವಾರ್ಥರಾಜಕಾರಣದ ಸಂಚು ಹೊಂಚು ನಯವಂಚಕತನಗಳು ಪ್ರಕಟವಾಗುತ್ತಿದ್ದವು.

ಪ್ರತಿನಾಯಕ ಪಾತ್ರಗಳ ನಿರ್ವಹಣೆಯಲ್ಲಿ ಶೇಣಿಯವರು ಪ್ರತಿಪಾದಿಸಿದ ಮಹಾನುಭಾವತ್ವ ಅಥವಾ ಮಾನವೀಯ ಗುಣಪ್ರಕಾಶ, ವ್ಯಕ್ತಪಡಿಸುತ್ತಿದ್ದ ಬೌದ್ಧಿಕ ತಾರ್ಕಿಕತೆ, ಕಲ್ಪನಾ ವೈಭವ, ಪಾತ್ರಸೃಷ್ಟಿಯ ಸಾದ್ಯಂತ ಸಾವಯವ ಶಿಲ್ಪ ಸೌಷ್ಟವ, ಪುರಾಣ ವರ್ತಮಾನಗಳನ್ನು ಬೆಸೆಯುತ್ತಿದ್ದ ರೀತಿ ನಿರ್ವಹಿಸುತ್ತಿದ್ದ ಶೌರ್ಯ ಸಂಭ್ರಮೋತ್ಸಾಹ ಆವರಣಗಳು ರಂಗರೋಚಕತೆಯ ಸಮೃದ್ಧಿಗೆ ಕಾರಣ ಎಂಬುದು ಉಲ್ಲೇಖನೀಯ.



ಶೇಣಿಯವರು ಯಕ್ಷಗಾನ ಆಟದಲ್ಲೂ, ಕೂಟದಲ್ಲೂ ಹರಿಕಥಾ ಕ್ಷೇತ್ರದಲ್ಲೂ ವಚೋವೀರರಾಗಿ ಆ ರಂಗಗಳನ್ನು ದೀರ್ಘಕಾಲ ಆಳಿದರು. ರಂಗಕ್ಕೆ ಶೋಭೆ ತರುವ ಅವರ ಆಕರ್ಷಕ ವ್ಯಕ್ತಿತ್ವ, ಅಸ್ಖಲಿತ ಶ್ರುತಿಪೂರ್ಣ ಕಂಠಶ್ರೀ, ವಿಶುದ್ಧವಾದ ತರ್ಕಸರಣಿ, ರಸಸ್ಯಂದಿಯಾದ ಮಾತುಗಾರಿಕೆ, ಸಂದರ್ಭೋಚಿತವಾದ ಭಾವಾಭಿನಯ, ಭಾಷೆಯ ದೇಸಿಬೆಡಗು, ನಿಲುವು, ನೋಟ, ಚಾರಿ ಚಲನೆ ಇತ್ಯಾದಿಗಳು ಅವರನ್ನು ರಂಗಸ್ಥಳದ ಅನಭಿಷಿಕ್ತ ದೊರೆಯನ್ನಾಗಿಸಿದುವು. ನಿರಂತರ ಅಧ್ಯಯನ, ಕವಿಹೃದಯ ಶೋಧನೆ, ಚಿಂತನಶೀಲತೆ, ಲೋಕವೀಕ್ಷಣಗಳಿಂದ ಅವರ ಪಾತ್ರಗಳಿಗೆ ನಿತ್ಯನೂತನತೆ ಒದಗುತ್ತಿತ್ತು. ಪಾತ್ರ ನಿರೂಪಣೆಯ ಉಪೋದ್ಘಾತಕ್ಕೂ ಸಮಾರೋಪಕ್ಕೂ ಅವರು ಬೆಸೆಯುತ್ತಿದ್ದ ಚಮತ್ಕಾರ ಪೂರ್ಣ ಭಾವಸಾಂಗತ್ಯ ಪುರಾಣ ಪಾತ್ರಗಳನ್ನು ವರ್ತಮಾನಕ್ಕೆ ಪ್ರಸ್ತುತಗೊಳಿಸುವಿಕೆ, ಆಧುನಿಕ ವಿದ್ಯಮಾನಗಳ ಪುರಾಣೀಕರಣ ಅವರನ್ನು ಅಪೂರ್ವ ದಾರ್ಶನಿಕ ಕಲಾವಿದನಾಗಿ ರೂಪಿಸುತ್ತಿದ್ದವು. ಅವರ ಹರಿಕಥೆಗೂ ಈ ಮಾತು ಅನ್ವಯಿಸುತ್ತದೆ. ಸಣ್ಣಪುಟ್ಟ ವಾಕ್ಯಗಳೂ, ಅರ್ಥೋಕ್ತಿಗಳೂ, ಲೋಕೋಕ್ತಿಗಳೂ 'ಹತ್ತುಕಟ್ಟುವಲ್ಲಿ ಮುತ್ತು ಕಟ್ಟು' ವಂಥ ಪರಿಣಾಮ ಬೀರುತ್ತಿದ್ದವು. ಹುಂ, ಹಂ, ಅಹ, ಎಂಬ ಉದ್ಗಾರಗಳು, ನಿಟ್ಟುಸಿರು, ವಾಕ್ಯಗಳ ನಡುವಣ ಮೌನ ಅರ್ಥದ ಆಯಾಮವನ್ನು ಹೆಚ್ಚಿಸುತ್ತಿದ್ದವು.



Downloaded from https:// www.studiestoday.com

Downloaded from https:// www.studiestoday.com

ಶೇಣಿಯವರ ಲಿಖಿತ ಸಾಹಿತ್ಯದಲ್ಲಿ 'ಯಕ್ಷಗಾನ ಮತ್ತು ನಾನು' ಎಂಬ ಆತ್ಮವೃತ್ತ ಒಂದು ಅಪೂರ್ವ ದಾಖಲೆ. ಅವರು ನಡೆದು ಬಂದ ದಾರಿಯ ಅನೇಕ ಗುರುತುಗಲ್ಲುಗಳನ್ನು ನಾವು ಅಲ್ಲಿ ಕಾಣಬಹುದು. ಯಕ್ಷಗಾನ ಕಲೆಯ ವಿವೇಚನೆಯೂ ಇಲ್ಲಿದೆ. ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೂ ಅವರ ಕೊಡುಗೆ ಇದೆ. ಮೇಘನಾದ ವಿಜಯ, ಕಣಿಪುರ ಕ್ಷೇತ್ರ ಮಹಾತ್ಮೆ, ಶರವು ಕ್ಷೇತ್ರ ಮಹಾತ್ಮೆ, ಶ್ರೀಮತೀ ಪರಿಣಯ, ಮಣಿಕಂಠ ವಿಜಯ, ಉದ್ದಾಲಕ, ಶಂಕರ ವಿಜಯ, ಮಧ್ಯಮ ವ್ಯಾಯೋಗ ಮೊದಲಾದ ಕೆಲವು ಚಿಕ್ಕ ದೊಡ್ಡ ಪ್ರಸಂಗಗಳನ್ನೂ ಅವರು ರಚಿಸಿದ್ದಾರೆ. ಅವರ ಮಾತೃಭಕ್ತಿ, ರಾಮಾಂಜನೇಯ ಮೊದಲಾದ ನಾಟಕಗಳೂ, ನೂರಾರು ಚಿಂತನಗಳೂ, ಭಕ್ತಿಗೀತಗಳೂ, ಅಪ್ರಕಟಿತವಾಗಿಯೇ ಉಳಿದಿವೆ.

'ಉದ್ದಾಮ', 'ಆಶುವೈಭವ', 'ಸಾಮಗಶೇಣಿ' ಅಭಿನಂದನ ಗ್ರಂಥ 'ಸಹಸಚಂದ್ರ' ಅಭಿನಂದನ ಗ್ರಂಥಗಳಲ್ಲಿ ಶೇಣಿಯವರ ಬಹುಮುಖ ಸಾಧನೆ ಸಿದ್ಧಿ, ಕೊಡುಗೆಗಳ ವಿವರಗಳನ್ನು ನೋಡಬಹುದಾಗಿದೆ.

ರಂಗವೇದಿಕೆಯ ಒಳಗೂ ಹೊರಗೂ ಶೇಣಿ ದಣಿವಿಲ್ಲದ ಮಾತುಗಾರ; ಸರಸ ಸಂಭಾಷಣ ಚತುರ. ಅವರಿದ್ದಲ್ಲಿ ಜೀವಂತಿಕೆ, ಲವಲವಿಕೆ, ಚಿಂತನ ಮಂಥನ ಏರ್ಪಡುತ್ತಿತ್ತು. ವಿಶಾಲ ದೃಷ್ಟಿಕೋನದ ವಿಚಾರವಾದಿಯಾದ ಅವರ ಅನೇಕ ಉಪಯುಕ್ತ ವಿಚಾರಗಳು ದಾಖಲಾಗದೆ ಕರಗಿ ಹೋಗಿವೆ. ರಂಗವೇದಿಕೆಯಲ್ಲಿ ಪ್ರತಿವಾದ ಭಯಂಕರರೆಂದು ಕಂಡರೂ ನಿಜದಲ್ಲಿ ಅವರು ಮೃದುಹೃದಯಿ, ಸ್ನೇಹಶೀಲರು. ನಡೆನುಡಿ ಎಲ್ಲದರಲ್ಲೂ ರಾಜಮರ್ಜಿಯ ಧಾರಾಳಿ! ಅವರೊಬ್ಬ ಜಂಗಮ ಯಕ್ಷಗಾನ ವಿಶ್ವಕೋಶವಾಗಿದ್ದರು.

ಶೇಣಿಯವರು ಪಡೆದಷ್ಟು ಸನ್ಮಾನ ಸೌಭಾಗ್ಯಗಳನ್ನು ಬೇರಾವ ಯಕ್ಷಗಾನ ಕಲಾವಿದನೂ ಪಡೆದಿಲ್ಲ. ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಅನೇಕ; ಸನ್ಮಾನಗಳು ಅಸಂಖ್ಯ! ಕರ್ನಾಟಕ ರಾಜ್ಯ ಪ್ರಶಸ್ತಿ, ಕೇರಳ ಸಂಗೀತನಾಟಕ ಅಕಾಡೆಮಿ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಇತ್ಯಾದಿಗಳು ಅವುಗಳಲ್ಲಿ ಶೃಂಗಪ್ರಾಯವಾದವುಗಳು.

'ಸ್ವಯಮೇವ ಮೃಗೇಂದ್ರತಾ' ಎಂಬಂಥ ಸಾಟಿಯಿಲ್ಲದ ಸಿಂಹಠೀವಿಯಿಂದ ಯಕ್ಷಗಾನ ರಂಗದಲ್ಲಿ ದೀರ್ಘಕಾಲ ವಿಜೃಂಭಿಸಿ, ನೇಪಥ್ಯಕ್ಕೆ ಸರಿದು ಹೋದ ಶೇಣಿಯವರು ಯಾವ ದೇಶವೂ ಹೆಮ್ಮೆಪಡಬಹುದಾದ ರಾಷ್ಟ್ರೀಯ ಮಟ್ಟದ ಅಭಿಜಾತ ಕಲಾವಿದ. ನಮ್ಮ ದೇಶದ ಅಗ್ರಮಾನ್ಯ ಸಾಹಿತ್ಯ ಸಾಧಕರಂತೆ, ವಿಜ್ಞಾನಾದಿ ವಿವಿಧ ಕ್ಷೇತ್ರಗಳ ಸೀಮಾಪುರುಷರಂತೆ ಯಕ್ಷಗಾನ ಶಕಪುರುಷ ಶೇಣಿಯ ಹೆಸರೂ ಅಜರಾಮರ.



Downloaded from https:// www.studiestoday.com

Downloaded from https:// www.studiestoday.com

## ಡಾ. ಅಮೃತ ಸೋಮೇಶ್ವರ



ದಕ್ಷಿಣಕನ್ನಡ ಜಿಲ್ಲೆಯವರಾದ ಡಾ. ಅಮೃತ ಸೋಮೇಶ್ವರರು ಕವಿಯಾಗಿ, ಯಕ್ಷಗಾನ ಪ್ರಸಂಗಕರ್ತರಾಗಿ, ಜಾನಪದ ತಜ್ಞರಾಗಿ ಪ್ರಸಿದ್ಧರಾಗಿದ್ದಾರೆ. 1957ರಲ್ಲಿ 'ಎಲೆಗಿಳಿ' 1970ರಲ್ಲಿ 'ರುದ್ರಶಿಲೆಯ ಸಾಕ್ಷಿ' ಮತ್ತು 1988ರಲ್ಲಿ 'ಕೆಂಪು ನೆನಪು' ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ ಕತೆಗಳಲ್ಲಿ ಪ್ರಗತಿಪರ ಮನೋಭಾವವನ್ನು ಪ್ರಧಾನವಾಗಿ ಕಾಣಬಹುದು. ಯಕ್ಷಗಾನದ ಮೇಲಿನ ವಿಶೇಷ ಅಭಿರುಚಿ ಇವರ ಕೃತಿಗಳಲ್ಲಿ ಅಡಕವಾಗಿದೆ.

### ಶಬ್ದಾರ್ಥ ವಿವರಣೆ

ದರ್ಶಿಸು – ವೀಕ್ಷಿಸು; ವಚೋವಿಲಾಸ – ಮಾತಿನ ವೈಭವ; ಮಸಗು – ವಿಜೃಂಭಿಸು; ವಿಲಕ್ಷಣ – ಹೊಸರೀತಿಯ; ಅಸ್ಖಲಿತ – ಸ್ಥಿರವಾದ; ಉಪೋದ್ಘಾತ – ಆರಂಭ, ಪ್ರಸ್ತಾವನೆ; ಸಾಂಗತ್ಯ – ಬೆಸೆಯುವಿಕೆ; ಜಂಗಮ – ನಡೆದಾಡುವ; ನೇಪಥ್ಯ – ತೆರೆಮರೆ.

### ಸಂಕ್ಷಿಪ್ತವಾಗಿ ಬರೆಯಿರಿ

- ಯಕ್ಷಗಾನ ರಸಿಕರನ್ನು ಶೇಣಿಯವರ ಧೀರೋದ್ಧತ ಪ್ರತಿನಾಯಕ ಪಾತ್ರಗಳು ಹೆಚ್ಚು ಆಕರ್ಷಿಸಲು ಕಾರಣವೇನು?
- ಶೇಣಿಯವರಲ್ಲಿ ರಾವಣನ ವ್ಯಕ್ತಿತ್ವವು ಪಡೆದ ವಿವಿಧ ಆಯಾಮಗಳನ್ನು ವಿಶ್ಲೇಷಿಸಿರಿ.
- ಶೇಣಿಯವರನ್ನು ರಂಗಸ್ಥಳದ ಅನಭಿಷಿಕ್ತ ದೊರೆಯನ್ನಾಗಿಸಿದ ವಿವಿಧ ಅಂಶಗಳನ್ನು ಗುರುತಿಸಿ ಬರೆಯಿರಿ.

### ಚಟುವಟಿಕೆಗಳು

- 'ಅಪ್ರತಿಮ ಪ್ರತಿನಾಯಕ ಶೇಣಿ' ಎಂಬ ಮಾತು ಶೇಣಿಯವರಿಗೆ ಹೇಗೆ ಒಪ್ಪುತ್ತದೆ? ತರಗತಿಯ ಚರ್ಚಾಗೋಷ್ಠಿಯಲ್ಲಿ ನಿಮ್ಮ ಅಭಿಪ್ರಾಯಗಳನ್ನು ಮಂಡಿಸಿರಿ.
- ಅಂತರ್ಜಾಲ ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಯಕ್ಷಗಾನ ಪ್ರಸಂಗಗಳಲ್ಲಿನ ಪಾತ್ರ ವೈಭವದ ಕುರಿತು ಕಿರುಲೇಖನವನ್ನು ಬರೆಯಿರಿ.



Downloaded from https:// www.studiestoday.com

Downloaded from https:// www.studiestoday.com

- ಯಕ್ಷಗಾನ ಮತ್ತು ಇನ್ನಿತರ ಕಲಾರಂಗಗಳಲ್ಲಿ ತೊಡಗಿಸಿಕೊಂಡ ಯಾರಾದರೂ ಒಬ್ಬರ ಮಾಹಿತಿಗಳನ್ನು ಸಂಗ್ರಹಿಸಿ ವ್ಯಕ್ತಿಪರಿಚಯ ಬರೆಯಿರಿ.

## ರೂಪಾಂತರಿಸಿರಿ

- ಕೆಳಗಿನ ಸಾಲುಗಳನ್ನು ಶೇಣಿಯವರ ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ.

ನಾಲ್ಕೂ ಬಗೆಯ ನಾಯಕ ಪಾತ್ರಗಳನ್ನು ಶೇಣಿಯವರು ಅತ್ಯಂತ ಸಮರ್ಪಕವಾಗಿ ನಿರ್ವಹಿಸಲು ಸಮರ್ಥರಾಗಿದ್ದರೂ ಯಕ್ಷಗಾನ ಆಟದಲ್ಲಾಗಲಿ, ಕೂಟದಲ್ಲಾಗಲೀ ಶೇಣಿಯವರು ಹೆಚ್ಚಾಗಿ ವಹಿಸಿದ್ದು ಅಥವಾ ಯಕ್ಷಗಾನ ರಸಿಕರು ಬಯಸಿದ್ದು ಹೆಚ್ಚಾಗಿ ಅವರ ಧೀರೋದ್ಧತ ಪ್ರತಿನಾಯಕ ಪಾತ್ರಗಳನ್ನೆ. ಉಪ್ಪು, ಹುಳಿ, ಖಾರ ತುಂಬಿದ ರೋಚಕ ಪಾತ್ರಗಳನ್ನೆ ಅವರು ಹೆಚ್ಚು ರಸವತ್ತಾಗಿ ರೂಪಿಸಬಲ್ಲರೆಂದೇ ಅನೇಕರ ಮೆಚ್ಚುಗೆಯ ಅಭಿಪ್ರಾಯವಾಗಿತ್ತು.

- ಕೆಳಗಿನ ಮಾಹಿತಿಯ ಆಧಾರದಲ್ಲಿ ಗೋವಿಂದ ಪೈ ಅವರ ವ್ಯಕ್ತಿಪರಿಚಯವನ್ನು ಬರೆಯಿರಿ.

| | | |
|---|---|---|
| ಜನನ | : | 1883 ಮಾರ್ಚ್ 23 |
| ತಂದೆ | : | ಸಾಹುಕಾರ್ ತಿಮ್ಮ ಪೈ |
| ತಾಯಿ | : | ದೇವಕಿ ಅಮ್ಮ |
| ಮಾತೃಭಾಷೆ | : | ಕೊಂಕಣಿ |
| | | ಮದ್ರಾಸ್ ಮತ್ತು ಮಂಗಳೂರಲ್ಲಿ ವಿದ್ಯಾಭ್ಯಾಸ |
| | | ಬಹುಭಾಷಾ ಪಂಡಿತ, ಸಂಶೋಧಕ, ಇತಿಹಾಸಕಾರ, ಕವಿ, ನಾಟಕಕಾರ, ಅನುವಾದಕ |
| ಕಾವ್ಯಗಳು | : | ಗೊಮ್ಮಟ ಸ್ತುತಿ, ಉಮರ್ ಖಯ್ಯಾಂ, ಗಿಳಿವಿಂಡು, ನಂದಾದೀಪ |
| ಖಂಡಕಾವ್ಯಗಳು | : | ಗೊಲ್ಗೊಥಾ, ವೈಶಾಖಿ |
| ನಾಟಕ | : | ತಾಯಿ, ಹೆಬ್ಬೆರಳು, ಚಿತ್ರಭಾನು |
| | | 1949ರಲ್ಲಿ ಮದ್ರಾಸ್ ಸರಕಾರದಿಂದ ರಾಷ್ಟ್ರಕವಿ ಬಿರುದು |
| | | 1950ರ ಮುಂಬಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ. |



Downloaded from https:// www.studiestoday.com

Downloaded from https:// www.studiestoday.com

### ಭಾಷಾಭ್ಯಾಸ

- 'ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು' – ಈ ಮಾತಿನ ಆಶಯವನ್ನು ವಿಸ್ತರಿಸಿ ಬರೆಯಿರಿ. ಇಂತಹ ಮಾತುಗಳನ್ನು ಸಂಗ್ರಹಿಸಿರಿ.
- ಅಡಿಗೆರೆಯೆಳೆದ ಪದಗಳನ್ನು ಉಪಯೋಗಿಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿರಿ.
  ನಮ್ಮ ದೇಶದ ಅಗ್ರಮಾನ್ಯ ಸಾಹಿತ್ಯ ಸಾಧಕರಂತೆ, ವಿಜ್ಞಾನಾದಿ ವಿವಿಧ ಕ್ಷೇತ್ರಗಳ ಸೀಮಾಪುರುಷರಂತೆ ಯಕ್ಷಗಾನ ಶಕಪುರುಷ ಶೇಣಿಯ ಹೆಸರೂ ಅಜರಾಮರವಾಗಿದೆ.

## ತದ್ಧಿತ ಪ್ರತ್ಯಯ

- ಕೆಳಗಿನ ಪದಗಳನ್ನು ಗಮನಿಸಿರಿ.
  ಗೆಳೆತನ, ತೋಟಗಾರ, ಬುದ್ಧಿವಂತ
  ಈ ಪದಗಳನ್ನು ಹೀಗೆ ವಿಂಗಡಿಸಬಹುದು.

| ಅ | ಆ |
|---|---|
| ಗೆಳೆ(ಯ) | ತನ |
| ತೋಟ | ಗಾರ |
| ಬುದ್ಧಿ | ವಂತ |

ಮೇಲಿನ ಪಟ್ಟಿಯಲ್ಲಿ 'ಅ' ವಿಭಾಗದ ಪದಗಳು ನಾಮಪದಗಳು. 'ಆ' ವಿಭಾಗದವು ಪ್ರತ್ಯಯಗಳು. ನಾಮಪದಗಳಿಗೆ ಸೇರುವ ಇಂಥ ಪ್ರತ್ಯಯಗಳನ್ನು ತದ್ಧಿತ ಪ್ರತ್ಯಯ ಎನ್ನುವರು. ತದ್ಧಿತ ಪ್ರತ್ಯಯಗಳು ಸೇರಿದಾಗ ನಾಮವಿಶೇಷಣಾ ರೂಪಗಳಾಗಲಿ, ನಾಮರೂಪಗಳಾಗಲಿ ನಿರ್ಮಾಣವಾಗುತ್ತವೆ. ಮೇಲಿನ ಪದಗಳೆಲ್ಲ ತದ್ಧಿತ ನಾಮಗಳು. ಇಂತಹ ಪದಗಳನ್ನು ಪಾಠಭಾಗಗಳಿಂದ ಆಯ್ದು ಅವುಗಳ ಅರ್ಥವನ್ನು ತಿಳಿದುಕೊಳ್ಳಿರಿ.

- ಕೆಳಗಿನ ಪದಗಳನ್ನು ಗಮನಿಸಿರಿ.
  ಕಾಣಿಕೆ, ಹೊಡೆತ, ಮಾಡಿದ, ಹೇಳುವ



Downloaded from https:// www.studiestoday.com

Downloaded from https:// www.studiestoday.com

ಈ ಪದಗಳನ್ನು ಹೀಗೆ ವಿಂಗಡಿಸಬಹುದು.

| ಅ | ಆ |
|---|---|
| ಕಾಣು | ಇಕೆ |
| ಹೊಡೆ | ತ |
| ಮಾಡು | ದ |
| ಹೇಳು | ವ |

ಇಲ್ಲಿ 'ಅ' ವಿಭಾಗದಲ್ಲಿ ಕೆಲವು ಧಾತುಗಳಿವೆ. 'ಆ' ವಿಭಾಗದಲ್ಲಿ ಕೆಲವು ಪ್ರತ್ಯಯಗಳಿವೆ. ಧಾತುಗಳಿಗೆ ಸೇರುವ ಇಂಥ ಪ್ರತ್ಯಯಗಳನ್ನು ಕೃತ್ ಪ್ರತ್ಯಯ ಎನ್ನುತ್ತಾರೆ. ಕೃತ್ ಪ್ರತ್ಯಯಗಳು ಸೇರಿದ ಧಾತುಗಳು ನಾಮಪದಗಳಾಗುತ್ತವೆ, ಇಲ್ಲವೆ ನಾಮ ವಿಶೇಷಣಗಳಾಗುತ್ತವೆ. ಮೇಲಿನ ಉದಾಹರಣೆಯಲ್ಲಿ ಕಾಣಿಕೆ, ಹೊಡೆತ ಎಂಬಿವು ನಾಮ ಪದಗಳು. ಮಾಡಿದ, ಹೇಳುವ ಎಂಬಿವು ನಾಮವಿಶೇಷಣಗಳು.

ಈ ರೀತಿಯ ಪದಗಳನ್ನು ಗುರುತಿಸಿ ಭಾಷಾ ಪ್ರಯೋಗಗಳಲ್ಲಿ ಅವುಗಳ ಔಚಿತ್ಯವನ್ನು ಕಂಡುಕೊಳ್ಳಿರಿ.



Downloaded from https:// www.studiestoday.com

Downloaded from https:// www.studiestoday.com

# ಭೂತಾರಾಧನೆ ಮತ್ತು ತೆಯ್ಯಂ

ತುಳುನಾಡಿನ ಒಂದು ವಿಶಿಷ್ಟ ಆರಾಧನ ಸಂಪ್ರದಾಯ ಭೂತಾರಾಧನೆ. ಕೇರಳದ 'ತೆಯ್ಯಂ' ಸಂಪ್ರದಾಯ ಇದಕ್ಕೆ ತೀರಾ ಹತ್ತಿರವಾದುದು. ಇವೆರಡನ್ನು ಸಾಮೂಹಿಕ ಪಾಲ್ಗೊಳ್ಳುವಿಕೆಯ ಆರಾಧನೆ ಎಂದು ಪರಿಗಣಿಸಲಾಗುತ್ತದೆ. ಭೂತಾರಾಧನೆ ಮತ್ತು ತೆಯ್ಯಂ ಒಂದೇ ಆಗಿದ್ದರೂ ಇವುಗಳನ್ನು ಕಟ್ಟಿ ಆಡಿಸುವ ಕ್ರಮ, ಆಚರಣೆಗಳಲ್ಲಿ ವ್ಯತ್ಯಾಸಗಳಿವೆ.



## ಭೂತಾರಾಧನೆ

ಕರ್ನಾಟಕದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪ್ರದೇಶವನ್ನೂ ಕೇರಳದ ಕಾಸರಗೋಡು ಜಿಲ್ಲಾ ಪ್ರದೇಶವನ್ನೂ ಒಟ್ಟಾಗಿ 'ತುಳುನಾಡು' ಎಂದು ಕರೆಯುಲಾಗುತ್ತದೆ. ಐತಿಹಾಸಿಕವಾದ ಈ ಪರಿಕಲ್ಪನೆ ಭಾಷಿಕ ಹಾಗೂ ಸಾಂಸ್ಕೃತಿಕ ಸಂದರ್ಭದಲ್ಲೂ ಪ್ರಸ್ತುತವೆನಿಸುತ್ತದೆ. ಈ ತುಳುನಾಡಿನ ಒಂದು ವಿಶಿಷ್ಟ ಆರಾಧನಾ ಸಂಪ್ರದಾಯವೇ ಭೂತಾರಾಧನೆ. ಜಾನಪದ ಅಧ್ಯಯನದಲ್ಲಿ ಇದನ್ನು 'ಜನಪದ ರಂಗಭೂಮಿ'ಯ ಒಂದು ಪ್ರಭೇದವಾಗಿ ಪರಿಗಣಿಸಲಾಗುತ್ತದೆ. 'ಆರಾಧನಾ ರಂಗಭೂಮಿ', 'ಆರಾಧನಾ ಕಲೆ' ಇತ್ಯಾದಿಯಾಗಿಯೂ ಕರೆಯಲಾಗುತ್ತದೆ. ಇದರಲ್ಲಿಯ ಸಂಕೀರ್ಣತೆಯನ್ನು ಗುರುತಿಸಿರುವ ವಿದೇಶಿ ಜಾನಪದ ವಿದ್ವಾಂಸರು ಅದೇ ರೀತಿ ರಂಗಭೂಮಿ ತಜ್ಞರು ಭೂತಾರಾಧನೆಯನ್ನು ಒಂದು 'ಪರಿಪೂರ್ಣ ರಂಗಭೂಮಿ' ಎಂದು ಕರೆದಿರುತ್ತಾರೆ. ಭೂತಾರಾಧನೆಯನ್ನು ಹೋಲುವ ಆರಾಧನ ಪದ್ಧತಿ ಅಥವಾ ನೃತ್ಯ ಸಂಪ್ರದಾಯ ವಿಶ್ವದ ಇತರೆಡೆಗಳಲ್ಲೂ ಇದೆ.



Downloaded from https:// www.studiestoday.com

Downloaded from https:// www.studiestoday.com

ಮಲಬಾರ್ ಪ್ರದೇಶದ 'ತೆಯ್ಯಂ' ಸಂಪ್ರದಾಯ ಇದಕ್ಕೆ ತೀರಾ ಹತ್ತಿರವಾದುದು.

ಭೂತಾರಾಧನೆಯನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತದೆ. ಈ ಹೆಸರುಗಳು ಭೂತಾರಾಧನೆಯ ವಿವಿಧ ಪ್ರಭೇದಗಳನ್ನು ಸೂಚಿಸುತ್ತವೆ. ಕೋಲ, ನೇಮ, ಬಂಡಿ–ಜಾತ್ರೆ, ಮೈಮೆ, ದೊಂಪದ ಬಲಿ, ಮೆಚ್ಚಿ, ಜಾಲಾಟ, ಪಾಣಾರಾಟ, ಒತ್ತೆಕೋಲ – ಕೆಂಡಸೇವೆ, ಬೈಲಕೋಲ, ಕಳಿಯಾಟ್ಟಂ, ವೆಳ್ಳಾಟ ಮುಂತಾದುವು ನಿರ್ದಿಷ್ಟ ದೈವಗಳ ವೇಷ ಧರಿಸಿ ನಡೆಸುವ ಆರಾಧನೆಯ ಉತ್ಸವಗಳು. ಇವುಗಳಲ್ಲಿ ಪಾಣಾರಾಟ ಕುಂದಾಪುರ ಪ್ರದೇಶದ ಆರಾಧನ ಸಂಪ್ರದಾಯವಾದರೆ ಒತ್ತೆಕೋಲ, ಬೈಲಕೋಲ, ಕಳಿಯಾಟ್ಟ, ವೆಳ್ಳಾಟಗಳು ಕೇರಳದ ಗಡಿ ಪ್ರದೇಶಗಳಲ್ಲಿ ಪ್ರಚಲಿತವಿರುವ ಮಲಯಾಳಿ ದೈವಗಳ ಆರಾಧನ ಪದ್ಧತಿಗಳು. ಒಟ್ಟಾಗಿ ಎಲ್ಲವೂ ತುಳುನಾಡಿನ ಭೂತಾರಾಧನ ಸಂಪ್ರದಾಯಗಳೇ ಆಗಿವೆ. ಇವಲ್ಲದೆ ಭೂತದ ವೇಷಗಳನ್ನು ಧರಿಸದೆ ನೆರವೇರಿಸುವ ತಂಬಿಲ, ಅಗೆಲ್ ಮುಂತಾದ ಆಚರಣೆಗಳೂ ರೂಢಿಯಲ್ಲಿವೆ.

ಭೂತಾರಾಧನೆಯೆಂಬ ಸಮಷ್ಟಿ ಕಲೆಯನ್ನು ಒಂದು ಸಾಮೂಹಿಕ ಪಾಲ್ಗೊಳ್ಳುವಿಕೆಯ ಆರಾಧನೆಯೆಂದು ಪರಿಗಣಿಸಬೇಕಾಗುತ್ತದೆ. ಅದರಲ್ಲಿ ಭೂತ ಕಟ್ಟುವ ಕಲಾವಿದರಿರುತ್ತಾರೆ. ಭೂತದ ಪಾತ್ರಿಗಳಿರುತ್ತಾರೆ. ಭೂತದ 'ಮಾನಿ' ಯಿರುತ್ತಾರೆ. ತೆಂಬರೆ ಅಥವಾ ಇತರ ವಾದ್ಯ ಪರಿಕರಗಳನ್ನು ನುಡಿಸುತ್ತಾ ಭೂತದ ಸಂಧಿ – ಪಾಡ್ದನಗಳನ್ನು ಹಾಡುವ ಕಲಾವಿದರ ಬಳಗದವರಿರುತ್ತಾರೆ. ವಾಲಗ ಅಥವಾ ಹಿಮ್ಮೇಳದವರಿರುತ್ತಾರೆ. ಭೂತಾರಾಧನೆಯನ್ನು ಆಯೋಜಿಸುವ ಮನೆಯ ಯಜಮಾನರು, ಊರಿನ ಮುಖಂಡರು ಅಥವಾ ಭೂತಸ್ಥಾನದ ಆಡಳಿತ ವರ್ಗ, ಎಲ್ಲಕ್ಕಿಂತಲೂ ಮುಖ್ಯವಾಗಿ ಭೂತಗಳನ್ನು ನಂಬಿ, ಆರಾಧಿಸುವ ಭಕ್ತ ಸಮೂಹದವರಿರುತ್ತಾರೆ. ಇವರೆಲ್ಲರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಭೂತಾರಾಧನೆಯು ಅರ್ಥವನ್ನು ಪಡೆದುಕೊಳ್ಳುತ್ತದೆ. ತುಳುನಾಡಿನ ಜಾತಿ ವ್ಯವಸ್ಥೆಯನ್ವಯ ಸಾಮಾಜಿಕ ಪಾಲ್ಗೊಳ್ಳುವಿಕೆಯು ಇಲ್ಲಿ ಮುಖ್ಯವೆನಿಸುತ್ತಿದೆ. ಬ್ರಾಹ್ಮಣರು, ಬಂಟರು, ಜೈನರು, ಬಲ್ಲಾಳರು, ಬಿಲ್ಲವರು, ಮೊಗವೀರರು, ವಿಶ್ವಕರ್ಮರು, ಮಡಿವಾಳರು, ಕ್ಷೌರಿಕರು ಹೀಗೆ ಪ್ರತಿಯೊಂದು ಸಮುದಾಯದವರು ಭೂತಾರಾಧನೆಯಲ್ಲಿ ಪಾಲ್ಗೊಳ್ಳುತ್ತಾರೆ. ಕೆಲವು ಸಮುದಾಯಗಳು ಭೂತಾರಾಧಾನೆಯಲ್ಲಿ ನಿರ್ವಹಿಸಬೇಕಾದ ನಿರ್ದಿಷ್ಟ ಕರ್ತವ್ಯಗಳಿರುತ್ತವೆ.

ತುಳುನಾಡಿನಲ್ಲಿ ನಲಿಕೆಯವರು, ಪರವರು, ಪಂಬದರು, ಪಾಣಾರರು, ಮಲಯನ್, ವಣ್ಣಾನ್ ಮುಂತಾದ ಸಮುದಾಯಗಳಿಗೆ ಸೇರಿದ ಭೂತ ಕಲಾವಿದರಿರುತ್ತಾರೆ. ಇವರಲ್ಲಿ ನಲಿಕೆಯವರು, ಪರವರು ಮತ್ತು ಪಂಬದರು ತುಳು ಮನೆ ಮಾತಿನವರಾದರೆ, ಕುಂದಾಪುರ ಪರಿಸರದ ಪಾಣಾರರು ಕನ್ನಡ ಮನೆ ಮಾತಿನವರು. ಇವರು ನಡೆಸುವ 'ಪಾಣಾರಾಟ'



Downloaded from https:// www.studiestoday.com

Downloaded from https:// www.studiestoday.com

ಎಂಬ ವಿಶಿಷ್ಟ ಬಗೆಯ ಭೂತಾರಾಧನೆಯೂ ಅಲ್ಲಿ ಪ್ರಚಲಿತವಿದೆ. ಮಲಯರು, ವಣ್ಣರ್ ಕೇರಳದ ಗಡಿ ಪ್ರದೇಶದವರಾಗಿದ್ದು, ಮಲಯಾಳಂ ಮಾತನಾಡುತ್ತಾರೆ. ಇಂತಿಂಥ ದೈವಗಳಿಗೆ ಇಂತಿಂಥ ಸಮುದಾಯಗಳ ಕಲಾವಿದರೆ ಬೇಕೆಂಬ ನಿಯಮವಿದೆ. ಸಾಮಾನ್ಯವಾಗಿ ಕಲಾವಿದರ ಭಾಷೆಗಳೇ ದೈವ ಭಾಷೆಯೂ ಆಗಿರುವುದುಂಟು. ಕೆಲವೊಮ್ಮೆ ಕಾಸರಗೋಡು ಪ್ರದೇಶದ ನಲಿಕೆ ಸಮುದಾಯದವರು ತುಳು, ಮಲಯಾಳಗಳೆರಡರಲ್ಲೂ ವ್ಯವಹರಿಸುವುದುಂಟು. ಅದೇ ರೀತಿ ಪಾಣಾರರು ಕಟ್ಟುವ ಭೂತಗಳು ತುಳು ಮಿಶ್ರಿತ ಕನ್ನಡದಲ್ಲಿ ಮಾತನಾಡುವುದುಂಟು.

ದೇವರುಗಳಿಗೆ ದೇವಸ್ಥಾನವಿದ್ದಂತೆ ಭೂತಗಳಿಗೆ ಭೂತಸ್ಥಾನವಿರುತ್ತದೆ. ಆದರೆ ದೇವಸ್ಥಾನಗಳಲ್ಲಿ ದೇವರ ವಿಗ್ರಹ ಅಥವಾ ಲಿಂಗಗಳಿದ್ದಂತೆ ಭೂತಸ್ಥಾನಗಳಲ್ಲಿ ಭೂತಗಳ ವಿಗ್ರಹವಿರುವುದು ಕಡಿಮೆ. ಅಲ್ಲಿ ಸಂಬಂಧಪಟ್ಟ ಭೂತದ ಮೊಗ (ಮುಖವಾಡ), ಈಟಿ, ತ್ರಿಶೂಲ, ಬಿಲ್ಲು – ಬಾಣಗಳೇ ಮೊದಲಾದ ಆಯುಧಗಳು, ಚೌವರಿ, ಗಂಟೆ, ಭೂತದ ಮಂಚ, ಉಯ್ಯಾಲೆ, ಆಭರಣ ಇತ್ಯಾದಿ ಪರಿಕರಗಳಿರುತ್ತವೆ.

ಚಿತ್ರ ಬಣ್ಣಗಾರಿಕೆ, ವೇಷಭೂಷಣ, ಹಾಡು, ಹಿಮ್ಮೇಳ, ಸಂಗೀತ, ಕುಣಿತ, ಸಂಭಾಷಣೆ, ನಂಬಿಕೆ, ಆರಾಧನೆಗಳ ಸಮ್ಮಿಲನದಿಂದ ಭೂತಾರಾಧನೆ ಗಮನ ಸೆಳೆಯುತ್ತದೆ. ಹಾಗಾಗಿಯೇ ಅದನ್ನು ಒಂದು ಸಮಷ್ಟಿಕಲೆ, ಪರಿಪೂರ್ಣ ರಂಗಭೂಮಿ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಇಂತಹ ಈ ವಿಶಿಷ್ಟ ಕಲೆಗೆ ಸಂಬಂಧಪಟ್ಟಂತೆ ಸಾಕಷ್ಟು ವಿಚಾರಗಳನ್ನು ಹೇಳಬಹುದು. ಭೂತಾರಾಧನೆಯೊಂದಿಗೆ ಹಾಸುಹೊಕ್ಕಾಗಿರುವ ಸಾಮಾಜಿಕ, ಧಾರ್ಮಿಕ ನಂಬಿಕೆ, ವಿಧಿ ನಿಷೇಧಗಳನ್ನು ವೈಚಾರಿಕತೆಯ ದೃಷ್ಟಿಯಿಂದ ಪರಿಶೀಲಿಸಬಹುದು. ವಿಶೇಷವಾಗಿ ಹೆಣ್ಣುಮಕ್ಕಳ ವಿಷಯದಲ್ಲಿ ಪ್ರಚಲಿತವಿರುವ ವಿಧಿ – ನಿಷೇಧಗಳ ಬಗೆಗೆ ಚಿಂತನೆ ನಡೆಸಬಹುದು. ಭೂತಾರಾಧನೆಯು ಪಾರಂಪರಿಕವಾಗಿ ಪೋಷಿಸಿಕೊಂಡು ಬಂದಿರುವ ನಾಡಿನ ಸಾಮಾಜಿಕ, ಆರ್ಥಿಕ ಹಾಗೂ ಆಡಳಿತಾತ್ಮಕ ವ್ಯವಸ್ಥೆಯ ಬಗೆಗೆ ಚಿಕಿತ್ಸಕ ದೃಷ್ಟಿಯನ್ನು ಹರಿಸಬಹುದು. ಈಗಾಗಲೇ ವಿದ್ವಾಂಸರು ಭೂತಗಳ ಸಂಧಿ, ಪಾಡ್ದನ ಪಾಟ್ಟುಗಳನ್ನೂ ಆಚರಣಾ ವಿಧಿ ವಿಧಾನಗಳನ್ನೂ ಅಧ್ಯಯನಕ್ಕೊಳಪಡಿಸಿ, ಅದರ ಹಿಂದಿರುವ ಐತಿಹಾಸಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನೂ ವಿಶ್ಲೇಷಿಸಿದ್ದಾರೆ. ಅದೇನೇ ಇದ್ದರೂ ಭೂತಾರಾಧನೆಯ ಪ್ರತ್ಯಕ್ಷ ಅನುಭವವಾದ ಧಾರ್ಮಿಕ ನಂಬಿಕೆ, ಆರಾಧನೆ ಹಾಗೂ ಕಲೆಯ ನೆಲೆಯಿಂದ ಜನ ಇಂದಿಗೂ ಅದನ್ನು ಶ್ರದ್ಧಾಭಕ್ತಿಗಳಿಂದ ಪೋಷಿಸಿಕೊಂಡು ಬಂದಿದ್ದಾರೆ.



Downloaded from https:// www.studiestoday.com

Downloaded from https:// www.studiestoday.com

## ತೆಯ್ಯಂ

ದೈವಾರಾಧನೆಯ ಹಾಗೂ ಭೂತ ಸಂಸ್ಕೃತಿಯ ಮೂಲಸ್ಥಾನ ತುಳುನಾಡು ಎಂದೂ, ಅಲ್ಲಿಂದ ಅದು ಮಲಯಾಳ ನಾಡಿಗೆ ಪ್ರಸರಣಗೊಂಡಿತೆಂದೂ, ಅಲ್ಲಿ ಅದು ಇನ್ನಷ್ಟು ವೈವಿಧ್ಯಮಯವಾಗಿ ಬೆಳೆಯಿತೆಂದೂ ನಿರ್ಧರಿಸುವುದಕ್ಕೆ ಬೇಕಾದ ಪುರಾವೆಗಳು 'ತೆಯ್ಯಂ'ಗಳ 'ತೋತ್ತಂಪಾಟ್ಟು' ಗಳಲ್ಲಿಯೇ ಇವೆ. ತುಳುವಿನ 'ದೆಯ್ಯೊ' ಕೇರಳದಲ್ಲಿ 'ತೆಯ್ಯಂ' ಆಗಿದೆ. ಇದಕ್ಕೆ ಪೂರಕವಾಗಿ ಕೆಲವು ತುಳುಭೂತಗಳನ್ನು ಅದೇ ಹೆಸರಿನಲ್ಲಿ ಮಲಯಾಳದಲ್ಲಿ ಕರೆಯುತ್ತಾರೆ. ತೆಯ್ಯಂ ಅಥವಾ ದೈವದ ಆರಾಧನೆಗೂ ಇನ್ನಿತರ ಜನಪದ ಕಲೆಗಳ ಆಚರಣೆಗೂ ವ್ಯತ್ಯಾಸವಿದೆ. ದೈವಾರಾಧನೆಯು ಕೇವಲ ಒಂದು ಮನೋರಂಜನೆಯ ಕಲೆಯಲ್ಲ.

ತೆಯ್ಯಂ ಮತ್ತು ದೈವ ಒಂದೇ ಆಗಿದ್ದರೂ ಇವುಗಳನ್ನು ಕಟ್ಟಿ ಆಡಿಸುವ ಕ್ರಮ, ಆಚರಣೆಯಲ್ಲಿ ತುಳು ಮತ್ತು ಮಲೆಯಾಳ ಸಂಪ್ರದಾಯಗಳಲ್ಲಿ ವ್ಯತ್ಯಾಸವಿದೆ. ಈ ಎರಡು ಭಾಷೆಗಳಲ್ಲಿಯಲ್ಲದೆ ಬೇರಾವುದೇ ಭಾಷೆಯಲ್ಲಿ ಮಾತಾಡುವ ದೈವಗಳಿಲ್ಲ. ದೈವಗಳ ಕೋಲ ಕಟ್ಟುವ ಕಲಾವಿದರು ಮತ್ತು ಇತರ ದೈವ ಚಾಕರಿಯವರ ಪಂಗಡಗಳ ಮೂಲ ಒಂದೇ ಆಗಿದ್ದರೂ ಪ್ರಾದೇಶಿಕವಾಗಿ ಅವರನ್ನು ಬೇರೆ ಬೇರೆ ಕಡೆ ವಿಭಿನ್ನ ಹೆಸರುಗಳಿಂದ ಕರೆಯಲಾಗುತ್ತಿದೆ. ಮಲಯನ್, ವಣ್ಣಾನ್, ವೇಲನ್, ಮಾವಿಲನ್, ಚಿಂಗತ್ತಾನ್, ಪಾಣಾನ್, ಪುಲಯನ್, ಕೋಪ್ಪಾಳನ್ ಮೊದಲಾದ ಸುಮಾರು ಹದಿನೈದು ಪಂಗಡದವರು ಮಲಯಾಳ ತೆಯ್ಯಂಗಳನ್ನು ಕಟ್ಟಿ ಆಡುವ ವರ್ಗದವರಾಗಿರುತ್ತಾರೆ.



ದೇವಾಲಯುಗಳಲ್ಲಿ ತರವಾಡು ಮನೆಗಳಲ್ಲಿ, ದೈವಸ್ಥಾನಗಳಲ್ಲಿ, ಬಯಲು ಪ್ರದೇಶಗಳಲ್ಲಿ ಆಚರಿಸುವ ವಿಶಿಷ್ಟವಾದ ಧಾರ್ಮಿಕ – ಜನಪದ ಕಲೆಯೇ 'ತೆಯ್ಯಂ' ಆಗಿದೆ. ದೈವಗಳಿಗೆ ನೃತ್ಯ ಏರ್ಪಡಿಸಿ ತೃಪ್ತಿಪಡಿಸುವುದಕ್ಕೆ ದೈವಗಳ ನೃತ್ಯೋತ್ಸವ, ಕೋಲೋತ್ಸವ, ತೆಯ್ಯೋತ್ಸವ, ತೆಯ್ಯಂಕೆಟ್ಟು ಎಂಬಿತ್ಯಾದಿ ಹೆಸರುಗಳಿವೆ. ಭಗವತಿ, ಕಾಳಿ, ಚಾಮುಂಡಿ, ಶಿವ, ವಿಷ್ಣು, ಯಕ್ಷ–ಗಂಧರ್ವರು ಮಾತ್ರವಲ್ಲ ಗತಿಸಿ ಹೋದ ವೀರಾಧಿವೀರರು, ವೀರವನಿತೆಯರು ಮೊದಲಾದವರನ್ನು 'ತೆಯ್ಯಂ'ಗಳಾಗಿ ಆರಾಧಿಸಲಾಗುತ್ತಿದೆ.



Downloaded from https:// www.studiestoday.com

Downloaded from https:// www.studiestoday.com

'ತೆಯ್ಯೆಂಕೆಟ್ಟು' ಉತ್ಸವಕ್ಕೆ ಮತ್ತಿತರ ಅಭಿನಯ ಕಲೆಗಳಿಗಿಂತ ವ್ಯತ್ಯಾಸವಿದೆ. ತೆಯ್ಯಂ ರೂಪುಗೊಂಡಾಗ ಅದನ್ನು ಸಾಕ್ಷಾತ್ ದೈವವೆಂದೇ ನಂಬಲಾಗುತ್ತದೆ. ತೆಯ್ಯೆಂಕೆಟ್ಟು ಆಡಿ ಅಭ್ಯಾಸವಿಲ್ಲದ ದೈವಚಾಕರಿ ಕಲಾವಿದನೂ ತೆಯ್ಯಂ ಕಟ್ಟಿದಾಗ ಹೆಚ್ಚಿನ ಚೈತನ್ಯ ಬಂದು ವರ್ತಿಸುವುದನ್ನು ಕಾಣಬಹುದು; ತೆಯ್ಯಂ ಕಟ್ಟುವ ಕಲಾವಿದನು ತೆಯ್ಯಂ ಆವೇಶಭರಿತವಾಗಿ ಆಡುತ್ತಿರುವಾಗ ಎಂಥವರೂ ದೈವಕ್ಕೆ ಕೈ ಜೋಡಿಸಿ ಶರಣಾಗುವುದು ವಿಶೇಷತೆಯಾಗಿದೆ. ಅಂದರೆ ತೆಯ್ಯಂನಲ್ಲಿ ಭಯ – ಭಕ್ತಿ ಮೂಡುತ್ತದೆ. ಆದುದರಿಂದಲೆ ತೆಯ್ಯಂ ಕಲೆ ಇಂದಿಗೂ ಸಾರ್ವತ್ರಿಕವಾಗಿ ಉಳಿಯಲು ಸಾಧ್ಯವಾಗಿದೆ.

ದೈವಾರಾಧನೆಯಲ್ಲಿ ವೇಷಭೂಷಣಗಳನ್ನು ಕಟ್ಟಿಕೊಳ್ಳುವುದಕ್ಕೂ ದೈವ ಆವೇಶವಾಗುವುದಕ್ಕೂ ತಾತ್ವಿಕ ಸಂಬಂಧವಿದೆ. ಕಾಲಿಗೆ ಗೆಜ್ಜೆ ಅಥವಾ 'ಚಿಲಂಬ್' ನ್ನು (ಗಗ್ಗರ) ಕಟ್ಟಿಕೊಳ್ಳುವುದು, ಸೊಂಟಕ್ಕೆ ಒಟ್ಟ (ತುಳುವಿನಲ್ಲಿ ಜಕ್ಕೆಲಣಿ) ಕಟ್ಟಿಕೊಳ್ಳುವುದು, ಬೆನ್ನಿಗೆ ಅಣಿ ಕಟ್ಟಿಕೊಳ್ಳುವುದು, ತಲೆಗೆ ಮುಡಿ ಏರಿಸುವುದು, ದೇಹದ ವಿವಿಧ ಅಂಗಗಳಿಗೆ ಬಗೆಬಗೆಯ ಆಭರಣಗಳನ್ನು ಧರಿಸಿಕೊಳ್ಳುವುದು – ಹೀಗೆ ಕಟ್ಟುವ ಕ್ರಿಯೆಯು ದೈವಾರಾಧನೆಯಲ್ಲಿ ಬಹಳ ಮುಖ್ಯವಾಗಿದೆ. ತನ್ನಲ್ಲಿ ಇಲ್ಲದ ಒಂದು ಅದ್ಭುತ ಶಕ್ತಿಯನ್ನು ಬರಮಾಡಿಕೊಳ್ಳುವ ಆಶಯಕ್ಕೆ ಅನುಗುಣವಾಗಿ ಒಂದೊಂದಾಗಿ ವೇಷಭೂಷಣಗಳನ್ನು ಕಟ್ಟಿಕೊಳ್ಳಲಾಗುತ್ತದೆ.

ಆರಾಧನೆಯ ಸಂದರ್ಭದಲ್ಲಿ ಆಕಾರಗೊಳ್ಳುವುದು ತೆಯ್ಯಂ – ಅದು ಭಕ್ತರ ಕಣ್ಣಿಗೆ ಕಾಣುವ ದೈವದ ಪ್ರತ್ಯಕ್ಷ ಸಾಕಾರ ರೂಪ. ಈ ವೇಷಗಾರಿಕೆಯ ವ್ಯಾಪ್ತಿಯೊಳಗೆ ಮುಖದ ಮೇಲೆ ಬಿಡಿಸಿಕೊಳ್ಳುವ ಮುಖವರ್ಣಿಕೆ ಮತ್ತು ಮೈಮೇಲೆ ಧರಿಸಿಕೊಳ್ಳುವ ಅಲಂಕಾರ ಸಾಮಗ್ರಿಗಳು ಬರುತ್ತವೆ. ದೈವದ ವೇಷ ಹಾಕುವ ಸಂದರ್ಭದಲ್ಲಿ ಕಲಾವಿದನ ಮುಖದ ಮೇಲೆ ಮುಖ್ಯವಾಗಿ ಬಿಳಿ, ಕೆಂಪು, ಹಳದಿ ಮತ್ತು ಕಪ್ಪು ಬಣ್ಣಗಳನ್ನು ಬಳಸಿ ಬಣ್ಣ ಹಚ್ಚುತ್ತಾರೆ. ಕೆಲವು ತೆಯ್ಯಂಗಳಿಗೆ ಮುಖವರ್ಣಿಕೆ ಬರೆಯುವುದಿಲ್ಲ. ಬದಲಾಗಿ ಬಿಳಿ ಅಥವಾ ಇನ್ನಿತರ ಚುಕ್ಕೆ ಹಾಗೂ ರೇಖಾವಿನ್ಯಾಸಗಳನ್ನು ಬರೆಯಲಾಗುತ್ತದೆ. ಕೆಲವು ತೆಯ್ಯಂಗಳಿಗೆ ವೇಷ ಹಾಕುವ ಸಂದರ್ಭದಲ್ಲಿ ಮುಖಕ್ಕೆ ಮಾತ್ರವಲ್ಲದೆ ದೇಹದ ತೋಳು, ಎದೆ, ಬೆನ್ನು ಮೊದಲಾದ ಅಂಗಗಳ ಮೇಲೆ ಕೂಡಾ ಬಣ್ಣವನ್ನು ಲೇಪಿಸಲಾಗುತ್ತದೆ. ವಿಷ್ಣುಮೂರ್ತಿ, ಪೊಟ್ಟನ್, ಗುಳಿಗನ್ ಮೊದಲ 'ತೆಯ್ಯಂ'ಗಳಿಗೆ ವೇಷಕಟ್ಟುವಾಗ ಎದೆ, ಬೆನ್ನು ಮತ್ತು ತೋಳುಗಳಿಗೆ ಅಕ್ಕಿಹಿಟ್ಟನ್ನು ಕಲಸಿ ಬಣ್ಣವನ್ನು ಲೇಪಿಸಲಾಗುತ್ತದೆ.

ದೈವದ ಭಂಡಾರದಲ್ಲಿ ಮೊಗ (ಮುಖವಾಡ) ಕ್ಕೆ ಅಗ್ರ ಪ್ರಾಶಸ್ತ್ಯವಿದೆ. ದೈವಗಳು ಮೊಗಗಳಲ್ಲಿ ನೆಲೆಸಿರುತ್ತವೆ ಎಂದು ಭಕ್ತರು ನಂಬುತ್ತಾರೆ. ಮೊಗಗಳು ಆರಾಧನೆಯಲ್ಲಿ



Downloaded from https:// www.studiestoday.com

Downloaded from https:// www.studiestoday.com

ಮಾತ್ರವಲ್ಲದೆ ದೈವಸ್ಥಾನ, ತರವಾಡು ಮನೆಯ ಕೋಣೆಯೊಳಗೂ ಪೂಜೆಯನ್ನು ಪಡೆಯುತ್ತವೆ. ಕೆಲವು ಕಾರಣಿಕ ದೈವಗಳ ಮೊಗಗಳನ್ನು ಲೋಹದಿಂದ ತಯಾರಿಸಲಾಗುತ್ತದೆ. ವಿಷ್ಣುಮೂರ್ತಿ, ಚಾಮುಂಡಿ, ವಾರಾಹಿ, ರಕ್ತೇಶ್ವರಿ, ಜುಮಾದಿ ಮೊದಲಾದ ದೈವಗಳ ಮೊಗಗಳು ಇದಕ್ಕೆ ಉದಾಹರಣೆಗಳಾಗಿವೆ. ಕೆಲವು ತೆಯ್ಯಂ – ತಿರಗಳ ಮೊಗಗಳನ್ನು ಆವೆಮಣ್ಣಿನಿಂದಲೂ, ಶ್ರೀಗಂಧ ಇತ್ಯಾದಿ ಮರಗಳಿಂದಲೂ ನಿರ್ಮಿಸಲಾಗುತ್ತದೆ. ಇನ್ನಿತರ ಮೊಗಗಳನ್ನು ಅಡಿಕೆ ಮರದ ಹಾಳೆಗಳಿಂದ ತಯಾರಿಸಲಾಗುತ್ತದೆ.

ತೆಯ್ಯಂ ಕಲಾವಿದರ ಕಲಾವಂತಿಕೆಯನ್ನು ಅವರು ರಚಿಸಿ ಬಳಸುವ ಮೊಗಗಳಿಂದ ತಿಳಿಯಬಹುದು. ಅತ್ಯುತ್ತಮವಾದ ಹಾಳೆಯನ್ನು ಆಯ್ಕೆ ಮಾಡಿ ಬಿಸಿಲಲ್ಲಿ ಒಣಗಿಸಿ ಅಥವಾ ಬೆಂಕಿಗೆ ಹಿಡಿದು ತುಸು ಕಾಯಿಸಿ ಹದಬರಿಸುತ್ತಾರೆ. ಉದ್ದೇಶಕ್ಕೆ ಅನುಗುಣವಾಗಿ ಹಾಳೆಯನ್ನು ಕತ್ತರಿಸಿ, ಮಡಚಿ ಕಡ್ಡಿಯ ಸಹಾಯದಿಂದ ಚುಚ್ಚಿ ಮೊಗಗಳನ್ನು ತಯಾರಿಸಲಾಗುತ್ತದೆ. ಹಂದಿ, ಹುಲಿ, ಎತ್ತು, ಕೋಣ ಮೊದಲಾದ ಪ್ರಾಣಿಗಳ ಮೊಗಗಳನ್ನು ಹೋಲುವ ರಚನೆಗಳನ್ನು ಮಾಡುತ್ತಾರೆ, ಉಗ್ರ ಸ್ವರೂಪವಾಗಿ ಕಾಣುವಂತೆ ಇವುಗಳಿಗೆ ಹಳದಿ, ಕೆಂಪು, ಕಪ್ಪು ಇತ್ಯಾದಿ ಬಣ್ಣಗಳನ್ನು ಲೇಪಿಸುತ್ತಾರೆ. ಮುಖ್ಯವಾಗಿ ಉದ್ದವಾದ ನಾಲಗೆ, ದೊಡ್ಡ ಕಣ್ಣುಗಳು, ಅಗಲವಾದ ತೆರೆದ ಬಾಯಿ, ಕೋರೆದಾಡೆ ಇತ್ಯಾದಿ ಅಂಗಗಳನ್ನು ಹಾಳೆಯಿಂದಲೇ ವಿಶಿಷ್ಟ ವಿನ್ಯಾಸದಲ್ಲಿ ರಚಿಸಲಾಗುತ್ತದೆ. ಪೊಟ್ಟನ್, ಗುಳಿಗನ್ ಮೊದಲಾದ ದೈವಗಳ ಮೊಗಗಳು ಇಂತಹವುಗಳಾಗಿವೆ.

ಸಾಧಾರಣವಾಗಿ ಏರ್ಪಡಿಸುವ ಹರಿಕೆ ಕೋಲೋತ್ಸವಗಳಲ್ಲಿ ದೈವದ ಭಂಡಾರ ಬಂದು ನಿಶ್ಚಿತ ವಿಧಿಗಳನ್ನು ಪೂರೈಸಿದ ನಂತರ ಎಲ್ಲರ ಸಮಕ್ಷಮದಲ್ಲಿ ಇಂತಿಂತವರು ಇಂತಿಂತಹ ದೈವಗಳನ್ನು ಕಟ್ಟಿ ಆಡಬೇಕು ಎಂಬುದಾಗಿ ಅನುಮತಿ ನೀಡುವ ಕಾರ್ಯಕ್ರಮವಿದೆ. ಈ ಕಾರ್ಯಕ್ರಮದ ನಂತರ ದೈವವನ್ನು ಕಟ್ಟಲು ನಿರ್ಮಿಸಿದ 'ಅಣಿಯರ'ದಲ್ಲಿ ಸ್ತುತಿಗೀತೆಗಳನ್ನು ಹಾಡಬೇಕಾಗಿದೆ. ಇದನ್ನು 'ಅಣಿಯರ ತೋತ್ತಂ' ಎಂದು ಹೇಳುತ್ತಾರೆ. ಅನಂತರ ದೈವಗಳ ಭಂಡಾರ ಸಾಮಗ್ರಿಗಳಿರುವ ಪಳ್ಳಿಯರ ಅಥವಾ ಕೊಡಿಯಡಿಗೆ ಬಂದು ದೈವದ ಪೂಜಾರಿಯಿಂದ 'ಎಣ್ಣೆ ಪಡೆಯುವುದು' ಎಂಬ ಕ್ರಮದ ನಂತರ ದೈವದ ' ತೊಡಂಜಲು' ವಿಧಿಯ ಭಾಗವಾಗಿ ತೋತ್ತಂಗಳನ್ನು ಹಾಡಲಾಗುತ್ತದೆ.

ತುಳು ಸಂಪ್ರದಾಯದಲ್ಲಿ ದೈವದ ಕುರಿತಾಗಿರುವ ಗದ್ಯರೂಪದ ಪಾಡ್ದನ (ಸಂಧಿ) ಗಳಿರುವಂತೆಯೇ ಮಲೆಯಾಳದಲ್ಲೂ ಗದ್ಯರೂಪದಲ್ಲಿರುವ ಸಾಲುಗಳುಳ್ಳ



Downloaded from https:// www.studiestoday.com

Downloaded from https:// www.studiestoday.com

ತೋತ್ತಂಪಾಟುಗಳನ್ನು ಚೆಂಡೆ ವಾದ್ಯಮೇಳಗಳೊಂದಿಗೆ ಹಾಡಲಾಗುತ್ತದೆ. ತೈಯ್ಯಂಕಟ್ಟುವವನು ಚೆಂಡೆಯನ್ನು ನಿಧಾನಗತಿಯಲ್ಲಿ ಬಾರಿಸುತ್ತಾ ಸ್ತುತಿಗೀತೆಯ ನಿರ್ದಿಷ್ಟ ಚರಣಗಳನ್ನು ಹಾಡಿದರೆ ಗಾಯಕ ಗುಂಪಿನವರು ಸಾಮೂಹಿಕವಾಗಿ ಮಿಕ್ಕುಳಿದ ಚರಣಗಳನ್ನು ಹಾಡುತ್ತಾರೆ. ಈ ಗುಂಪಿನಲ್ಲಿ ಹೆಂಗಸರೂ ಹಾಡಲು ಸೇರುವುದರಿಂದ ಈ ಸ್ತುತಿ ಗೀತೆಗಳು ಕೇಳಲು ಹಿತವಾಗಿದ್ದು ಭಯ ಭಕ್ತಿಗಳನ್ನು ಮೂಡಿಸುತ್ತವೆ.

'ತೆಯ್ಯಂ' ನರ್ತನ ಕಲೆಯನ್ನು ಉತ್ತರ ಮಲಬಾರು ಎಂದು ಕರೆಯಲ್ಪಡುವ ಕಾಸರಗೋಡಿನಿಂದ ದಕ್ಷಿಣಕ್ಕೆ ತಲಶ್ಶೇರಿ ತನಕ 'ತೆಯ್ಯಂ' ಎಂದೂ, ತಲಶ್ಶೇರಿಯಿಂದ ದಕ್ಷಿಣಕ್ಕೆ ಕಲ್ಲಿಕೋಟೆ ಜಿಲ್ಲೆಯವರೆಗೆ 'ತಿರ' ಎಂದೂ ಕರೆಯಲಾಗುತ್ತದೆ. ಇದೇ ತಿರವನ್ನು ಪೂರ್ವದಿಕ್ಕಿನ ಪಾಲ್ಘಾಟ್ ಜಿಲ್ಲೆ ಮತ್ತು ತಮಿಳುನಾಡಿನ ಗಡಿಭಾಗಗಳಲ್ಲಿ 'ಪೂತನುಂ ತಿರಯುಂ' ಎಂದೂ ಹೇಳಲಾಗುತ್ತದೆ. ಇವೆಲ್ಲವೂ ನರ್ತನ ಕಲೆಗಳೇ ಆಗಿವೆ. ಇವುಗಳ ನರ್ತನ ಕ್ರಮ, ವೇಷಭೂಷಣಗಳು, ನುಡಿಗಟ್ಟುಗಳಲ್ಲಿ, ಆಚಾರಾನುಷ್ಠಾನಗಳಲ್ಲಿ ವ್ಯತ್ಯಾಸಗಳನ್ನು, ವೈವಿಧ್ಯಗಳನ್ನು ಕಾಣಬಹುದಾದರೂ ಇವುಗಳೆಲ್ಲವೂ ಭಕ್ತಿಯ ಮತ್ತು ಆಧ್ಯಾತ್ಮಿಕತೆಯ ಪ್ರತೀಕಗಳಾಗಿವೆ. ಇವುಗಳ ಆರಾಧನೆಯಲ್ಲಿ ಜನಜೀವನಕ್ಕೆ ಸಂಬಂಧಪಟ್ಟ ಆಚಾರ – ವಿಚಾರಗಳು, ನಂಬಿಕೆಗಳು, ಉತ್ಸವಗಳು, ಸಾಂಸ್ಕೃತಿಕ ಹಿನ್ನೆಲೆ ಮೊದಲಾದವುಗಳನ್ನು ಗುರುತಿಸಬಹುದಾಗಿದೆ.

ಮನೋರಂಜನೆಗಾಗಿಯೇ ದೈವಗಳನ್ನು ಕಟ್ಟಿ ಆಡಿಸುವ ಕ್ರಮವಿಲ್ಲ. ಜನಪದ ಕಲೆಗಳ ಪ್ರದರ್ಶನಗಳನ್ನು ಮನೋರಂಜನಾರ್ಥವಾಗಿ ಯಾರಿಗೆ ಬೇಕಾದರೂ ಯಾವಾಗ ಬೇಕಿದ್ದರೂ ಯಾವುದೇ ವೇದಿಕೆಗಳಲ್ಲಿ ಏರ್ಪಡಿಸಬಹುದು. ಇದಕ್ಕಾಗಿ ಪ್ರವೇಶಧನವನ್ನೂ ಪಡೆಯಬಹುದು. ಆದರೆ ದೈವಾರಾಧನೆಗಳನ್ನು ಈ ರೀತಿಯಲ್ಲಿ ನಡೆಸಲಾಗುವುದಿಲ್ಲ. ಇತರ ಕಲೆಗಳ ಆಚರಣೆಯ ಕ್ರಮದಲ್ಲಿ ಕುಂದು ಕೊರತೆಗಳಾದರೆ ಜನರ ಟೀಕೆ – ವಿಮರ್ಶೆಗಳಿಗೆ ಗುರಿಯಾಗಬೇಕಾದುದು ಮಾತ್ರವಾಗಿದೆ. ಆದರೆ ದೈವಾರಾಧನೆಯಲ್ಲಿ ಲೋಪ – ದೋಷಗಳಾದರೆ ದೋಷಗಳು ತಟ್ಟುತ್ತವೆ; ಅನರ್ಥಗಳು ಸಂಭವಿಸುತ್ತವೆ ಎಂಬುದು ಜನಪದರ ಧಾರ್ಮಿಕ ನಂಬಿಕೆ ಮತ್ತು ಅನುಭವವಾಗಿದೆ.

*ಸಂಗ್ರಹ*



Downloaded from https:// www.studiestoday.com

Downloaded from https:// www.studiestoday.com

## ಸಂಕ್ಷಿಪ್ತವಾಗಿ ಬರೆಯಿರಿ

- ಆರಾಧನೆ ಮತ್ತು ಕಲೆಗಿರುವ ಸಂಬಂಧವನ್ನು ಗುರುತಿಸಿ ವಿಶೇಷವಾದ ಅಂಶಗಳನ್ನು ದಾಖಲಿಸಿ ಪಟ್ಟಿ ಮಾಡಿರಿ.
- ಕೇರಳದ ಧಾರ್ಮಿಕ ಆಚರಣೆಯ ಭಾಗವಾಗಿರುವ 'ತೆಯ್ಯಂ' ಮತ್ತು ತುಳುನಾಡಿನ 'ಭೂತಾರಾಧನೆ' ಯ ಕುರಿತು ಒಂದು ತುಲನಾತ್ಮಕ ಟಿಪ್ಪಣಿ ತಯಾರಿಸಿರಿ.

## ಚಟುವಟಿಕೆಗಳು

- ಭೂತಾರಾಧನೆ ಮತ್ತು 'ತೆಯ್ಯಂ' ನಲ್ಲಿ ಬಳಕೆಯಾಗುವ ನಿರ್ದಿಷ್ಟ ನುಡಿಗಟ್ಟುಗಳನ್ನು ಸಂಗ್ರಹಿಸಿ ಸಾಂಸ್ಕೃತಿಕ ಪದಕೋಶವನ್ನು ತಯಾರಿಸಿರಿ.
- ನಿಮ್ಮೂರಲ್ಲಿ ಪ್ರಚಲಿತವಿರುವ ಜನಪದ ಕಲೆಗಳ ಪರಿಚಯ ಲೇಖನವನ್ನು ತಯಾರಿಸಿರಿ.
- ಭೂತಾರಾಧನೆಯ ಕಲಾವಿದನೊಬ್ಬನನ್ನು ಸಂದರ್ಶಿಸಿ ಭೂತವೇಷದ ಉಡುಗೆ – ತೊಡುಗೆ, ಆಭರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.

## ಆಕರ ಗ್ರಂಥ

ತೆಯ್ಯಂ – ಕೇಳು ಮಾಸ್ತರ್, ಅಗಲ್ಪಾಡಿ

ದಕ್ಷಿಣ ಭಾರತೀಯ ಜಾನಪದ ಕೋಶ – ಸಂಪುಟ 2



Downloaded from https:// www.studiestoday.com

Downloaded from https:// www.studiestoday.com

### ಕಲಿಕಾ ಸಾಧನೆಗಳು

- ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಅಡಕವಾಗಿರುವ ಜೀವನ ಮೌಲ್ಯ, ವಿಡಂಬನೆ ಮೊದಲಾದವುಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು.
- ವಿವಿಧ ರೀತಿಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರ ವಿಚಾರಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು ನಿತ್ಯ ಜೀವನದಲ್ಲಿ ರೂಢಿಸಿಕೊಳ್ಳುವುದು.
- ಗಾದೆಮಾತು, ನಾಣ್ಣುಡಿ, ಒಗಟು ಮೊದಲಾದ ಭಾಷಾ ಪ್ರಯೋಗಗಳನ್ನು ಆಯಾ ಸಂದರ್ಭದಲ್ಲಿ ವಿಶ್ಲೇಷಿಸಿ ಸ್ವಾರಸ್ಯ ಬರೆಯುವುದು.
- ಜನಪದ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಗ್ರಾಮೀಣ ಬದುಕಿನ ಚಿತ್ರಣ, ಸಾಂಸ್ಕೃತಿಕ ವಿಚಾರಗಳನ್ನು ಕಂಡುಕೊಂಡು ಸೂಕ್ತ ಸಂದರ್ಭಗಳಲ್ಲಿ ಪ್ರಕಟಿಸುವುದು.



Downloaded from https:// www.studiestoday.com

Downloaded from https:// www.studiestoday.com


# ಸಮಾಜ ದರ್ಶನ



ಸಾಹಿತ್ಯವನ್ನು ಸಮಾಜದ ಪ್ರತಿಬಿಂಬ ಎನ್ನುತ್ತಾರೆ. ಬರಹಗಾರರು ಸಮಾಜದಲ್ಲಿ ಕಂಡುಂಡ ಜೀವನ ದರ್ಶನವನ್ನು ವಿವಿಧ ಪ್ರಕಾರಗಳಲ್ಲಿ ಪ್ರಕಟಿಸುತ್ತಾರೆ. ಸಾಹಿತ್ಯ ಸೃಷ್ಟಿಗೆ ಸಮಾಜದಿಂದ ದೊರಕುವ ಪ್ರೇರಣೆ ಬಹಳ ಮಹತ್ವದ್ದು. ಸಂವೇದನಾಶೀಲನಾದ, ವಿಚಾರವಂತನಾದ ಕವಿಯ ಲೋಕದೃಷ್ಟಿಯ ಮಾದರಿಯನ್ನು ನಾವು ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದಲ್ಲಿ ಕಾಣಬಹುದು. ಲೋಕಾನುಭವ, ಲೋಕನೀತಿ, ಕಗ್ಗದ ಪದ್ಯಗಳಲ್ಲಿ ಕೆನೆಗಟ್ಟಿದ್ದು ಸಮಾಜವನ್ನು ಒಳಿತಿನ ಕಡೆಗೆ ಕರೆದೊಯ್ಯಲು ಪೂರಕವಾಗಿದೆ.

ಸಮಾಜ ದರ್ಶನವು ಗಂಭೀರವಾದ ವೈಚಾರಿಕ ಪ್ರಬಂಧಗಳಲ್ಲಿ ಪ್ರಕಟವಾಗುವಂತೆಯೇ ಸರಸಪೂರ್ಣವಾದ ನಗೆಲೇಖನಗಳಲ್ಲೂ ಪಡಿಮೂಡಬಹುದು. ಉದಾಹರಣೆಗೆ ಮೂಢನಂಬಿಕೆಗಳು ಬದುಕಿನಲ್ಲಿ ಹಾಸು ಹೊಕ್ಕಾಗಿದ್ದು ಹಲವು ವಿಧಗಳಲ್ಲಿ ಅವು ಕಾಣಿಸಿಕೊಳ್ಳುವುದನ್ನು ನಾವು ದಿನನಿತ್ಯ ಗಮನಿಸುತ್ತೇವೆ. ಭುವನೇಶ್ವರಿ ಹೆಗಡೆಯವರಂತಹ ಹಾಸ್ಯಲೇಖಕಿಯ ಸರಸದೃಷ್ಟಿ ಮೂಢನಂಬಿಕೆಯ ವಿವಿಧ ರೂಪಗಳನ್ನು ನಾವು ದರ್ಶಿಸುವಂತೆ ಮಾಡುವುದಲ್ಲದೆ ನಮ್ಮನ್ನು ನಗೆಗಡಲಿನಲ್ಲಿ ತೇಲಿಸುತ್ತದೆ. ಮೂಢನಂಬಿಕೆಯನ್ನು ವೈಭವೀಕರಿಸಿ ಸಮರ್ಥಿಸದೆಯೂ ಅತ್ತ ಅದನ್ನು ಹೀಗಳೆದು ನಿರಾಕರಿಸದೆಯೂ ಸಾರ್ವತ್ರಿಕವಾಗಿರುವ ಒಂದು ವಿಚಾರದ ಬಗ್ಗೆ ಪರಿಹಾಸ್ಯದ ನೋಟವನ್ನಷ್ಟೇ ಬೀರುವ ಬಗೆ ಇಲ್ಲಿ ಗಮನಾರ್ಹ.

ನಾಟಕವು ಶಕ್ತಿಯುತವಾದ ಒಂದು ಸಾಹಿತ್ಯ ಪ್ರಕಾರ. ಸಮಾಜದ ಕುಂದು ಕೊರತೆಗಳ ಬಗ್ಗೆ, ಜನರ ಗುಣಸ್ವಭಾವಗಳ ಬಗ್ಗೆ ಚಿಕಿತ್ಸಕ ದೃಷ್ಟಿಯನ್ನು ಬೀರುವ ನಾಟಕಗಳು ಕನ್ನಡದಲ್ಲಿ ಸಮೃದ್ಧವಾಗಿವೆ. ಟಿ.ಪಿ. ಕೈಲಾಸಂ, ಶ್ರೀರಂಗ ಮೊದಲಾದವರು ಈ ನಿಟ್ಟಿನಲ್ಲಿ ಮಾಡಿದ ಪ್ರಯೋಗಗಳ ಮುಂದುವರಿಕೆಯನ್ನು ಗಿರೀಶ ಕಾರ್ನಾಡ, ಎಂ.ಎಸ್.ಕೆ. ಪ್ರಭು ಮುಂತಾದವರ ಕೃತಿಗಳಲ್ಲಿ ಕಾಣುತ್ತೇವೆ. ಪುರಾಣದ ವಸ್ತುವನ್ನೆತ್ತಿಕೊಂಡು ಅದರಲ್ಲಿ ವರ್ತಮಾನದ ಬದುಕಿಗೂ ಸಂಗತವಾಗುವ ಅರ್ಥವನ್ನು ಧ್ವನಿಸುವ ನಾಟಕವಾಗಿ 'ಬಕ' ಗಮನ ಸೆಳೆಯುತ್ತದೆ. ಬಕಾಸುರನನ್ನು ಭೀಮ ಕೊಂದು ಏಕಚಕ್ರನಗರದ ಜನರನ್ನು ಕಾಪಾಡಿದ್ದು ಪೌರಾಣಿಕ ಕತೆ. ಆ ಪುರಾಣಕತೆಯ ಚೌಕಟ್ಟಿನಲ್ಲಿ ವ್ಯವಸ್ಥೆಯ ಕರಾಳ ಬಾಹುಗಳಿಗೆ ಸಿಲುಕಿ ನಲುಗುವ ಜನಸಾಮಾನ್ಯರ ಪಾಡನ್ನು ಸಾಂಕೇತಿಕವಾಗಿ ಧ್ವನಿಸಿರುವುದು ಈ ನಾಟಕದ ಹಿರಿಮೆ.





Downloaded from https:// www.studiestoday.com

Downloaded from https:// www.studiestoday.com

# ಮೂಢನಂಬಿಕೆಗಳ ಬೀಡಿನಲ್ಲಿ

*ಭುವನೇಶ್ವರಿ ಹೆಗಡೆ*

ಆಧುನಿಕ ಯುಗದಲ್ಲಿ ಮೂಢನಂಬಿಕೆಗಳು ಜನಮನದಲ್ಲಿ ಹಾಸುಹೊಕ್ಕಾಗಿವೆ ಎನ್ನುವುದೊಂದು ವಾಸ್ತವ. ನಮ್ಮ ಬದುಕಿನ ಭಾಗವಾಗಿರುವ ಮೂಢನಂಬಿಕೆಗಳ ಸ್ವರೂಪವನ್ನು ಸಮರ್ಥಿಸುವ ಅಥವಾ ಅಲ್ಲಗಳೆಯುವ ನಿಲುವು ಈ ಬರಹದ್ದಲ್ಲ. ಬದಲಾಗಿ ಸಮಾಜದ ಒಂದು ನೈಜದರ್ಶನ ಮಾತ್ರ.



ಒಬ್ಬ ರಾಜನ ಅರಮನೆಯಿತ್ತು. ಮಹಾದ್ವಾರದ ಹೊರಗಿನ ಅಂಗಳದ ಒಂದು ಭಾಗದಲ್ಲಿ ಒಬ್ಬ ಪಹರೆಯವನಿಗೆ ವಿಚಿತ್ರ ಕೆಲಸವೊಂದು ಕೊಡಲ್ಪಟ್ಟಿತ್ತು. ಒಂದು ಹತ್ತು ಹೆಜ್ಜೆ ದೂರದ ಜಾಗದಲ್ಲಿ ಸುಮ್ಮನೆ ಹಿಂದೆ ಮುಂದೆ ಗಸ್ತು ತಿರುಗುತ್ತಿರಬೇಕೆಂಬುದು ಅವನ ಪಾಲಿನ ಕೆಲಸ. ಅದು ಎಷ್ಟು ವರ್ಷಗಳಿಂದ ಮುಂದುವರಿಸಲ್ಪಟ್ಟಿತ್ತೇನೋ? ಅವನು ಓಡಾಡುವ ಜಾಗ ಒಂದು ಗೇಣು ತಗ್ಗು ಬಿದ್ದು ಹೋಗಿತ್ತು. ಅವನು ಕಾಯುತ್ತಿರುವ ಜಾಗದಲ್ಲಿ ಕಣ್ಣಿಗೆ ಕಾಣುವಂತದ್ದೇನೂ ಇಲ್ಲದಿದ್ದರೂ ಆತ ಹಾಗೆ ಕಣ್ಣು ಮುಚ್ಚಿ ಶತಪಥ ತಿರುಗುತ್ತಿರುವುದು ಕೆಲ ಜನರಿಗೆ ಸೋಜಿಗವೆನಿಸಿತ್ತಾದರೂ ಅದು ರಾಜರ, ಸರ್ಕಾರದ ವಿಷಯವಾದ್ದರಿಂದ ಯಾರೂ ಏನೂ ಪ್ರಶ್ನಿಸಿರಲಿಲ್ಲ. ಹೀಗೆ ಶತಮಾನಗಳೇ ಸಂದ ಮೇಲೆ ರಾಜಮನೆತನದಲ್ಲೊಬ್ಬ ಸ್ವಂತ ಮಿದುಳುಳ್ಳ ರಾಜಕುಮಾರ ಹುಟ್ಟಿದ. ಈ ವಿಚಿತ್ರ ನೇಮಣೂಕಿಯ ಮೇಲೆ ಮೊಟ್ಟಮೊದಲನೆ ಬಾರಿಗೆ ಅವನಿಗೆ ಔಚಿತ್ಯದ ಶಂಕೆ ಕಾಡಿತು. ಹಿರಿಯರನ್ನು ಕೇಳಲಾಗಿ "ನಮ್ಮ ಹಿರಿಯರು ನೇಮಿಸಿದ್ದರು. ಅದಕ್ಕೆ ನಾವೂ ನೇಮಿಸಿದೆವು" ಎಂಬುತ್ತರ ಬಂತು. ಉಳಿತಾಯ ಯೋಜನೆಯ ಗುರಿ ಸಾಧಿಸಲು ಉತ್ಸುಕನಾಗಿದ್ದ ರಾಜಕುಮಾರ ಆ ಕೆಲಸದ ಮೂಲ ಕಂಡುಹಿಡಿಯಲು ಪಣತೊಟ್ಟು ಹಳೆಯ ಫೈಲುಗಳ ಕೋಣೆ ಸೇರಿ ದಿನವಿಡೀ ಕಳೆಯತೊಡಗಿದ. ಕೊನೆಗೂ ನಾಲ್ಕೈದು ಶತಮಾನದ ಹಿಂದಿನ ಫೈಲೊಂದು ಸಿಕ್ಕಿತು. ಅದರಲ್ಲಿ ಬರೆಯಲ್ಪಟ್ಟ ಪ್ರಕಾರ 'ಅರಮನೆಯ



Downloaded from https:// www.studiestoday.com

Downloaded from https:// www.studiestoday.com

ಅಂಗಳದ ಬಲಭಾಗದಲ್ಲಿ ವಿದೇಶಿ ಗುಲಾಬಿ ಗಿಡವೊಂದನ್ನು ನೆಡಲಾಗಿದೆ. ಅದು ಹಾಳಾಗದಂತೆ ಕಾಯಲು ಅಲ್ಲಿ ಗಸ್ತುತಿರುಗುವ ಕೆಲಸಕ್ಕಾಗಿ ಒಂದೂವರಾಣೆ ಪಗಾರಿನ ಮೇಲೆ ಸದರೀ ನೇಮಣೂಕಿ ಮಾಡಲಾಗಿದೆ' ಎಂಬುದಾಗಿ ರಾಜಾಜ್ಞೆಯ ಕಲಮೊಂದು ನಮೂದಿತವಾಗಿತ್ತು. ಅಲ್ಲಿಂದ ತರುವಾಯ ಬಂದವರೆಲ್ಲ ಬರಿದೇ ಅವನ ಪಗಾರವನ್ನು ಹೆಚ್ಚಿಸುತ್ತಾ ಬಂದಿದ್ದರು. ಆದರೆ ಗುಲಾಬಿ ಗಿಡ ಯಾವಾಗ ನಾಶವಾಗಿತ್ತೋ.

ಇಂಥ ಸಾವಿರಕ್ಕೂ ಮಿಕ್ಕ ಕಡತಗಳು ನಮ್ಮೂರಿನ ನೆಲದಲ್ಲಿ ಹುಗಿದು ಹೋಗಿವೆಯೆಂದು ನಾನು ಅಂದಾಜು ಮಾಡಿದ್ದೇನೆ. ಯಾಕೋ ಅವುಗಳನ್ನು ಹುಡುಕಿ ತೆಗೆಯುವ ಅರಸು ಮಕ್ಕಳು ಇನ್ನೂ ಹುಟ್ಟಿ ಬಂದಿಲ್ಲವಾದ್ದರಿಂದ ಇನ್ನೂ ಅವುಗಳ ಮೂಲರೂಪ ಅಜ್ಞಾತವಾಗಿಯೇ ಉಳಿದಿದೆ.

ಒಮ್ಮೆ ನಮ್ಮಲ್ಲೊಬ್ಬರಿಗೆ ಏನೋ ಕಾಯಿಲೆಯಾಗಿ ಅವರಿಗೆ ಕುಂಬಳಕಾಯಿ ಲೇಹ ಕೊಡಬೇಕೆಂಬ ಸಲಹೆ ವೈದ್ಯರಿಂದ ಬಂತು. ನಮ್ಮೂರಲ್ಲಿ ಕುಂಬಳಕಾಯಿ ಇರಲಿಲ್ಲವಾದ್ದರಿಂದ ಅದನ್ನು ಹುಡುಕುತ್ತ ಊರೂರು ಅಲೆಯುವ ಕೆಲಸ ನಮ್ಮ ಬಂಧುಗಳಲ್ಲೊಬ್ಬರಿಗೆ ಬಂತು. ಅದನ್ನವರು ಹುಡುಕಲು ಹೊರಡುವಾಗ ನಮ್ಮ ಅಜ್ಜಿ ಬಿಟ್ಟೂಬಿಡದೇ – 'ಮತ್ತೆ ಕುಂಬಳಕಾಯಿನ ದುಡ್ಡು ಕೊಡದೇ ಪುಕ್ಕಟೆ ಮಾತ್ರ ತರಬೇಡ ಮಾರಾಯಾ. ಇಷ್ಟೂ ಸಾಲ್ದೆ ಕೊಟ್ಟವರ ಅರಿಷ್ಟಾನ ಕಟ್ಕೋಳ್ಳೋದು ಬೇಡ. ರೊಕ್ಕ ಕೊಟ್ಟೇ ತಗೊಂಬಾ' ಅಂತ ಹೇಳೀ ಹೇಳಿದರು. ಕುಂಬಳಕಾಯಿ ಹುಡುಕುತ್ತ ತಿರುಗಿ ತಿರುಗಿ ಸಾಕಾದ ನಮ್ಮ ಬಂಧುವಿಗೆ ಕೊನೆಗೆ ಯಾವುದೋ ಒಂದು ಊರಿನ ರೈತನೊಬ್ಬನ ಹೊಲದಲ್ಲಿ ಕುಂಬಳಕಾಯಿ ಗೋಚರಿಸಿ, 'ಎಷ್ಟು ಬೆಲೆ' ಎಂದು ಕೇಳಿದನಂತೆ. 'ಅಯ್ ಸ್ವಾಮಿ, ಕುಂಬಳಕಾಯಿ ಯಾರಾದರೂ ರೊಕ್ಕಕ್ಕೆ ಕೊಡೋದುಂಟಾ? ಪುಕ್ಕಟೆ ಆದ್ರೆ ಕೊಡ್ತೀವಿ' ಎಂಬ ಉತ್ತರ ಬಂತಂತೆ. ಪುಕ್ಕಟೆ ತರಬೇಡವೆಂದು ಅಜ್ಜಿಯ ಅದೇಶ, ರೊಕ್ಕಕ್ಕೆ ಕೊಡುವುದಿಲ್ಲವೆಂದು ರೈತನ ಹಠ. ಕುಂಬಳಕಾಯಿಯಂತೂ ಬೇಕೇಬೇಕು. ಕೊನೆಗೆ ಅದನ್ನು ಹಾಗೇ ತಂದು 'ನಾಲ್ಕು ರೂಪಾಯಿ ಕೊಟ್ಟೆ' ಎಂದು ಅಜ್ಜಿಗೆ ಹೇಳಿದರು ಎಂಬುದು ಬೇರೆ ಮಾತು.

ಹೀಗೆ ಒಂದೇ ವಿಷಯದ ಮೇಲಿನ ಶಾಸನಗಳು ಎರಡು ಬೇರೆ ಬೇರೆ ಪ್ರದೇಶಗಳಲ್ಲಿ ತದ್ವಿರುದ್ಧವಾಗಿ ರಚಿಸಲ್ಪಡುತ್ತಿದ್ದವೇ ಎಂಬುದು ವಿಚಾರಿಸಬೇಕಾದ ಸಂಗತಿ. ಹಾಗಿದ್ದಿದ್ದೇ ಹೌದಾದರೆ ಅಂದರೆ ತಮಗನುಕೂಲವಾದ ಹಾಗೆ ಪರಸ್ಪರ ವಿರುದ್ಧವಾಗಿರುವ ಶಾಸನಗಳನ್ನು ರಚಿಸಿ ಹೇಳುವ ಕಲೆ ನಮ್ಮ ಪೂರ್ವಜರಿಗೂ ಗೊತ್ತಿತ್ತೆಂದ ಮೇಲೆ; ಒಂದು ಸರಕಾರ ತಮಗನುಕೂಲವಾದ ತಾಮ್ರಶಾಸನವನ್ನು ಹುಗಿದ ವಾಸನೆ ಹತ್ತಿದ ಇನ್ನೊಂದು ಸರಕಾರ



Downloaded from https:// www.studiestoday.com

Downloaded from https:// www.studiestoday.com

ತನ್ನ ಅಧಿಕಾರಾವಧಿಯಲ್ಲಿ ಅದನ್ನು ಕಿತ್ತು ತೆಗೆಸಿ ತಾನಿಷ್ಟಪಟ್ಟದನ್ನು ಬರೆಸಿ ಹೂಳಿಸಿದ್ದರಲ್ಲೇನೂ ಹೊಸದಿಲ್ಲ. ಹಿಂದೆ ಕುಂಬಳಕಾಯಿ ಬೆಳೆ ಬೆಳೆಯದ ಪ್ರದೇಶದ ರಾಜ ಅದನ್ನು ದುಡ್ಡಿಗೆ ಮಾರಬಾರದು ಎಂದೂ ಶಾಸನಗಳನ್ನು ಮಾಡಿ ಹೇಳಿಸಿರಬಹುದೆ ಎಂದು ನನಗೆ ಅನುಮಾನವಿದೆ. ಗಡಿಗೆ ಮಡಕೆಗಳ ಚೂರುಗಳು ಅಗೆದು ತೆಗೆಯುವ ಸಂಶೋಧಕರು ಆಗೀಗ ನಮ್ಮ ಕಡೆ ಬಂದು ಅಗೆದಿದ್ದರೆ ಅವರಿಗೆ ಡಾಕ್ಟರೇಟು ಸಿಗುವ ಜೊತೆಗೆ ನಮ್ಮ ಇಂಥ ಆಚರಣೆಗಳ ಮೂಲವಸ್ತು ಹೇಗಿತ್ತು ಅಥವಾ ಇರಲೇ ಇಲ್ಲವೋ ಎಂಬುದಾದರೂ ತಿಳಿಯುತ್ತಿತ್ತೇನೋ. ಉತ್ತರ ಕನ್ನಡ ಜಿಲ್ಲೆಯ ಕಾಡುಗಳಲ್ಲಿ ಯಮದೂತರು ಹಕ್ಕಿಗಳ ರೂಪದಲ್ಲಿ ವಾಸಿಸುವ ಸಂಗತಿ ಬಹಳಷ್ಟು ಜನರಿಗೆ ಗೊತ್ತಿಲ್ಲ. ಯಮನ ಪಾಶಕ್ಕೆ ಸಿಕ್ಕು ಯಾರು ಸತ್ತರೂ ಆ ದಿನ ರಾತ್ರಿ 'ಸಿಕ್ಕಿತ್ರೋ ಸಿಕ್ಕ್ ಸಿಕ್ಕಿತ್ರೋ' (ಯಮನಿಗೆ ಆಹಾರ) ಎಂದು ಕೂಗಿ ಭೂಲೋಕದಲ್ಲಿ ಅನೌನ್ಸ್ ಮಾಡುವುದು ಈ ಹಕ್ಕಿರೂಪೀ ದೂತರ ಕೆಲಸವೆಂದೂ, ಆ ಹಕ್ಕಿ ಹಾಗೆ ಕೂಗಿದ ಎರಡು ಮೂರು ದಿನದಲ್ಲಿಯೇ ಹತ್ತಿರದಲ್ಲೆಲ್ಲಾದರೂ ಸತ್ತ ಸುದ್ದಿ ಬಂದೇ ಬರುತ್ತದೆ ಎಂದೂ ನಮ್ಮೂರಿನ ಜನರು ಸೂರ್ಯಚಂದ್ರರಷ್ಟೇ ಸತ್ಯವಾಗಿ ನಂಬುತ್ತಾರೆ. ಕಾಡಿನ ಪಕ್ಕದಲ್ಲಿಯ ಅಡಿಕೆ ತೋಟಗಳ ಮಧ್ಯದಲ್ಲಿ ಇರುವ ಒಂಟಿ ಮನೆಗಳಲ್ಲಿ ಮಲಗಿದವರಿಗೆ ಮಧ್ಯರಾತ್ರಿಯಲ್ಲಿ ಈ ಹಕ್ಕಿಯ ಕೂಗಿನಿಂದ ಎಚ್ಚರವಾಯಿತಾದರೆ ಹಾಸಿಗೆ ಒದ್ದೆಯಾಗುವುದು ಖಂಡಿತ. ಹಾಗೆ ಪದೇ ಪದೇ ಹಾಸಿಗೆ ಒದ್ದೆಯಾಗುವುದು ಒಳ್ಳೆಯದಲ್ಲವೆಂದು ಅರಿತ ಯಾರೋ ಹಿರಿಯರು ಆ ಕೂಗಿನಿಂದ ಉಂಟಾಗುವ ಭಯದ ನಿವಾರಣೆಗೆ ಒಂದು ಉಪಾಯವನ್ನು ಕಂಡುಹಿಡಿದಿಟ್ಟಿದ್ದಾರೆ. ಆ ಹಕ್ಕಿ 'ಸಿಕ್ಕಿ ಸಿಕ್ಕಿತ್ರೋ' ಎಂದು ಎದೆ ನಡುಗುವ ಹಾಗೆ ಕೂಗಲು ಪ್ರಾರಂಭಿಸಿದ ಕೂಡಲೇ ಅದು ಕುಳಿತಿರುವ ಮರದ ಹೆಸರನ್ನು ನಾವು ಹೇಳಿಬಿಟ್ಟರೆ ಅದರ ಗಂಟಲುಕಟ್ಟಿ ಹೋಗಿ ಕೂಗುವುದನ್ನು ನಿಲ್ಲಿಸುತ್ತದೆ. ಬಾಲ್ಯದಲ್ಲಿಯೇ ನಮಗೆ ಬೋಧಿಸಲ್ಪಟ್ಟ ಈ ನಿವಾರಣೋಪಾಯ ಇಂದಿಗೂ ನಮಗೆ ಸಂಜೀವಿನಿಯಾಗಿದೆ. ಆ ಹಕ್ಕಿಯ ಕೂಗು ಶುರುವಾಗುತ್ತಲೇ ಶುರು ನಮ್ಮ ಮರಗಳ ಜಪ: ಅಡಿಕೆ ಮರ, ಬಾಳೆ ಮರ, ಅತ್ತಿ ಮರ, ಹೊನ್ನೆ ಮರ... ಹೀಗೆ ಜ್ಞಾಪಿಸಿಕೊಳ್ಳುತ್ತ ಸಾಗುವ ಮರಗಳ ಹೆಸರಿನ ಜಪ ಮುಗಿಯುವಷ್ಟರಲ್ಲಿ ನಮಗೆ ತೂಕಡಿಕೆ ಹತ್ತಿಯೋ, ಹಕ್ಕಿಯ ಕೂಗು ನಿಂತುಹೋಗಿಯೋ ಅಂತೂ ಮುಂದಿನ ಭಾಗದ ರಾತ್ರಿ ಸುಖನಿದ್ದೆಯಲ್ಲಿ ಕಳೆಯುವಂತಾಗುತ್ತದೆ.

ಇಂಥ ನಂಬಿಕೆಗಳನ್ನೆಲ್ಲ ಮೂಢನಂಬಿಕೆಗಳೆಂದು ಅಪಹಾಸ್ಯಮಾಡಿ ಅವುಗಳನ್ನೆಲ್ಲ ತೆಗೆದೊಗೆಯಬೇಕೆಂದು ವಾದಿಸುವ ಸುಧಾರಣಾವಾದಿಗಳನ್ನು ನಾನು ಬಲವಾಗಿ ವಿರೋಧಿಸುತ್ತೇನೆ. ಏಕೆಂದರೆ ಕಾಡಿನಲ್ಲಿಯೇ ವಾಸಿಸಬೇಕಾಗಿರುವ ನಮ್ಮ ಮಕ್ಕಳು ರಾತ್ರಿ



Downloaded from https:// www.studiestoday.com

Downloaded from https:// www.studiestoday.com

ಹೊತ್ತಿನಲ್ಲಿ ಭಯರಹಿತರಾಗಿ ನಿದ್ರಿಸಬೇಕೆಂಬ ಬಯಕೆ ನನಗಿದೆ.

ಮೂರು ಸಂಜೆಯ ಹೊತ್ತಿನಲ್ಲಿ ಮಲಗಬಾರದು ಎಂಬ ನಿಯಮವನ್ನು ನಮ್ಮ ಮನೆಯಲ್ಲಿಯ ಹುಡುಗರಿಗೆ ಸಂಜೆ ಮಗ್ಗಿ ಬಾಯಿಪಾಠ ಮಾಡಿಸಲಿಕ್ಕಾಗಿ ನಮ್ಮ 'ಹುಡುಗ ವಿರೋಧಿ ಅಜ್ಜ'ನೇ ಜಾರಿಗೆ ತಂದದ್ದೆಂದು ನಾನು ತೀರ ಇತ್ತೀಚಿನ ತನಕವೂ ತಿಳಿದಿದ್ದೆ. ಎಲ್ಲರ ಮನೆಯಲ್ಲೂ ಅದು ಜಾರಿಯಲ್ಲಿದೆ ಎಂಬುದು ಗೊತ್ತಾದ ದಿನ ಏನೋ ಒಂದು ರೀತಿಯ ಸಮಾಧಾನವಾಗಿ ನನ್ನ ಅಜ್ಜನ ಬಗೆಗೆ ಒಂದು ರೀತಿಯ ಗೌರವವೂ ಮೂಡಿತ್ತು.

ಹೆಣ್ಣು ಮಕ್ಕಳು ಅಕ್ಕಿ ಆರಿಸುವಾಗ ಅಕ್ಕಿ ತಿಂದರೆ ಅವರ ಮದುವೆಯಲ್ಲಿ ಮಳೆ ಬರುತ್ತದೆಯೆಂಬ ಪ್ರತೀತಿ ಹುಟ್ಟಿಕೊಂಡಿರುವುದರಿಂದ ದಿನವೂ ಅಕ್ಕಿ ಆರಿಸುವ ಕೆಲಸವನ್ನು ನಮ್ಮ ಮೇಲೆ ವಿಶ್ವಾಸದಿಂದ ಕೊಡುತ್ತಾರೆ. ಹಾಗೆಯೆ ಸ್ನಾನಮಾಡಿ ಬರುವಾಗ ಬಚ್ಚಲು ಹಂಡೆಗೆ ಒಂದೆರಡು ಕೊಡ ನೀರು ಹಾಕಿ ಬರಬೇಕೆಂಬ ನಿಯಮ ಇರದಿದ್ದರೆ, ಬಾವಿಯಿಂದ ನೀರೆತ್ತಿ ಸ್ನಾನಮಾಡುವ ಬಚ್ಚಲುಗಳುಳ್ಳ ಸ್ಥಳಗಳಲ್ಲಿ ಒಬ್ಬರ ಸ್ನಾನದ ನಂತರ ಬಚ್ಚಲಿಗೆ ಬರುವ ಮತ್ತೊಬ್ಬರ ಸ್ಥಿತಿ ಶೋಚನೀಯವಾಗುತ್ತಿತ್ತು.

ಎಲ್ಲಿಗಾದರೂ ಹೊರಟಕೂಡಲೇ 'ಎಲ್ಲಿಗೆ ಸ್ವಾಮಿ' ಎಂಬ ಸ್ವರ ಎದುರಾದರೆ ಅದು ಅಪಶಕುನವೆಂದು ಎಲ್ಲಾ ಕಡೆಯೂ ಪರಿಗಣಿಸಲ್ಪಡುವುದಾದರೂ ಅದು ನಮ್ಮೂರಿನ ಹಿರಿಯರಾದ ಗಣೇಶಯ್ಯನವರನ್ನು ರೊಚ್ಚಿಗೆಬ್ಬಿಸುವಷ್ಟು ಇನ್ಯಾರ ಮೇಲೂ ಅಷ್ಟು ಪರಿಣಾಮ ಬೀರಲಿಕ್ಕಿಲ್ಲ. ಇವರು ತಮ್ಮ ಮೂಗಿನ ನೇರಕ್ಕೆ ರಚಿಸಲ್ಪಟ್ಟ ರಸ್ತೆಯ ಮೇಲೆ ಜರತಾರೀ ಶಾಲು ಹೊದ್ದು ಕೊಡೆ ಹಿಡಿದು ಹೊರಟ ಠೀವಿಯನ್ನು ಕಂಡಾಕ್ಷಣ ಎಲ್ಲಿಗಿರಬಹುದು ಎಂಬ ಕುತೂಹಲ ಯಾರಲ್ಲಾದರೂ ಹುಟ್ಟದಿರಲಿಕ್ಕೆ ಸಾಧ್ಯವೇ ಇಲ್ಲ. ಆ ಕುತೂಹಲ ಎಲ್ಲಾದರೂ ಅಪ್ಪಿ ತಪ್ಪಿ ಅವರೆದುರು ಯಾರಿಂದಾದರೂ ಪ್ರಕಟಿಸಲ್ಪಟ್ಟಿತೋ ಆ ವ್ಯಕ್ತಿಗೆ ಶಾಪ ಸಿಂಚನ ಆಗೇ ತೀರುತ್ತದೆ. 'ಪಾಪದ ಪಿಂಡಗಳು, ಹೊರಡು ಹೊರಡುತ್ತಲೇ ಎಲ್ಲಿಗೇಂತ ಹಲ್ಲು ಕಿರಿದು ಆಯ್ತು. ಇನ್ನು ಹೋದ ಕೆಲಸ ಆದ ಹಾಗೇ' ಎನ್ನುತ್ತ ಪಟಪಟನೇ ಮನೆಗೆ ವಾಪಸ್ಸಾಗಿ ಒಂದರ್ಧ ಘಂಟೆ ಕುಳಿತು ಮತ್ತೆ ಹೊರಡುವರು. ಇದು ನಮಗೆ ಬಹಳ ಪ್ರಿಯವಾದ ವಿಷಯವಾಗಿತ್ತು. ಅವರು ಎಲ್ಲಿಗಾದರೂ ಹೊರಟದ್ದು ಗೊತ್ತಾಗುತ್ತಲೆ ನಾವು ಒಂದು ಹಿಂಡು ಹುಡುಗರು ಯಾರಾದರೂ ಮನೆಯ ಭತ್ತದ ಕಣಜದ ಹಿಂದೆ ಅಡಗಿಯೋ, ಅಡಿಕೆ ಅಟ್ಟ ಏರಿ ನಿಂತೋ 'ಎಲ್ಲಿಗೆ ಐನೋರೆ' ಎಂದು ಕೂಗಿ ಅಡಗಿ ಬಿಡುತ್ತಿದ್ದೆವು. ಬರೀ ಒಂದು ಶಾಪಸಹಿತ ನೋಟ ನಮ್ಮೆಡೆಗೆ ಬೀರಿ ಅವರು ಹಾಗೇ ಹೋಗುತ್ತಿದ್ದರೆ ವಿನಾ ಮನೆಗೆ ವಾಪಸಾಗುತ್ತಿರಲಿಲ್ಲ. ಈಗೀಗ ಎಲ್ಲಿಗೆ ಬದಲು 'ಎಷ್ಟು ದೂರ ಎತ್ತ ಮುಖಗಳು' ಆಮದಾಗಿ ಬಿಟ್ಟಿರುವುರಿಂದ ಇಂಥ ಅವಕಾಶಗಳು ಕಡಿಮೆಯಾಗುತ್ತಿವೆ. ಆದರೂ 'ಎಲ್ಲಿಗೆ'



Downloaded from https:// www.studiestoday.com

Downloaded from https:// www.studiestoday.com

'ಎತ್ತ' ಮುಖಗಳ ಪರಿಚಯವಿಲ್ಲದ ಧಾರವಾಡದ ಡಾಕ್ಟರರೊಬ್ಬರು ನಮ್ಮಲ್ಲಿಗೆ ವರ್ಗವಾಗಿ ಬಂದರು. ಒಂದು ದಿನ ಹತ್ತಿರದ ಪೇಟೆಗೆ ಹೊರಟಿದ್ದರೆಂದು ಕಾಣುತ್ತದೆ. ಅವರನ್ನು ಕಂಡ ವೃದ್ಧರೊಬ್ಬರು 'ಎಷ್ಟು ದೂರ ಡಾಕ್ಟ್ರೆ' ಅಂತ ಕೇಳಿದಾಗ ಡಾಕ್ಟರರು ತಾವು ಹೋಗುತ್ತಿದ್ದಷ್ಟೆ ಅವಸರವಾಗಿ, 'ಇಲ್ಲಿಂದ 15 ಕಿ.ಮೀ. ಇರಬೇಕ್ರೀ' ಎನ್ನುತ್ತ ದಾಪುಗಾಲು ಹಾಕಿ ನಡೆದುಬಿಟ್ಟರು.

ಪೂರ್ವ ಸೂಚನೆಯಿಲ್ಲದೇ ನೆಂಟರು ಬಂದರೆ ಎಂಥ ಫಜೀತಿ ಎಂಬುದು ನಮ್ಮಲ್ಲಿಯ ಕಾಗೆ. ಬೆಕ್ಕು ಮುಂತಾದ ಸಜೀವ ಪ್ರಾಣಿಗಳೇ ಅಲ್ಲದೆ ನೀರು, ಹಣಿಗೆ, ಅಕ್ಕಿ ಮೊದಲಾದ ನಿರ್ಜೀವ ವಸ್ತುಗಳಿಗೂ ಗೊತ್ತಿದೆ. ಅದಕ್ಕೇ ನೆಂಟರು ಬರುವ ಪೂರ್ವ ಸೂಚನೆಯನ್ನು ಮೊದಲೇ ಹೆಂಗಸರಿಗೆ ಕೊಡುವ ಕೆಲಸವನ್ನು ಇವು ವಹಿಸಿಕೊಂಡಿವೆ. ಅನ್ನದ ಅಕ್ಕಿಯನ್ನು ತೊಳೆಯುವಾಗ ಅದು ಗೊಡ ಗೊಡ ಎಂದರೆ, ನೀರೆತ್ತುವಾಗ ಅರ್ಧ ಕೊಡ ತುಂಬದೇ ಅರ್ಧ ಮಾತ್ರ ನೀರು ಬಂದರೆ, ಕೂದಲು ಬಾಚುವಾಗ ಹಣಿಗೆ ಕೈ ತಪ್ಪಿ ನೆಲಕ್ಕೆ ಬಿದ್ದರೆ, ಅಡಿಗೆಮನೆಯಲ್ಲಿ ಬೆಕ್ಕು ಮುಖ ತಿಕ್ಕಿಕೊಂಡರೆ, ಕಾಗೆ ಕರ್ರ್ ಕರ್ರ್ ಎಂದು (ಕಾ.ಕಾ.ಬದಲು) ಕೂಗಿದರೆ ಆ ದಿನ ಊಟಕ್ಕೆ ನೆಂಟರು ಬರಲೇಬೇಕು. ಇವುಗಳಲ್ಲಿ ಒಂದು ಘಟಿಸಿದರೂ ಆ ದಿನದ ಊಟಕ್ಕೆ ಹೆಚ್ಚು ಅಕ್ಕಿ ಹಾಕಲು ಅಡ್ಡಿಯಿಲ್ಲ. ಆದರೆ ಇವು ಬರಿದೇ ನೆಂಟರು ಬರುತ್ತಾರೆ ಎಂದಷ್ಟೇ ಹೇಳಿಬಿಟ್ಟು ಸುಮ್ಮನಾಗುತ್ತವೆಯೇ ಹೊರತು ಎಷ್ಟುಜನ ಬರುತ್ತಾರೆಂದು ತಿಳಿಸುವುದಿಲ್ಲವಾದ್ದರಿಂದ ಫಜೀತಿ ತಪ್ಪಿದ್ದಲ್ಲ.

ಹಳೆಯ ಆಚಾರವಿಚಾರಗಳಿಗೆಲ್ಲಾ ವೈಜ್ಞಾನಿಕ ವಿವರಣೆಯನ್ನು ಹುಡುಕಿ (ಊಹಿಸಿ) ವಾದಿಸುವ ಹುಚ್ಚನ್ನು ಬೆಳೆಸಿಕೊಂಡ 'ಹಳತಾವಾದಿಗಳು' ನಮ್ಮೂರಲ್ಲೂ ಇತ್ತೀಚೆಗೆ ಹುಟ್ಟಿಕೊಂಡಿದ್ದಾರೆ. ಪೂರ್ವಜರ ಜ್ಞಾನವೇ ಇಂದಿನವರ ವಿಜ್ಞಾನವೆಂಬುದು ಅವರ ಅಭಿಮತ. ಬೇಕಾದ ಉದಾಹರಣೆಯನ್ನು ಕೊಡಲಿ – ಅದಕ್ಕೆಲ್ಲ ವೈಜ್ಞಾನಿಕವಾಗಿ ಕಾರಣ ಹಾಗಿರಬಹುದು, ಹೀಗಿರಬಹುದು ಎಂದು ವಾದಿಸುವ ಈ ಶಾಸ್ತ್ರೀಯ ಕಾರಣದ ಅನ್ವೇಷಕರೂ ಊಹಿಸಲು ಸೋತ ನಂಬಿಗೆಯೊಂದನ್ನು ಒಂದು ದಿನ ಅವರೆದುರಿಗಿಟ್ಟೆ. ವರ್ಷಗಟ್ಟಲೆ ಕೆಡದ ಮಿಡಿ ಉಪ್ಪಿನಕಾಯಿಯನ್ನು ಮಾಡಿಡುವಾಗ ನಮ್ಮೂರ ಹೆಂಗಸರು ತಪ್ಪದೇ ಉಪ್ಪಿನಕಾಯಿ ಮಾಡುವ ದಿನದ ಮಿತಿಯನ್ನು ಲಕ್ಷಿಸಿ ಸಪ್ತಮಿ ಅಷ್ಟಮಿ ನವಮಿ ಮುಂತಾದ ಮಿಕಾರಾಂತ ಮಿತಿಗಳಂದು ಉಪ್ಪಿನಕಾಯಿ ಮಾಡುವುದಿಲ್ಲ. ಹಾಗೆ ಮಾಡಿದ್ದಾದರೆ ಅಂದಿನ ಮಿತಿಯ 'ಮಿಗೆ' 'ಜಿ' ಸೇರಿ ಉಪ್ಪಿನಕಾಯಿಯಲ್ಲಿ ಮಿಜಿ ಮಿಜಿ ಆಗುತ್ತದೆ ಎಂಬ ಅವರ ನಂಬಿಗೆಯೇ ಅದಕ್ಕೆ ಕಾರಣ. ಇದು ನಮ್ಮ ಆ ಹಳತಾವಾದಿಗಳಲ್ಲಿ ಬಹಳ ಕುತೂಹಲ ಹುಟ್ಟಿಸಿತಾದರೂ ಮಿಕಾರಾಂತಗಳ ದಿನದಂದು



Downloaded from https:// www.studiestoday.com

Downloaded from https:// www.studiestoday.com

ವಾತಾವರಣದಲ್ಲೇನಾದರೂ ಜಿಕಾರಾಂತಗಳನ್ನು ಸೇರಿಸುವ ಗುಣವಿರಬಹುದೇ ಅಥವಾ ಉಪ್ಪಿನಕಾಯಿಯಲ್ಲಿ ಆಗಬಹುದಾದ ಮಿಜಿ ಮಿಜಿಗಳಿಂದ ತುಂಬಿಹೋದ ಸಪ್ತಮಿ ಅಷ್ಟಮಿ ದಶಮಿಗಳು ಏಕಾದಶಿಯಂದು ಹೇಗೆ ಶುದ್ಧವಾಗಿಬಿಡಬಹುದು ಎಂಬ ನನ್ನ ವೈಜ್ಞಾನಿಕ ಪ್ರಶ್ನೆಗಳಿಗೆ ಅವರಲ್ಲಿ ಉತ್ತರ ದೊರೆಯಲಿಲ್ಲ. ಗಂಭೀರ ಸಮಸ್ಯೆಯೊಂದನ್ನು ತಲೆಗಂಟಿಕೊಂಡವರಂತೆ ಎದ್ದುಹೋದ ಈ ಹಳತಾವಾದಿಗಳು ಎಂದಾದರೊಂದು ದಿನ ಒಂದು ಶಾಸ್ತ್ರೀಯ ಕಾರಣದೊಂದಿಗೆ ನನ್ನೆದುರು ಪ್ರತ್ಯಕ್ಷವಾಗಬಹುದು.

ಜಗತ್ ಪ್ರಳಯದ ಕುರಿತಾಗಿ ಆಗಾಗ ಒಂದು ಹೇಳಿಕೆ ನೀಡಿ ಆಮೇಲೆ ಸುಮ್ಮನಾಗಿ ಬಿಡುವ ವಿಜ್ಞಾನಿಗಳನೇಕರು ಈ ಜಗತ್ತಿನಲ್ಲಿದ್ದರೂ ಇಂಥ ದಿನವೇ ಇಂಥ ಕಾರಣಕ್ಕಾಗಿಯೇ ಜಗತ್ಪ್ರಳಯ ಆಗುತ್ತದೆಯೆಂದು ನಿಖರವಾಗಿ ಹೇಳಲು ಯಾವ ವಿಜ್ಞಾನಿಗೂ ಇದು ತನಕ ಸಾಧ್ಯವಾಗಿಲ್ಲ. ಆದರೆ ಈ ವಿಚಾರ ನಮ್ಮೂರ ಮಾತು ಬಲ್ಲ ಶಿಶುಗಳಿಗೆಲ್ಲ ಗೊತ್ತು. ಈ ಭೂಮಿಯನ್ನು ಹೊತ್ತು ಹೊತ್ತು ಆದ ಬೇಸರದಿಂದ ಆಗಾಗ ಹೆಡೆಯಲ್ಲಾಡಿಸಿ ಅಲ್ಲಲ್ಲಿ ಭೂಕಂಪಗಳನ್ನುಂಟುಮಾಡುತ್ತಿರುವ ಆದಿಶೇಷ ಯಾವಾಗಾದರೊಮ್ಮೆ ತನ್ನ ಹೆಡೆಯನ್ನು ಪೂರ್ತಿ ನೀರಿನಲ್ಲಿ ಮುಳುಗಿಸಿಬಿಡುವುದರಿಂದ ಭೂಮಿ ನೀರಲ್ಲಿ ಮುಳುಗಿ ಪ್ರಳಯವುಂಟಾಗುತ್ತದೆ ಎಂಬ ಕಾರಣವನ್ನು ನಮ್ಮೂರಿನ ಆಬಾಲವೃದ್ಧರಾದಿಯಾಗಿ ಎಲ್ಲರೂ ನಂಬುತ್ತಾರೆ. ಹಾಗೂ ಎಲ್ಲರ ಮನೆಯ ಮಜ್ಜಿಗೆಯಲ್ಲೂ ಅರ್ಧ ಮುಳುಗಿ ಅರ್ಧ ತೇಲುತ್ತಿರುವ ಬೆಣ್ಣೆ ಮುದ್ದೆ ಯಾವ ದಿನ ಪೂರ್ತಿ ಮಜ್ಜಿಗೆಯೊಳಗೆ ಮುಳುಗಿ ಹೋಗುತ್ತದೆಯೋ, ಅದೇ ದಿನ ಪ್ರಳಯವಾಗುವುದರಲ್ಲಿ ಸಂಶಯವಿಲ್ಲ ಎಂಬುದಾಗಿ ಪ್ರಳಯದ ದಿನವನ್ನೂ ಸಹ ನಿಗದಿಪಡಿಸಿಕೊಂಡು ಬಿಟ್ಟಿದ್ದಾರೆ.

ನಾನು ನಾಲ್ಕನೇ ತರಗತಿಯಲ್ಲಿ ಓದುತ್ತಿರುವಾಗ ಒಂದು ದಿನ ಶಾಲೆಯಲ್ಲಿ ಮಾಸ್ತರರು ಪ್ರಳಯದ ಕತೆಯನ್ನು ಹೇಳಿ ಪ್ರಳಯ ಕಾಲದಲ್ಲಿ ಹೇಗೆ ಈ ಭೂಮಿಯ ಮೇಲಿನ ಎಲ್ಲವೂ ನೀರಿನಲ್ಲಿ ಮುಚ್ಚಿ ಕೊಚ್ಚಿ ಹೋಗುತ್ತದೆಯೆಂಬುದನ್ನು ಸಚಿತ್ರ ಕಲ್ಪನೆಯೊಂದಿಗೆ ವಿವರಿಸಿದರು. ಎಲ್ಲವೂ ನೀರಿನಲ್ಲಿ ಮುಳುಗಿ ಮುಳುಗಿ ಹೋಗುತ್ತದೆಯೆಂದ ಬಳಿಕ ಶಾಲೆ, ಮಾಸ್ತರರ ಬೆತ್ತ... ಎಲ್ಲವೂ ನೀರಿನಲ್ಲಿ ಮುಳುಗಿ ಮುಳುಗಿ ಹೋಗುತ್ತಿರುವ ಚಿತ್ರ ನನ್ನ ಕಣ್ಮುಂದೆ ಕಟ್ಟತೊಡಗಿತು. ಹೆಚ್ಚು ಖುಷಿಯಾಗತೊಡಗಿತು. ಶಾಲೆ ಬಿಟ್ಟು ಬರುವಾಗ ಆ ಪ್ರಳಯದ ಶುಭದಿನ ಇವತ್ತೇ ಏಕೆ ಬರಬಾರದು ಎಂಬ ವಿಚಾರವನ್ನು ನನಗಿಂತ ಎರಡುವರ್ಷ ಚಿಕ್ಕವನಾದ ನನ್ನ ತಮ್ಮನೊಂದಿಗೆ ಸುದೀರ್ಘವಾಗಿ ಚರ್ಚಿಸಿದೆ. ಅಕ್ಷರ ಬರೆದುಕೊಟ್ಟಹಾಗೆ ಸೊನ್ನೆ ಸುತ್ತಿಡುತ್ತಿದ್ದ ನನ್ನ ತಮ್ಮ ನನಗಿಂತಲೂ ಹೆಚ್ಚು ಪೆಟ್ಟು ತಿನ್ನುವವನಾಗಿದ್ದರಿಂದ ಆತನಿಗೆ ಶಾಲೆ ಮುಳುಗಿಹೋಗುವುದು ನನಗಿಂತ ಹೆಚ್ಚು ಬೇಗ ಬೇಕಾದ ವಿಷಯವಾಗಿತ್ತು.



Downloaded from https:// www.studiestoday.com

Downloaded from https:// www.studiestoday.com

'ಹೇಗೂ ಬೆಣ್ಣೆ ಮುದ್ದೆ ಮುಳುಗಿದ ದಿನ ತಾನೆ ಪ್ರಳಯ. ಇವತ್ತೇ ನಮ್ಮ ಮನೆಯ ಬೆಣ್ಣೆ ಮುದ್ದೆ ಮಜ್ಜಿಗೆಯೊಳಗೆ ಮುಳುಗಿ ಹೋಗುವ ವ್ಯವಸ್ಥೆ ಮಾಡಬೇಕು' ಎಂದು ತನ್ನ ಸಲಹೆಯನ್ನು ಕೊಟ್ಟೇಬಿಟ್ಟ. ಮಾಸ್ತರರು ತಮ್ಮ ಬೆತ್ತದೊಂದಿಗೆ ನೀರಿನಲ್ಲಿ ತೇಲಿಹೋಗುವ ದೃಶ್ಯವನ್ನು ಊಹಿಸಿದಷ್ಟೂ ನಮಗೆ ಮೈ ರೋಮಾಂಚನವಾಗುತ್ತಿತ್ತು. (ಆಗ ನಾವಿಬ್ಬರೂ ಏನು ಮಾಡಬೇಕೆಂದು ಯೋಚಿಸಿದ್ದೆವೆಂಬುದು ಈಗ ನೆನಪಾಗುತ್ತಿಲ್ಲ).

ಸರಿ, ಮನೆಗೆ ಬಂದವರೇ ಅಮ್ಮ ಸ್ನಾನಕ್ಕೆ ಹೋದ ಹೊತ್ತಿನಲ್ಲಿ ಮಜ್ಜಿಗೆ ಕಪಾಟಿನ ಬಾಗಿಲು ತೆಗೆದು ಮಜ್ಜಿಗೆ ಗಡಿಗೆಯ ಮುಚ್ಚಳ ತೆಗೆದು ಈಕ್ಷಿಸಿದೆವು. ಪ್ರಳಯದ ಗುಟ್ಟನ್ನು ತನ್ನೊಳಗೆ ಅಡಗಿಸಿಕೊಂಡು ದೊಡ್ಡದಾದ ಬೆಣ್ಣೆ ಮುದ್ದೆ ಅರ್ಧ ಮುಳುಗಿ ಅರ್ಧ ತೇಲುತ್ತಿದೆ. ಮಜ್ಜಿಗೆಯ ಮೇಲ್ಭಾಗದಲ್ಲಿರುವ ಬೆಣ್ಣೆಯನ್ನು ತೆಗೆದು ತಿಂದು ಬಿಟ್ಟರೆ ಕೆಳಭಾಗದಲ್ಲಿದ್ದ ಬೆಣ್ಣೆ ಮುಳುಗುತ್ತದೆ. ಹಾಗೂ ಜಗತ್ ಪ್ರಳಯ ಆಗೇ ತೀರುತ್ತದೆ–ಇದು ಆ ಕ್ಷಣಕ್ಕೆ ನಮ್ಮಿಬ್ಬರಿಗೆ ಗೋಚರಿಸಿದ ಸತ್ಯ. ಸರಿ ಮೇಲ್ಭಾಗದ ಅರ್ಧ ಬೆಣ್ಣೆಯನ್ನು ಸರಸರನೇ ತೆಗೆದು ಇಬ್ಬರೂ ತಿಂದುಬಿಟ್ಟೆವು. ಇನ್ನೇನು ಬೆಣ್ಣೆ ಮುಳುಗಿದ ಸುದ್ದಿಯನ್ನು ಹೊರಗೆಲ್ಲಾ ಕೂಗಿ ಹೇಳಬೇಕು ಎಂದು ನಾವು ಸಿದ್ಧರಾಗುತ್ತಿರುವಷ್ಟರಲ್ಲಿಯೇ ಅರ್ಧ ಹೋಳು ಮಾಡಿದ ಪೃಥ್ವಿಯ ಆಕಾರದಲ್ಲಿದ್ದ ಉಳಿದರ್ಧ ಬೆಣ್ಣೆ ಮುದ್ದೆ ಟಣ್ಣೆಂದು ಮೇಲೆ ಜಿಗಿಯಬೇಕೆ? ಆಗ ನಮ್ಮಿಬ್ಬರಿಗೂ ಸ್ವಲ್ಪ ದಿಗಿಲಾಯಿತಾದರೂ ದಿನಾ ಬೆಳಿಗ್ಗೆ ಬೆನ್ನು ಚುರುಗುಡಿಸಿ, ಕಿವಿ ಹಿಂಡಿ ಉಠಾ ಬೈಸ್ ತೆಗೆಸಿ, ಕಣ್ಣಲ್ಲಿ ನೀರು ತರಿಸಿ, ಗೋಳುಹುಯ್ಯುತ್ತಿದ್ದ ಮಾಸ್ತರರು ಮುಳುಗಿ ಹೋಗಬೇಕೆಂಬ ಆಸೆ ಅಷ್ಟು ದುರ್ಬಲವಾಗಿರಲಿಲ್ಲ. ಹಾಗೇ ಆ ಪ್ರಯತ್ನದಲ್ಲಿ ಅಷ್ಟು ಬೇಗ ನಿರಾಶೆಗೊಳ್ಳುವಂತೆಯೂ ಇರಲಿಲ್ಲ (ಹಾಗಿತ್ತು ಅವರ ಶಿಕ್ಷೆ) ಸರಿ. ಉಳಿದರ್ಧ ಬೆಣ್ಣೆಯಲ್ಲೂ ಮೇಲ್ಭಾಗದ ಅರ್ಧವನ್ನು ತೆಗೆದು ತಿಂದದ್ದಾಯ್ತು. ಆದರೆ ನಮ್ಮ ದುರದೃಷ್ಟವೊ ಮಾಸ್ತರರ ಅದೃಷ್ಟವೋ ಆಮೇಲೆ ಉಳಿದ ಚೂರು ಬೆಣ್ಣೆ ಸಹ ಮುಳುಗುವ ಕೃಪೆ ತೋರದೇ ನಾಚಿಕೆಯಿಲ್ಲದೇ ಮತ್ತೆ ಮೇಲೇ ಬಂತು. ಸಿಟ್ಟಿನಿಂದಲೋ ಏನೋ ಆ ಚೂರನ್ನು ನನ್ನ ತಮ್ಮ ಗಬಕ್ಕನೆ ಬಾಯಿಗೆ ಹಾಕಿಕೊಳ್ಳುವುದಕ್ಕೂ ನಮ್ಮ 'ಸಿ.ಐ.ಡಿ. ರಾಮಣ್ಣ' ನೆಂದು ನಾವು ಹೆಸರಿಟ್ಟ ನಮ್ಮಣ್ಣ ಅಲ್ಲಿ ಪ್ರತ್ಯಕ್ಷವಾಗುವುದಕ್ಕೂ ಸರಿಹೋಯ್ತು. ಬೆಕ್ಕೊಂದು ಬಂದು ಬೆಣ್ಣೆಯನ್ನು ತಿನ್ನುತ್ತಿದ್ದದ್ದನ್ನು ನಾವಿಬ್ಬರೂ ಕಣ್ಣಾರೆ ಕಂಡ ವಿಚಾರವನ್ನು ಎಷ್ಟೇ ವರ್ಣಿಸಿ ಹೇಳಿದರೂ ಯಾರ ಕಿವಿಯ ಮೇಲೂ ಅದು ಬೀಳದೇ ನಮಗೆ ಆಗ ಬೇಕಾದ ಶಾಸ್ತಿ ಆಗಿಯೇ ಆಯಿತು.



Downloaded from https:// www.studiestoday.com

Downloaded from https:// www.studiestoday.com

## ಭುವನೇಶ್ವರಿ ಹೆಗಡೆ



ಶ್ರೀಮತಿ ಭುವನೇಶ್ವರಿ ಹೆಗಡೆ (1958) ಇವರ ಹೆಸರು ಕನ್ನಡದ ಹಾಸ್ಯ ಸಾಹಿತಿಗಳ ಸಾಲಿನಲ್ಲಿ ಪ್ರಮುಖವಾಗಿದೆ. 'ಮುಗುಳು' ಮತ್ತು 'ನಕ್ಕು ಹಗುರಾಗಿ' ಇವರ ಹಾಸ್ಯ ಬರಹಗಳ ಸಂಕಲನಗಳು. 'ವಿನೋದ' ಸಂಪಾದಿತ ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿಯ, ಕನ್ನಡ ಸಾಹಿತ್ಯ ಪರಿಷತ್ತಿನ ಹಾಗೂ ವಿದ್ಯಾವರ್ಧಕ ಸಂಘದ ಬಹುಮಾನಗಳನ್ನು ಪಡೆದಿರುವ ಭುವನೇಶ್ವರಿ ಹೆಗಡೆಯವರು ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕಿಯಾಗಿದ್ದಾರೆ.

ಈ ಲೇಖನವನ್ನು ಇವರ 'ಮುಗುಳು' ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಇದು ಮೂಢನಂಬಿಕೆಗಳ ಕುರಿತು ವೈಚಾರಿಕ ಪ್ರಬಂಧವಲ್ಲ. ಮೂಢನಂಬಿಕೆಗಳನ್ನು ಒಪ್ಪಿಕೊಳ್ಳುವ ಅಥವಾ ಸಾರಾಸಗಟಾಗಿ ತಿರಸ್ಕರಿಸುವ ಧೋರಣೆಯನ್ನು ಈ ಬರಹದಲ್ಲಿ ಲೇಖಕಿ ಪ್ರತಿಪಾದಿಸುವುದಿಲ್ಲ. ಜನಪದರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಹಲವಾರು ನಂಬಿಕೆಗಳತ್ತ ನಗೆ ನೋಟವನ್ನಷ್ಟೇ ಬೀರುವ ಪ್ರಯತ್ನ ಮಾಡುತ್ತಾರೆ.

### ಶಬ್ದಾರ್ಥ ವಿವರಣೆ

ಗಸ್ತು ತಿರುಗು – ಸುತ್ತು ಹಾಕು, ಒಂದು ಗೇಣು – ಒಂಬತ್ತು ಅಂಗುಲದ ಅಳತೆ, ಪಗಾರ – ಸಂಬಳ, ನೇಮಣೂಕಿ – ನೇಮಕಾತಿ, ಸದರಿ – ಈ ಮಾದರಿಯ, ಕಡತ – ಮಡಚಿದ ಬಟ್ಟೆಯ ಹಾಳೆ, ಅರಿಷ್ಠ – ಹಾನಿ; ವಿಪತ್ತು, ರೊಕ್ಕ – ನಗದು, ಶಾಸನ – ಕಾಯಿದೆ; ಸರಕಾರಿ ಆದೇಶ, ಫಜೀತಿ – ಪೇಚು.

### ಚಟುವಟಿಕೆಗಳು

- ಪ್ರಳಯ ಉಂಟಾಗುವುದರ ಮುನ್ಸೂಚನೆಯು ದೊರಕುವ ಸನ್ನಿವೇಶವೊಂದು ಪ್ರಸ್ತುತ ಲೇಖನದಲ್ಲಿದೆ. ಅದರ ಸ್ವಾರಸ್ಯವನ್ನು ಬರೆಯಿರಿ.
- ನಿಮ್ಮೂರಲ್ಲಿ ಪ್ರಚಲಿತದಲ್ಲಿರುವ ನಂಬಿಕೆಗಳನ್ನು ಪಟ್ಟಿ ಮಾಡಿರಿ. ಅವುಗಳು ನಂಬಿಕೆಗಳಾಗಿ ಬೆಳೆದು ಬಂದ ಬಗೆಯನ್ನು ವಿಶ್ಲೇಷಿಸಿ ಎಷ್ಟರ ಮಟ್ಟಿಗೆ ವೈಜ್ಞಾನಿಕತೆಯಿಂದ ಕೂಡಿದೆ ಎಂಬುದನ್ನು ಪರಾಮರ್ಶಿಸುವ ಲೇಖನವೊಂದನ್ನು ಬರೆಯಿರಿ.



Downloaded from https:// www.studiestoday.com

Downloaded from https:// www.studiestoday.com

- ಮೂಢನಂಬಿಕೆಯಿಂದ ಪೇಚಿಗೊಳಗಾದ ಘಟನೆಯನ್ನು ಹಿನ್ನೆಲೆಯಾಗಿರಿಸಿಕೊಂಡು ಹಾಸ್ಯಲೇಖನವೊಂದನ್ನು ಸಿದ್ಧಪಡಿಸಿರಿ.
- ವೈಚಾರಿಕ ಪ್ರಬಂಧ ಮತ್ತು ನಗೆಲೇಖನಕ್ಕೆ ಇರುವ ವ್ಯತ್ಯಾಸಗಳ ಬಗ್ಗೆ ನಡೆಸಲಾಗುವ ಚರ್ಚಾಕೂಟದಲ್ಲಿ ಮಂಡಿಸಲು ಅಗತ್ಯವಾದ ಟಿಪ್ಪಣಿಯೊಂದನ್ನು ಬರೆಯಿರಿ.

## ಭಾಷಾಭ್ಯಾಸ

- ಕೆಳಗಿನ ಪದಗಳನ್ನು ಗಮನಿಸಿರಿ.

| 'ಅ' ವಿಭಾಗ | 'ಆ' ವಿಭಾಗ |
|---|---|
| ಸಮಾಜ | ಸಾಮಾಜಿಕ |
| ವಿಜ್ಞಾನ | ವೈಜ್ಞಾನಿಕ |
| ಲೋಕ | ಲೌಕಿಕ |
| ಸಂದರ್ಭ | ಸಾಂದರ್ಭಿಕ |
| ಪರಂಪರೆ | ಪಾರಂಪರಿಕ |
| ಅರ್ಥ | ಆರ್ಥಿಕ |

'ಅ' ವಿಭಾಗದಲ್ಲಿರುವ ಪದಗಳು ನಾಮಪದಗಳು. 'ಆ' ವಿಭಾಗದ ಪದಗಳು ಆಯಾ ನಾಮ ಪದಗಳ ವಿಶೇಷಣ ರೂಪಗಳು. ಇಂತಹ ಪದಗಳನ್ನು ನಿಮ್ಮ ಪಾಠಭಾಗದಿಂದ ಆಯ್ದು ಬರೆಯಿರಿ.

- ಕೆಳಗಿನ ಪದಗಳನ್ನು ಗಮನಿಸಿರಿ.

| ಅ ವಿಭಾಗ | ಆ ವಿಭಾಗ |
|---|---|
| ಅಭಿಮಾನ | ಅಭಿಮಾನಿ |
| ದಾನ | ದಾನಿ |
| ಗುಣ | ಗುಣಿ |
| ಶಾಂತಿ | ಶಾಂತ |
| ಸುಖ | ಸುಖಿ |

'ಅ' ವಿಭಾಗದಲ್ಲಿರುವ ಪದಗಳು ನಾಮಪದಗಳು 'ಆ' ವಿಭಾಗದಲ್ಲಿರುವವುಗಳು ನಾಮವಿಶೇಷಣ ರೂಪಗಳು.



Downloaded from https:// www.studiestoday.com

Downloaded from https:// www.studiestoday.com

ನೀವು ಓದಿದ ಪಾಠಭಾಗಗಳಿಂದ ಇಂತಹ ಪದಗಳನ್ನು ಆರಿಸಿ ಪಟ್ಟಿ ಮಾಡಿರಿ.

- ಕೆಳಗಿನ ಪದಗಳನ್ನು ಗಮನಿಸಿರಿ.

| **ಅ ವಿಭಾಗ** | **ಆ ವಿಭಾಗ** |
|---|---|
| ಸಫಲ | ಸಾಫಲ್ಯ |
| ವಿಫಲ | ವೈಫಲ್ಯ |
| ಸುಂದರ | ಸೌಂದರ್ಯ |
| ಪ್ರವೀಣ | ಪ್ರಾವೀಣ್ಯ |

'ಅ' ವಿಭಾಗದಲ್ಲಿರುವ ಪದಗಳು ವಿಶೇಷಣ ರೂಪಗಳು 'ಆ' ವಿಭಾಗದಲ್ಲಿರುವ ಪದಗಳು ಭಾವನಾಮಗಳಾಗಿವೆ.

ಕೆಳಗಿನ ವಾಕ್ಯಗಳನ್ನು ಗಮನಿಸಿರಿ.

- ಅಧ್ಯಾಪಕರು ವಿದ್ಯಾರ್ಥಿಗಳಿಗೆ ಉತ್ತಮ ಗುಣನಡತೆಯನ್ನು ಕಲಿಸಿಕೊಡುವಲ್ಲಿ ಸಫಲರಾದರು.
  ಅಧ್ಯಾಪಕರು ವಿದ್ಯಾರ್ಥಿಗಳಿಗೆ ಉತ್ತಮ ಗುಣನಡತೆಯನ್ನು ಕಲಿಸಿಕೊಡುವುದರಲ್ಲಿ ಸಾಫಲ್ಯ ಪಡೆದರು.
- ಚಿತ್ರ ಕಲೆಯಲ್ಲಿ ಪ್ರವೀಣನಾದ ಚಿತ್ರಕಾರನು ಸುಂದರವಾದ ರಚನೆಗಳನ್ನು ನಿರ್ಮಿಸಿದನು.
  ಚಿತ್ರಕಲೆಯಲ್ಲಿ ಪ್ರಾವೀಣ್ಯವುಳ್ಳ ಚಿತ್ರಕಾರನು ಸುಂದರವಾದ ರಚನೆಗಳನ್ನು ನಿರ್ಮಿಸಿದನು.

ಮೇಲಿನ ಮಾದರಿಯಂತೆ ಈ ಕೆಳಗಿನ ಪದಗಳನ್ನು ಮತ್ತು ಅವುಗಳ ವಿಶೇಷಣ ರೂಪಗಳನ್ನು ಬಳಸಿಕೊಂಡು ವಾಕ್ಯರಚನೆ ಮಾಡಿರಿ.

- ವಿಜ್ಞಾನ
- ಶಿಕ್ಷಣ

- ಕೆಳಗೆ ಕೊಟ್ಟಿರುವ ನುಡಿಗಟ್ಟುಗಳನ್ನು ಗಮನಿಸಿರಿ.

ತಲೆ ಕೆಡಿಸು, ತಲೆ ತಗ್ಗಿಸು, ತಲೆದೂಗು – ಈ ಪದಗಳಲ್ಲಿ 'ತಲೆ' ಎನ್ನುವ ಪದದ ಜೊತೆ ಸೇರಿದ ಕ್ರಿಯಾಪದಗಳು ಉಂಟುಮಾಡಿದ ಅರ್ಥ ವ್ಯತ್ಯಾಸವನ್ನು ಬರೆಯಿರಿ.



Downloaded from https:// www.studiestoday.com

Downloaded from https:// www.studiestoday.com

# ಮಂಕುತಿಮ್ಮನ ಕಗ್ಗ

*ಡಿ.ವಿ. ಗುಂಡಪ್ಪ*

ಸರ್ವಜ್ಞನ ವಚನಗಳಂತೆ ಮಂಕುತಿಮ್ಮನ ಕಗ್ಗವು ಬಾಳಿಗೆ ದಾರಿದೀಪವಾಗಿದೆ. ಲೋಕಾನುಭವದಿಂದ, ತತ್ವ ಮಂಥನದಿಂದ ಹೊರಹೊಮ್ಮುವ ಮಾತುಗಳು ಪದ್ಯರೂಪವನ್ನು ಪಡೆದು ಕನ್ನಡದ ಜನಮಾನಸಕ್ಕೆ ಹತ್ತಿರವಾಗಿವೆ. ಗಾದೆ ಮಾತುಗಳಂತೆ ಅನುಭವಾಮೃತವಾಗಿ ಜನಜೀವನದ ಒಳಿತನ್ನು ಸೂಚಿಸುತ್ತದೆ...



ಹುಳು ಹುಟ್ಟಿ ಸಾಯುತಿರೆ, ನೆಲಸವೆದು ಕರಗುತಿರೆ ।
ಕಡಲೊಳೆತ್ತಲೋ ಹೊಸದ್ವೀಪವೇಳುವುದು ॥
ಕಳೆಯುತೊಂದಿರಲಲ್ಲಿ, ಬೆಳೆವುದಿನ್ನೊಂದೆಲ್ಲೋ ।
ಅಳಿವಿಲ್ಲ ವಿಶ್ವಕ್ಕೆ – ಮಂಕುತಿಮ್ಮ ॥

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೇ ಜೀವನ ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ ॥

ಉಪ್ಪಿಷ್ಟು ಹುಳಿಯಿಷ್ಟು ಕಾರ ಸಿಹಿಯಷ್ಟಿಷ್ಟು ।
ಒಪ್ಪಿರ್ದೊಡದು ಭೋಜ್ಯವಂತು ಜೀವಿತಮುಂ ॥
ತಪ್ಪು ಸರಿ ಬೆಪ್ಪು ಜಾಣಂದಕುಂದುಗಳ ಬಗೆ ।
ಯಿಪ್ಪತ್ತು ಸೇರೆ ರುಚಿ ಮಂಕುತಿಮ್ಮ ॥

ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು ।
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ ಮಂಕುತಿಮ್ಮ ॥

ಅನುಭವದ ಪಾಲೊಳು ವಿಚಾರ ಮಂಥನವಾಗೆ ।
ಜನಿಯಿಕುಂ ಜ್ಞಾನ ನವನೀತವದೆ ಸುಖದಂ ॥
ಗಿಣಿಯೋದು ಪುಸ್ತಕಜ್ಞಾನ; ನಿನ್ನನುಭವವೆ ।
ನಿನಗೆ ಧರುಮದ ದೀಪ ಮಂಕುತಿಮ್ಮ ॥




Downloaded from https:// www.studiestoday.com

Downloaded from https:// www.studiestoday.com

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ।
ಎಲ್ಲರೊಳಗೊಂದಾಗು ಮಂಕುತಿಮ್ಮ ॥

## ಡಿ.ವಿ. ಗುಂಡಪ್ಪ



ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು 'ಡಿ.ವಿ.ಜಿ.' ಎಂದೇ ಪ್ರಸಿದ್ಧರು. ಇವರು ಸುಧಾರಣವಾದಿಗಳೂ, ಚಿಂತನಶೀಲರೂ, ಪತ್ರಕರ್ತರೂ, ಸಾಮಾಜಿಕ ಕಾರ್ಯಕರ್ತರೂ ಆಗಿದ್ದರು. ಮಂಕುತಿಮ್ಮನ ಕಗ್ಗ, ಮರುಳ ಮುನಿಯನ ಕಗ್ಗ, ಅಂತಃಪುರ ಗೀತೆ, ಉಮರನ ಒಸಗೆ, ಶೃಂಗಾರ ಮಂಗಳಂ ಮುಂತಾದವು ಅವರ ಪದ್ಯ ಕೃತಿಗಳು. ಜೀವನ ಸೌಂದರ್ಯ ಮತ್ತು ಸಾಹಿತ್ಯ, ಬಾಳಿಗೊಂದು ನಂಬಿಕೆ, ಸಂಸ್ಕೃತಿ, ಜ್ಞಾಪಕ ಚಿತ್ರಶಾಲೆ, ಹಲವು ಮಹನೀಯರು ಅವರ ಗದ್ಯ ಕೃತಿಗಳು. ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಹಾಗೂ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿವೆ.

## ಚಟುವಟಿಕೆಗಳು

- ಮೇಲಿನ ಪದ್ಯಗಳ ಸಾರವನ್ನು ಸಂಗ್ರಹಿಸಿ ಬರೆಯಿರಿ.
- ಮಂಕುತಿಮ್ಮನ ಕಗ್ಗದಲ್ಲಿ ವ್ಯಕ್ತವಾಗಿರುವ ಜೀವನ ಮೌಲ್ಯಗಳ ಕುರಿತು ಒಂದು ಕಿರುಲೇಖನ ಬರೆಯಿರಿ.
- 'ಗಿಣಿಯೋದು ಪುಸ್ತಕಜ್ಞಾನ; ಅನುಭವವೇ ಧರ್ಮದ ದೀಪ'– ಈ ಕುರಿತು ನಿಮ್ಮ ಅನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

## ಭಾಷಾಭ್ಯಾಸ

- ಹೊಟ್ಟೆ + ಒಂದು = ಹೊಟ್ಟೆಯೊಂದು, ಮಲ್ಲಿಗೆ + ಆಗು = ಮಲ್ಲಿಗೆಯಾಗು – ಹೀಗೆ ಯಕಾರಾಗಮ ಸಂಧಿಯಾಗುವ ಪದಗಳನ್ನು ಪಾಠಭಾಗಗಳಿಂದ ಆಯ್ದು ಬರೆಯಿರಿ.




Downloaded from https:// www.studiestoday.com

Downloaded from https:// www.studiestoday.com

# ಬಕ

ಎಂ.ಎಸ್.ಕೆ. ಪ್ರಭು

ಏಕಚಕ್ರ ನಗರದ ಜನರ ಬದುಕನ್ನು ಅಲ್ಲೋಲಕಲ್ಲೋಲಮಾಡಿದ ಅತಿಮಾನುಷ ವ್ಯಕ್ತಿ ಬಕ. ಅವನ ಅಮಾನುಷ ಪ್ರವೃತ್ತಿಗೆ ಜನಸಮೂಹ ಕ್ರಿಮಿಗಳಂತೆ ಬಲಿಯಾಗುತ್ತಿದ್ದಾಗ ಪರಿಸ್ಥಿತಿಯ ಲಾಭವನ್ನು ಪಡೆದು ಅಧಿಕಾರ ವರ್ಗದವರು ಬಕಾಸುರರಾಗಿ ಜನರನ್ನು ಹಿಂಡತೊಡಗುತ್ತಾರೆ. ಅತಿಮಾನುಷ ಶಕ್ತಿಸಂಪನ್ನನಾದ ಭೀಮನು ಬಕನನ್ನು ಕೊಂದು ಶಾಂತಿ ನೆಮ್ಮದಿಯನ್ನು ಸ್ಥಾಪಿಸಿದರೂ ಅದನ್ನು ಉಳಿಸಿಕೊಳ್ಳುವ ಶಕ್ತಿಯಾಗಲೀ ಮನೋನಿರ್ಧಾರವಾಗಲೀ ಪ್ರಜೆಗಳಿಗೆ ಇಲ್ಲ. ಪುರಾಣದಲ್ಲಿ ಅಡಗಿರುವ ವರ್ತಮಾನದ ಸತ್ಯ ಹಾಗೂ ಸಮಸ್ಯೆಗಳ ಮೂರ್ತಸ್ವರೂಪವನ್ನು ಈ ನಾಟಕದಲ್ಲಿ ಕಾಣಬಹುದು. ಒಬ್ಬ ಬಕಾಸುರನನ್ನು ಕೊಂದರೂ ಅನೇಕ ಬಕಾಸುರರು ಮತ್ತೆ ಮತ್ತೆ ಹುಟ್ಟಿ ಬರುತ್ತಾರೆ ಎಂಬ ಸಾರ್ವಕಾಲಿಕ ಆಶಯವು ಈ ನಾಟಕದಲ್ಲಿ ಧ್ವನಿಸುತ್ತದೆ.



**ಪಾತ್ರಗಳು :**

ಸೂತ್ರಧಾರ
ಪಾಂಡವರು, ಕುಂತಿ
ಬ್ರಾಹ್ಮಣ, ಅವನ ಕುಟುಂಬ
ಯುವಕರು
ಭಟರು
ಡಂಗುರದವನು
ನಗರಪಾಲಕ
ಅಧಿಕಾರಿ
ವರ್ತಕರು
ಅಪ್ಪ, ಮಗ, ತಾಯಿ
ರೈತ, ಕಕ್ಷಿ, ಪ್ರತಿಕಕ್ಷಿ
ರಾಜ
ಬಕಾಸುರ

## ೧ನೇ ಅಂಕ

### ದೃಶ್ಯ – ೧

ಸೂತ್ರಧಾರ : ಸಭಿಕರಲ್ಲಿ ಸವಿನಯ ವಂದನೆಗಳು.
ಏಕಚಕ್ರನಗರಕ್ಕೆ ನಿಮಗೆಲ್ಲಾ ಸುಸ್ವಾಗತ. ಅರೆ! ಇದೇನು, ತಳಿರುತೋರಣಗಳಿಲ್ಲದೆ, ಮಂಗಳವಾದ್ಯಗಳಿಲ್ಲದೆ, ಸುಖಸಂತೋಷಗಳ ಯಾವುದೇ ಲಕ್ಷಣಗಳಿಲ್ಲದೆ, ಬರೀ ಬರಡು ಮಾತುಗಳಿಂದ ಮಂಗಳಕರವಾಗಿ ಎದುರುಗೊಳ್ಳುತ್ತಿದ್ದೇನೆ?



Downloaded from https:// www.studiestoday.com

Downloaded from https:// www.studiestoday.com

ಹೌದು, ಸಜ್ಜನರು ಕ್ಷಮಿಸಬೇಕು. ನಿಮ್ಮ ಊಹೆ ನಿಜ. ಈ ಊರಿನಲ್ಲಿ ಉತ್ಸಾಹವಿಲ್ಲ. ಆಡುವ ಮಕ್ಕಳ ಹಿತಕರವಾದ ಗದ್ದಲವಿಲ್ಲ. ಹೆಣ್ಣುಮಕ್ಕಳ ಸಂಭ್ರಮವಿಲ್ಲ. ಈ ಊರಿಗೆ ಇಂತಹ ಪರಿಸ್ಥಿತಿ ಎಂದಿನಿಂದಲೂ ಇತ್ತೆಂದಲ್ಲ. ಒಂದು ಕಾಲದಲ್ಲಿ ಇಲ್ಲಿಯ ಜನ ತುಂಬುಜೀವನ ನಡೆಸಿ, ದಾನ ಧರ್ಮಗಳನ್ನು ಯಥೇಚ್ಛವಾಗಿ ಮಾಡಿ, ತಿಂದು, ಕುಡಿದು, ದುಡಿದು, ಅರಗಿಸಿಕೊಂಡು, ಕುಣಿದು, ನಲಿದು ಕಳೆಕಳೆಯಿಂದಿದ್ದರು. ಆದರೆ ಈಗ್ಗೆ ಕೆಲವು ವರ್ಷಗಳಿಂದ ಪರಿಸ್ಥಿತಿ ಬದಲಾಗಿದೆ, ತುಂಬಾ ಬದಲಾಗಿದೆ. ಇಲ್ಲಿಯ ಜನ ಹತಾಶರಾಗಿದ್ದಾರೆ. ಬದುಕಿನಲ್ಲಿ ಅವರಿಗೆ ಯಾವ ಉತ್ಸಾಹವೂ ಇಲ್ಲ. ಕೆಲಸದಲ್ಲಿ ಆಸಕ್ತಿ ಇಲ್ಲ. ಮನೋರಂಜನೆಯಂತೂ ಬೇಡ, ಆ ಮಾತು ಆಡದಿರುವುದೇ ಒಳ್ಳೆಯದು. ದಾನ ಧರ್ಮಾದಿಗಳನ್ನು ಕೈತುಂಬಾ ಮಾಡುವುದಿರಲಿ, ಹೊಟ್ಟೆ ತುಂಬಾ ಉಣ್ಣುವುದಕ್ಕೂ ಅಸಮರ್ಥರಾಗಿದ್ದಾರೆ. ಬಡತನ ತಾಂಡವವಾಡುತ್ತಿದೆ. ಆದರೂ ನಿಶ್ಶಕ್ತ ದೇಹಗಳಿಂದ, ದುಃಖ ಪೂರ್ಣ ಮನಸ್ಸಿನಿಂದ, ಒಂದು ಆಸುರೀಶಕ್ತಿಯ ದಬ್ಬಾಳಿಕೆಗೆ ಒಳಗಾಗಿ ಜನ ದುಡಿಯುತ್ತಿದ್ದಾರೆ. ಅದರಿಂದ ಅವರಿಗೆ ಸಂತೋಷವಿಲ್ಲ, ಸುಖವಿಲ್ಲ. ಆ ದಿನ ಆ ಕರಾಳ ಅಮಾವಾಸ್ಯೆಯ ರಾತ್ರಿ. ಇಲ್ಲಿಗೆ ಬಕಾಸುರನ ಪ್ರವೇಶವಾಯಿತು. ಈ ಏಕಚಕ್ರ ನಗರಕ್ಕೆ ಬಂದವನೆ ಕೈಗೆ ಸಿಕ್ಕಿದವರನ್ನೆಲ್ಲಾ ತಿನ್ನತೊಡಗಿದ. ಇದು ಹೀಗೆಯೇ ಮುಂದುವರಿಯಿತು. ಏಕಾಏಕಿ ಬಂದ ವಿಪತ್ತನ್ನು ಎದುರಿಸಲಾರದ ಜನ ಭಯಕಂಪಿತವಾಯಿತು. ನಗರ ರಕ್ಷಕ ದಳದವರು ಬಕಾಸುರನನ್ನು ಎದುರಿಸಲು ಹೋಗಿ ಸೋತು ಪೆಟ್ಟುತಿಂದು ಹಿಂತಿರುಗಿ ನೋಡದೆ ಓಡಿ ಬಂದರು. ಅದರಲ್ಲಿ ಕೆಲವರನ್ನು ಬಕಾಸುರ ಹಿಡಿದು ತಿಂದು ಹಾಕಿದ. ಈ ಸೋಲಿನ ನಂತರ ಬಕಾಸುರನನ್ನು ಇಲ್ಲಿಂದ ಓಡಿಸುವ ಮಾತೇ ಇಲ್ಲದಂತಾಯಿತು. ಪ್ರಾಣಭಯದಿಂದ ನಿರ್ವೀರ್ಯರಾದ ಜನರನ್ನು ಬಕಾಸುರ ಅನೇಕ ವಿಧಗಳಲ್ಲಿ ಹಿಂಸಿಸತೊಡಗಿದ. ರಾಜನ ಬಳಿಗೆ ಜನರ ಅಹವಾಲು ಬಂತು. ತನ್ನ ಪ್ರಜೆಗಳನ್ನು



Downloaded from https:// www.studiestoday.com

Downloaded from https:// www.studiestoday.com

ರಾಕ್ಷಸನ ಬಾಯಿಂದ ಪಾರುಮಾಡುವುದು ಸಾಧ್ಯವಿಲ್ಲವೆಂದು ತಿಳಿದು ತನ್ನ ಅಸಹಾಯಕತೆಗೆ ತಾನೇ ಮರುಗಿದ. ಬಕಾಸುರನನ್ನು ಕಂಡು ಅವನೊಂದಿಗೆ ಒಂದು ಶಾಂತಿ – ಒಪ್ಪಂದವನ್ನು ಮಾಡಿಕೊಳ್ಳದೆ ಬೇರೆ ವಿಧಿಯಿಲ್ಲವೆಂದು ರಾಜ ಯೋಚಿಸಿದ. ಬಲಪ್ರಯೋಗದ ಅನರ್ಥವು ಅವನಿಗಾಗಲೇ ಚನ್ನಾಗಿ ಮನದಟ್ಟಾಗಿತ್ತು. ಕ್ಷೋಭೆಗೊಳಗಾದ ಜನರನ್ನೂ ಅದಮನೀಯ ಪಿಡುಗಾದ ರಾಕ್ಷಸನನ್ನೂ ಯಾವುದಾದರೊಂದು ಬಗೆಯಲ್ಲಿ ಬಂಧಿಸಿ, ತನ್ನ ಅಧಿಕಾರವು ಸುರಕ್ಷಿತವಾಗಿ ಉಳಿಯುವ ಒಂದು ಅಪೂರ್ವ ಯೋಜನೆಯೊಂದಿಗೆ, ರಾಜ ಬಕಾಸುರನನ್ನು ಭೇಟಿಯಾಗಲು ಬಂದ.

## ೨ನೇ ದೃಶ್ಯ

*ರಾಜ, ನಗರಪಾಲಕ, ಇಬ್ಬರು ಕಾವಲುಭಟರ ಪ್ರವೇಶ. ನಗರಪಾಲಕನ ಕೈಲಿ ಬಿಳಿ ಬಾವುಟ ಇದೆ.*

ನಗರಪಾಲಕ : ಇಗೋ ನೋಡಿ ಮಹಾಸ್ವಾಮೀ , ಅಲ್ಲಿ ಕಾಣುತ್ತಲ್ಲ ಗುಡ್ಡ, ಅದರ ಬುಡದಲ್ಲಿರೋ ಗುಹೇಲಿರ್ತಾನೆ ಬಕಾಸುರ

ರಾಜ : ಹತ್ತಿರ ಹೋಗೋದ್ರಿಂದ ನಮಗೇನೂ ಅಪಾಯ ಇಲ್ಲ ತಾನೇ?

ನಗರಪಾಲಕ : ನಾವು ಅವನ ಜೊತೆ ರಾಜಿ ಮಾಡಿಕೊಳ್ಳೋಕೆ ಬಂದಿದೀವಿ ಅನ್ನೋದನ್ನ ಅವನಿಗೆ ಮೊದಲೇ ತಿಳಿಸಿಬಿಟ್ರೆ ಏನೂ ಅಪಾಯ ಇಲ್ಲಾಂತ ಕಾಣುತ್ತೆ.

ರಾಜ : ಹಾಗಂತೀಯಾ? .. ಅಂದ್ಹಾಗೆ, ನನ್ನ ಯೋಜನೆ ಹ್ಯಾಗಿದೆ? ಒಪ್ಪಿಕೋತಾನೆ ಅಂತ ಅನ್ಸುತ್ತಾ ನಿಂಗೆ?

ನಗರಪಾಲಕ : ನಿಮ್ಮ ಯೋಜನೆ ಪ್ರಚಂಡವಾಗಿದೆ. ಮಹಾಸ್ವಾಮೀ.. ಒಪ್ಪಿಕೊಳ್ಳದೆ ಏನು, ಅವನಪ್ಪ ಒಪ್ಪಿಕೊಂಡಾನು. ಆದ್ರೇ..

ರಾಜ : ಏನು ಆದ್ರೇ? ಯಾಕೆ ಸಂಶಯ ಪಡ್ತಿದೀ?.. ಅಷ್ಟರಲ್ಲೇ ನಮ್ಮ ಮೇಲೆ ಬಿದ್ ಬಿಡ್ತಾನೆ ಅಂತ ಹೆದರಿಕೇನಾ?

ನಗರಪಾಲಕ : ಅಲ್ಲಾ ಸ್ವಾಮೀ, ಬಕಾಸುರ ಏನೋ ಒಪ್ಪಿಕೋಬಹುದು. ಆದ್ರೆ ನಮ್ಮ ಪ್ರಜೆಗಳೂ..



Downloaded from https:// www.studiestoday.com

Downloaded from https:// www.studiestoday.com

ರಾಜ : ಪ್ರಜೆಗಳು? ಅವರ್ದೇನು ತಕರಾರು? ಅವರಿಗಾಗ್ಲೇ ಗೊತ್ತಾಗಿದ್ಯೇ?

ನಗರಪಾಲಕ : ಉಹುಂ. ಇನ್ನೂ ಯಾರಿಗೂ ಗೊತ್ತಿಲ್ಲ. ನಾಳೆ ವಿಷ್ಯ ತಿಳಿದಮೇಲೆ..

ರಾಜ : ತಿಳಿದಮೇಲೆ ಏನ್ಮಾಡ್ತಾರೆ?

ನಗರಪಾಲಕ : ಅವರೇನಾದ್ರೂ ಮಾಡ್ತಾರೇಂತ ಅಲ್ಲ.. ಆದ್ರೂ..ಬಕಾಸುರನ ಜೊತೆ ಒಪ್ಪಂದ ಮಾಡ್ಕೊಳ್ಳೋಕೆ ಮೊದಲು, ಪ್ರಜೆಗಳನ್ನ ಒಂದ್ಮಾತು ಕೇಳಿಬಿಟ್ಟಿದ್ರೆ..

ರಾಜ : ಪ್ರಜೆಗಳನ್ನೇನು ಕೇಳೋದು ಮಣ್ಣು! ಇದೆಲ್ಲಾ ರಾಜಕಾರಣ ಅವರಿಗೇನು ಅರ್ಥವಾಗುತ್ತೆ?

ನಗರಪಾಲಕ : ಅಲ್ಲಾ! ನೀವು ಹೇಳೋದೇನೋ ಸರಿ, ಆದ್ರೂ..

ರಾಜ : ನೀನೊಬ್ಬ ದಡ್ಡ! ಪ್ರಜೆಗಳನ್ನ ಕೇಳ್ತಾಹೋದರೆ ಕೊನೆ ಮೊದಲಿಲ್ಲ. ಅದು ಮಾಡ್ಲೇ ಇದು ಮಾಡ್ಲೇ ಅಂತ ಎಲ್ಲಾರನ್ನೂ ಕೇಳ್ತಾ ಇದ್ರೆ, ರಾಜ ಅಂತ ನಾವ್ಯಾಕೆ ಇಲ್ಲಿರೋದು? ಅದೂ ಅಲ್ದೆ ಸಾವಿರ ಜನ ಸಾವಿರ ಅಭಿಪ್ರಾಯ ಕೊಡ್ತಾರೆ. ಅದನ್ನೆಲ್ಲಾ ಕೇಳ್ಕೊಂಡು ನಾವೇನೂ ಮಾಡೋ ಹಾಗೇ ಇರೋಲ್ಲ. ಜನಾಭಿಪ್ರಾಯ, ಮಣ್ಣು ಮಸಿ ಅಂತ ತಲೆ ಕೆಡಿಸಿಕೊಂಡಿದ್ರೆ ನಮ್ಮ ಅಧಿಕಾರ ಉಳಿಯೋದೇ ಕಷ್ಟ. ನೀನೂ ಈ ಸೂಕ್ಷ್ಮಾನ ಚನ್ನಾಗಿ ತಿಳ್ಕೊ. ನಾಳೆ ನಮ್ಮ ಯೋಜನೆ ಜಾರಿಗೆ ಬಂದಾಗ ಅಧಿಕಾರ ನಡೆಸೋಕೆ, ಎಲ್ಲಾ ಸುಸೂತ್ರವಾಗಿ ನಡ್ಯೋದಕ್ಕೆ ಉಪಯೋಗ ಆದೀತು. ಇಲ್ದಿದ್ರೆ ನೀನು ತಲೆಹರಟೆ ಮಾಡೋಕೆ ಹೊರಟ್ರೆ ಬೇರೆ ನಗರಪಾಲಕನ್ನ ನೇಮಿಸಬೇಕಾದೀತು, ಜೋಕೆ!

ನಗರಪಾಲಕ : ಕ್ಷಮಿಸಬೇಕು ಮಹಾಸ್ವಾಮಿ, ತಾವು ಹೇಳಿದ ಹಾಗೆ ಕೇಳ್ಕೊಂಡು ಬಿದ್ದಿರೋ ಗುಲಾಮ ನಾನು!

ರಾಜ : ನಿನ್ನ ಬುದ್ಧೀನ ಉಪಯೋಗಿಸಿ, ಪ್ರಜೆಗಳು ಇದನ್ನೊಪ್ಪಿ ಕೊಳ್ಳುವಂತೆ ಮಾಡೋದು ನಿನ್ನ ಜವಾಬ್ದಾರಿ.. ಸರಿ ಸರಿ, ಸಾಕು ಮಾತು. ಬಕಾಸುರನ್ನ ಕರೆಸು ಇಲ್ಲಿ.

ನಗರಪಾಲಕ : ಕ್ಷಮಿಸಬೇಕು..

ರಾಜ : ಯಾಕೆ ಹೆದರ್ತೀಯಾ, ಏನೂ ಅಪಾಯ ಇಲ್ಲಾಂತ ನೀನೇ ಹೇಳ್ದೆ?



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ನಗರಪಾಲಕ | : | ಹೌದು, ಆದ್ರೆ ಈಗ ರಾಕ್ಷಸ ನಿದ್ದೆ ಮಾಡ್ತಾ ಇರ್ತಾನೆ. ಎಚ್ಚರ ಮಾಡಿದ್ರೆ ಅವನಿಗೆ ಕೋಪ ಬರಬಹುದು. ಅದೂ ಅಲ್ಲದೆ, ಅವನನ್ನ ಹೇಗೆ ಎಚ್ಚರ ಮಾಡೋದು ಅನ್ನೋ ಪ್ರಶ್ನೇನೂ ಇದೆ. |
| ರಾಜ | : | ಎಂಥಾ ನಿಷ್ಪ್ರಯೋಜಕನಯ್ಯಾ ನೀನು! |
| ನಗರಪಾಲಕ | : | ಕ್ಷಮಿಸಬೇಕು ಮಹಾಸ್ವಾಮಿಗಳು.. |
| ರಾಜ | : | ನೀನೊಬ್ಬ ಹೇಡಿ, ಅಷ್ಟೆ! |
| ನಗರಪಾಲಕ | : | ಮಹಾಸ್ವಾಮಿಗಳು ತಪ್ಪು ತಿಳಿಯಬಾರದು, ನಾನು ತಮ್ಮ ಪಾದಸೇವಕ. |
| ರಾಜ | : | ಹಾಗಾದ್ರೆ ರಾಕ್ಷಸನ್ನ ಎಬ್ಬಿಸು! |
| ನಗರಪಾಲಕ | : | ಅದೇ ಯೋಚಿಸ್ತಿದ್ದೀನಿ ಮಹಾಸ್ವಾಮೀ, ಆದ್ರೆ ಹೇಗೇಂತ ತಿಳೀತಿಲ್ಲ. |
| ರಾಜ | : | ತಲೆ ಓಡಿಸು, ಇದ್ರೆ. |
| ನಗರಪಾಲಕ | : | ಹೆ ಹೆ ಹೆ.. *(ಯೋಚಿಸುವ ಭಂಗಿಯಲ್ಲಿ ನಿಂತು, ಭಟರಿಬ್ಬರನ್ನೂ ನೋಡುತ್ತಾನೆ.)* ಹಾಂ! ಹೊಳೀತು! ಲೇ ಇವನೇ, ಬಾ ಇಲ್ಲಿ! *(ಒಬ್ಬ ಭಟ ನಗರಪಾಲಕನ ಹತ್ತಿರ ಬರುತ್ತಾನೆ. ನಗರಪಾಲಕ ಬಾವುಟವನ್ನು ಅವನ ಕೈಗೆ ಕೊಡುತ್ತಾನೆ.)* ನೋಡಲ್ಲಿ, ಆ ಗುಹೇಹತ್ರ ನಿಂತ್ಕೊಂಡು, 'ಬಕಾಸುರ ! ಮಹಾರಾಜರು ನಿನ್ನ ನೋಡೋಕೆ ಬಂದಿದ್ದಾರೆ' ಅಂತಾ ಜೋರಾಗಿ ಕೂಗಿ ಹೇಳು ನೋಡೋಣ! |
| ಭಟ | : | ಅಪ್ಪಣೆ! *(ಮತ್ತೊಬ್ಬ ಭಟನ ಕೈಹಿಡಿದು)* ಬಾ ಹೋಗೋಣ. *(ಇಬ್ಬರೂ ಸ್ವಲ್ಪ ದೂರ ಹೋಗುತ್ತಾರೆ. ಅನಂತರ ಒಬ್ಬರನ್ನೊಬ್ಬರು ನೋಡುತ್ತಾರೆ. ಆಮೇಲೆ ರಾಜ ಮತ್ತು ನಗರಪಾಲಕನನ್ನು ನೋಡುತ್ತಾರೆ.)* |
| ಮತ್ತೊಬ್ಬ ಭಟ | : | ಆ ಕೆಲ್ಸ ನಿಂಗೇಳಿದ್ದು, ನಾ ಬರಾಕಿಲ್ಲ. |
| ಭಟ | : | ಏ ಬಾರಯ್ಯಾ, ಇರ್ಲಿ. |
| ಮತ್ತೊಬ್ಬ ಭಟ | : | ಅದೆಲ್ಲ ಆಗಾಕಿಲ್ಲ. ನಿಂಗೇಳಿದ್ ಕೆಲ್ಸ ನೀನೇ ಮಾಡ್ಬೇಕು. ನಂಗೇಳಿದ್ ಕೆಲ್ಸ ನಾ ಮಾಡ್ತೀನಿ. |
| ಭಟ | : | ಇಬ್ರಿಗೂ ಏಳಿದ್ದು. ಬಾ ಅಂದ್ರೆ! |



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ಮತ್ತೊಬ್ಬ ಭಟ | : | ಏನಿಲ್ಲಾ, ನಿಂಗೇ ಏಳಿದ್ದು. ನಂಗೇನಲ್ಲ. ನಂಗೇನ್ ಗ್ರಾಚಾರಾನಾ ಬಕಾಸುರನ ಬಾಯ್ಗೆ ಓಗಾಕೆ. ನಾ ಬರಾಕಿಲ್ಲ. ಏನಾರ ಮಾಡ್ಕೊ ಓಗು! |
| ಭಟ | : | ಲೇ ಹೈದಾ, ಏಟೊಂದು ಮಾತಾಡ್ತಿಯಲೇ ನೀನು. ನೀನುಟ್ಟುಕ್ ಮುಂಚಿಂದಾ ನಾ ಅರ್ಮನೇಲಿ ಕೆಲ್ಸ ಮಾಡ್ತಿದೀನಿ ಗೊತ್ತಾ? |
| ಮತ್ತೊಬ್ಬ ಭಟ | : | ಇರಬೈದು, ನಾ ಬರಾಕಿಲ್ಲ ಬರಾಕಿಲ್ಲ ಬರಾಕಿಲ್ಲ! ಅಷ್ಟೇ. |
| ಭಟ | : | ಮಾಸ್ವಾಮಿಗಳಿಗೆ ಏಳ್ತೀನಿ, ನೋಡು! |
| ರಾಜ | : | ಏನದು ನಿಮ್ಮ ತಿಕ್ಕಾಟ! ಥೂ., ಇಂಥಾ ಪ್ರಜೆಗಳ ರಾಜ ಅನ್ನಿಸಿಕೊಳ್ಳೋಕೆ ನಮಗೆ ನಾಚಿಕೆ. ಸ್ವಲ್ಪವಾದ್ರೂ ನಿಯತ್ತಿಲ್ಲ... ಹೆದರಿಕೆ! ನಿಮ್ಮ ಕರ್ತವ್ಯ ಮಾಡಬೇಕು ಅನ್ನೋ ಶಿಸ್ತು ಕೂಡಾ ಇಲ್ದಿರೋ ನಿಮ್ಮನ್ನ ರಕ್ಷಿಸೋಕೆ ನಾವಾದ್ರೂ ಯಾಕೆ ಪ್ರಯತ್ನಪಡಬೇಕು! ರಾಕ್ಷಸನ ಬಾಯಿಗೆ ಸಿಕ್ಕೊಂಡು ಚಟ್ನಿ ಆಗಿ, ನಾವು ಅರಮನೆಗೆ ಹೋಗ್ತೀವಿ! |
| ನಗರಪಾಲಕ–ಭಟರು | : | ಮಹಾಸ್ವಾಮಿಗ್ಳೇ, ತಪ್ ತಿಳೀಬಾರ್ದು, ದಾಸರನ್ನ ಕ್ಷಮಿಸಬೇಕು! |
| ರಾಜ | : | *(ವಿಕಟ)* ಹುಂ... ನಿಮ್ಮ ದಾರಿ ನಿಮಗೆ... |

ಇದುವರೆಗೂ ಮೂಲೆಯಲ್ಲಿ ಕೂತಿದ್ದ ಸೂತ್ರಧಾರನ ಪ್ರವೇಶ

| | | |
|---|---|---|
| ಸೂತ್ರಧಾರ | : | ಮಹಾರಾಜರ ಅಪ್ಪಣೆಯಾಗಲಿ, ನಾನು ಹೋಗಿ ಬಕಾಸುರನ್ನ ಎಚ್ಚರ ಮಾಡ್ತೀನಿ. ತಾವು ಬಂದಿರೋ ಸಂಗತಿ ತಿಳಿಸ್ತೀನಿ. |
| ರಾಜ | : | ನೀನು! |
| ಭಟರು | : | ದೇವರು ನಿನ್ನೊಟ್ಟೇನ ತಣ್ಣಗಿಟ್ಟಿರ್‍ಲಿ! |
| ನಗರಪಾಲಕ | : | ನಿಂಗೆ ಅವನ ಪರಿಚಯ ಇರೋ ಹಾಗೆ ಮಾತಾಡ್ತೀಯ? ಹೆದರಿಕೆ ಆಗುಲ್‌ವಾ? |
| ಸೂತ್ರಧಾರ | : | ನಾನು ಸೂತ್ರಧಾರ, ನಂಗೆ ಎಲ್ಲರ ಪರಿಚಯವೂ ಇದೆ. ಅವನು ನನ್ನನ್ನೇನೂ ಮಾಡಲಾರ. ಯಾಕೇಂದ್ರೆ ನಾನು ನಾಟಕದ ಒಳಗೂ ಇರ್ತೀನಿ, ಹೊರಗೂ ಇರ್ತೀನಿ. |



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ರಾಜ | : | ಸರಿ, ಹಾಗಾದ್ರೆ ಹೋಗು. ನಾವು ಬಂದಿರೋ ಸಂಗತಿ ತಿಳಿಸಿ, ಅವನ ಜೊತೆ ಶಾಂತಿ – ಒಪ್ಪಂದ ಮಾಡ್ಕೋಬೇಕೂಂತಿರೋ ವಿಚಾರ ತಿಳಿಸು. |
| ಸೂತ್ರಧಾರ | : | ಆಗಲಿ ಮಹಾಸ್ವಾಮಿ! *(ರಂಗದ ಹಿಂಬದಿಯ ಒಂದು ಮೂಲೆಗೆ ಬಂದು ನೆರಳಿನ ಪರದೆಯ ಮುಂಭಾಗದಲ್ಲಿ ನಿಂತು ಕೂಗುತ್ತಾನೆ.)* ಓ! ಬಕಾಸುರಾ! ಬಕಾಸುರಾ! ಮಹಾರಾಜರು ನಿನ್ನ ನೋಡೋಕೆ ಬಂದಿದಾರೆ. *(ತೆರೆಯು ಹಿಂದೆ, ಜೋರಾಗಿ ಆಕಳಿಸಿ ಮೈಮುರಿಯುತ್ತಾ 'ಉಂ' ಎಂದು ಗಡುಸಾಗಿ ಮಾಡಿದ ಶಬ್ದ. ಬಕಾಸುರನ ನೆರಳು ಪರದೆಯ ಮೇಲೆ ಬೀಳುತ್ತದೆ.)* |
| ಬಕಾಸುರ | : | ಯಾರೂ? ಏನಂತೆ, ಒಪ್ಪಂದ? |
| ರಾಜ | : | *(ಮುಂದೆ ಬಂದು)* ಬಕಾಸುರ! ನಾವು ಮಹಾರಾಜರು ಬಂದಿದೀವಿ. |
| ಬಕಾಸುರ | : | ಏನ್ ತಂದಿದೀಯ? ನಂಗೆ ಹೊಟ್ಟೆ ಹಸೀತಾ ಇದೆ.! |
| ರಾಜ | : | ಅದೇ ವಿಚಾರ ನಿನ್ನ ಹತ್ರ ಸ್ವಲ್ಪ ಮಾತಾಡೋಣಾಂತ... |
| ಬಕಾಸುರ | : | ಮಾತು ಗೀತು ಎಲ್ಲಾ ಬೇಡ. ನಂಗೆ ಹಸಿವಾಗ್ತಾ ಇದೆ. |
| ರಾಜ | : | ಅದೇ, ನಿನಗೆ ಆಹಾರ ಒದಗಿಸೋ ಜವಾಬ್ದಾರಿ ನಮಗಿರಲಿ ಅಂತ ಹೇಳೋಣಾಂತ ಬಂದ್ವು. |
| ಬಕಾಸುರ | : | ಶಭಾಶ್! ಎಲ್ಲಿ, ಏನ್ ತಂದಿದೀಯ ತೆಗಿ, ನೋಡೋಣ! ನಿನ್ನೆ ತಿಂದಿದ್ ಸಾಕಾಗ್ಲಿಲ್ಲ. ಯಾವನೋ ಒಬ್ಬ ಮುದುಕ ಕೈಗೆ ಸಿಕ್ದ– ಬರೀ ಮೂಳೆ–ಕಡ್ಡೂ ಕಡ್ಡೂ ಬಾಯೆಲ್ಲ ನೋವು. |
| ರಾಜ | : | ನಿಂಗೆ ಆಹಾರ ಸರ್ಯಾಗಿ ಸಿಕ್ತಿಲ್ಲಾಂತ ವರ್ತಮಾನ ಬಂತು. ಅದಕ್ಕೇ ಏನಾದ್ರೂ ವ್ಯವಸ್ಥೆಮಾಡಿ ಹೋಗೋಣಾಂತ... |
| ಬಕಾಸುರ | : | ಒಳ್ಳೇದು.. ಏನು ವ್ಯವಸ್ಥೆ? |
| ರಾಜ | : | ನೀನು ಇನ್ಮೇಲೆ ಆಹಾರ ಹುಡುಕಿಕೊಂಡು ಊರೊಳಗೆ ಬರೋ ಅವಶ್ಯಕತೆ ಇಲ್ಲ. |
| ಬಕಾಸುರ | : | ಅಂದ್ರೇ? |
| ರಾಜ | : | ನೀನಿರೋ ಜಾಗಕ್ಕೇ ದಿನಾ ನಿನಗೆ ಬೇಕಾದಷ್ಟು ಆಹಾರ ಕಳಿಸ್ತೀವಿ! |
| ಬಕಾಸುರ | : | ಶಾಭಾಷ್! ಮನುಷ್ಯರು ಬುದ್ಧಿವಂತರಾಗ್ತಿರೋ ಲಕ್ಷಣ ಕಾಣಿಸ್ತಿದೆ! |



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ರಾಜ | : | ನಿಂಗೆ ಬೇಕಾದ ಆಹಾರ ನಾವು ಕೊಡ್ತೀವಿ. ನೀನು ನಿನ್ನ ಗುಹೇಲಿ ಆರಾಮವಾಗಿರು.. ಊರೊಳಕ್ಕೆ ಬಂದು.. ಆಹಾರ ಹುಡ್ಕೋ ಶ್ರಮ ತಗೋಬೇಡ. |
| ಬಕಾಸುರ | : | ಜನರನ್ನ ಪೀಡಿಸಬೇಡ ಅನ್ನೋದನ್ನ ಎಷ್ಟು ನಯವಾಗಿ ಹೇಳ್ತಿದಿ, ಅಲ್ವಾ? |
| ರಾಜ | : | ಉಹೂಂ.. ಹಾಗೇನೂ ಅಲ್ಲ – ಮಕ್ಕಳು, ಮರಿ, ಹೆಂಗಸ್ರು, ನಿಂಗೊತ್ತಲ್ಲಾ, ಇಲಿ ಬಂದ್ರೆ ಹುಲಿ ಬಂತೂ ಅಂತ ಬೆಚ್ಚಿಬೀಳ್ತಾರೆ. . . |
| ಬಕಾಸುರ | : | ಏನೋ! ನನ್ನ ಇಲಿ ಅಂತೀಯಾ? |
| ರಾಜ | : | *(ಹೆದರಿ)* ಛೆ ಛೇ, ನಿನ್ನ ಇಲಿ ಅನ್ಲಿಲ್ಲಾ.. ನಿನ್ನಂಥಾ ಶೂರ, ಪರಾಕ್ರಮಿ ನಮ್ಮ ರಾಜ್ಯದಲ್ಲಿದ್ರೆ ನಮಗೆ ಶತ್ರುಗಳ ಕಾಟ ಇಲ್ಲ, ಕಳ್ಳಕಾಕರ ಭಯಾ ಇಲ್ಲ.. ನೀನೊಬ್ಬ ಇದ್ರೆ. . . |
| ಸೂತ್ರಧಾರ | : | *(ಪ್ರೇಕ್ಷಕರ ಮುಂದೆ ಬಂದು)* ಎಲ್ಲಾ ಇದ್ದ ಹಾಗೇ! |
| ಬಕಾಸುರ | : | ನಾನಿರೋ ಕಡೆ ಬೇರೆ ಕಳ್ರು ಯಾರಿರೋಕೆ ಸಾಧ್ಯ! ಶತ್ರುಗಳು, ಕ್ರೂರಮೃಗಗಳು.. |
| ಸೂತ್ರಧಾರ | : | ಎಲ್ಲಾ ನೀನೇ! |
| ಬಕಾಸುರ | : | ಯಾರೂ ಈ ಕಡೆ ತಲೆ ಹಾಕೋ ಧೈರ್ಯ ಮಾಡೊಲ್ಲ. |
| ರಾಜ | : | ಹಾಗಾದ್ರೆ ಒಪ್ಪಿಗೆ ತಾನೆ? |
| ಬಕಾಸುರ | : | ಏನು? |
| ರಾಜ | : | *(ನಗರಪಾಲಕನಿಗೆ)* ಎಲ್ಲಿ, ಬರೆದು ತಂದಿರೋ ಒಪ್ಪಂದದ ಪತ್ರಾನ ಕೊಡು. ಬಕಾಸುರಂಗೆ. *(ನಗರಪಾಲಕ ಪತ್ರವನ್ನು ತೆರೆಯ ಕೆಳಗೆ ತೂರಿಸುತ್ತಾನೆ.)* |
| ಬಕಾಸುರ | : | *(ಪತ್ರವನ್ನು ವಾಪಸ್ಸು ರಂಗದ ಮೇಲೆ ತಳ್ಳಿ)* ಅದೇನ್ ಬರ್ದಿದೀಯೋ ಓದಿ ಹೇಳು! ನಗರಪಾಲಕ ಪತ್ರವನ್ನೆತ್ತಿಕೊಂಡು ರಾಜನನ್ನು ನೋಡುತ್ತಾನೆ. ರಾಜ 'ಓದು' ಎಂದು ಸನ್ನೆ ಮಾಡುತ್ತಾನೆ. |
| ನಗರಪಾಲಕ | : | *(ಓದುತ್ತಾನೆ)*'ರಾಕ್ಷಸ ಸಂವತ್ಸರದ ಆಷಾಢ ಬಹುಳ ಅಮಾವಾಸ್ಯೆಯಾದ ಇಂದು ಏಕಚಕ್ರನಗರದ ಮಹಾರಾಜರಿಗೂ, ಅನುಪಮ ಪರಾಕ್ರಮಿ ಬಕಾಸುರನಿಗೂ ಆದ ಶಾಂತಿ |



Downloaded from https:// www.studiestoday.com

Downloaded from https:// www.studiestoday.com

ಒಪ್ಪಂದವೇನೆಂದರೆ — ಒಂದು, ಏಕಚಕ್ರನಗರದ ಪ್ರಜೆಗಳು ಪ್ರತಿ ದಿನವೂ ಬಕಾಸುರನಿಗೆ ಅವನ ಗುಹೆಯ ಬಳಿ ಆಹಾರ ಒದಗಿಸುವುದು. ಎರಡು..

ಬಕಾಸುರ : ಸುಮ್ಮನೆ ಆಹಾರ ಅಂದ್ರೆ? ಕಡೇ ಪಕ್ಷ ಒಬ್ಬ ಮನುಷ್ಯ, ಎರಡು ಕೋಳಿ, ಒಂದು ಬಂಡಿ ತುಂಬಾ ಅನ್ನ, ಸಾರು, ಸಾಂಬಾರು, ತುಪ್ಪ, ಉಪ್ಪಿನಕಾಯಿ, ಹಪ್ಪಳ, ಚಟ್ನಿಪುಡಿ ಇತ್ಯಾದಿ.. ಇತ್ಯಾದಿ ಅಂದ್ರೆ ಗೊತ್ತು ತಾನೇ? ಕಳ್ಳು, ಸೇರ್ಸು ಪತ್ರದಲ್ಲಿ, ಎರಡು ಗಡಿಗೆ ಕಳ್ಳು.. ನಗರಪಾಲಕ ರಾಜನ ಕಡೆ ನೋಡುತ್ತಾನೆ. ರಾಜ ಒಪ್ಪಿಗೆ ಕೊಡುತ್ತಾನೆ.

ನಗರಪಾಲಕ : ಹ ಹ್ಹ.. ನಂಗೊತ್ತಿಲ್ವೇ, ಸರ್ಯಾಗಿ ಹೇಳಿದೆ.. ಇಗೋ ಸೇರಿಸಿದೆ (ಬರೆಯುತ್ತಾನೆ) 'ಕಡೇ ಪಕ್ಷ ಒಬ್ಬ ಮನುಷ್ಯ, ಎರಡು ಕೋಣ'


ಬಕಾಸುರ : ಒಂದು ಬಂಡಿ ತುಂಬಾ ಅನ್ನ.

ನಗರಪಾಲಕ : 'ಒಂದು ಬಂಡಿ ತುಂಬಾ ಅನ್ನ, ಸಾರು, ಸಾಂಬಾರು..'

ಬಕಾಸುರ : ತುಪ್ಪಾ?

ನಗರಪಾಲಕ : 'ತುಪ್ಪಾ, ಉಪ್ಪಿನಕಾಯಿ, ಹಪ್ಪಳ, ಇತ್ಯಾದಿ; ಅಂದ್ರೆ ಎರಡು ಗಡಿಗೆ ಕಳ್ಳು ಒದಗಿಸುವುದು'

ಬಕಾಸುರ : ಚಟ್ನಿಪುಡಿ?





Downloaded from https:// www.studiestoday.com

Downloaded from https:// www.studiestoday.com

ನಗರಪಾಲಕ : ಹಾಂ! 'ಚಟ್ನಿಪುಡಿ ಇತ್ಯಾದಿ.. ಒದಗಿಸುವುದು; ಎರಡು, ಇದಕ್ಕೆ ಬದಲಾಗಿ ಬಕಾಸುರನು...'

ಬಕಾಸುರ : ಬದಲಾಗಿ ನಾನೇನು ಮಾಡಬೇಕು?

ರಾಜ : ಏನೂ ಇಲ್ಲ, ಅದೇ ಆಗ್ಲೇ ಹೇಳಿದ್ನೆಲ್ಲಾ, ಕಳ್ಳಕಾಕರು, ಶತ್ರುಗಳು ಬರದಹಾಗೆ..

ಬಕಾಸುರ : ಓ, ಹಾಗೋ! ಸರಿ ಸರಿ.

ನಗರಪಾಲಕ : 'ಬದಲಾಗಿ ಬಕಾಸುರನು ನಗರವನ್ನು ಕಳ್ಳಕಾಕರಿಂದಲೂ, ದುಷ್ಟಪ್ರಾಣಿಗಳಿಂದಲೂ ರಕ್ಷಿಸಿಕೊಂಡು ಬರಬೇಕು. ಮೂರು, ಆಹಾರದ ಸಲುವಾಗಿ ಬಕಾಸುರನು ನಗರದೊಳಕ್ಕೆ ಬರುವ ಶ್ರಮವನ್ನು ತೆಗೆದುಕೊಳ್ಳಬಾರದು' ಇಷ್ಟೆ. ಮಹಾರಾಜರ ಅಂಕಿತ ಇದೆ. ನೀನು ರುಜು ಹಾಕಿದ್ರೆ ಮುಗೀತು. *(ತೆರೆಯ ಕೆಳಗೆ ಪತ್ರವನ್ನು ತೂರುತ್ತಾನೆ.)*

*ಎಲ್ಲರೂ ತದೇಕಚಿತ್ತರಾಗಿ ಬಕಾಸುರನನ್ನೇ ನೋಡುತ್ತಿರುತ್ತಾರೆ. ಬಕಾಸುರ ಪತ್ರವನ್ನು ವಾಪಸ್ಸು ತಳ್ಳುತ್ತಾನೆ.*

ಬಕಾಸುರ : ತಗೊ, ನಂದೂ ಒಂದೆರಡು ಮಾತು ಸೇರ್ಸು, ಪತ್ರಕ್ಕೆ.

ರಾಜ : *(ಚಕಿತನಾಗಿ)* ಏನು, ಏನ್ ಸೇರಿಸಬೇಕು? ನಿನಗೆ ಒಪ್ಪಿಗೆ ಇಲ್ಲವೇ ನಮ್ಮ ಏರ್ಪಾಟು.

ಬಕಾಸುರ : ಬರ್ಕೊ. ನಾಲ್ಕು, ಎಂದಾದ್ರೂ ಒಂದಿನ ಈ ಮೇಲ್ಕಂಡ ಆಹಾರ ಗುಹೇ ಬಳಿ ಮಧ್ಯಾಹ್ನದ ಹೊತ್ತಿಗೆ ಬರೋದು ತಪ್ಪಿದ್ರೆ ಅಂದಿನಿಂದ ಈ ಕರಾರು ಜಾರೀಲಿರೋಲ್ಲ. ಐದು, ಅಂಥಾ ಸಂದರ್ಭದಲ್ಲಿ ನಾನು ನನ್ನ ಕೈಗೆ ಸಿಕ್ಕೋದನ್ನ ತಿನ್ನೋ ಅಧಿಕಾರ. ಈ ಕರಾರು ಜಾರೀಗೆ ಬರೋಕೆ ಮುಂಚೆ ಇರೋ ಹಾಗೆ ಇರುತ್ತೆ. ಬರ್ಕೊಂಡ್ಯಾ?

ನಗರಪಾಲಕ : ಮಹಾಸ್ವಾಮಿಗಳ ಅಪ್ಪಣೆಯಾಗಬೇಕು.

ರಾಜ : ಹೂಂ, ಸೇರ್ಸು ಅದನ್ನೂ. ಒಂಥರಾ ಬಿಗಿಯಾಗಿಯೇ ಇರುತ್ತೆ. ಒಪ್ಪಂದ ಯಾವಾಗ್ಲೂ ಬಿಗಿಯಾಗಿರಬೇಕು. *(ನಗರಪಾಲಕ ಪತ್ರದಲ್ಲಿ ಬರೆಯುತ್ತಾನೆ.)*

ನಗರಪಾಲಕ : ಆಯ್ತು ತಗೊ. ರುಜು ಮಾಡು.



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ಬಕಾಸುರ | : | ತಡೀ ತಡೀ, ಆತುರ ಪಡಬೇಡ. ಬರ್ಕೊ , ಆರು, ಈ ಕರಾರಿನ ಏರ್ಪಾಡನ್ನು ತಪ್ಪದೇ ಜಾರಿಗೆ ತರೂದು ರಾಜನ ಕರ್ತವ್ಯ.. |
| ರಾಜ | : | ಛೇ, ಅದ್ಹೇಗೆ ಸಾಧ್ಯ! ನಾವು ಬೇರೆ ಊರಿನಲ್ಲಿರ್ತೀವಿ. ಅದೇನಿದ್ರೂ ನಗರಪಾಲಕನಿಗೆ ಸೇರಿದ್ದು. ಬರ್ಕೊ, 'ಈ ಕರಾರಿನ ಏರ್ಪಾಟನ್ನು ತಪ್ಪದೆ ಜಾರಿಗೆ ತರುವುದು ಏಕಚಕ್ರನಗರದ ನಗರಪಾಲಕನ ಕರ್ತವ್ಯ', ಬರ್ಕೊ ಬರ್ಕೊ. *(ನಗರಪಾಲಕ ಬೆಚ್ಚಿ, ಖಿನ್ನನಾಗಿ ತಡೆದು ತಡೆದು ಬರೆಯುತ್ತಾನೆ.)* |
| ಬಕಾಸುರ | : | ಯಾರೋ ಒಬ್ರು ಯಾರಾದ್ರೆ ನಂಗೇನಂತೆ! |
| ನಗರಪಾಲಕ | : | ಮುಗಿತೇನಪ್ಪಾ, ಇನ್ನೂ ಏನಾದ್ರೂ ಇದ್ಯೋ? |
| ಬಕಾಸುರ | : | ಇದೆ. ಕೊನೇದು, ಏಳು, ಈ ಕರಾರಿನಲ್ಲಿ ಯಾವುದೇ ಬದಲಾವಣೆ ಮಾಡೋ ಅಧಿಕಾರ ಬಕಾಸುರನಿಗೆ ಮಾತ್ರ ಇದೆ. ಯಾವಾಗ ಬೇಕಾದ್ರೂ, ಬಕಾಸುರ ಮಾಡಬಹುದು. ಅಂತಹ ಬದಲಾವಣೆಯನ್ನು ಜಾರಿಗೆ ತರುವ ಹೊಣೆ — ರಾಜನ ಮೇಲೋ, ನಗರಪಾಲಕನ ಮೇಲೋ? |
| ರಾಜ | : | ನಗರಪಾಲಕನ ಮೇಲೆ, ಬರ್ಕೊ. *(ನಗರಪಾಲಕ ಬರೆಯುತ್ತಾನೆ. ಪರದೆಯ ಕೆಳಗೆ ಪತ್ರವನ್ನು ತೂರಿಸಿ ನಿಟ್ಟುಸಿರುಬಿಡುತ್ತಾನೆ.)* |
| ನಗರಪಾಲಕ | : | ಆಯ್ತು, ತಗೋ, ರುಜು ಹಾಕು. *(ಬಕಾಸುರ ಪತ್ರವನ್ನು ಹಿಂತಿರುಗಿಸುತ್ತಾನೆ. ನಗರಪಾಲಕ ಅದನ್ನು ತೆಗೆದುಕೊಂಡು, ರುಜು ಮಾಡಿದ್ದಾನೋ ಇಲ್ಲವೋ ನೋಡುತ್ತಾನೆ.)* ಹೆಬ್ಬೆಟ್ಟು! |
| ಬಕಾಸುರ | : | ಸಾಕ್ಷಿಗಳು? |
| ರಾಜ | : | ಹೌದ್ಹೌದು. ನೀನೊಂದು ಸಾಕ್ಷಿ ಹಾಕು *(ಸೂತ್ರಧಾರನಿಗೆ ಹೇಳುತ್ತಾನೆ. ಸೂತ್ರಧಾರ ಪತ್ರಕ್ಕೆ ರುಜು ಹಾಕುತ್ತಾನೆ.)* |
| ಬಕಾಸುರ | : | ನಗರಪಾಲಕನೂ ಸಾಕ್ಷಿ ಇರಲಿ. |
| ನಗರಪಾಲಕ | : | ಆಗ್ಲಿ, ಅದಕ್ಕೇನಂತೆ *(ನಗರಪಾಲಕ ರುಜು ಮಾಡುತ್ತಾನೆ).* |
| ಬಕಾಸುರ | : | ನಿಮ್ಮ ಕಾವಲುಭಟರೂ ಸಾಕ್ಷಿ ಹಾಕಲಿ. |

(ಭಟರು ಒಬ್ಬರನ್ನೊಬ್ಬರು ನೋಡುತ್ತಾ ಹೆಬ್ಬೆಟ್ಟಿನ ಗುರುತನ್ನು ಒತ್ತುತ್ತಾರೆ.)



Downloaded from https:// www.studiestoday.com

Downloaded from https:// www.studiestoday.com

## ೩ನೇ ದೃಶ್ಯ

*ರಂಗದ ಮೇಲೆ ಬೆಳಕು ಮೂಡುವಮುನ್ನ: ದೂರದಿಂದ ಡಂಗುರ ಸಾರುತ್ತಿರುವ ಧ್ವನಿ. ಬೆಳಕು ಬಂದಾಗ–*

ಡಂಗುರ : ಕೇಳ್ರಪ್ಪೋ ಕೇಳಿ! ಚನ್ನಾಗಿ ಕೇಳಿ! ಬಕಾಸುರ ಇನ್ಮೇಲೆ ಊರೊಳಕ್ಕೆ ಬರೋ ಹಂಗಿಲ್ಲ! ನಮ್ಮ ಮಾರಾಜ್ರು ಅವನ್ನ ಸರ್ಯಾದ ಹದ್‌ಬಸ್ತಿನಲ್ಲಿರೋ ಹಂಗೆ ಕರಾರು ಮಾಡವ್ರೆ! ಈ ಒಪ್ಪಂದಾನ ಎಲ್ಲಾರೂ ಗೌರವದಿಂದ ಕಾಣಬೇಕು! ನಮಗೆ ಈ ಒಪ್ಪಂದಾನೇ ಇನ್ಮೇಲೆ ಸಂವಿಧಾನ! ಸಂವಿಧಾನದ ಪ್ರಕಾರ ಎಲ್ಲಾ ಪ್ರಜೆಗಳೂ ನಡಕೊಳ್ಳತಕ್ಕದ್ದು. ಇದನ್ನ ಬದಲಾಯಿಸೋದೇ ಆಗ್ಲಿ, ಇದಕ್ಕೆ ವಿರುದ್ಧ ನಡಕೊಳ್ಳೋದೇ ಆಗ್ಲಿ ರಾಜದ್ರೋಹ ಆಗುತ್ತೆ! ಎಚ್ಚರಿಕೆ! ಎಚ್ಚರಿಕೆ! ನಮ್ಮ ಮಾರಾಜ್ರು ಮಾಡಿರೋ ಏರ್ಪಾಟು ಪ್ರಜೆಗಳ ರಕ್ಷಣೆಗೆ, ಪ್ರಜೆಗಳ ಒಳ್ಳೇದಕ್ಕೆ! ಪ್ರಜೆಗಳ ಪ್ರತಿನಿಧಿಯಾಗಿ, ಪ್ರಜೆಗಳ ಪರವಾಗಿ ಪ್ರಜೆಗಳಿಗೋಸ್ಕರ ಪ್ರಜೆಗಳೇ ಮಾರಾಜರ ಮೂಲ್ಕ ಮಾಡಿಕೊಂಡ ಈ ಒಪ್ಪಂದಾನ, ಅಂದ್ರೆ ನಮ್ಮ ಸಂವಿಧಾನದ ಸ್ವಲ್ಪಾನೂ ತಪ್ಪದಂತೆ ಜಾರೀಗೆ ತರೋ ಪೂರ್ತಿ ಜವಾಬ್ದಾರಿ ಪ್ರಜೆಗಳ ಮೇಲೇ ಇದೆ. ಕೇಳ್ರಪ್ಪೋ, ಕೇಳಿ! ಚನ್ನಾಗಿ ಕೇಳಿ!

*ಐದು ಜನ ಯುವಕರ ಪ್ರವೇಶ. ಅವರು ಡಂಗುರದವನೊಡನೆ ಮಾತಾಡುತ್ತಿದ್ದಾಗ ಬೇರೆ ಕೆಲವು ಪ್ರಜೆಗಳು ಬಂದು ಸೇರಿಕೊಳ್ಳುತ್ತಾರೆ.*

೧ನೇ ಯುವಕ : ಏನಪ್ಪಾ ಇದು, ಡಂಗುರ?

ಡಂಗುರ : ಅದೇ, ನಮ್ಮ ಮಾರಾಜ್ರು ಬಕಾಸುರನ ಜತೆ ಮಾಡ್ಕೊಂಡಿರೋ ಒಪ್ಪಂದ.

೨ನೇ ಯುವಕ : ಒಪ್ಪಂದಾ? ಏನೊಪ್ಪಂದ ಮಾಡ್ಕೊಂಡಿದಾರೆ?

ಡಂಗುರ : ಕೇಳ್ಲಿಲ್ವಾ ಈಟೊತ್ತೂ ಏಳಿದ್ದು?

೩ನೇ ಯುವಕ : ಅದ್ಸರಿ, ಆದ್ರೆ ಒಪ್ಪಂದದ ವಿವರ ಸ್ವಲ್ಪ ಹೇಳ್ತೀಯಾ?

ಡಂಗುರ : ನಿಮಗೊತ್ತೇ ಇಲ್ವಾ, ಅಂಗಾರೆ?

೩ನೇ ಯುವಕ : ಇಲ್ಲಪ್ಪಾ, ಗೊತ್ತಿದ್ರೆ ನಾವ್ಯಾಕೆ ಕೇಳ್ತೀವಿ?



Downloaded from https:// www.studiestoday.com

Downloaded from https:// www.studiestoday.com

೫ನೇ ಯುವಕ : ಅದೇನೂಂತ ಸ್ವಲ್ಪ ಬಿಡಿಸಿ ಹೇಳಯ್ಯಾ?

೧ನೇ ಯುವಕ : ಬಕಾಸುರನ ಜೊತೆ ಒಪ್ಪಂದ.

ಡಂಗುರ : ಅಂದ್ರೆ ಸಂವಿಧಾನ.

೨ನೇ ಯುವಕ : ಯಾಕೋ ಎಲ್ಲಾ ಒಗಟಿನ ಥರ ಇದೆ.

೩ನೇ ಯುವಕ : ನಂಗೊತ್ತು, ಇದ್ರಲ್ಲೇನೋ ಮೋಸ ಇದೆ.

೪ನೇ ಯುವಕ : ಸಂವಿಧಾನ ಅಂತೆ! ಹಾಗಂದ್ರೇನು?

ಡಂಗುರ : ನಂಗೇನ್ ಗೊತ್ತು ಅದೆಲ್ಲಾ! ನಮ್ಮ ನಗರಪಾಲಕರು ನಿನ್ನೆ ರಾತ್ರಿ ಇಡೀ ನನ್ನ ಕೂರಿಸಿಕೊಂಡು, ಏನು ಡಂಗುರ ಸಾರಬೇಕು ಅನ್ನೋದನ್ನ ನಂಗೆ ಗಟ್ ಮಾಡಿಸಿದ್ರು! ಅವರೊಂದು ಮಾತು ಏಳೋದು, ನಾನು ಅದನ್ನ ಅವರಿಗೆ ಒಪ್ಪೋದು! ಅವ್ರು ಇನ್ನೊಂದು ಮಾತು ಏಳಾಕೆ, ನಾನು ತಿರ್ಗಿ ಒಪ್ಸಾಕೆ! ಒಳ್ಳೇ ತಮಾಸೆಯಾಗಿತ್ತು, ಕೂಲೀಮಟದಲ್ಲಿ ಹೈಕ್ಳು ಅಯ್ನೋರ ತಾವ ಕಲೀತಾರಲ್ಲ, ಅಂಗೆ! ಅವರು ಏಳ್ಕೊಟ್ಟಿದ್ನೆಲ್ಲಾ ಅಂದೂ ಅಂದೂ ಗಂಟ್ಲೆಲ್ಲಾ ಒಣಗಿ ಬಿದ್ ಓಯ್ತು! ಒಂದ್ ಬುಡ್ಡಿ ಗುಂಡ್ ಆಕಾಣಾಂತ, ನಾಕ್ ಕಾಸು ಅಪ್ಪಣೆಯಾಗಬೇಕು ಸೋಮಿ ಅಂದ್ರೆ, ಅವ್ರು ಒಂದಮ್ಡಿ ಬಿಚ್ಚಿದ್ರೆ ಅವ್‌ರಪ್ರಾಣೆ! ಇಷ್ಟೊಂದ್ ದೊಡ್ ಡಂಗುರ ನಾನಿದುವಗ್ರೂ ಸಾರಿಲ್ಲ. ಬಿಡಿ ಸೋಮಿ! ನಂಗೇನೋ ಒಂದ್ಮಾತೂ ತಲೆ ಬುಡ ಆಗ್ನಿಲ್ಲ! ಆದ್ರೂ ಬೆಳಕರ್ಯೋ ಒತ್ಗೆ ಮಾತೆಲ್ಲಾ ಸರ್ಯಾಗಿ ಗಟ್‌ಮಾಡ್ದೆ! ನನ್ ಕೆಲ್ಸಾ ಅಂದ್ರೆ ನಾನು ಯಾವತ್ತೂ ನಿಯತ್ಗಾರ ಬಡ್ಡೀಮಗ!

೧ನೇ ಯುವಕ : ಹೌದ್ಹೌದು! ನೀನ್ ಗೊತ್ತಿಲ್ವೇ ನಮಗೆ! ನಿನ್ನಂಥಾ ಡಂಗುರದೋನು ಬೇರೆ ಯಾರಿದಾರೆ ನಮ್ಮ ದೇಶದಲ್ಲಿ! ಅದೇನ್ ಒಪ್ಪಂದ ಅಂದ್ಯಲ್ಲಾ ಅದರ ವಿಚಾರ ಹೇಳು, ಈಗ.

ಡಂಗುರ : ಆಮೇಲೆ ಮನಿಗೋಗಿ ಮನಿಕ್ಕೊಂಡ್ರೆ, ಕನ್ಸಲ್ಲೆಲ್ಲಾ ಅದೇ ಮಾತು! 'ಈ ಒಪ್ಪಂದಾನೇ ಇನ್ಮೇಲೆ ಸಂವಿಧಾನ, ಪ್ರಜೆಗಳ ಪ್ರತಿನಿಧಿಯಾಗಿ ಪ್ರಜೆಗಳ ಪರವಾಗಿ ಪ್ರಜೆಗಳಿಗೋಸ್ಕರ ಪ್ರಜೆಗಳೇ....'

೩ನೇ ಯುವಕ : ಅದೆಲ್ಲಾ ಸರಿ! ತುಂಬಾ ಚನ್ನಾಗೇ ಹೇಳ್ತಿದಿ.



Downloaded from https:// www.studiestoday.com

Downloaded from https:// www.studiestoday.com

೪ನೇ ಯುವಕ : ಒಪ್ಪಂದದ ವಿವರ ಹೇಳಯ್ಯಾ ಅಂದ್ರೆ ಏನೋ ಪುರಾಣ ಒದರ್ತಾನೆ.

ಡಂಗುರ : ಏಳ್ತೀನಿ, ಏಳ್ತೀನಿ ಒಸಿ ಕೇಳಿ.. ಆಮೇಲೆ ಬೆಳಗ್ಗೆ ಎದ್ದು ನನ್ನ ಎಂಡ್ರನ್ನ ಕರ್ದೆ, 'ಲೇ ಬಾ ಇಲ್ಲಿ' ಅಂದೆ. ಬಂದ್ಲು. ' ನಾನು ಒಂದು ಒಸಾ ಡಂಗುರ ಸಾರಬೇಕು ಇವತ್ತು, ಮೊದ್ಲು ನಿನ್ಮುಂದೆ ಒಂದ್ಸಲ ಏಳ್ತೀನಿ ಕೇಳು' ಅಂತ ಅವಳ ಮುಂದೆ 'ಕೇಳ್ರಪ್ಪೋ ಕೇಳಿ! ಚನ್ನಾಗಿ ಕೇಳಿ..' ಅಂತಾ ಸುರೂ ಮಾಡಿ ಪೂರ್ತಿ ಒಂಚೂರೂ ತಪ್ದೆ ಒದರ್ದೆ. ಅವ್ಳು ಡಂಗಾಗ್ಬಿಟ್ಳು!' 'ಇದೇನ್ ಇಂಗ್ ಮಾತಾಡ್ತೀರಾ ಇವತ್ತು? ಮೂಗಿನ್ ಮಟ್ಟ ಕುಡ್ದಾಗ್ಲೂ ಚನ್ನಾಗಿರ್ತಿದ್ರಲ್ಲ' ಅಂತಾಳೆ!

೪ನೇ ಯುವಕ : ನೀ ಏನ್ ಹೇಳ್ತಿಯೋ ಇಲ್ವೋ, ಕರಾರಿನ ವಿಷ್ಯ?

೫ನೇ ಯುವಕ : ಹೇಳ್ತಾನೆ, ಹೇಳ್ತಾನೆ, ಸ್ವಲ್ಪ ತಡೀರಿ. ಅವನ ಪುರಾಣ ಮುಗೀಲಿ

ಡಂಗುರ : ಏನಪ್ಪಾಂದ್ರೆ, ಬಕಾಸುರ ಇನ್ಮೇಲೆ ಊರೊಳಕ್ಕೆ ಬರೋ ಹಂಗಿಲ್ಲ, ನಾವೇ ಅವನಿಗೆ ಆಹಾರ ತಗೊಂಡ್ ಹೋಗಿ ಕೊಡತಕ್ಕದ್ದು!

೩ನೇ ಯುವಕ : ಓಹೋ, ಹೀಗೋ ಸಮಾಚಾರ! ಅಂದ್ರೆ ಬಕಾಸುರನ್ನ ಸಾಕೋಕೆ ಮಾರಾಜ್ರು ವ್ಯವಸ್ಥೆ ಮಾಡಿದಾರೆ!

೪ನೇ ಯುವಕ : ಆಹಾರಾನ ಮಹಾರಾಜ್ರೇ ಒದಗಿಸ್ತಾರಾ?

ಡಂಗುರ : ಎಲ್ಬಂತು ದೇವ್ರೇ! ನಾವೇ, ಪ್ರಜೆಗಳು ಪ್ರಜೆಗಳಿಗೋಸ್ಕರ.. ದಿನಾ ಸರದಿ ಪ್ರಕಾರ ಒಂದ್ ಬಂಡಿ ಅನ್ನ, ಒಂದ್ ಜತೆ ಕ್ವಾಣ, ಆಮೇಲೆ ಒಬ್ಬ ಆಳು, ಇಷ್ಟನ್ನೂ ಬಕಾಸುರನ ಗುಹೇಗೆ ದಿನಾ ಕಳಿಸಬೇಕು! ಯಾರ್ಯಾರ ಸರದಿ ಯಾವತ್ತು ಅಂತ ನಗರಪಾಲಕರು ಪಟ್ಟಿ ಬರೀತಾ ಅವ್ರೆ.

೪ನೇ ಯುವಕ : ಇದೇ ಇರಬೇಕು ಸಂವಿಧಾನಾ ಅಂದ್ರೆ!

೩ನೇ ಯುವಕ : ನಂಗೊತ್ತಿತ್ತು ಇದರಲ್ಲೇನೋ ಮೋಸ ಇದೆ ಅಂತ!

೧ನೇ ಯುವಕ : ನಾವು ಒಪ್ಪಿಕೋಬಾರದು ಈ ಒಪ್ಪಂದಾನ!

ಡಂಗುರ : ಅಂದ್ರೆ ನಾ ಏಳಿದ್ದು ಕೇಳಿಸ್ಕೊಳ್ಳಿಲ್ವಾ ನೀವು? 'ಈ ಸಂವಿಧಾನಾನ ನಾವೆಲ್ಲಾ ಗೌರವದಿಂದ ಕಾಣಬೇಕು! ನಮ್ಮ ನಗರಕ್ಕೆ ಈ ಒಪ್ಪಂದಾನೇ...'



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ೪ನೇ ಯುವಕ | : | ಏ, ಮುಚ್ಚಯ್ಯಾ, ಕಂಡಿದೀನಿ! |
| ಡಂಗುರ | : | ಸರ್ಯಾಗ್ ತಿಳ್ಕೊಳಿ ಮತ್ತೆ. ನಾನು ಸರ್ಯಾಗ್ ಡಂಗುರ ಹಾಕ್ಲಿಲ್ಲ ಅನ್ಬಾರ್ದು ನಾಳೆ ಯಾರೂನೂವೆ... ಕೇಳ್ರಪ್ಪೋ ಚನ್ನಾಗಿ ಕೇಳಿ... |

*ಯುವಕರು ಅವನನ್ನು ಸುತ್ತುವರಿಯುತ್ತಾ ಭಯಂಕರ ಗದ್ದಲವೆಬ್ಬಿಸುತ್ತಾರೆ.*

## ೪ನೇ ದೃಶ್ಯ

ಮೂವರು ವರ್ತಕರು ಮಾತಾಡುತ್ತಾ ಕುಳಿತಿರುತ್ತಾರೆ.

| | | |
|---|---|---|
| ೧ನೇ ವರ್ತಕ | : | ಏನು ಸ್ವಾಮಿ, ನಿಮ್ಮ ವ್ಯಾಪಾರ ಹ್ಯಾಗಿದೆ? |
| ೨ನೇ ವರ್ತಕ | : | ಏನೋ ಬಕಾಸುರನ ದಯೆ, ಸುಮಾರಾಗಿ ನಡೀತಿದೆ. ನಿಮ್ದೂ ಚನ್ನಾಗಿರೋ ಹಾಗೆ ಕಾಣುತ್ತೆ. |
| ೧ನೇ ವರ್ತಕ | : | ಹ ಹ ಹ್ಹ... ನೀವು ಹೇಳಿದ ಹಾಗೇ ಬಕಾಸುರನ ದಯೆ.. |
| ೨ನೇ ವರ್ತಕ | : | ಅವನ ದಯೆ ಜತೆಗೇ ನಮ್ಮ ಮಹಾಸ್ವಾಮಿಗಳ ಕರುಣೆ... |
| ೧ನೇ ವರ್ತಕ | : | ಹ ಹ ಹ್ಹ. ಸರಿಯಾಗಿ ಹೇಳಿದ್ರಿ, ನೀವು. ನಮ್ಮ ಮಹಾರಾಜರ ಕರುಣೆ ಇಲ್ದೇ ಇದ್ರೆ ನಾವು ಯಾವತ್ತೋ ದಿವಾಳಿ ತೆಗೀಬೇಕಾಗಿತ್ತು.. *(೩ನೇ ವರ್ತಕನನ್ನುದ್ದೇಶಿಸಿ)* ಅಂದ್ಹಾಗೆ ತಾವೂ ಸಾಕಷ್ಟು ಅಕ್ಕಿ ಸಂಗ್ರಹ ಮಾಡಿರಬೇಕಲ್ವೇ? |
| ೩ನೇ ವರ್ತಕ | : | ಏನೋ ಒಂದಿಷ್ಟ್ ಹಗೇವಲ್ಲಿಟ್ಟಿದೀನಿ.. ಜನಾ ಬಂದು ಕೇಳಿದಾಗ ಇಲ್ಲಾ ಅನ್ನೋಕಾಗಲ್ಲ ನೋಡಿ.. ಆದ್ರೂ ಈ ಬಕಾಸುರನ ಹೊಟ್ಟೇಗೆ ಹೊಂದಿಸೋದು ಅಂದ್ರೆ, ನಮ್ಮ ಜನಕ್ಕೆ ಎಂಥಾ ಸ್ಥಿತಿ ಬಂತು ನೋಡಿ.. ಕಣ್ಣಲ್ಲಿ ನೀರು ಬರುತ್ತೆ ನೆನಸಿಕೊಂಡ್ರೆ.. |
| ೨ನೇ ವರ್ತಕ | : | ಏನು ಮಾಡೋಕಾಗುತ್ತೆ.. ರಾಜರ ಕಾನೂನೇ ಹಾಗಿದ್ಯಲ್ಲಾ. ಇಲ್ದೆ ಇದ್ರೆ ಈ ಹೊತ್ತಿಗೆ ನಮ್ಮೂರೇ ನಾಶ ಆಗಿ ಬಿಡ್ತಿತ್ತು... ಈ ಒಪ್ಪಂದ ಮಾಡಿಕೊಂಡ ಮೇಲೆ ನೋಡಿ, ಎಲ್ಲಾ ಎಷ್ಟೊಂದ್ ಸಲೀಸಾಗಿ ನಿಯತ್ತಾಗಿ ನಡೀತಿದೆ... ನಮ್ಮ ವ್ಯಾಪಾರಾನೂ ಬೆಳೀತಿದೆ... ನಮ್ಮ ರಾಜನ ತಲೇಂದ್ರೆ ತಲೆ ನೋಡಿ... |
| ೧ನೇ ವರ್ತಕ | : | ನಾನೂ ಅದೇ ಯೋಚಿಸ್ತಿದ್ದೆ.. ಈ ಒಪ್ಪಂದ ಜಾರೀಗೆ ಬಂದಿದ್ದೇ ಬಂದದ್ದು, ನನ್ನ ವ್ಯಾಪಾರ ನಾನೇ ನಂಬಕ್ಕಾಗದಷ್ಟು ಬೆಳೆದುಬಿಟ್ಟಿದೆ. |



Downloaded from https:// www.studiestoday.com

Downloaded from https:// www.studiestoday.com

೩ನೇ ವರ್ತಕ : ಬೆಲೆ ಎಷ್ಟ್ ಏರಿಸ್ತಾ ಹೋದ್ರೂ ಜನ ಕೊಂಡುಕೊಳ್ಳಲೇಬೇಕು ನೋಡಿ.. ಜನಗಳ ಕಷ್ಟ ಕಂಡು ದುಃಖ ಆಗುತ್ತೆ. ಆದ್ರೆ ಏನ್ ಮಾಡೋದು, ವಿಧಿ ಇಲ್ಲ. ಅವರಿಗೆ ದವಸ ಧಾನ್ಯ ಒದಗಿಸಬೇಕೂಂದ್ರೆ ಬೆಲೆ ಏರಿಸ್ತಾನೇ ಹೋಗಬೇಕು. ನಮ್ಮ ಕೈಲೇನಿದೆ, ಅಯ್ಯೋ ಪಾಪ ಅನ್ನೂದೊಂದ್ ಬಿಟ್ಟು...

೧ನೇ ವರ್ತಕ : ನೀವ್ಹೇಳೂದೂ ನಿಜ. ನನಗೂ, ಒಬ್ಬೊಬ್ಬ ಗಿರಾಕೀಗೂ ಗೋಧಿ ಅಳ ಕೊಡೋವಾಗ ಕಣ್ಣೀರು ಬರುತ್ತೆ. ಆದ್ರೆ ಅವರಿಗೆ ಸಹಾಯ ಮಾಡ್ದೆ ಇದ್ರೆ, ಇಡೀ ಊರಿಗೇ ವಿಪತ್ತು ಅನ್ನೋ ಸಂಕಟಕ್ಕೆ ಮಾರಲೇಬೇಕು... ಅವರ್ಹತ್ರ ಹಣ ಎಣಿಸಿ ಕೊಳ್ಳೋವಾಗ ನನ್ನ ಕೈ ನಡುಗುತ್ತೆ... ವಿಧಿ ಇಲ್ಲಾ...

೨ನೇ ವರ್ತಕ : ಜನ ಹ್ಯಾಗೂ ಅಕ್ಕಿ, ಗೋಧಿ, ಬೇಳೆ, ಎಣ್ಣೆ ಎಲ್ಲಾ ರಾಶಿ ರಾಶಿ ಕೊಂಡುಕೊಳ್ಳಲೇಬೇಕು... ಈ ವಿಚಾರದಲ್ಲಿ ನಂದೊಂದು ಸಲಹೆ ಇದೆ... ನಿಮ್ಗೆ ಒಪ್ಪಿಗೆ ಆದ್ರೆ ಆ ಥರಾ ಮಾಡೋಣ.. ಜನಕ್ಕೂ ಸಹಾಯ ಆಗಬಹುದು.

೩ನೇ ವರ್ತಕ : ಏನು ನಿಮ್ಮ ಸಲಹೆ?

೨ನೇ ವರ್ತಕ : ನಾವು ಎಲ್ರೂ ಎಲ್ಲಾ ಸಾಮಾನುಗಳನ್ನೂ ವ್ಯಾಪಾರ ಮಾಡೋ ಬದಲಾಗಿ ಒಬ್ಬೊಬ್ಬ ಒಂದೊಂದು ಸಾಮಾನು ಮಾತ್ರ ವ್ಯಾಪಾರ ಮಾಡಿದ್ರೆ ಹೇಗೆ?

೧ನೇ ವರ್ತಕ : ಅದು ಹ್ಯಾಗೆ ಆಗುತ್ತೆ ಸ್ವಾಮಿ? ವ್ಯಾಪಾರ ಅಂದ್ರೆ.. ಗಿರಾಕಿ ಕೇಳಿದ್ದೆಲ್ಲಾ ಕೊಡಬೇಕಲ್ವೇ ನಾವು? ಅದಿಲ್ಲ ಇದಿಲ್ಲ ಅಂದ್ರೆ ಅವನು ಬೇರೆ ಕಡೆ ಹೋಗ್ತಾನೆ. ನಮಗೇ ನಷ್ಟವಲ್ಲವೆ?

೨ನೇ ವರ್ತಕ : ನಷ್ಟವೇನಿಲ್ಲ, ಲಾಭವೇ ಇದೆ. ಅದಕ್ಕೇ ಹೇಳಿದೆ. ಈಗ ನೋಡಿ, ನಾನು ಬರೀ ಅಕ್ಕಿ ವ್ಯಾಪಾರ ಮಾಡ್ತೀನಿ. ಅಕ್ಕಿ ಬೇಕಾದೋರಿಗೆಲ್ಲಾ ಎಷ್ಟು ಬೇಕಾದ್ರೂ ಅಕ್ಕಿ ಮಾರೋಕೆ ನಂಗೆ ಸಾಧ್ಯ ಇರುತ್ತೆ.. ಯಾ ಗೋಧಿ ಕೇಳಿದ್ರೂ ಅಂತಿಟ್ಕೊಳ್ಳಿ. ನಿಮ್ಮ ಹತ್ರ ಕಳಿಸ್ತೀನಿ. ನೀವು ನಿಮ್ಮಿಷ್ಟ ಬಂದ ಬೆಲೆಗೆ ಗೋಧಿ ಮಾರಬಹುದು... ಅವ್ರು ಬೇರೆಲ್ಲೂ ಹೋಗೋಕೆ ಸಾಧ್ಯವಿಲ್ಲ. ಅಕ್ಕಿ ವ್ಯಾಪಾರ ಎಲ್ಲಾ ನನ್ನ ಕೈಲಿ, ಗೋಧಿ ವ್ಯಾಪಾರ ಎಲ್ಲಾ ನಿಮ್ಮ ಕೈಲಿ.

೩ನೇ ವರ್ತಕ : *(ಖಿನ್ನ)* ನಾನೇನು ಮಾಡ್ಲಿ?



Downloaded from https:// www.studiestoday.com

Downloaded from https:// www.studiestoday.com

೨ನೇ ವರ್ತಕ : ನೀವು ಚಿಲ್ರೆ ವ್ಯಾಪಾರ ಮಾಡಿ. ಬೇಳೆ, ಎಣ್ಣೆ, ಉಪ್ಪು, ಮೆಣಸಿನ ಕಾಯಿ– ಎಲ್ಲಾ ನಿಮಗೆ ಸೇರಿದ್ದು. ನಾವಿಬ್ರೂ ಆ ಬಾಬಿಗೆ ಕೈ ಹಾಕೋಲ್ಲ.. ಜೊತೆಗೆ ಕೋಣಗಳ ವ್ಯಾಪಾರಾನೂ ಮಾಡಬಹುದು ನೀವು..

೩ನೇ ವರ್ತಕ : ಕೋಣಗಳು?

೨ನೇ ವರ್ತಕ : ಬೇಕಲ್ಲಾ, ಬಕಾಸುರನ ಬಂಡೀಗೆ ಹೂಡೋಕೆ.

೧ನೇ ವರ್ತಕ : ಭಲೇ, ತುಂಬಾ ಒಳ್ಳೇ ವಿಚಾರ. *(೩ನೇ ವರ್ತಕನನ್ನುದ್ದೇಶಿಸಿ)* ಏನಂತೀರಿ? ನಂಗೇನೋ ಸಂಪೂರ್ಣ ಒಪ್ಪಿಗೆ.. ಭಲೇ.. ಭಲೇ.. ನಾನು ಗೋಧಿ ರಾಜ!

೨ನೇ ವರ್ತಕ : ನಾನು ಅಕ್ಕಿ ರಾಜ!

೩ನೇ ವರ್ತಕ : *(ಪೆಚ್ಚು)* ನಾನು .. ಕೋಣಗಳ ರಾಜ.

೨ನೇ ವರ್ತಕ : ಜನಗಳಿಗೆ ಎಷ್ಟೊಂದ್ ಅನುಕೂಲ ಆಗ್ಹೋಯ್ತು!

೧ನೇ ವರ್ತಕ : ಅಲ್ವೇ ಮತ್ತೆ!

೨ನೇ ವರ್ತಕ : ಅಲ್ಲಾ, ನಾವು ಇಷ್ಟೊಂದ್ ಅನುಕೂಲ ಮಾಡಿಕೊಟ್ಟಿದ್ದಕ್ಕೆ ಜನ ನಮಗೆ ಎಷ್ಟು ಕೃತಜ್ಞರಾಗಿರಬೇಕು!

೩ನೇ ವರ್ತಕ : ಇದ್ದೇ ಇರ್ತಾರೆ. ಅವರ ಕೃತಜ್ಞತೆಯೇ..

೧ನೇ ವರ್ತಕ : ನಮ್ಮ ಲಾಭ!

*ಮೂವರೂ ಜೋರಾಗಿ ಗಹಗಹಿಸಿ ನಗುತ್ತಾರೆ. ಅವರ ನಗು ಇನ್ನೂ ನಿಲ್ಲದಿರುವಾಗಲೇ ನಗರಪಾಲಕನ ಪ್ರವೇಶ.*

*ನಗರಪಾಲಕ ಸ್ವಲ್ಪ ಹೊತ್ತು ನಿಂತು, ಅವರ ನಗು ನಿಂತ ಮೇಲೆ ಮಾತಾಡುತ್ತಾನೆ.*

ನಗರಪಾಲಕ : ಏನೂ, ವರ್ತಕ ಶಿಖಾಮಣಿಗಳ ಸಭೆ ಜೋರಾಗಿ ನಡೀತಿದೆ.. ನಾನು ಬಂದದ್ದು ತಮಗೇನೂ ತೊಂದ್ರೆ ಆಗಲಿಲ್ಲ ತಾನೇ?

೧ನೇ ವರ್ತಕ : *(ಲಗುಬಗೆಯಿಂದ ಎದ್ದು)* ದಯಮಾಡಿಸಬೇಕು, ದಯಮಾಡಿಸಬೇಕು.. ಬಡವನ ಮನೆ ಪುನೀತವಾಯ್ತು.

ನಗರಪಾಲಕ : ನೀವ್ಯಾಕೆ ಬಡವರಾಗ್ತೀರೀ, ನಿಮ್ಮ ಗಿರಾಕಿಗಳು ಬಡವರಾಗ್ತಾರೆ ಅಷ್ಟೇ!



Downloaded from https:// www.studiestoday.com

Downloaded from https:// www.studiestoday.com

೧ನೇ ವರ್ತಕ : ಹೆಹ್ಹೆ.. ಏನೋ, ನಿಮ್ಮ ಅಭಿಮಾನ ನಮ್ಮ ಮೇಲಿದ್ರೆ ಸಾಕು.

ನಗರಪಾಲಕ : *(ಗತ್ತಿನಿಂದ)* ಹುಂ! *(ಎಲ್ಲರನ್ನೂ ಪ್ರತ್ಯೇಕವಾಗಿ ನೋಡಿ ಸಂತೃಪ್ತಿಯಿಂದ ತಲೆದೂಗುತ್ತಾನೆ.)* ವರ್ತಕರು ಒಬ್ಬರನ್ನೊಬ್ಬರು ನೋಡುತ್ತಾರೆ.

೨ನೇ ವರ್ತಕ : ಏನು ಸಮಾಚಾರ, ಮನೇ ಕಡೆ ಎಲ್ಲಾ ಕ್ಷೇಮ ತಾನೇ?

೩ನೇ ವರ್ತಕ : ನಿಮ್ಮಂಥಾ ನಗರಪಾಲಕರನ್ನ ಹೊಂದಿರೋ ನಾವು ಎಷ್ಟು ಪುಣ್ಯ ಮಾಡಿದೀವ್ರೋ ಅಂತ ಅವರಿಗೆ ಹೇಳ್ತಿದ್ದೆ ಈಗ.

೨ನೇ ವರ್ತಕ : ಹೌದು ಹೌದು. ತಮ್ಮ..

೧ನೇ ವರ್ತಕ : ವಿಚಾರಾನೇ ಮಾತಾಡ್ತಾ ಇದ್ವು.

೨ನೇ ವರ್ತಕ : ನಿಮ್ಮಿಂದ ನಮಗೆ ತುಂಬಾ ಅನುಕೂಲವಾಗಿದೆ.

ನಗರಪಾಲಕ : *(೧ನೇ ವರ್ತಕನನ್ನುದ್ದೇಶಿಸಿ)* ಅದಿರ್ಲಿರೀ, ಈಗ ನಾನ್ಯಾಕೆ ಬಂದೇಂದ್ರೆ, ನಿಮ್ಮ ಮನೇ ಸರದಿ ಮುಂದಿನ ಶನಿವಾರಕ್ಕೆ ಹಾಕ್ತೀನಂತ ಹೇಳೋಕೆ..

೧ನೇ ವರ್ತಕ : *(ಪೆಚ್ಚಾಗಿ ತಲೆ ಕೆರೆಯುತ್ತಾ)* ಬಡವನ ಮೇಲೆ ಕರುಣೆ ಇಡಬೇಕು... ಇದೊಂದ್ಸಲ ಮುಂದಕ್ಕೆ ಹಾಕ್ಕೊಟ್ರೆ ತುಂಬಾ ಉಪಕಾರವಾಗುತ್ತೆ.

ನಗರಪಾಲಕ : ಅದ್ಹೇಗ್ರಿ ಸಾಧ್ಯ? ಆಗ್ಲೇ ಎರಡು ಸಲ ಮುಂದಕ್ಕೆ ಹಾಕಾಗಿದೆ... ಮೂರನೇ ಸಲಾನೂ ಮುಂದಕ್ಕೆ ಹಾಕಿ ಅಂದ್ರೆ, ನಾನು ಹೋಗ್ಬೇಕು. ಅಷ್ಟೆ. ನಿಮ್ಮನೆ ಗಾಡಿ ಹೊಡ್ಕೊಂಡು.. ಅದೆಲ್ಲಾ ಆಗುಲ್ಲಾ. ಮುಂದಿನ ಶನಿವಾರ ನಿಮ್ಮ ಸರದಿ ತಪ್ಪಿಸೋಕೆ ಸಾಧ್ಯಾನೇ ಇಲ್ಲ.

೧ನೇ ವರ್ತಕ : ಇದೊಂದ್ ಸಲ ದೊಡ್ಡ ಮನಸ್ಸು ಮಾಡಬೇಕು.. ಒಬ್ಬ ಆಳನ್ನ ಹುಡುಕ್ತಾ ಇದೀನಿ. ಸಿಕ್ತಾ ಇಲ್ಲ. ಅದೇನ್ ಬೆಲೆ ಆಗ್ಬಿಟ್ಟಿದೇಂತೀರಿ ಈಗ. ಒಬ್ಬ ಭಿಕಾರೀನೂ ಅಗ್ಗವಾಗಿ ಸಿಕ್ಕೋದಿಲ್ಲ... ಏನಾದ್ರೂ ತರದೂದ್ ಮಾಡಿ ಒಬ್ಬ ಆಳನ್ನ ಆದಷ್ಟು ಬೇಗ ಹೊಂದಿಸ್ಕೋತೀನಿ.. ಮನುಷ್ಯ ಸಿಕ್ಕ ತಕ್ಷಣ ನಾನೇ ಬಂದು ನನ್ನ ಸರದಿ ಹಾಕಿಸ್ಕೋತೀನಿ. ಅಲ್ಲೀವರೆಗೆ ತಾವು ದಯವಿಟ್ಟು ತಡೀಬೇಕು. ನಿಮ್ಮ ಉಪಕಾರ ಮರ್ಯೋದಿಲ್ಲ.



Downloaded from https:// www.studiestoday.com

Downloaded from https:// www.studiestoday.com

ನಗರಪಾಲಕ : ಬೇರೆಯೋರು ಏನಂತಾರ್‍ರೀ, ನಂಗೆ ಕೆಟ್ಟ ಹೆಸರು ಬರುತ್ತೆ ಅಷ್ಟೆ. ಮುಂದಿನ ಶನಿವಾರ ನಿಮ್ಮ ಸರದಿ. ಆಗ್ಲೇ ಖಾತೇಲಿ ಬರೆದಿಟ್‌ಬಿಟ್ಟಿದೀನಿ.

೧ನೇ ವರ್ತಕ : ನಿಮ್ಮನೇಗೆ ಈಗ್ಲೇ ಒಂದು ಖಂಡ್ಗ ಗೋಧಿ ಕಳಿಸ್ತೀನಿ.

ನಗರಪಾಲಕ : ಸಾಧ್ಯಾನೇ ಇಲ್ಲ.

೧ನೇ ವರ್ತಕ : ಎರಡು ಖಂಡ್ಗ ಕಳಿಸ್ತೀನಿ.

ನಗರಪಾಲಕ : ಬಹಳ ಕಮ್ಮಿಯಾಯ್ತು.

೧ನೇ ವರ್ತಕ : ನಾಲ್ಕು ಖಂಡ್ಗಾ!

ನಗರಪಾಲಕ : ಹುಂ. ಹೋಗ್ಲಿ ಬಿಡಿ, ಇಷ್ಟೊಂದ್ ಕೇಳ್‌ಕೋತಿರೋವಾಗ ಆಗುಲ್ಲ ಅನ್ನಬಾರ್ದು. ಆದ್ರೆ, ನೀವು ಆದಷ್ಟು ಬೇಗ ಆಳು ಹೊಂದಿಸಿಕೊಳ್ಳೋದು ಒಳ್ಳೇದು. ಈಗ್ಲೇ ಹೇಳಿಬಿಟ್ಟಿದೀನಿ.. ಮುಂದಿನ ಶನಿವಾರಕ್ಕೆ ಬೇರೆ ಯಾರನ್ನಾದ್ರೂ ಹೊಂದಿಸಬೇಕು. *(ಸ್ವಲ್ಪ ಯೋಚಿಸಿ, ೨ನೇ ವರ್ತಕನನ್ನುದ್ದೇಶಿಸಿ)* ಓ, ಇಲ್ಲೇ ಇದೀರಲ್ಲ, ಮುಂದಿನ ಶನಿವಾರ ನಿಮ್ಮ ಸರದಿ, ತಯಾರಾಗಿರಿ. ಮೊದಲೇ ಹೇಳಲಿಲ್ಲ ಅಂತ ಕೊಸರಾಡಬೇಡಿ.. ಹೇಗೂ ನಿಮ್ಮ ಸ್ನೇಹಿತರಿಗೂ ಸಹಾಯ ಮಾಡಿದ ಹಾಗೂ ಆಗುತ್ತೆ.

೨ನೇ ವರ್ತಕ : ಕ್ಷಮಿಸಬೇಕು ನಾಲ್ಕು ಖಂಡ್ಗ ಅಕ್ಕಿ!

ನಗರಪಾಲಕ : ಏನ್ರೀ ಇದೂ, ಎಲ್ಲಾರೂ ಏನಾದ್ರೂ ಸಬೂಬ್ ಹೇಳ್ತಾ ಇದ್ರೆ ನನ್ನ ಗತಿ ಏನು? ಮಹಾರಾಜರಿಗೆ ತಿಳಿದ್ರೆ ನನ್ನ ತಲೆ ಹಾರಿಸಿ ಬಿಡುತ್ತಾರೆ.

೨ನೇ ವರ್ತಕ : ನಾಲ್ಕು ಖಂಡ್ಗ ಅಕ್ಕಿ! ಹಸನಾದ ಸಣ್ಣಕ್ಕಿ!

ನಗರಪಾಲಕ : ಒಳ್ಳೇ ಧರ್ಮಸಂಕಟ ತಂದಿಟ್ರಲ್ಲಪ್ಪಾ ನಂಗೆ.. ! *(೩ನೇ ನರ್ತಕನನ್ನುದ್ದೇಶಿಸಿ)* ನೋಡ್ರೀ ಇಲ್ಲೀ, ನೀವು ಯಾವ ಸಬೂಬು ಹೇಳಿದ್ರೂ ನಾನು ಕೇಳುಲ್ಲ. ಮುಂದಿನ ಶನಿವಾರ..

೩ನೇ ವರ್ತಕ : ನಾಕು ಜತೆ ಕೋಣ !

ನಗರಪಾಲಕ : ಏನ್ರೀ ಇದು ತಮಾಷೆ? ಕೋಣ ಅಂತೆ ಕೋಣ! ಕೋಣನ್ನ ಕಟ್ಟಿಕೊಂಡು ನಾನೇನ್ ಮಾಡ್ಲಿ..



Downloaded from https:// www.studiestoday.com

Downloaded from https:// www.studiestoday.com

೩ನೇ ವರ್ತಕ : ಅಥವಾ ನಾಕ್ ಮಣ ಮೆಣಸಿನಕಾಯಿ, ಅಥವಾ ನಾಕ್ ಮಣ ಧನಿಯಾ, ಅಥವಾ ನಾಕ್ ಮಣ ಎಳ್ಳು, ಅಥವಾ ನಾಕ್ ಮಣ ಬೇಳೆ, ಯಾವುದು ಬೇಕಾದ್ರೂ ಆರಿಸಿಕೊಳ್ಳಿ, ನಂದೇನೂ ಅಡ್ಡಿ ಇಲ್ಲ..

ನಗರಪಾಲಕ : ಒಳ್ಳೇ ಫಜೀತಿಯಾಯ್ತಲ್ಲಪ್ಪಾ ಇದು! ಬೇರೆ ಯಾರನ್ನಾದರೂ ಹುಡುಕಲೇ ಬೇಕು ಇವತ್ತು. *(೩ನೇ ವರ್ತಕನನ್ನುದ್ದೇಶಿಸಿ)* ಅಂದ ಹಾಗೆ, ನಿಮ್ಮಂಗ್‌ಡೀಲಿ ಒಳ್ಳೇ ಹಸುವಿನ ತುಪ್ಪ ಇಲ್ಲವೇ?

೩ನೇ ವರ್ತಕ : ನೀವೇನೂ ಯೋಚಿಸಬೇಡಿ.. ಏನಾದ್ರೂ ಏರ್ಪಾಟು ಮಾಡೋಣಂತೆ.

ನಗರಪಾಲಕ : ಹುಂ.. ನಾನಿನ್ನು ಹೊರಡ್ತೀನಿ.. ಮುಂದಿನ ಶನಿವಾರಕ್ಕೆ ಯಾರನ್ನಾದ್ರೂ ಹಾಕಲೇಬೇಕು. *(ನಾಲ್ಕು ಹೆಜ್ಜೆ ಹೋಗಿ ಮತ್ತೆ ಬಂದು)* ಮರೀಬೇಡಿ. ರಾತ್ರಿ ಸ್ವಲ್ಪ ತಡವಾಗಿ ಬನ್ನಿ.. ಮನೇಲೇ ಇರ್ತೀನಿ... ಮರೀಬೇಡಿ.. ನಾಲ್ಕ್ ಮಣಾ..

## ೫ನೇ ದೃಶ್ಯ

ಸೂತ್ರಧಾರ : ಬಕನೊಡನೆ ಹೋರಾಡಿ ಅವನನ್ನು ಕೊಲ್ಲುವುದು ಅಸಾಧ್ಯವೆಂದು ಮನಗಂಡಾಗ ಜನ ನಿಜಕ್ಕೂ ಸತ್ತಂತಾದರು. ಹೇಗಾದರೂ ಮಾಡಿ ಅವನಿಂದ ಪಾರಾಗಲು ಕೆಲವು ಬುದ್ಧಿವಂತರು ಆಹಾರದಲ್ಲಿ ವಿಷವನ್ನು ಬೆರೆಸಿ ಕಳಿಸಿದರು. ಆದರೆ ಬಕನಿಗೆ ಅದರಿಂದ ಏನೂ ಅಪಾಯುವಾಗಲಿಲ್ಲ. ಬಹುಶಃ ಅವನ ವ್ಯೆಯೇ ವಿಷಪೂರಿತವಾದ್ದರಿಂದ ಬೇರಾವ ವಿಷವೂ ಅವನಿಗೆ ಸ್ವಲ್ಪವೂ ಅಪಾಯ ಮಾಡಲಿಲ್ಲ. ಪ್ರತಿದಿನವೂ ದುರದೃಷ್ಟದ ಮನುಷ್ಯನೊಬ್ಬ ಬಂಡಿ– ಆಹಾರದೊಡನೆ ಬಕನ ಹೊಟ್ಟೆ ಸೇರುತ್ತಿದ್ದ. (ಸೂತ್ರಧಾರ ಮಾತನಾಡುತ್ತಾ ರಂಗದ ಒಂದು ಮೂಲೆಗೆ ಬಂದು ನಿಲ್ಲುತ್ತಾನೆ. ಕತ್ಲೆ. ಮತ್ತೆ ಬೆಳಕು ಬಂದಾಗ — ಇಳಿವಯಸ್ಸಿನ ಗೃಹಸ್ಥ, ಅವನ ಹೆಂಡತಿ, ಮಗ *(೧ನೇ ಯುವಕ)* ರಂಗದ ಮೇಲಿದ್ದಾರೆ.)



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ಮಗ | : | ಅಪ್ಪಾ, ಇನ್ನೂ ಸಾವಿರ ಸಲ ಬೇಕಾದ್ರೂ ಹೇಳ್ತೀನಿ, ಇದು ಅನ್ಯಾಯ, ಈ ಪದ್ಧತಿ ಈಗಲೇ ತೊಲಗಬೇಕು. ನಾವು ಪ್ರತಿಭಟಿಸಲೇಬೇಕು. |
| ಅಪ್ಪ | : | ಹಾಗಂದ್ರೆ ಹ್ಯಾಗೋ ಮಗು.. ಇದು ಕಾನೂನಲ್ಲವೇ? ನಾವೆಲ್ಲಾ ಅದಕ್ಕೆ ವಿಧೇಯರಾಗಿರಬೇಡವೇ? |
| ಮಗ | : | ಕಾನೂನು ಮಾಡೋದು ಜನಗಳನ್ನ ಕೊಲ್ಲೋಕಲ್ಲ, ಬದುಕಿಸೋಕೆ. ಆದ್ರೆ ಈ ಕಾನೂನು – ಈ ಕಾನೂನು<br>ಇದು ಕಾನೂನೇ ಅಲ್ಲ. ಇವತ್ತು ನಮ್ಮನೆಯಿಂದ ಗುಹೇಗೆ ನಾವ್ಯಾರೂ ಹೋಗೋದಿರಲಿ, ಬಂಡಿ ಅನ್ನ ಕೂಡಾ ಹೋಗಕೂಡದು. |
| ಅಪ್ಪ | : | ನೋಡಪ್ಪಾ ಇಲ್ಲಿ, ನಮ್ಮನೇ ಸರದೀನ ನಾವು ಪಾಲಿಸದೇ ಇದ್ದರೆ ಅಧಿಕಾರಿಗಳು ಸುಮ್ಮನೇ ಬಿಡ್ತಾರೆಯೇ? ನೀನಿನ್ನೂ ಹುಡುಗ.. ಬದುಕಬೇಕು, ಬಾಳಬೇಕು.. ನಾನೇ ಹೋಗ್ತೀನಿ, ಸುಮ್ನಿರು...<br>ಯುವಕನ ತಾಯಿ ದುಃಖ ತಡೆಯಲಾರದೆ ಸೆರಗಿನಿಂದ ಮುಖ ಮುಚ್ಚಿಕೊಂಡು ಒಳಗೆ ಹೋಗುತ್ತಾಳೆ. |
| ಮಗ | : | ನನ್ನ ಬದಲಿ ನೀನು ಅಥವಾ ನಿನ್ನ ಬದಲಿ ನಾನು ಹೋಗೋ ಪ್ರಶ್ನೆ ಅಲ್ಲ ಇದು. ಬದುಕೋ ಅಧಿಕಾರ ಎಲ್ಲರಿಗೂ ಇದೆ ಅಂತ ನಾವೆಲ್ಲಾ ನಂಬಬೇಕು.. ಆಗ ಯಾರೂ ಹೋಗೋ ಮಾತೇ ಇರಲ್ಲ. |
| ಅಪ್ಪ | : | ನಂದೇನು! ಇವತ್ತಿಲ್ಲ ನಾಳೆ ಸಾಯೋನು. ಅದಕ್ಕೆ ನಾವೇನೂ ಯೋಚನೆ ಮಾಡಬೇಕಾಗಿಲ್ಲ. |
| ಮಗ | : | ನನ್ನ ಮಾತು ನೀನ್ಯಾಕೆ ಅರ್ಥಮಾಡಿಕೊಳ್ಳೋಲ್ಲ? ನೀನು ಹೋದ್ರೆ ಆಪತ್ತು ಮಾಯವಾಗುತ್ತೇ? ಇದನ್ನ ಬುಡಮಟ್ಟ ನಾಶಮಾಡೋಕೆ ಪ್ರಯತ್ನಪಡಬೇಕು. |
| ಅಪ್ಪ | : | ಅದೆಲ್ಲಾ ನಮ್ಮ ಕೈಲಿ ಆಗುಹೋಗೋ ಮಾತಲ್ಲ.. ಎಷ್ಟೋ ವರ್ಷಗಳಿಂದ ನಡ್ಕಂಡ್ ಬಂದಿರೋ ಈ ಪದ್ಧತೀನ ನಾವು ಅಷ್ಟು ಸುಲಭವಾಗಿ ಬದಲಾವಣೆ ಮಾಡೋಕಾಗುಲ್ಲ.. |
| ಮಗ | : | ಏನೇ ಆದ್ರೂ ಈ ಮನೆಯಿಂದ ಯಾರೂ ಬಲಿ ಹೋಗೋಕೆ ನಾನು ಖಂಡಿತಾ ಬಿಡೋದಿಲ್ಲ. |



Downloaded from https:// www.studiestoday.com

Downloaded from https:// www.studiestoday.com

ಅಪ್ಪ : *(ಸ್ವಲ್ಪ ರೇಗಿ)* ಏ, ಏನೇನೋ ಹುಚ್ಚು ಮಾತಾಡಬೇಡ.. ಒಂದು ಹೋಗಿ ಮತ್ತೊಂದಾದೀತು..

ಮಗ : ಏನಾಗುತ್ತೋ ನೋಡೇ ಬಿಡೋಣ.

ಅಪ್ಪ : ಸುಮ್ಮನಿರಪ್ಪಾ, ಸಾಕು.. ಯಾರಿಗಾದ್ರೂ ಈ ಮಾತು ಕಿವೀಗೆ ಬಿದ್ರೆ ಮುಗೀತು, ನಮ್ಮ ಕತೆ.

ಮಗ : ನಾವು ಹೆದರಿಕೊಂಡಿರೋದ್ರಿಂದಾನೇ ಇಷ್ಟೆಲ್ಲಾ ಅನಾಹುತ.. ಏನಾಗುತ್ತೆ ನೋಡೇ ಬಿಡೋಣಾಂತಾ ಊರಿನೋರೆಲ್ಲಾ ಒಟ್ಟಾಗಿ ಈ ಕಾನೂನಿಗೆ ಬಹಿಷ್ಕಾರ ಹಾಕಿದ್ರೆ ಆಗ ಗೊತ್ತಾಗುತ್ತೆ... ಹಾಗೆ ಒಗ್ಗಟ್ಟಾಗಿದ್ರೆ ನಾವೆಲ್ಲಾ ಒಟ್ಟಿಗೆ ಹೋಗಿ ಬಕನ್ನ ಕೊಲ್ಲೋದೂ ಕಷ್ಟವಾಗುಲ್ಲ.

ಅಪ್ಪ : ಸುಮ್ನೆ ಬಾಯಿಗೆ ಬಂದ ಹಾಗೆ ಹರಟಬೇಡ.. ಕೊಲ್ತಾನಂತೆ, ಬಕನ್ನ! ಏನೋ ಈ ಪದ್ಧತಿ ಇರೋದ್ರಿಂದ ಒಂದು ವ್ಯವಸ್ಥೆ, ಒಂದು ಶಿಸ್ತು ಎಲ್ಲಾ ಇದೆ. ಅದೂ ಇಲ್ಲದೆ ಇದ್ದಿದ್ರೆ..



ಮಗ : 'ವ್ಯವಸ್ಥೆ ಶಿಸ್ತು!'.. ನಾನೀಗಲೇ ಬೀದಿಗೆ ಹೋಗಿ ಕೂಗ್ತೀನಿ. *(ಬಾಗಿಲ ಕಡೆ ಓಡಿ ಬಂದು)* ಈ ದಿನ ಈ ಮನೆಯಿಂದ ಬಕಾಸುರನ ಗುಹೆಗೆ ಬಂಡಿ ಹೋಗೋದಿಲ್ಲ. ಈ ರಾಕ್ಷಸೀ ವ್ಯವಸ್ಥೆಗೆ ಧಿಕ್ಕಾರ! ಇವನ ಕೂಗು ಕೇಳಿ, ಬೀದಿಯಲ್ಲಿ ಹೋಗುತ್ತಿದ್ದ ಹಲವಾರು ಜನರು ಬಂದು ನೆರೆಯುತ್ತಾರೆ. ('ಏನು? ಏನು ಸಮಾಚಾರ?' 'ಇವರ ಮನೆ ಸರದಿ' 'ಇವತ್ತು' – ಇತ್ಯಾದಿ ಗುಸುಗುಸು.)

ಮಗ : *(ನೆರೆದ ಜನರನ್ನು ಉದ್ದೇಶಿಸಿ)* ನೀವೆಲ್ಲಾ ಸಿದ್ಧರಾಗಿ, ಈ ವ್ಯವಸ್ಥೆ ಇಂದಿನಿಂದ ಜಾರೀಲಿರೋದಿಲ್ಲ.. ನಾವೆಲ್ಲಾ ಸ್ವತಂತ್ರರು.. ಬಕಾಸುರನ ಮೇಲೆ ಯುದ್ಧಕ್ಕೆ ಎಲ್ಲರೂ ತಯಾರಾಗಿ. (ಗುಂಪಿನಿಂದ ಒಬ್ಬ ಪ್ರಜೆ ಮುಂದೆ ಬರುತ್ತಾನೆ.)



Downloaded from https:// www.studiestoday.com

Downloaded from https:// www.studiestoday.com

೧ನೇ ಪ್ರಜೆ : ಲೇ, ಏನ್ಲಾ ಅದು, ನೀ ಹೇಳೋದು?

೨ನೇ ಪ್ರಜೆ : ಇವರ ಮನೆ ಸರದಿ ಇವತ್ತು. ಬಂಡಿ ಕಳಿಸೋದಿಲ್ವಂತೆ! ನೋಡಿದ್ರಾ ಹೇಗಿದೆ!

೧ನೇ ಪ್ರಜೆ : ಲೇ, ತಲೆ ನೆಟ್ಟಗೆ ಇದ್ಯೋ ಇಲ್ವೋ? ಆ ರಾಕ್ಷಸ ಊರೊಳಕ್ಕೆ ನುಗ್ಗಲಿ ಅಂತಾನಾ ನಿನ್ನಿಷ್ಟ?

ಮಗ : ಸ್ವಲ್ಪ ನನ್ನ ಮಾತು ಕೇಳಿ ಇಲ್ಲಿ.. ಸ್ವಲ್ಪ ಯೋಚನೆ ಮಾಡಿ.

೩ನೇ ಪ್ರಜೆ : ಪಾಪ! ಹೆದರಿಕೊಂಡಿದಾನೆ ಹುಡುಗ!

ಮಗ : ಹೌದು ನಾನು ಸಾಯಕ್ಕೆ ಹೆದರ್ತೀನಿ. ನಿಮ್ಮಲ್ಲಿ ಯಾರು ಸಾಯಕ್ಕೆ ಇಷ್ಟಪಡ್ತೀರಾ? ಹೇಳಿ! ಬಲಿಯಾಗೋಕೆ ನಂಗಿಷ್ಟ ಇಲ್ಲ.. ಈ ಪದ್ಧತೀನ ನಾವು ಒಪ್ಪಿಕೋಬಾರದು.

೧ನೇ ಪ್ರಜೆ : ಲೇ, ಬಾಯಿ ಮುಚ್ಚಿಕೊಂಡು ಹೋಗ್ತೀಯೋ, ಇಲ್ಲಾ..

೨ನೇ ಪ್ರಜೆ : ನಮ್ಮ ಸರದಿ ಬಂದಾಗ ನಾವು ಹೆತ್ತೋರನ್ನೇ ಕಳಿಸ್‌ಲಿಲ್ವಾ? (ಜನಗಳಲ್ಲಿ ಗಲಾಟೆ ಜೋರಾಗುತ್ತದೆ. ಹಿಡ್ಕೊಳ್ಲಾ ಅವನ್ನ' ಮಹಾ ದೊಡ್ಡ ಮನ್ಸಾ! ಹೋಗೋಲ್ವಂತೆ! 'ಯಾರಪ್ಪಾ ಇವನು'? 'ಮತ್ತೆ ಶುರುವಾಯ್ತೋ ಈ ಹುಡುಗರ ಗಲಾಟೆ' – ಇತ್ಯಾದಿ ಮಾತುಗಳು ಕೇಳುತ್ತವೆ.)

ಅಪ್ಪ : ದಯವಿಟ್ಟು ಸುಮ್ಮನಿರಿ, ಎಲ್ಲಾ.. ಎಲ್ಲಾ ಸಿದ್ಧವಾಗಿದೆ... ಬಂಡೀಗ್ ತುಂಬಾಯ್ತು.. ನಾನೇ ಹೋ.. *(ಮಗ ಅಪ್ಪನ ಬಾಯನ್ನು ತನ್ನ ಕೈಯಿಂದ ಮುಚ್ಚುತ್ತಾನೆ)*

ಮಗ : ಈ ಮನೆಯಿಂದ ಯಾರೂ ಬಕಾಸುರನಿಗೆ ಬಲಿಯಾಗಿ ಹೋಗೋದಿಲ್ಲ.. ನೀವೆಲ್ಲಾ ಈಗಲೇ ಧೈರ್ಯ ಮಾಡಿ.. ಆಮೇಲೆ ಎಲ್ಲಾರೂ.. *(ಜನರ ಗುಂಪಿನ ಮಧ್ಯೆ, 'ದಾರಿ ಬಿಡಿ ದಾರಿ ಬಿಡಿ' ಎಂದು ಕೂಗುತ್ತಾ ನಾಲ್ಕು ಜನ ಭಟರು ಬರುತ್ತಾರೆ. ಜನ ಭಟರಿಗೆ ದಾರಿ ಮಾಡಿ ಕೊಡುತ್ತಾರೆ. ಸದ್ದು ಕಡಿಮೆಯಾಗುತ್ತದೆ.)*

೧ನೇ ಭಟ : ಏನು ಗಲಾಟೆ? ಯಾಕಿಷ್ಟು ಜನ ಗುಂಪುಗೂಡಿದೀರಿ ಇಲ್ಲಿ?

೨ನೇ ಭಟ : ಏನು ತಕರಾರು ನಿಮ್ಮದು? *(ಮಗ ಅಪ್ಪನ ಬಾಯಿಯನ್ನು ಅದುಮಿಕೊಂಡೇ ಭಟರನ್ನುದ್ದೇಶಿಸಿ ಮಾತಾಡುತ್ತಾನೆ.)*



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ಮಗ | : | ಈ ದಿನ ನಮ್ಮ ಮನೆ ಸರದಿ. ಆದರೆ ನಾವು ಯಾರನ್ನೂ ಬಲಿ ಕೊಡೋಕೆ ಸಿದ್ಧವಾಗಿಲ್ಲ. ನಮ್ಮ ಮನೆಯಿಂದ ಬಕನ ಗುಹೆಗೆ ಬಂಡಿ ಹೋಗೋದಿಲ್ಲ. ಇವರಿಗೆಲ್ಲಾ ಹೇಳ್ತಾ ಇದ್ದೆ, ಇಂದಿನಿಂದ ಈ ಪದ್ಧತಿ ರದ್ದಾಗಿದೆ. ಯಾರೂ ಬಂಡಿ ಅನ್ನ ಕಳಿಸಿ ಮನುಷ್ಯನ್ನ ಬಲಿ ಕೊಡಬೇಕಾಗಿಲ್ಲ ಅಂತ.. ಇಡೀ ಊರೇ ಇಂಥಾ ದುಷ್ಟ ಕಾನೂನಿಗೆ ಬಹಿಷ್ಕಾರ ಹಾಕೋ ಕಾಲ ಬಂದಿದೆ. *(ಭಟರು ಅವನ ಮುಂದೆ ಈಟಿ ಹಿಡಿದು ನಿಲ್ಲುತ್ತಾರೆ. ಬಾಯಿ ಮುಚ್ಚಿಸಿಕೊಂಡಿದ್ದ ಅಪ್ಪ, ಮಗನ ಮಾತುಗಳನ್ನು ಕೇಳಬೇಡಿ, ತಾನು ಬಲಿ ಹೋಗುತ್ತೇನೆಂದು ಕೈಸನ್ನೆ ಮಾಡುತ್ತಿರುತ್ತಾನೆ. ಕೆಲವು ಪ್ರಜೆಗಳು ಮಗನ ಹಿಡಿತದಿಂದ ಅಪ್ಪನನ್ನು ಬಿಡಿಸುತ್ತಾರೆ.)* |
| ಅಪ್ಪ | : | ಎಲ್ಲರೂ ಸಮಾಧಾನವಾಗಿರಿ, ನಾನು ಬಲಿಹೋಗುತ್ತೇನೆ. *(ಮಗನನ್ನು ಹಿಡಿದಿದ್ದ ೧ನೇ ಪ್ರಜೆ ಮಾತಾಡುತ್ತಾನೆ.)* |
| ೧ನೇ ಪ್ರಜೆ | : | ಕೂಡದು, ಇವನೇ ಹೋಗಬೇಕು. |
| ೨ನೇ ಪ್ರಜೆ | : | ಹೌದು, ಇವನೇ ಹೋಗಬೇಕು. ಇವನಿರೋದು ನಮಗೆಲ್ಲಾ ಅಪಾಯ *(ಎಲ್ಲರೂ ದನಿಗೂಡಿಸಿ ಅನುಮೋದಿಸುತ್ತಾರೆ,* ಮಗ ಕೊಸರಿಕೊಂಡು ಬಿಡಿಸಿಕೊಳ್ಳಲು ಯತ್ನಿಸುತ್ತಾನೆ. ಆದರೆ ಮತ್ತಷ್ಟು ಜನರು ಅವನನ್ನು ಸುತ್ತುವರಿದು, ಅವನು ತಪ್ಪಿಸಿಕೊಳ್ಳಲಾರದಂತೆ ನೋಡಿಕೊಳ್ಳುತ್ತಾರೆ. ಜನ ಮಗನನ್ನು ದಬ್ಬಿಕೊಂಡು ಹೋಗುತ್ತಾರೆ. ಭಟರು ಹಿಂಬಾಲಿಸುತ್ತಾರೆ. ಇದನ್ನು ನೋಡುತ್ತಾ ಅಪ್ಪ ಕುಸಿದುಬೀಳುತ್ತಾನೆ. ಹಿನ್ನೆಲೆಯಲ್ಲಿ ನಿಂತಿದ್ದ ಹೆಂಡತಿ ಬಂದು ಅವನ ಪಕ್ಕ ಕುಳಿತುಕೊಳ್ಳುತ್ತಾಳೆ.) |

ಕತ್ತಲು

## ೨ನೇ ಅಂಕ – ೧ನೇ ದೃಶ್ಯ

*೧ನೇ ಯುವಕ ಓಡಿ ಓಡಿ ಬರುತ್ತಿದ್ದಾನೆ. ತಲೆ ಕೆದರಿದೆ. ಮೈಯಲ್ಲಿ ಬೆವರು ಇಳಿಯುತ್ತಿದೆ. ಏದುಸಿರು ಬಿಡುತ್ತಿದ್ದಾನೆ. ಉಟ್ಟಿರುವ ಪಂಚೆ ಓಡುವಾಗ ಕಾಲಿಗೆ ಸಿಕ್ಕಿ ಹರಿದಿದೆ. ಸೊಂಟಕ್ಕೆ ಒಂದು ವಸ್ತ್ರ ಬಿಗಿದಿದ್ದಾನೆ. ಕುತ್ತಿಗೆಯಲ್ಲಿ ಉದುರಿದ ಹೂವಿನ ಬಾಡಿದ ಮಾಲೆ. ಸೊಂಟದಿಂದ ಮೇಲೆ ಬಟ್ಟೆ ಇಲ್ಲ. ಓಡುವಾಗ ಹಿಂದೆ ತಿರುಗಿ ನೋಡುತ್ತಾ, ಸೂತ್ರಧಾರನಿಗೆ ಢಿಕ್ಕಿ ಹೊಡೆಯುತ್ತಾನೆ. ಸೂತ್ರಧಾರ ಬೆಚ್ಚಿಬಿದ್ದು ಯುವಕನನ್ನು ಹಿಡಿದು ನಿಲ್ಲಿಸುತ್ತಾನೆ.*



Downloaded from https:// www.studiestoday.com

Downloaded from https:// www.studiestoday.com

ಸೂತ್ರಧಾರ : ಹೋ ಹೋ, ಯಾರು, ಯಾರಪ್ಪಾ ನೀನು? ಓ, ನೀನಾ! ಎಲ್ಲಿಗೆ ಓಡಿ ಹೋಗ್ತಾ ಇದ್ದೀಯಾ? *(ಯುವಕ ಬೆವರು ಒರೆಸಿಕೊಳ್ಳುತ್ತಾ ಏದುಸಿರು ಬಿಡುತ್ತಾನೆ. ತಾನು ಬಂದ ದಿಕ್ಕನ್ನೇ ಮತ್ತೆ ಮತ್ತೆ ಹಿಂತಿರುಗಿ ನೋಡುತ್ತಾನೆ. ಕುಡಿಯಲು ನೀರು ಬೇಕೆಂದು ಸನ್ನೆ ಮಾಡಿ ಕೇಳುತ್ತಾನೆ)* ನೀರಾ? ತಡಿ, ಕೊಡ್ತೀನಿ. *(ನೀರು ತಂದು ಕೊಡುತ್ತಾನೆ. ಯುವಕ ಅದನ್ನು ಕುಡಿದು ಸ್ವಲ್ಪ ಸುಧಾರಿಸಿಕೊಳ್ಳುತ್ತಾನೆ. ಅವನ ಮುಖದ ಮೇಲೆ ಆತಂಕ ಮಾತ್ರ ಕಮ್ಮಿಯಾಗಿಲ್ಲ)* ಬಾ, ಇಲ್ಲಿ ಕೂತ್ಕೊ.. ಏನಾಯ್ತು ಹೇಳು.

ಯುವಕ : *(ಏದುಸಿರುಬಿಡುತ್ತಾ)* ಬಂದ್ಬಿಟ್ಟೆ ಓಡಿ ಬಂದ್ಬಿಟ್ಟೆ.

ಸೂತ್ರಧಾರ : ಸರಿ, ಅದು ಸ್ಪಷ್ಟವಾಗೇ ಇದ್ಯಲ್ಲ.. ಎಲ್ಲಿಂದ ಬಂದೆ.. ಯಾಕೆ?

ಯುವಕ : ಆದದ್ದಾಗ್ಲಿ, ನೋಡೇಬಿಡೋಣ ಅಂತ ತಪ್ಪಿಸಿಕೊಂಡು ಬಂದ್ಬಿಟ್ಟೆ..

ಸೂತ್ರಧಾರ : ಹೌದಪ್ಪಾ, ಸಂದರ್ಭ ಏನೂಂತ ತಿಳೀಲಿಲ್ಲ.

ಯುವಕ : *(ತಾನು ಬಂದ ದಿಕ್ಕನ್ನು ತೋರಿಸುತ್ತಾ)* ಗುಹೆಯಿಂದ...

ಸೂತ್ರಧಾರ : *(ಆಶ್ಚರ್ಯ)* ಆಂ! ನಿಜವಾಗ್ಲೂ?

ಯುವಕ : ನಿಜವಾಗ್ಲೂ, ನೀವೇ ನೋಡ್ತಿದೀರಲ್ಲಾ *(ಕುತ್ತಿಗೆಯಲ್ಲಿದ್ದ ಬಾಡಿದ ಮಾಲೆಯನ್ನು ಕಿತ್ತು ಬಿಸಾಡುತ್ತಾನೆ.)*

ಸೂತ್ರಧಾರ : ಬಕ? ನಿನ್ನ ನೋಡಲಿಲ್ಲವೇ ಅವನು? ಹಿಡಿಯೋಕೆ ಯತ್ನಿಸಲಿಲ್ಲವೇ?

ಯುವಕ : ನಾನು ಗಾಡಿ ಹೊಡಕೊಂಡು ಹೋದೆ.. ಅವನಿನ್ನೂ ಹೊರಗಡೆ ಬಂದಿರಲಿಲ್ಲ.. ಇನ್ನೂ ನಿದ್ದೆ ಮಾಡ್ತಿದ್ದ ಅಂತ ಕಾಣುತ್ತೆ. ದೂರದಿಂದಲೇ ಗುಹೆ ಕಡೆ ನೋಡಿದೆ..

ಸೂತ್ರಧಾರ : *(ಕುತೂಹಲ)* ಹೂಂ! ಆಮೇಲೆ?

ಯುವಕ : ದಾರಿ ಉದ್ದಕ್ಕೂ ಯೋಚನೆ ಮಾಡ್ತಾನೇ ಇದ್ದೆ. ತುಂಬಾ ಹೆದರಿಕೆ ಆಗ್ತಿತ್ತು. ಅವನು ನನ್ನ ಕತ್ತು ಮುರೀತಾನೆ.. ನನ್ನ ಮೈಯಲ್ಲಿ ಹಲ್ಲೂರಿ ರಕ್ತ ಹೀರ್ತಾನೆ. ನನ್ನ ನೆಲಕ್ಕೆ ಹಾಕ್ಕೊಂಡು ಕಾಲಿನಲ್ಲಿ ಮೆಟ್ಟಿಕೊಂಡು ಸಿಗೀತಾನೆ.

ಸೂತ್ರಧಾರ : *(ಕಿವಿ ಮುಚ್ಚಿಕೊಂಡು)* ಸಾಕು ಸಾಕು! ಕೇಳಲಾರೆ...



Downloaded from https:// www.studiestoday.com

Downloaded from https:// www.studiestoday.com

ಯುವಕ : ಗಾಡಿ ಬಂದ ಶಬ್ದ ಕೇಳಿ ಬಕ ಕೂಗ್ತಾ ಹೊರಕ್ಕೆ ಬಂದ... ನನಗೆ ವಿಪರೀತ ಭಯ ಆಯ್ತು ಅವನ್ನ ನೋಡಿದ ತಕ್ಷಣ ಗಾಡೀನ ಆ ಕಡೆ ತಿರುಗಿಸಿಬಿಟ್ಟು ಒಂದೇ ನೆಗೆತಕ್ಕೆ ಧುಮುಕಿ ಓಡಿ ಬಂದ್ಬಿಟ್ಟೆ. ನಾನು ತಪ್ಪಿಸಿಕೊಂಡಿದ್ದನ್ನ ನೋಡಿ ಬಕ ಗಾಡೀನ ಒದ್ದು ಅನ್ನಾನೆಲ್ಲಾ ಚೆಲ್ಲಾಡಿ ಹಾರಾಡ್ತಾ ಇದ್ದ.. ಇನ್ನೊಂದು ಸಲ ಹಿಂತಿರುಗಿ ನೋಡದೆ ಒಂದೇ ಉಸಿರಿನಲ್ಲಿ ಓಡಿ ಬಂದ್ಬಿಟ್ಟೆ!

ಸೂತ್ರಧಾರ : ಅನಾಹುತ! ಬಕ ಊರೊಳಕ್ಕೆ ನುಗ್ತಾನೆ! ಕರಾರು ಭಂಗವಾಗಿದೆ. *(ಚಡಪಡಿಸುತ್ತಾ ರಂಗದ ಮೇಲೆ ಓಡಾಡುತ್ತಾನೆ.)*

ಯುವಕ : ಅನ್ಯಾಯದ ಅಮಾನುಷ ಕರಾರು.

ಸೂತ್ರಧಾರ : ಅದು ಸರಿ, ನಿಂಗೆ ಅಷ್ಟೊಂದು ಹೆದರಿಕೆ ಆಗಿದ್ರೆ ನಿಮ್ ಮನೇಲಿ ಬೇರೆ ಯಾರಾದ್ರೂ ಹೋಗಬಹುದಿತ್ತು.. ಬಲವಂತವಾಗಿ ಕಳಿಸಿದ್ರೇ ನಿನ್ನ?

ಯುವಕ : ಹೌದು, ಆದರೆ ಬಲವಂತ ಜನಗಳದ್ದು. ನಮ್ಮಲ್ಲಿ ಯಾರು ಹೋದ್ರು ಒಂದೇ .. ಇದರಿಂದ ತಪ್ಪಿಸಿಕೋಬೇಕು ಅಂತ ಯೋಚನೆ ಇದ್ದೋನು ನಮ್ಮನೇಲಿ ನಾನೊಬ್ಬೆ.. ಆದರೆ ಈ ಥರ ತಪ್ಪಿಸಿಕೊಂಡು ಬರಬೇಕಾಯ್ತು.. ಈ ಪದ್ಧತಿ ವಿರುದ್ಧ ಹೋರಾಡೋಕೆ ಸಾವಿನ ಹೆದರಿಕೆಯ ಪ್ರತ್ಯಕ್ಷ ಅನುಭವ ಬೇಕೂಂತ ಕಾಣುತ್ತೆ.

ಸೂತ್ರಧಾರ : ನೀನೇನೋ ತಪ್ಪಿಸಿಕೊಂಡು ಬಂದೆ. ಆದರೆ ಬಕ ಊರೊಳಕ್ಕೆ ನುಗ್ತಾನೆ.. ಅನಾಹುತ ಆಗುತ್ತೆ – ನಗರಪಾಲಕನ ಕೈಗೇನಾದರೂ ಸಿಕ್ಕಿದ್ರೆ ನೀನು ಇನ್ನೊಂದು ಸಲಿ ತಪ್ಪಿಸಿಕೊಳ್ಳೋಕೆ ಆಗಲ್ಲ. ನಿಮ್ಮನೇಲಿ ಉಳಕೊಂಡಿರೋರೂ ನಿನ್ನ ತಪ್ಪಿಗೆ ಶಿಕ್ಷೆ ಅನುಭವಿಸಬೇಕಾಗುತ್ತೆ– ಸ್ವಲ್ಪ ಯೋಚನೆ ಮಾಡು.

ಯುವಕ : ಸದ್ಯಕ್ಕೆ ಬಕ ಊರೊಳಕ್ಕೆ ನುಗ್ಗೋದು ಅನಿವಾರ್ಯ.. ಸ್ವಲ್ಪ ದಿನ ನಗರಪಾಲಕನಿಗೆ ಸಿಕ್ಕದ ಹಾಗೆ ನನಗೆ ರಕ್ಷಣೆ ಕೊಡಿ.. ಆಮೇಲೆ ಏನಾದ್ರೂ ಮಾಡೇ ಮಾಡ್ತೀನಿ.

ಸೂತ್ರಧಾರ : ಏನು ಮಾಡುತ್ತಿ! ಮಣೀ ಅಂಥ ಕಡುಬು! ನೀವೆಲ್ಲಾ ಹುಡುಗ್ರು ಸೇರಿಕೊಂಡು ಮಾತಾಡೋದನ್ನೆಲ್ಲಾ ಕೇಳಿದೀನಿ ನಾನು.



Downloaded from https:// www.studiestoday.com

Downloaded from https:// www.studiestoday.com

ಹಾಗ್ಮಾಡಬೇಕು ಹೀಗ್ಮಾಡಬೇಕು ಅಂಥ ಬರೀ ಬಡಾಯಿ ಕೊಚ್ಚಿಕೋತಿರೇ ವಿನಃ ಒಂದು ತೃಣ ಕೆಲಸ ಮಾಡುಲ್ಲ.

ಯುವಕ : ಜನ ನನ್ನ ಬಲವಂತವಾಗಿ ಬಕನ ಬಾಯಿಗೆ ನೂಕಿದ್ರೂ ಸಾವಿನ ದವಡೆ ವರೆಗೂ ಹೋಗಿ ಬಂದಿದ್ದೀನಿ. ಈ ಹೊಸ ಅನುಭವದಿಂದ ನನಗೆ ಹೊಸ ಶಕ್ತಿ ಬಂದಿದೆ. ಈ ವಿಪತ್ತನ್ನ ಹೇಗೆ ಯಾಕೆ ಎದುರಿಸಿ ಹೋರಾಡಬೇಕು ಅಂತ ಜನಗಳಿಗೆ ತಿಳಿಸೋದು ಈಗ ನನಗೆ ಸಾಧ್ಯ.. ಅವರು ನನ್ನ ಮಾತು ಕೇಳ್ತಾರೆ ಅಂತ ವಿಶ್ವಾಸ ಇದೆ...

ಸೂತ್ರಧಾರ : ಶಾಭಾಶ್! ಆದರೆ ಇವತ್ತು ಬಕ ಊರೊಳಕ್ಕೆ ನುಗ್ತಾನಲ್ಲ.

ಯುವಕ : ನುಗ್ಗಲಿ, ಇಷ್ಟು ವರ್ಷಗಳು ನಾವೇ ಖುದ್ದಾಗಿ ಹೋಗಿ ಅವನ ಹೊಟ್ಟೆ ಸೇರ್ತಾ ಇದ್ದೆವಲ್ಲ. ಅದಕ್ಕಿಂತ ಎಷ್ಟೋ ವಾಸಿ. ಏನಿಲ್ಲಾಂದ್ರೂ ಊರಿನೋರಿಗೆಲ್ಲಾ ಪ್ರಾಣ ಭಯ ಅಂದ್ರೇನು ಅಂತ ಅನುಭವ ಆಗುತ್ತೆ... ಸರದೀ ದಿನ ಬರೋ ಸಾವಿನ ಹೆದರಿಕೆ ಇದ್ದಕ್ಕಿದ್ದಂತೆಯೇ ಊರಿನೋರಿಗೆಲ್ಲಾ ಒಂದೇ ಸಲ ಬಂದ್ರೆ ದಂಗೆ ಎಬ್ಬಿಸೋದು ಸುಲಭ. *(ಊರಿನೊಳಕ್ಕೆ ಬಕ ನುಗ್ಗಿದ್ದಾನೆ. ಜನ ಚೀರಾಡುತ್ತಾ ಕೂಗಾಡುತ್ತಾ ದಿಕ್ಕೆಟ್ಟು ಓಡಾಡುತ್ತಿದ್ದಾರೆ. ರಾಕ್ಷಸನ ಆರ್ಭಟ ಮಧ್ಯೆ ಮಧ್ಯೆ ಕೇಳಿಸುತ್ತಿದೆ. ಜನರ ಚೀರಾಟ ಜೋರಾಗುತ್ತದೆ. ಗದ್ದಲ, ಓಡಾಟಗಳ ಸದ್ದು ಕ್ರಮೇಣ ಕಡಿಮೆಯಾಗಿ, ರಂಗದಲ್ಲಿ ನೀರವತೆ ಮೂಡುತ್ತದೆ. ಸೂತ್ರಧಾರ, ಯುವಕ ಒಬ್ಬರನ್ನೊಬ್ಬರು ಮೌನವಾಗಿ ನೋಡುತ್ತಾರೆ.)*

ಸೂತ್ರಧಾರ : *(ನಿಟ್ಟುಸಿರು ಬಿಟ್ಟು)* ವಾಪಸ್ ಹೋದ ಅಂತ ಕಾಣುತ್ತೆ. ಯಾರನ್ನೋ ಹೊತ್ಕೊಂಡು.

## ೨ನೇ ದೃಶ್ಯ

*ನಗರಪಾಲಕ ಮೂವರು ವರ್ತಕರು ಜೋರಾಗಿ ನಗುತ್ತಾ ಒಬ್ಬರ ಹೆಗಲ ಮೇಲೆ ಒಬ್ಬರು ಕೈ ಹಾಕಿಕೊಂಡು ಖುಷಿಯಿಂದ ಬರುತ್ತಾರೆ.*

ನಗರಪಾಲಕ : ಇನ್ನು ಮೇಲೆ ಯಾರೂ ಬಾಲ ಬಿಚ್ಚೋಹಾಗಿಲ್ಲ. ಉಸಿರೆತ್ತಿದ್ರೆ ಬಲಿ, ಹಾಕಿ ಬಿಡ್ತೀನಿ ನೋಡ್ತಿರಿ. *(ರಂಗದ ಹಿಂದಿನ ತೆರೆಯ*



Downloaded from https:// www.studiestoday.com

Downloaded from https:// www.studiestoday.com

*ಮೇಲೆ ಕುತ್ತಿಗೆಗೆ ಹಗ್ಗ ಕಟ್ಟಿದ ಜನಗಳ ಮೆರವಣಿಗೆ ಹೋಗುತ್ತಿರುವ ನೆರಳು. ಕೋಲಿಗೆ ಸಿಕ್ಕಿಸಿರುವ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಿದ್ದಾರೆ. 'ಅಮಾನುಷ ಕರಾರು ಕೊನೆಗಾಣಲಿ'. 'ಭ್ರಷ್ಟಾಚಾರಿ ನಗರಪಾಲಕನಿಗೆ ಧಿಕ್ಕಾರ'. 'ಜನತೆಯ ರಕ್ತ ಹೀರುವ ವ್ಯಾಪಾರಿಗಳಿಗೆ ಧಿಕ್ಕಾರ. ಬಾಂಧವರೇ ಒಂದಾಗಿ ಬಕಾಸುರ ಮೇಲೆ ದಾಳಿ!ದಬ್ಬಾಳಿಕೆ ಕೊನೆಗಾಣಲಿ!' ಇತ್ಯಾದಿ.. ಅದನ್ನು ಕೇಳಿ ನಗರಪಾಲಕ ಬೆದರಿ ನಿಲ್ಲುತ್ತಾನೆ. ವರ್ತಕರು ಚಿಂತಾಗ್ರಸ್ತರಾಗುತ್ತಾರೆ.)* ಏನಿದು ಗಲಾಟೆ?

೧ನೇ ವರ್ತಕ : ಯಾರೋ ನಮ್ಮ ಜನಾನ ಅಡ್ಡ ದಾರಿಗೆ ಎಳೀತಿದಾರೆ.

೧ನೇ ವರ್ತಕ : ಬಕಾಸುರ ಮೇಲೆ ಯುದ್ಧವಂತೆ!

೩ನೇ ವರ್ತಕ : ನೋಡಿದ್ರೇ ಎಲ್ಲ ಒಗಟಾಗಿರೋ ಹಾಗೆ ಕಾಣುತ್ತೆ.. ನಿಮ್ಮ ಮೇಲೂ ಏನೋ ಹೇಳ್ತಾ ಇದ್ದಾರೆ.

ನಗರಪಾಲಕ : ನನ್ನ ಮೇಲೆ ಮಾತ್ರ ಅಲ್ಲ ನಿಮಗೂ ಧಿಕ್ಕಾರ ಹಾಕ್ತಿದ್ದಾರೆ.. ಇದನ್ನ ಹೀಗೇ ಬಿಡೋದು ಸಾಧ್ಯವಿಲ್ಲ.

ವರ್ತಕರು : ಹೌದು ಹೌದು, ತಕ್ಷಣ ಏನಾದರೂ ಮಾಡಲೇಬೇಕು ಸ್ವಾಮೀ ಓ! ನೋಡಿ ಅಲ್ಲಿ ತಪ್ಪಿಸಿಕೊಂಡು ಬಂದ ಹುಡುಗ ಅವನೆ.

ನಗರಪಾಲಕ : ಹೌದು ಹೌದು, ಅವನೆ. ಮಾಡ್ತೀನಿ ನೋಡ್ತಾ ಇರಿ. ಅವನಿಗೆ! ಸಿಕ್ದಾ ಇವತ್ತು!

೧ನೇ ವರ್ತಕ : ಅವನ ಜೊತೆ ತುಂಬಾ ಜನ ಇದ್ದಾರೆ. ಉಪಾಯವಾಗಿ ನಡ್ಕೋಬೇಕು ನಾವು.

೨ನೇ ವರ್ತಕ : ಬಕಾಸುರ ಏನಾದ್ರೂ ಮತ್ತೊಂದು ಸಲ ರೇಗಿದ್ರೆ ನಮ್ಮ ಊರೇ ನಾಶ ಆಗುತ್ತೆ. ನೋಡಿದ್ರಲ್ಲಾ ಆ ಹುಡುಗ ತಪ್ಪಿಸಿಕೊಂಡು ಬಂದಾಗ..

೩ನೇ ವರ್ತಕ : ಅಮೇಲೆ ನಮ್ಮ ಗತಿ?

ನಗರಪಾಲಕ : ಅದೂ ಅಲ್ಲದೆ, ನಮ್ಮ ಮಹಾರಾಜರಿಗೂ ಕಷ್ಟ ಬರುತ್ತೆ ನಾನೀಗ್ಲೇ ಹೋಗಿ ಸೈನ್ಯ ತೆಗೆಸಿಕೊಂಡು ಬಂದು, ಇವರನ್ನೆಲ್ಲಾ ಮಟ್ಟ ಹಾಕಿಸ್ತೀನಿ.



Downloaded from https:// www.studiestoday.com

Downloaded from https:// www.studiestoday.com

ವರ್ತಕರು : ಹೌದು, ಹೌದು, ಹಾಗೇ ಮಾಡಬೇಕು. ಅದೇ ಸರಿ ಇವರಿಗೆ. (ನಗರಪಾಲಕ ಹೋಗುತ್ತಾನೆ. ವರ್ತಕರು ಚಿಂತಾಕ್ರಾಂತರಾಗಿ ಅವನನ್ನೇ ನೋಡುತ್ತಾ ನಿಲ್ಲುತ್ತಾರೆ. ತೆರೆಯ ಹಿಂದಿನ ಘೋಷಣೆಗಳು, ಮೆರವಣಿಗೆ ಮುಂದುವರಿಯುತ್ತದೆ.)

## ೩ನೇ ದೃಶ್ಯ

ಸೂತ್ರಧಾರ : ಬಕಾಸುರನೊಡನೆ ಮಾಡಿಕೊಂಡ ಶಾಂತಿ–ಒಪ್ಪಂದ ಯಥಾಪ್ರಕಾರ ಜಾರಿಯಲ್ಲಿ ಉಳಿದಿದ್ದು ನಗರಪಾಲಕನಿಗೆ ವರ್ತಕರಿಗೆ, ಮತ್ತು ರಾಜನಿಗೆ ನೆಮ್ಮದಿಯ ಮಾತಾಯಿತು. ಬಕಾಸುರನಂತೂ ಕರಾರಿನ ಎಲ್ಲಾ ನಿಯಮಗಳನ್ನೂ ತಪ್ಪದೆ ಪಾಲಿಸತೊಡಗಿದ. ನಗರದ ಶಾಂತಿಪಾಲನೆಯ ಜವಾಬ್ದಾರಿ ಮತ್ತು ಅಧಿಕಾರ ಪೂರ್ತಿ ನಗರಪಾಲಕನ ಮೇಲೆ ಬಿತ್ತು. ಒಂದು ಕಡೆ ವರ್ತಕರು ಸಂಘ ಕಟ್ಟಿಕೊಂಡು ಅಭಿವೃದ್ಧಿಯಾಗುತ್ತಿದ್ದರೆ ಮತ್ತೊಂದು ಕಡೆ ಶಾಂತಿಪಾಲನೆಯ ಹೆಸರಿನಲ್ಲಿ ನಗರಪಾಲಕ,

*ನ್ಯಾಯಾಲಯ – ನಗರಪಾಲಕನೇ ನ್ಯಾಯಾಧೀಶ. ಜತೆಗೊಬ್ಬ ಅಧಿಕಾರಿ. ನ್ಯಾಯಾಲಯದ ಭಟರು.*

ನಗರಪಾಲಕ : ಈ ದಿನ, ಮೊದಲು ಚಿಲ್ಲರೆ ಖಟ್ಲೆಗಳನ್ನು ಬೇಗ ಮುಗಿಸಿ ಕೊನೆಗೆ ಮುಖ್ಯವಾದ ಖಟ್ಲೆ ವಿಚಾರಣೆ ಮಾಡ್ತೀನಿ. ಸುಮ್ಮನೆ ಕಾಲ ವ್ಯರ್ಥ ಕೂಡದು. ಆದ್ರಿಂದ ಎಲ್ಲಾ ಆಪಾದಿತರೂ ತಮ್ಮ ತಮ್ಮ ತಪ್ಪುಗಳನ್ನು ಮೊದಲೇ ಒಪ್ಪಿಕೊಂಡು ಬಿಡುವುದು ಒಳ್ಳೇದು. ಎಚ್ಚರಿಕೆ! ಹುಂ! ಮೊದಲನೇ ಖಟ್ಲೆ ಯಾವುದು? *(ಅಧಿಕಾರಿಯ ಕಡೆ ನೋಡುತ್ತಾನೆ. ಅಧಿಕಾರಿ ಒಂದು ದೊಡ್ಡ ಪುಸ್ತಕದ ಹಾಳೆಗಳನ್ನು ಮಗುಚುತ್ತಾ, ನೋಡಿ ಹೇಳುತ್ತಾನೆ.)*

ಅಧಿಕಾರಿ : ಮೊದಲನೇ ವಿಚಾರಣೆ, ವರ್ತಕ ಗುಪ್ತಧನ ಅವರದ್ದು, ಸ್ವಾಮಿ. ಆಪಾದಿತ ರೈತ ಚರಣದಾಸ.



Downloaded from https:// www.studiestoday.com

Downloaded from https:// www.studiestoday.com

*ರಂಗದ ಒಂದು ಪಕ್ಕದಿಂದ ಒಬ್ಬ ವರ್ತಕ ಮತ್ತು ರೈತನ ಪ್ರವೇಶ. ರೈತ ನಗರಪಾಲಕನಿಗೆ ಸಾಷ್ಟಾಂಗ ಅಡ್ಡಬಿದ್ದು ಅಳುವ ಧ್ವನಿಯಲ್ಲಿ ಬೇಡಿಕೊಳ್ಳುತ್ತಾನೆ.*

ರೈತ : ನಾನೇನೂ ತಪ್ಪು ಮಾಡಿಲ್ಲ ಮಾಸ್ವಾಮೀ, ಕಾಪಾಡಬೇಕು. ಬಡವಾಂತ ನನ್ನ ಎಳಕೊಂಡು ಬಂದಿದಾರೆ.

ನಗರಪಾಲಕ : ಸದ್ದು! ವಿಚಾರಣೆ ನಡೆಸಿ ತಕ್ಕ ಶಿಕ್ಷೆ ಕೊಡ್ತೀನಿ; ರಗಳೆ ಮಾಡದೆ ತಪ್ಪು ಒಪ್ಪಿಕೊ.

ವರ್ತಕ : *(ದೇಶಾವರಿ ನಗು)* ಎಲ್ಲಿ ಒಪ್ಪಿಕೋತಾರೆ ಸ್ವಾಮೀ, ಇವರೆಲ್ಲಾ ಖದೀಮರು.

ರೈತ : ಖಂಡಿತಾ ನನಗೇನೂ ತಿಳೀದು ಸ್ವಾಮಿ, ದ್ಯಾವರಾಣೆ?

ನಗರಪಾಲಕ ; ಏನ್ ಹೇಳ್ತೀರಿ, ಗುಪ್ತಧನರೇ?

ವರ್ತಕ : ನಾ ಹೇಳೋದೇನಿದೆ? ಸ್ವಾಮೀ, ಎಲ್ಲಾ ತಿಳಿದೋರು ತಾವು, ನ್ಯಾಯ ದೊರಕಿಸಿಕೊಟ್ಟು ಕಾಪಾಡಬೇಕು…

ರೈತ : ನನ್ನ ತಪ್ಪೇನೂಂತ ಯಾರಾದ್ರೂ ಏಳ್ತೀರಾ?

ಅಧಿಕಾರಿ : ಸುಮ್ನೆ ನಿಂತ್ಕೊಳಯ್ಯಾ.. ನೀನು ಹೇಳಿದ ಹಾಗೆ ನಡೆಸಬೇಕೋ ಈ ನ್ಯಾಯಾಲಯಾನ? ಇಲ್ಲೂ ಶಾಸ್ತ್ರ, ಕಾನೂನು ಎಲ್ಲಾ ಇದೆ…

*ಈ ಮಧ್ಯೆ ವರ್ತಕ ಮತ್ತು ನಗರಪಾಲಕ ಏನೋ ಗುಟ್ಟಾಗಿ ಮಾತಾಡಿಕೊಳ್ಳುತ್ತಾರೆ.*

ನಗರಪಾಲಕ : ಏನಂತೆ ಅವನ ಗಲಾಟೆ?

ಅಧಿಕಾರಿ : ಆಪಾದ್ನೆ ಏನೂಂತ ಅವನಿಗೆ ಹೇಳಬೇಕಂತೆ!

ನಗರಪಾಲಕ : ಓಹೋ! ಹಾಗೋ ಸಮಾಚಾರ.. ಎಷ್ಟು ಹೆಚ್ಚಿಕೊಂಡಿದಾರೆ. ಈ ಜನ!

ರೈತ : ಹಾಗಲ್ಲ ಸ್ವಾಮೀ, ನಾ ಕೇಳಿದ್ದು..

ಅಧಿಕಾರಿ : ಸಾಕು ಸಾಕು, ಸುಮ್ಮನೆ ನಿಂತ್ಕೊ, ತಲೆಹರಟೆ ಒದರಬೇಡ ಇಲ್ಲಿ.

ರೈತ : *(ದೀನನಾಗಿ)* ಕ್ಷಮಿಸಬೇಕು, ಸ್ವಾಮೀ, ನನ್ನ ಇಲ್ಲಿಗೆ ಯಾಕೆ ಕರಕೊಂಡು ಬಂದಿದಾರೇಂತನೇ ನಂಗೆ ಗೊತ್ತಿಲ್ಲ.

ವರ್ತಕ : ಯಾಕೇಂದ್ರೆ ಅಷ್ಟೂ ಗೊತ್ತಿಲ್ವಾ? ನ್ಯಾಯಾಲಯ ಇರೋದು ಶಿಕ್ಷೆ ವಿಧಿಸೋಕೆ.

ರೈತ : ಶಿಕ್ಷೆ? ನಾನೇನೂ ತಪ್ಪು ಮಾಡಿಲ್ಲ.

ಅಧಿಕಾರಿ : ನಿಂಗೇನ್ ಗೊತ್ತಾಗುತ್ತೆ ಆ ವಿಷಯ ಎಲ್ಲಾ, ಸುಮ್ನಿರು.



Downloaded from https:// www.studiestoday.com

Downloaded from https:// www.studiestoday.com

ರೈತ : ಬಡವಾ ಸ್ವಾಮೀ, ಮನೇಲಿ ಹೆಂಡ್ರು ಮಕ್ಳಿಗೆ ಯಾರೂ ಇಲ್ಲ. .. ದಯಾ ಇಡಬೇಕು..

ನಗರಪಾಲಕ : ಏನಯ್ಯಾ ಇಷ್ಟೊಂದು ಹರಟ್ತಿದೀಯಾ? ನೀನು ಯಾರ ಮುಂದೆ ನಿಂತಿದಿ ಅನ್ನೋ ಜ್ಞಾನವಾದ್ರೂ ಇದ್ಯಾ? ಹುಂ, ಸುಮ್ನೆ ಒಪ್ಪಿಕೊಂಡು ಬಿಡು. ನಿನ್ನ ಜತೆ ಆಟ ಆಡೋಕೆ ಪುರುಸೊತ್ತಿಲ್ಲ.

ಅಧಿಕಾರಿ : ಒಪ್ಕೊಳಯ್ಯಾ ಮುಚ್ಕೊಂಡು,

ವರ್ತಕ : ಹಾಗೆಲ್ಲಾ ಒಪ್ಕೊಳುಲ್ಲ ಸ್ವಾಮೀ ಅವ್ರು, ಕೊಡೋದ್ ಕೊಟ್ಟಲ್ಲದೆ ಬಾಯಿ ಬಿಡೋದಿಲ್ಲ.

ನಗರಪಾಲಕ : *(ಭಟರನ್ನುದ್ದೇಶಿಸಿ)* ಹುಂ! ಅದೇ ಸರಿ, ಇವನ ಬೆನ್ನ ಮೇಲೆ ಹತ್ತು ಛಡಿ ಏಟು ಬಿಡಿ.. *(ರೈತ ನಡುಗುತ್ತಾ ಮತ್ತೊಮ್ಮೆ ಅಡ್ಡ ಬೀಳುತ್ತಾನೆ)*

ರೈತ : ಕಾಪಾಡಬೇಕು, ಮಾಸ್ವಾಮೀ.. ನಂದೇನೂ ತಪ್ಪಿಲ್ಲ...

ಅಧಿಕಾರಿ : ಒಪ್ಪಿಕೋ, ಮತ್ತೆ.. *(ಭಟರು ಛಡಿ ಹಿಡಿದು ರೈತನ ಪಕ್ಕಕ್ಕೆ ಬರುತ್ತಾರೆ. ರೈತ ಥರಥಗುಟ್ಟುತ್ತಾನೆ.)*

ರೈತ : ನಾನೇನು ಒಪ್ಪಿಕೋಬೇಕು ಅನ್ನೋದನ್ನಾದ್ರೂ..

ಅಧಿಕಾರಿ : ಅದೆಲ್ಲಾ ಅಧಿಕಪ್ರಸಂಗ ನಿಂಗ್ಯಾಕಯ್ಯಾ.. ಹೇಳಿದಷ್ಟು ಕೇಳು.

ರೈತ : ನನ್ನ ತಪ್ಪು ಏನೂಂತಾನಾದ್ರೂ ಏಳಿ ಸ್ವಾಮೀ...

ನಗರಪಾಲಕ : ಅದೆನ್ನೆಲ್ಲಾ ಕೇಳೋ ಅಧಿಕಾರ ನಿಂಗಿಲ್ಲಾ.. ಆಪಾದ್ನೆ ಏನೂಂತ ನಮಗ್ಗೊತ್ತಿದೆ. ವಿಚಾರಣೆ ನಡೆಸೋಕೆ ಅಷ್ಟಿದ್ರೆ ಸಾಕು.. ಎಲ್ಲಾರನ್ನೂ ಹೇಳ್ತಾ ಕೇಳ್ತಾ ಕೂತಿದ್ರೆ ಕೆಲ್ಸಾ ನಡೆದ ಹಾಗೇ ಇದೆ.. ಹುಂ, ಏನ್ ನೋಡ್ತಾ ಇದೀರಿ, ಬಿಡಿ ಏಟು *(ಭಟರು ರೈತನ ಬೆನ್ನಿನ ಮೇಲೆ ಬೆತ್ತದಿಂದ ಹೊಡೆಯುತ್ತಾರೆ. ರೈತ ನೋವಿನಿಂದ ಒದ್ದಾಡುತ್ತಾನೆ. ಏಟು ತಾಳಲಾರದೆ ಒಪ್ಪಿಕೊಳ್ಳುತ್ತಾನೆ.)*

ರೈತ : ಬ್ಯಾಡಿ ಬ್ಯಾಡಿ, ಒಡೀಬ್ಯಾಡಿ, ನೀವೇಳ್ದಾಗ್ ಕೇಳ್ತೀನಿ, ಒಡೀಬ್ಯಾಡಿ..

ನಗರಪಾಲಕ : ಒಪ್ಕೊಂಡ್ಯಾ?

ರೈತ : ಒಪ್ಕೊಂಡೇ ಒಪ್ಕೊಂಡೆ, ಒಡೀಬ್ಯಾಡಿ..

ವರ್ತಕ : *(ನಗುತ್ತಾ)*ನಾ ಹೇಳಲಿಲ್ಲವೇ ಸ್ವಾಮೀ, ನಂಗೊತ್ತು ಇವರ ಚಾಳಿ, ನಾಲ್ಕೇಟ್ ಚನ್ನಾಗಿ ಬಿದ್ರೆ ಬಾಯಿ ಬಿಡ್ತಾರೆ.



Downloaded from https:// www.studiestoday.com

Downloaded from https:// www.studiestoday.com

ನಗರಪಾಲಕ : ಹುಂ! ಸಾಕು, ನಿಲ್ಸಿ. ಹೊಡೀಬೇಡಿ, ಪಾಪ, ಒಪ್ಪಿಕೊಂಡಿದ್ದಾನೆ. *(ಕಾಗದದ ಮೇಲೆ ಬರೆಯುತ್ತಾನೆ. ರೈತ ವಿಲಿ ವಿಲಿ ಗುಟ್ಟುತ್ತಾ ಬೆನ್ನು ತಡವರಿಸಿಕೊಳ್ಳುತ್ತಾ ನರಳುತ್ತಾನೆ.)* ಸದ್ದು *(ತಾನು ಬರೆದ ಕಾಗದವನ್ನು ತೆಗೆದುಕೊಂಡು ಓದುತ್ತಾನೆ.)* ಏಕಚಕ್ರನಗರದ ಶ್ರೀಮಂತ ವರ್ತಕ, ದಾನಶೂರ, ದಯಾಳು *(ವರ್ತಕನ ಕಡೆ ನೋಡಿ ಕಣ್ಣು ಮಿಟುಕಿಸುತ್ತಾನೆ. ವರ್ತಕ ಸಂತುಷ್ಟನಾಗಿ ತಲೆದೂಗುತ್ತಾನೆ. ಭಟರಿಬ್ಬರೂ ರಂಗದ ಮುಂಭಾಗಕ್ಕೆ ಬಂದು ನ್ಯಾಯಾಲಯಕ್ಕೆ ಕೇಳಿಸದಂತೆ ಮೆಲ್ಲಗೆ ಮಾತಾಡಿಕೊಳ್ಳುತ್ತಾರೆ.)*

೧ನೇ ಭಟ : ಒಳ್ಳೇ ಅದೃಷ್ಟ ಖುಲಾಯ್ಸ್ಬಿಟ್ತೆ, ನಮ್ಮ ಸ್ವಾಮಿಯವರ್ಗೆ ಇವತ್ತು.

೨ನೇ ಭಟ : ಏನಿಲ್ಲಾಂದ್ರು ಹತ್ತು ಖಂಡ್ಗ ಅಕ್ಕಿ ಕೈ ಬಿಟ್ಟಿರಬೇಕು, ಈ ದಾನಶೂರ ಗುಪ್ತಧನಂಗೆ, ಇವತ್ತು.

೧ನೇ ಭಟ : ಜತೇಗೆ ಹಣಾನೂ ಇರಬೇಕು.

೧ನೇ ಭಟ : ಹೌದೌದು.. ಏನೇ ಕೊಟ್ರೂ ಮೇಲೆ ದಕ್ಷಿಣೆ ಇಲ್ದೆ ಮಾತಾಡುವ ಹಂಗೇ ಇಲ್ಲ, ನಮ್ಮ ಸ್ವಾಮಿಗಳ ತಾವ..

ನಗರಪಾಲಕ : *(ಭಟರನ್ನು ನೋಡಿ)* ಸದ್ದೂ ಸದ್ದು!.. 'ದಯಾಳು ಗುಪ್ತಧನರು ಬಡ ರೈತ ಚರಣದಾಸನ ವಿರುದ್ಧ ನಡೆಸಿದ ಈ ಕಟ್ಲೆಯ ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಿದ್ದೇವೆ. ಮತ್ತು ಚರಣದಾಸನ ಅಪರಾದ ಸಿದ್ಧವಾಗಿದೆ. ಅದೂ ಅಲ್ಲದೆ ಅವನು ತನ್ನ ಸ್ವಂತ ಖುಷಿಯಿಂದ ಮುಂದೆ ಬಂದು ತನ್ನ ಅಪರಾಧವನ್ನು ಒಪ್ಪಿಕೊಂಡಿರುವುದರಿಂದ ಅವನು ಅಪರಾಧಿ ಎಂಬುದು ನಿರ್ವಿವಾದವಾಗಿ ರುಜುವಾತಾಗಿದೆ. ನ್ಯಾಯಾಲಯ ಚರಣದಾಸನ ಸತ್ಯಸಂಧತೆಯನ್ನು ಅಪಾರವಾಗಿ ಮೆಚ್ಚಿಕೊಂಡರೂ ಅವನ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು...

ರೈತ : ಸಿಕ್ಷೆ. ಏನು ತಪ್ಪಿಗೆ?

ಅಧಿಕಾರಿ : ಸದ್ದು!

ನಗರಪಾಲಕ : ಕಾನೂನಿನ ಪ್ರಕಾರ ವಿಧಿಸಲೇ ಬೇಕಾಗಿದೆ. ನಿಷ್ಪಕ್ಷಪಾತವಾದ ಈ ನ್ಯಾಯಾಲಯದ ತೀರ್ಪು ಏನೆಂದರೆ, ಶ್ರೀಮಂತ ವರ್ತಕ, ದಾನಶೂರ, ದಯಾಳು (ಮತ್ತೊಮ್ಮೆ ವರ್ತಕನನ್ನು ನೋಡಿ ಕಣ್ಣು



Downloaded from https:// www.studiestoday.com

Downloaded from https:// www.studiestoday.com

ಮಿಟುಕಿಸುತ್ತಾನೆ.) ಗುಪ್ತಧನರ ಶರಧಿಯ ದಿನ ಬಕಾಸುರನಿಗೆ ಒಪ್ಪಿಸಲು ಚರಣದಾಸ ಒಬ್ಬ ಮನುಷ್ಯನನ್ನು ಒದಗಿಸತಕ್ಕದ್ದು.

ರೈತ : *(ಗಾಬರಿ)* ಸ್ವಾಮೀ ಸ್ವಾಮೀ, ಸ್ವಲ್ಪ ಕೇಳಿ ಇಲ್ಲಿ..

ನಗರಪಾಲಕ : *(ಕೋಪ)* ಸದ್ದೂ! *(ಭಟರ ಕಡೆ ನೋಡುತ್ತಾನೆ. ಭಟರು ಬಂದು ರೈತನನ್ನು ಹಿಡಿದುಕೊಳ್ಳುತ್ತಾರೆ)* ಒದಗಿಸತಕ್ಕದ್ದು. ಹಾಗೇ ಮನುಷ್ಯನನ್ನು ಒದಗಿಸಲು ತಪ್ಪಿದ ಪಕ್ಷದಲ್ಲಿ ಚರಣದಾಸನೇ ಬಕಾಸುರನಿಗೆ ಆಹಾರವಾಗಿ ಹೋಗತಕ್ಕದ್ದು. ಈ ತೀರ್ಪಿನಿಂದ ಚರಣದಾಸನ ಮನೆಯ ಸರದಿಯಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಅವನು ಅದನ್ನು ಕೂಡಾ ಕಾನೂನಿಗನ್ವಯ ನಡೆಸಿಕೊಡತಕ್ಕದ್ದು.

ರೈತ ; ಯಾವ ತಪ್ಪು ಮಾಡಿದೀನಿ ನಾನು.. *(ಕ್ಷೀಣವಾಗಿ ಧ್ವನಿ ಎಳೆಯುತ್ತಾ ಕುಸಿಯುತ್ತಾನೆ. ಭಟರು ಅವನನ್ನೆಬ್ಬಿಸಿ ಹೊರಗೆ ಕರೆದೊಯ್ಯುತ್ತಾರೆ)*

ನಗರಪಾಲಕ : ಹೇಗಿದೆ ತೀರ್ಪು?

ವರ್ತಕ ; ಆಹಾ! ಸ್ವಾಮೀ, ನಿಜ ಹೇಳಬೇಕೂಂದ್ರೆ ನನಗೆ ಮೂರ್ಛೆ ಬೀಳೋವಷ್ಟು ಸಂತೋಷ ಆಯ್ತು! ಏನು ವಾಗ್ಝರಿ! ಏನು ಪಾಂಡಿತ್ಯ! ಕಾನೂನು ಶಾಸ್ತ್ರಾನ ನಿಮ್ಮಷ್ಟು ಚನ್ನಾಗಿ ತಿಳ್ಕೊಂಡಿರೋರನ್ನ ನಾನು ಬೇರೆಲ್ಲೂ ಕಂಡಿಲ್ಲ..

ಅಧಿಕಾರಿ : ಅದೂ ಅಲ್ಲದೆ ಬಡವರ ಮೇಲೆ ಎಷ್ಟೊಂದ್ ಕರುಣೆ!

ವರ್ತಕ : ಹೌದು ಹೌದು! ಪಾಪ! ಆ ಬಡಪಾಯಿ ಚರಣದಾಸನ ಸತ್ಯಸಂಧತೇನ ಹ್ಯಾಗೆ ಹೊಗಳಿದ್ರು, ಕೇಳಿದ್ರಲ್ಲ!

ಅಧಿಕಾರಿ : ನಿನ್ನೇ ದಿನ ನಾನೇ ಬರಕೊಟ್ಟೆ ಈ ತೀರ್ಪನ್ನ.

*ವರ್ತಕ ಎಲ್ಲರಿಗೂ ವಂದಿಸುತ್ತಾ ನಿರ್ಗಮಿಸುತ್ತಾನೆ.*

ನಗರಪಾಲಕ : ಸಾಕು ಸಾಕು, ನನ್ನ ಹೊಗಳಿದ್ದು. ಮುಂದಿನ ಖಟ್ಲೆ.. ಕಾಲಹರಣಕ್ಕೆ ಪುರುಸೊತ್ತಿಲ್ಲ.. ನನ್ನ ಕೈ ಬೇರೆ ಕಡೀತಿದೆ. ಅಂದ್ವಾಗೆ ಕೈ ಕಡಿದ್ರೆ ಏನು ಶಕುನ?



Downloaded from https:// www.studiestoday.com

Downloaded from https:// www.studiestoday.com

ಅಧಿಕಾರಿ : ನಿಮ್ಮ ಅದೃಷ್ಟ ಚನ್ನಾಗಿದೆ ಅಂತ.. ಇನ್ನೂ ಸ್ಪಷ್ಟವಾಗಿ ಹೇಳಬೇಕಾದ್ರೆ, ಧನ ಲಾಭ..ಯಾವ ಕೈ? ಎಡಗೈಯೋ ಬಲಗೈಯೊ?

ನಗರಪಾಲಕ : ಎರಡೂ ಕಡೀತಿದೆ.

ಅಧಿಕಾರಿ : ಹಾಗಾದ್ರೆ ಎರಡು ಕೈಲೂ ಸಂಪಾದ್ನೆ... ಸ್ವಾಮಿಗಳು ನಮ್ಮನ್ನ ಮರೀಬಾರ್ದು..

ನಗರಪಾಲಕ : ಇರಲಿ, ಇರಲಿ. ನೋಡೋಣಂತೆ.. ಅಧಿಕಾರಿಗಳನ್ನು ಕರಿ ಬೇಗ...

*ಭಟರು ಇಬ್ಬರು ಪ್ರಜೆಗಳನ್ನು ಕರೆದುತರುತ್ತಾರೆ. ಇಬ್ಬರೂ ಒಬ್ಬರನ್ನೊಬ್ಬರು ಶಪಿಸುತ್ತಾ, ದೂಷಿಸುತ್ತಾ ಬರುತ್ತಾರೆ.*

ಅಧಿಕಾರಿ : ಸದ್ದೂ! ನ್ಯಾಯಾಲಯದಲ್ಲಿದೀರಾ ಅನ್ನೋ ನಿಗಾ ಇರಲಿ!

ಕಕ್ಷಿ : ಸ್ವಾಮಿ, ಮೊದಲು ನನ್ನ ಅಹವಾಲು ಕೇಳಬೇಕು.

ಪ್ರತಿಕಕ್ಷಿ : ಕೂಡದು ಮಾಸ್ವಾಮೀ! ಮೊದ್ಲು ನನ್ನ ಮಾತು ಕೇಳಬೇಕು.

ನಗರಪಾಲಕ : ಅಪರಾಧಿಗಳೇ! ಏನಿದು ಗದ್ದಲ ನಿಮ್ಮದು! ನಾನ್ಯಾರ ಮಾತು ಮೊದಲು ಕೇಳಬೇಕು ಅನ್ನೋದನ್ನ ನೀವಲ್ಲ ಹೇಳೋದು.

ಕಕ್ಷಿ : ನಂಗೆ ನ್ಯಾಯ ಬೇಕು.

ಪ್ರತಿಕಕ್ಷಿ : ನಂಗಾಗಿರೋ ಅನ್ಯಾಯಕ್ಕೆ ಪರಿಹಾರ ಬೇಕು! ನನ್ನ ಅಹವಾಲು ದಯವಿಟ್ಟು ಕೇಳಿ.

ನಗರಪಾಲಕ : ಅದೆಲ್ಲ ಸಾಧ್ಯವಿಲ್ಲ.

ಕಕ್ಷಿ : *(ಸಂತೋಷದಿಂದ)* ನೀವ್ಹೇಳೋದೇ ಸರಿ, ಸ್ವಾಮಿ. ನನ್ನ ಅಹವಾಲು ಕೇಳಿ, ನನಗೆ ನ್ಯಾಯ ದೊರಕಿಸಿಕೊಡಿ ಸ್ವಾಮೀ..

ನಗರಪಾಲಕ : ಅದೆಲ್ಲ ಸಾಧ್ಯವಿಲ್ಲಾ!

ಕಕ್ಷಿ, ಪ್ರತಿಕಕ್ಷಿ : *(ಆಶ್ಚರ್ಯದಿಂದ)* ಹಾಗಾದ್ರೆ ಯಾರ ಮಾತೂ ಕೇಳುಲ್ವ? *(ನಗರಪಾಲಕ ಕೈ ಕೆರೆದುಕೊಳ್ಳುತ್ತಾನೆ. ಅಧಿಕಾರಿ ಕಕ್ಷಿ ಪ್ರತಿಕಕ್ಷಿಗಳ ಬಳಿ ಹೋಗಿ ಏನೋ ಉಸುರುತ್ತಾನೆ)*

ಕಕ್ಷಿ : ಓ. ಹಂಗಾ ಸಮಾಚಾರ! *(ನಗರಪಾಲಕನ ಎಡಗಡೆಗೆ ಹೋಗಿ ಅವನ ಕೈಯಲ್ಲಿ ಗುಟ್ಟಾಗಿ ಹಣ ಇಡುತ್ತಾನೆ)*



Downloaded from https:// www.studiestoday.com

Downloaded from https:// www.studiestoday.com

ಪ್ರತಿಕಕ್ಷಿ : ಹಿಂಗಾ ಇಲ್ಲಿ, ಯವಾರ! *(ಓಡಿ ಬಂದು ನಗರಪಾಲಕನ ಬಲಗೈಯಲ್ಲಿ ಹಣ ಇಡುತ್ತಾನೆ. ನಗರಪಾಲಕ ಹಣವನ್ನು ಜೇಬಿಗೆ ಸೇರಿಸಿ ಮತ್ತೆ ಕೈ ಚಾಚುತ್ತಾನೆ.)*

ಅಧಿಕಾರಿ : ನ್ಯಾಯಾಲಯಕ್ಕೆ ತಕ್ಕ ಮರ್ಯಾದೆ ತೋರಿಸದಿದ್ದರೆ ನ್ಯಾಯ ದೊರಕುಲ್ಲ ಅಂತ ತಿಳ್ಕೊಳಿ.

*ಕಕ್ಷಿ ಮತ್ತೆ ನಗರಪಾಲಕನ ಎಡಗೈ ತುಂಬುತ್ತಾನೆ. ಅದನ್ನು ಕಂಡು ಪ್ರತಿಕಕ್ಷಿ ಬಲಗೈ ತುಂಬುತ್ತಾನೆ. ನಗರಪಾಲಕ ಕೈಗೆ ಬಂದ ಹಣವನ್ನು ಜೇಬಿಗೆ ಸೇರಿಸಿ ಮತ್ತೆ ಮತ್ತೆ ಕೈ ಒಡ್ಡುತ್ತಿರುತ್ತಾನೆ.*

ಕಕ್ಷಿ : ಮಾಸ್ವಾಮಿಗಳು ಬಡವರ ಮೇಲೆ ದಯ ಮಡಗಬೇಕು.

ಪ್ರತಿಕಕ್ಷಿ : *(ತನ್ನ ಹಣದ ಚೀಲದಿಂದ ಕೈತುಂಬಾ ನಾಣ್ಯಗಳನ್ನು ತೆಗೆದು ನಗರಪಾಲಕನ ಕೈತುಂಬಿ ವಿಕಟವಾಗಿ ನಕ್ಕು ಅವನ ಪಕ್ಕದಲ್ಲೇ ನಿಲ್ಲುತ್ತಾನೆ.)* ಮಾಸ್ವಾಮಿಗಳು ನಂಗೆ ನ್ಯಾಯ ದೊರಕಿಸಿಕೊಡಬೇಕು.

ನಗರಪಾಲಕ : *(ಕಕ್ಷಿಗೆ)* ನಿನ್ನ ಅಪರಾಧ ಸಿದ್ಧವಾಗಿದೆ.

ಪ್ರತಿಕಕ್ಷಿ : *(ಸಂತೋಷದಿಂದ)* ಮಾಸ್ವಾಮಿಗಳ ದಯ! ನಂಗಾಗಿರೋ ಅನ್ಯಾಯ ಏಳ್ತೀನಿ, ತಕ್ಕ ಪರಿಹಾರ ಕೊಡಿಸಬೇಕು.

ನಗರಪಾಲಕ : ಸದ್ದು! ನಿಂಗೆ ಶಿಕ್ಷೆ ಆಗದೆ ಇರೋದೇ ಪರಿಹಾರ..*(ಕಕ್ಷಿಗೆ)* ನೀನು ಶ್ರೀಮಂತ ಶಿರೋಮಣಿ ಸುವರ್ಣಗುಪ್ತನ ಸರದಿಯ ದಿನ, ಅಂದರೆ *(ಅಧಿಕಾರಿಯನ್ನು ಉದ್ದೇಶಿಸಿ)* ಯಾವತ್ತಿದೆ ಸುವರ್ಣಗುಪ್ತನ ಸರದಿ, ನೋಡಿ ಹೇಳು..

ಅಧಿಕಾರಿ : *(ಒಂದು ದಪ್ಪ ಪುಸ್ತಕದ ಹಾಳೆಗಳನ್ನು ತಿರುವುತ್ತಾ)* ಸ ಸಾ ಸಿ ಸೀ ಸು.. ಸು.. ಸುವರ್ಣಗುಪ್ತ – ಹಾ ! ಸಿಕ್ತು! ಮುಂದಿನ ಏಕಾದಶಿ ದಿನ ಇದೆ, ಸ್ವಾಮಿ..

ನಗರಪಾಲಕ : ಮುಂದಿನ ಏಕಾದಶಿ ದಿನ ಸುವರ್ಣಗುಪ್ತನ ಬದಲು ಬಕಾಸುರನಿಗೆ ಆಹಾರವಾಗಿ ಹೋಗತಕ್ಕದ್ದು.

ಕಕ್ಷಿ : ಅಯ್ಯಯ್ಯೋ! ಸ್ವಾಮಿ, ನನ್ನ ಮಾತು ಕೇಳಿ ಒಸೀ..

ನಗರಪಾಲಕ : ಇಲ್ಲಿ ರಂಪ ಮಾಡ್ಬೇಡ, ಸುಮ್ನೇ.. ಹೊರಕ್ಕೆಳಕೊಂಡು ಹೋಗಿ, ಇವನ್ನ.



Downloaded from https:// www.studiestoday.com

Downloaded from https:// www.studiestoday.com

*(ಕಕ್ಷಿಯನ್ನು ಭಟರು ಎಳೆದುಕೊಂಡು ಹೋಗುತ್ತಾರೆ.)*

ಪ್ರತಿಕಕ್ಷಿ : ಸ್ವಾಮೀ, ಪರಿಹಾರ.. ನಂಗೆ..

ನಗರಪಾಲಕ : ಸುಮ್ಮನೇ ಹೋಗ್ತೀಯೋ, ಇಲ್ಲಾ ಅವನಿಗೆ ಸಿಕ್ಕಿದ್ ಪರಿಹಾರಾನೇ ನಿಂಗೂ ಕೊಡ್ಲೋ!

ಪ್ರತಿಕಕ್ಷಿ : ಅಯ್ಯಯ್ಯೋ! ಬೇಡಿ ಸ್ವಾಮಿ, ಬೇಡಿ *(ಓಡುತ್ತಾನೆ)*

*(ಅಧಿಕಾರಿ, ನಗರಪಾಲಕ ಗಹಗಹಿಸಿ ನಗುತ್ತಾರೆ. ಭಟರು ಕೈಕೊಡವಿ ಒಳಗೆ ಬಂದು ತಲೆ ಕೆರೆದುಕೊಂಡು ನಗರಪಾಲಕನ ಮುಂದೆ ಹಲ್ಲುಗಿಂಜುತ್ತಾ ನಿಲ್ಲುತ್ತಾರೆ.)*

ನಗರಪಾಲಕ : ಏನ್ರೋ ಹಲ್ ಕಿರೀತಿದೀರಾ?

1ನೇ ಭಟ : ಮಾಸ್ವಾಮಿಗಳು ನಮ್ಮನ್ ಮರೀಬಾರ್‌ದು..

2ನೇ ಭಟ : ಬಡವರ ಮೇಲೆ ದಯಾ ಮಡಗ್‌ಬೇಕು.

1ನೇ ಭಟ : ಇವತ್ತು ಲಕ್ಷ್ಮಿ ಒಲಿದವ್ಳೆ, ನಿಮ್ಗೆ.

ನಗರಪಾಲಕ : ಇರ್ಲಿ, ಇರ್ಲಿ, ನೋಡೋಣಂತೆ..

ಅಧಿಕಾರಿ : ನಮ್ಮ ಸ್ವಾಮಿಗಳು ನಮ್ಮನ್ನೆಲ್ಲಾ ಹಾಗೇ ಮರೆಯೋರಲ್ಲ ಕಣ್ರೋ..

2ನೇ ಭಟ : ಏನೋ ಬುದ್ಧಿ, ತಾವೇನಾರ ಕೊಟ್ರೆ ತಮ್ಮೆಸ್ರು ಏಳ್ಕೊಂಡು ಉಣ್ತೇವಿ..

1ನೇ ಭಟ : ನಿಮ್ಗೆ ದಿನಾ ಹಿಂಗೆ ಸಂಪಾದ್ನೆ ಆಗ್ಲಿ ಅಂತ ಪ್ರಾರ್ತ್ನೆಮಾಡ್ತೀವಿ.

ನಗರಪಾಲಕ : ಆಗ್ಲಿ, ಆಗ್ಲಿ, ಅದೆಲ್ಲಾ ಆಮೇಲೆ. ಮುಂದಿನ ಖಟ್ಲೆ!

*(ಭಟರು ಓಡಿ ಹೋಗಿ ಐದು ಜನ ಯುವಕರನ್ನು ಕರೆದು ತರುತ್ತಾರೆ. ಅವರು ರಾಜನ ವಿರುದ್ಧ, ಬಕಾಸುರನ ವಿರುದ್ಧ ಜನರನ್ನು ಎತ್ತಿ ಕಟ್ಟಿದವರು. ನಗರಪಾಲಕ ಯಥಾಪ್ರಕಾರ ಕೈಚಾಚುತ್ತಾನೆ.)*

1ನೇ ಯುವಕ : ಲಂಚಗುಳಿಗೆ.

ಉಳಿದವರು : ಧಿಕ್ಕಾರ.

1ನೇ ಯುವಕ : ಭ್ರಷ್ಟಾಚಾರಿಗೆ.

ಉಳಿದವರು : ಧಿಕ್ಕಾರ.

*(ಭಟರು ಓಡಿ ಬಂದು ಯುವಕರ ಹತ್ತಿರ ಈಟಿ ಹಿಡಿದು ನಿಲ್ಲುತ್ತಾರೆ)*

ನಗರಪಾಲಕ : ಹೋ! ಸಾಕು ಸಾಕು ನಿಮ್ಮ ಕೂಗಾಟ *(ಅಧಿಕಾರಿಗೆ)* ಇವರ ಮೇಲಿನ ಆಪಾದನೆ ಓದು.



Downloaded from https:// www.studiestoday.com

Downloaded from https:// www.studiestoday.com

ಅಧಿಕಾರಿ : *(ಒಂದು ಕಾಗದ ತೆಗೆದು ಓದುತ್ತಾನೆ)* ಒಂದು, ಇವರ ಮಹಾರಾಜರ ಆಳ್ವಿಕೆಯ ವಿರುದ್ಧ ಅಪಪ್ರಚಾರ ಮಾಡುತ್ತಾ ಪ್ರಜೆಗಳು ಮಹಾರಾಜರ ಮೇಲೆ ಉದ್ರಿಕ್ತರಾಗುವಂತೆ ಚಿತಾವಣೆ ನಡೆಸಿ ರಾಜದ್ರೋಹದ ಅಪರಾಧ ಮಾಡಿದ್ದಾರೆ. ಎರಡು, ನಗರಪಾಲಕರ ವಿಷಯದಲ್ಲಿ ಸುಳ್ಳು ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಅವರನ್ನು ಅವಮಾನ ಗೊಳಿಸಿದ್ದಾರೆ. ಮೂರು, ಮಾಹಾರಾಜರು ಬಕಾಸುರನೊಂದಿಗೆ ಮಾಡಿಕೊಂಡಿರುವ ಶಾಂತಿ ಸಂಧಾನವನ್ನು ಖಂಡಿಸಿ, ಅದು ಜಾರಿಗೆ ಬರಲು ತೊಂದರೆಯಾಗುವಂತೆ ಪ್ರಜೆಗಳು ಅಸಹಕಾರ ಚಳುವಳಿ ಹೂಡುವಂತೆ ಪ್ರಚೋದಿಸಿ, ಸರದಿಯ ನಿಯಮವನ್ನು ಉಲ್ಲಂಘಿಸಿ, ಅಶಾಂತಿ ಮತ್ತು ಅರಾಜಕತೆ ಹರಡುವ ವಿಧ್ವಂಸಕ ಚಟುವಟಿಕೆಗಳನ್ನು ನಡೆಸಿದ್ದಾರೆ.

ನಗರಪಾಲಕ : ಆಪಾದನೆಗಳು ತುಂಬಾ ಭಯಂಕರವಾಗಿದೆ.

ಅಧಿಕಾರಿ : *(ಬರೆಯುತ್ತಾ)* .. ವಿಚಾರಣಾ ಕಾಲದಲ್ಲಿ ನ್ಯಾಯಾಲಯಕ್ಕೆ ನ್ಯಾಯವಾಗಿ ಸಲ್ಲಬೇಕಾದ ಗೌರವವನ್ನು ಸಲ್ಲಿಸದೆ, ಅತ್ಯಂತ ಅಪಮಾನಕರವಾದ ಮಾತುಗಳನ್ನಾಡಿ ನ್ಯಾಯಾಲಯದ ಪಾವಿತ್ರ್ಯಕ್ಕೆ ಕಳಂಕ ತಂದಿದ್ದಾರೆ.!

ನಗರಪಾಲಕ : ಶಾಭಾಶ್! ಎಷ್ಟು ಚನ್ನಾಗಿ ಬರೀತೀಯಾ ನೀನು!

ಅಧಿಕಾರಿ : ಎಲ್ಲಾ ತಮ್ಮ ತರಪೇತಿ. *(ಪ್ರೇಕ್ಷಕರ ಕಡೆ ತಿರುಗಿ)* ನಾನು ಬರೀದೆ ಇದ್ರೆ ನಿಂಗೇನ್ ಬರುತ್ತೆ, ಮಣ್ಣು.

ನಗರಪಾಲಕ : *(ಕಾಗದವನ್ನು ತೆಗೆದುಕೊಂಡು ಓದುತ್ತಾನೆ)* ಅತ್ಯಂತ ಗುರುತರವಾದ ಅಪರಾಧಗಳು ನಿಮ್ಮ ಮೇಲೆ ಸಿದ್ಧವಾಗಿರುವುದರಿಂದ ಕಾನೂನಿನ ಪ್ರಕಾರ ನಿಮಗೆಲ್ಲಾ ಮರಣದಂಡನೆ ವಿಧಿಸಲಾಗಿದೆ.

ಯುವಕರು : ಅನ್ಯಾಯಕ್ಕೆ, ದಬ್ಬಾಳಿಕೆಗೆ ಧಿಕ್ಕಾರ!

ನಗರಪಾಲಕ : ಸದ್ದೂ! ʻಆದರೆ ನಿಮ್ಮನ್ನು ಮರಣದಂಡನೆಗೆ ಗುರಿಪಡಿಸುವ ದಿನ ಮತ್ತು ವಿಧಾನವನ್ನು ನಾವು ಯಥೋಚಿತವಾಗಿ ನಿರ್ಣಯಿಸುತ್ತೇವೆ. ಅಲ್ಲಿಯವರೆಗೆ ನೀವು ಬಂಧನದಲ್ಲಿರತಕ್ಕದ್ದು.

*(ಯುವಕರು ಮತ್ತೆ ಧಿಕ್ಕಾರಗಳನ್ನು ಕೂಗುತ್ತಾರೆ. ಭಟರು ಅವರನ್ನು ಕರೆದೊಯ್ಯುತ್ತಾರೆ.)*



Downloaded from https:// www.studiestoday.com

Downloaded from https:// www.studiestoday.com

ನಗರಪಾಲಕ : ಹೇಗಿದೆ. ನಮ್ಮ ತಂತ್ರ?

ಅಧಿಕಾರಿ : ತಂತ್ರ? ಏನು ತಂತ್ರ?

ನಗರಪಾಲಕ : ಐದು ಜನ ಶ್ರೀಮಂತರನ್ನು ಆಟ ಆಡಿಸಬಹುದು, ಈಗ!

ಅಧಿಕಾರಿ : ಭಲೇ! ನನ್ ತಲೇಗೊಂದಿಷ್ಟು! ನಿಮ್ಮ ದೂರಾಲೋಚನೆ ಅದ್ಭುತವಾಗಿದೆ! ಈ ಬಕಾಸುರ ಬಂದು ನಿಮ್ಮ ಅದೃಷ್ಟದ ಬಾಗಿಲೇ ತೆಗೆದ ಹಾಗಾಗಿದೆ...... ನಮ್ಮನ್ನ ಮರೀಬ್ಯಾಡಿ ಸ್ವಾಮೀ.......ಬಡವರು.... ನಿಮ್ಮ ಹೆಸರು ಹೇಳಿಕೊಂಡು ಊಟ ಮಾಡ್ತೀವಿ....

ನಗರಪಾಲಕ : ಆಗ್ಲಿ ಆಗ್ಲಿ, ನೋಡೋಣಂತೆ..... ಮುಂದಿನ ಖಟ್ಲೆ!

ಅಧಿಕಾರಿ : *(ಪುಸ್ತಕವನ್ನು ನೋಡಿ)* ಇಲ್ಲ ಸ್ವಾಮಿ. ಇವತ್ತು ಇನ್ಯಾವ್ದೂ ಇಲ್ಲ. ಮುಗೀತು.

ನಗರಪಾಲಕ : ಸರಿಯಾಗಿ ನೋಡು...... ನನ್ನ ಕೈ ಇನ್ನೂ ಕಡೀತಾನೇ ಇದೆ.

## 3 ನೇ ಅಂಕ – ೧ನೇ ದೃಶ್ಯ

ಸೂತ್ರಧಾರ ಮತ್ತು ಕುಂತಿ

ಸೂತ್ರಧಾರ : ಅಂದಿನಿಂದ ಇಂದಿನವರೆಗೂ ಈ ಊರಿನ ಕತೆ ಹೀಗೇ ನಡಕೊಂಡು ಬಂದಿದೆ. ಹೀಗೇ ನಡಕೊಂಡು ಹೋಗುತ್ತೆ......

ಕುಂತಿ : ಎಂಥಾ ರಾಜ! ಎಂಥಾ ಪ್ರಜೆಗಳು! ನಂಗೀಗ ತಿಳೀತು ಈ ಊರಲ್ಲಿ ನಮಗ್ಯಾಕೆ ಹೊಟ್ಟೆ ತುಂಬಾ ಭಿಕ್ಷಾನೂ ಸಿಗ್ತಾ ಇಲ್ಲಾಂತ.

ಸೂತ್ರಧಾರ : ನಾನವತ್ತೇ ಹೇಳಿರಲಿಲ್‌ವೇ, ಹೊಟ್ಟೆ ಹೊರೆಯೋದು ಈ ಊರಲ್ಲಿ ಕಷ್ಟಾಂತ.... ಈಗ್ಲೂ ಹೇಳ್ತೀನಿ, ನೀವು ಈ ಊರು ಬಿಟ್ಟು ಬೇರೆಲ್ಲಾದ್ರೂ ಹೋಗೋದು ಒಳ್ಳೇದು........ ದಿನ ದಿನಕ್ಕೆ ಕಾಲ ಕೆಡ್ತಿದ್ಯೇ ವಿನಃ ಇನ್ನೊಂದು ಸಲ ಈ ಊರಿಗೆ ಒಳ್ಳೇದಾಗುತ್ತೆ ಅಂತ ಯಾರಿಗೂ ನಂಬಿಕೆ ಇಲ್ಲ.

ಕುಂತಿ : ನಮ್ಮ ಹುಡುಗಾನೂ ದಿನಾ ಅದೇ ಹೇಳ್ತಿರ್ತಾನೆ, ಬೇರೆ ಎಲ್ಲಾದ್ರೂ ಹೋಗಾಣ ಬೇರೆ ಎಲ್ಲಾದ್ರೂ ಹೋಗಾಣಾಂತ. ಅವನು ಹೊಟ್ಟೆ ತುಂಬ ಊಟ ಮಾಡಿ ಎಷ್ಟು ದಿನ ಆಯ್ತೋ!



Downloaded from https:// www.studiestoday.com

Downloaded from https:// www.studiestoday.com

| | | |
|---|---|---|
| ಸೂತ್ರಧಾರ | : | ಈಗಲೂ ತಡವಾಗಿಲ್ಲ...... ಇಲ್ಲೀ ಜನಕ್ಕಂತೂ ಒಂದು ಶಾಪ! ಅನುಭವಿಸ್ತಾರೆ .......ನಿಮಗೆಲ್ಲೀ ಗ್ರಹಚಾರ! ಬೇರೆ ಎಲ್ಲಾದ್ರೂ ಹೋಗಿ ಸುಖವಾಗಿರಿ. |
| ಕುಂತಿ | : | ಈ ಪರಿಸ್ಥಿತೀನ ಸುಧಾರಿಸೋಕೆ ಯಾರೂ ಏನೂ ಮಾಡೋಕೇ ಆಗೋದಿಲ್ಲ ಅಂತೀರಾ? |
| ಸೂತ್ರಧಾರ | : | ಮಾಡಬಹುದಾದ ಪ್ರಯತ್ನವೆಲ್ಲಾ – ಮನುಷ್ಯರ ಕೈಲಿ ಸಾಧ್ಯವಿರೋ ಪ್ರಯತ್ನಾನೆಲ್ಲಾ ಮಾಡಾಗಿದೆ. ಆದ್ರೆ ಏನೂ ಪ್ರಯೋಜನ ಆಗಲಿಲ್ಲ. ನಮ್ಮನ್ನ ಈ ವಿಪತ್ತಿನಿಂದ ಪಾರುಮಾಡಬೇಕಾದ್ರೆ ಒಂದು ಅತಿಮಾನವ ಶಕ್ತೀನೇ ಬೇಕು..... ಅದು ಕಲ್ಪನೇಲಿ ಮಾತ್ರ ಸಾಧ್ಯ ಇರೋದ್ರಿಂದ ನಾವು ಹೀಗೇ ಒದ್ದಾಡಬೇಕು, ಹೀಗೇ ನರಳ ಬೇಕು, ಹೀಗೆ ಸಾಯಬೇಕು.... ನಮ್ಮ ಉದ್ಧಾರ ಅನ್ನೋ ಮಾತು ಕನಸಿನಲ್ಲಿ ಕೂಡಾ ಬರೋದಿಲ್ಲ....ಯಾಕೇಂದ್ರೆ ನಾವು ನಿಶ್ಚಿಂತೆಯಿಂದ ನಿದ್ದೆಕೂಡಾ ಮಾಡುಲ್ಲ, ಯಾವಾಗಲೂ ಭಯ..... |
| ಕುಂತಿ | : | ಇದಕ್ಕೆ ಒಂದು ಪರಿಹಾರ ನನಗೆ ಹೊಳೀತಾ ಇದೆ..... |
| ಸೂತ್ರಧಾರ | : | ಪರಿಹಾರ? *(ವಿಷಾದದ ನಗು)* |
| ಕುಂತಿ | : | ನಗಬೇಡಿ....... ಈ ಬ್ರಾಹ್ಮಣನ್ನ ಕರೆದು, ನಿಶ್ಚಿಂತೆಯಾಗಿರೋಕೆ ಹೇಳಿ...... ಅಡಿಗೆ ಎಲ್ಲಾ ಮಾಡಲಿ,<br>ಬ್ರಾಹ್ಮಣನ ಬದಲು ನನ್ನ ಮಗನ್ನ ಕಳಿಸ್ತೇನೆ. ಅವನು ಎಲ್ಲಾ ಸರಿ ಮಾಡ್ತಾನೆ. |
| ಸೂತ್ರಧಾರ | : | *(ಅವಳನ್ನೇ ದಿಟ್ಟಿಸಿ ನೋಡಿ)* ನಿಮಗೆಲ್ಲೋ ಭ್ರಾಂತಿ. ಎಲ್ಲಾ ತಾಯಂದ್ರಿಗೂ ತಮ್ಮ ಮಕ್ಳು ಅಸಹಾಯ ಶೂರರು, ಅಪರಿಮಿತ ಪರಾಕ್ರಮಿಗಳು, ಏನನ್ನ ಬೇಕಾದ್ರೂ ಸಾಧಿಸ್ತಾರೆ ಅಂತ ಭ್ರಮೆ ಇರುತ್ತೆ. ಈ ಕೆಲಸ ಅತಿಮಾನವರಿಂದ ಮಾತ್ರ ಸಾಧ್ಯ ಅಂತ ನಾನು ಹೇಳಲಿಲ್ಲವೇ? ಬೇಡಿ, ಬಕಾಸುರನ್ನ ಕೊಲ್ಲೋದು ಯಾರಿಗೂ ಸಾಧ್ಯವಿಲ್ಲ – ನನ್ನ ಮಾತು ಕೇಳಿ ಸುಮ್ನೆ. ಹೊಟ್ಟೇಲಿ ಹುಟ್ಟಿದ ಮಗನ್ನ ಅನ್ಯಾಯವಾಗಿ ಬಲಿ ಕೊಟ್ಟು, ಆಮೇಲೆ ಬದುಕಿರೋವರೆಗೂ ಪುತ್ರಹತ್ಯಾ ತಾಪದಿಂದ ನರಳ ಬೇಡಿ. |



Downloaded from https:// www.studiestoday.com

Downloaded from https:// www.studiestoday.com

ಕುಂತಿ : ನನ್ನ ಮಾತು ನಂಬಿ. ನನ್ನ ಮಗ ನಿಜವಾಗ್ಲೂ ಪ್ರಚಂಡ......

ಸೂತ್ರಧಾರ : ನೀವೇನೇ ಹೇಳಿ, ನನಗೆ ನಂಬಿಕೆ ಬರೋಲ್ಲ. ಈ ಊರಿಗೆ ಬಡದಿರೋ ಅನಿಷ್ಟಾನ ಪರಿಹರಿಸೋಕೆ ಯಾರಿಗೂ ಸಾಧ್ಯವೇ ಇಲ್ಲ. *(ಕುಂತಿ ಸೂತ್ರಧಾರನ ಕಿವಿಯಲ್ಲಿ ಏನೋ ಉಸುರುತ್ತಾಳೆ.)* ಹೌದೇ! ಹಾಗಾದ್ರೆ ನೀವು ಭಿಕ್ಷ ಬೇಡೋ ಬ್ರಾಹ್ಮಣರಲ್ಲ! *(ಕುಂತಿ 'ಅಲ್ಲ' ವೆಂದು ತಲೆಯಾಡಿಸುತ್ತಾಳೆ)*

ಕುಂತಿ : ಯಾರ ಕೈಲೂ ಹೇಳಬೇಡಿ, ಗುಟ್ಟಾಗಿರಲಿ, ಅಷ್ಟೆ. *(ಸೌಟು ಪಾತ್ರೆಗಳನ್ನು ಹಿಡಿದು ಬ್ರಾಹ್ಮಣನ ಪ್ರವೇಶ)* ಅಯ್ಯಾ! ಬ್ರಾಹ್ಮಣ, ನೀವು ನಿಮ್ಮ ಮನೆ ಜಗಲಿ ಮೇಲೆ ನಮಗೆ ಜಾಗ ಕೊಟ್ಟು ತುಂಬಾ ಉಪಕಾರ ಮಾಡಿದೀರಿ. ಅದಕ್ಕೆ ಬದಲಾಗಿ ನಾವು ನಿಮಗೆ ಏನೂ ಉಪಕಾರ ಮಾಡಲಾರೆವು. ಆದರೆ, ನನಗೊಬ್ಬ ಉಂಡಾಡಿ ಮಗ ಇದಾನೆ, ನೋಡಿದೀರಲ್ಲ ನೀವು, ನಡುಕಲೋನು, ಅವನನ್ನ ನಿಮ್ಮ ಬದಲು ಬಕಾಸುರಂಗೆ ಕಳಿಸೋ ಯೋಚನೆ ಮಾಡಿದೀನಿ. ನೀವು ದಯವಿಟ್ಟು ಒಪ್ಪಿಕೋಬೇಕು.

ಬ್ರಾಹ್ಮಣ : *(ಆಶ್ಚರ್ಯ)* ಏನಮ್ಮಾ ನೀವು ಹೇಳೋದು! ನಿಮ್ಮ ಮಗನ್ನೇ?

ಕುಂತಿ : ನೀವೇನೂ ಯೋಚಿಸಬೇಡಿ. ಇದರ ಪೂರ್ತಿ ಜವಾಬ್ದಾರಿ ನಂದು. ಬಂಡೀ ತುಂಬ ಅನ್ನ ಮಾತ್ರ ಮಾಡಿ. ಅಡಿಗೆ ಚೆನ್ನಾಗಿರಲಿ, ಅಷ್ಟೆ. ನಮ್ಮ ಹುಡುಗಂಗೆ ಬೇಳೆ ಹುಳೀಂದ್ರೆ ತುಂಬಾ ಇಷ್ಟ. ತುಪ್ಪ, ಹಾಲು, ಮೊಸರು – ಎಲ್ಲಾ ಇರುತ್ತಲ್ಲಾ?



ಬ್ರಾಹ್ಮಣ : ನಂಗ್ಯಾಕೋ ತಲೆ ತಿರುಗುತ್ತಾ ಇದೆ...... ನಾನು ಯಾರಿಗೆ ಅಡಿಗೆ ಮಾಡ್ತಿದೀನಿ, ನಿಮ್ಮ ಮಗಂಗೋ, ಬಕಾಸುರಂಗೋ?

ಕುಂತಿ : ನೀವು ಹೋಗಿ ಅಡಿಗೆ ಕೆಲಸ ನೋಡ್ಕೊಳಿ.... ಉಳ್ದದ್ದು ನಮಗಿರಲಿ.



Downloaded from https:// www.studiestoday.com

Downloaded from https:// www.studiestoday.com

ಬ್ರಾಹ್ಮಣ ಅವರನ್ನೆ ಹಿಂದಿರುಗಿ ನೋಡುತ್ತಾ ಹೋಗುತ್ತಾನೆ.

ಯುಧಿಷ್ಠಿರ : ಯಾಕಿನ್ನೂ ಬರಲಿಲ್ಲ, ಎಷ್ಟು ಹೊತ್ತಾಯ್ತು ಆಗ್ಲೇ.....

ಕುಂತಿ : ಭಿಕ್ಷೆ ಸಿಕ್ಕಿದ್ಯೋ ಇಲ್ವೊ!

ಅರ್ಜುನ : ಭೀಮಂಗೆ ಈ ಕೆಲಸ ಆಗುತ್ತೆ ಅಂತೀಯಾ?

ಕುಂತಿ : ನಿಮಗೆಲ್ಲಾ ಯಾಕಿಷ್ಟೊಂದು ಅಳುಕು? ಅವನಿಗೆ ಇದೊಂದು ಆಟ ಅಷ್ಟೇ, ನೋಡುತ್ತಾ ಇರಿ....

ಭೀಮನ ಪ್ರವೇಶ. ತುಂಬಾ ಹುಮ್ಮಸ್ಸಿನಲ್ಲಿದ್ದಾನೆ, 'ಘಡಘಡ ಕಡಿಯುವೆ ಬಡಿಯುವೆ ರಕ್ಕಸನ' ಗುಣುಗುಟ್ಟುತ್ತಿದ್ದಾನೆ. ಎಲ್ಲರೂ ಅವನನ್ನೇ ನೋಡುತ್ತಾ ನಿಲ್ಲುತ್ತಾರೆ. ಕುಂತಿ ಅವನ ಜೋಳಿಗೆಯನ್ನು ತೆಗೆದುಕೊಳ್ಳುತ್ತಾಳೆ.

ಕುಂತಿ : ನಿಂಗೊಂದು ಒಳ್ಳೇ ಸುದ್ದಿ. ನಾಳೆ ನಿಂಗೆ ಹೊಟ್ಟೆ ತುಂಬ ಊಟ.

ಭೀಮ : ನಂಗೆ ಈ ಊರಲ್ಲಿ ಹೊಟ್ಟೆ ತುಂಬ ಊಟ! ನಾವು ಐದು ಜನ ತಂದಿದ್ರಲ್ಲಿ ಅರ್ಧ ತಿಂದ್‌ರೂ ಹೊಟ್ಟೆ ತುಂಬದ ನನಗೆ! ನಮ್ಮಮ್ಮನೂ ಒಂದೊಂದು ಸಲ ತಮಾಷೆ ಮಾಡ್ತಾಳೆ ಅನ್ನೋದಕ್ಕೆ ಉದಾಹರಣೆ.

ಕುಂತಿ : ತಮಾಷೆ ಅಲ್ಲ ಮಗೂ, ನಿಜ. ನೋಡು ಈ ಬ್ರಾಹ್ಮಣನ ಮನೇಲಿ ಆಗ್ಲೇ ಅಡುಗೆ ತಯಾರಿ ನಡೀತಿದೆ. ನಾನೆಲ್ಲಾ ನೋಡ್ಕೊಂಡು ಬಂದೀದಿನಿ..... ಸುಮ್‌ಸುಮ್‌ನೆ ಊಟ ಮಾಡಿ ದಕ್ಷಿಣೆ ತಗೊಂಡು ಹೋಗೋದಲ್ಲ.... ಅದಕ್ಕೆ ತಕ್ಕ ಚಾಕ್ರೀನೂ ಮಾಡಬೇಕು.

ಭೀಮ : ಅದೇನು ಕೆಲಸ ಹೇಳು ಹೇಳು. ನನ್ನ ಕೈ ಕಡೀತಿದೆ, ಕೆಲಸ ಇಲ್ಲದೆ ಸರಿಯಾದ ವ್ಯಾಯಾಮ ಇಲ್ಲದೆ ಮೈ ಕೈ ಎಲ್ಲಾ ನೋಯ್ತಾ ಇದೆ. ಅದೇನು ಕೆಲಸ ಇದ್ರೂ ಮಾಡ್ತೀನಿ, ಭಿಕ್ಷೆ ಬೇಡೋದೊಂದು ಬಿಟ್ಟು.

ಕುಂತಿ : ನೀನು ಮಾಡ್ತಿ ಅನ್ನೋ ಧೈರ್ಯದ ಮೇಲೇನೇ ಒಪ್ಪಿಕೊಂಡು ಬಂದಿದೀನಿ. ಊರಿನ ಜನರಿಗೆ ಜೀವದಾನ ಮಾಡಿದ ಪುಣ್ಯಾನೂ ಬರುತ್ತೆ.



Downloaded from https:// www.studiestoday.com

Downloaded from https:// www.studiestoday.com

ಭೀಮ : ಏನು ಒಪ್ಪಿಕೊಂಡು ಬಂದಿದೀಯಮ್ಮ? ಮೊದಲು ಊಟದ ಮಾತಾಡಿ ಈಗ ಚಾಕರಿ ವಿಚಾರಾನೇ ಜಾಸ್ತಿ ಹೇಳ್ತಿದೀ.....

ಕುಂತಿ : ನಿಂಗೇನೂ ಅಗಾಧವಾದುದಲ್ಲ.... ಈ ಊರಿನ ಜನಾನ ಒಬ್ಬ ರಾಕ್ಷಸ ಬಕಾಸುರ ಅಂತ....

ಭೀಮ : ಓ, ಅದಾ! ಗೊತ್ತಾಯ್ತು ಬಿಡು. ನನಗೂ ಆ ವಿಚಾರ ಇವತ್ತು ತಿಳೀತು. ರಾಕ್ಷಸ ಅನ್ನೋ ಮಾತು ಕೇಳಿದ ತಕ್ಷಣ ನನ್ನ ತೋಳಿನ ಮಾಂಸಖಂಡಗಳು ಕುಣಿಯೋಕೆ ಶುರುಮಾಡಿವೆ..... ಪಾಪ! ಈ ದಿನದ ಬಲೀನೂ ನೋಡಿದೆ. ಏನಾದ್ರೂ ಮಾಡಲೇ ಬೇಕೂಂತ ಆಗಲೇ ನಿರ್ಧಾರ ಮಾಡಿದೀನಿ. ಇನ್ನು ಈ ಊರಿನ ಜನ ನಿಶ್ಚಿಂತೆಯಿಂದಿರೋ ಹಾಗೆ ಮಾಡೋದು ನನ್ನ ಜವಾಬ್ದಾರಿ.... ಆಹ! ನನ್ನ ಗದೆಯೊಂದು ಕೈಲಿದ್ದಿದ್ರೆ! ಬೇಡ, ಬರೀ ಕೈಲೇ ಸಿಗಿದುಹಾಕ್ತೀನಿ ನೋಡ್ತಿರಿ....

ಕುಂತಿ : ಪಾಪ! ನಾಳೆ ನಮ್ಮ ಬ್ರಾಹ್ಮಣನ ಸರದಿ....

ಭೀಮ : *(ಉತ್ಸಾಹದಿಂದ)* ಹಾಂ! ನಂಗೆ ಬೇಕಾದದ್ದೂ ಇಂಥದೇ ಅವಕಾಶ...... ಹೇಳಿ ಮಾಡಿಸಿದ ಹಾಗಿದೆ. ಬಂಡಿ ಅನ್ನ ತುಂಬಿಸ್‌ಲಿ. ಹೇಳಿಬಿಡು ಅವರಿಗೆ, ನಾನು ಹೋಗ್ತೀನಿ ಬಕಾಸುರನ ಗುಹೇಗೆ ಅಂತ.....

ಯುಧಿಷ್ಠಿರ : ಆಗ್ಲೇ ಹೇಳಿಬಿಟ್ಟಿದಾಳೆ......

ಅರ್ಜುನ : ಸ್ವಲ್ಪ ಯೋಚನೆ ಮಾಡಿ ಕೆಲಸ ಮಾಡೋದು ಯಾವಾಗ್ಲೂ ಒಳ್ಳೇದು......

ಕುಂತಿ : ನಿಂಗೆ ಈ ಕೆಲಸ ಕಷ್ಟ ಏನಲ್ಲ..... ಬದಲಾಗಿ ಸಂತೋಷದಿಂದ ಮಾಡ್ತೀಯ ಅಂತ, ಬ್ರಾಹ್ಮಣನ ಬದಲು ನೀನೇ ಗಾಡಿ ಹೊಡಕೊಂಡು ಹೋಗ್ಗೋ ಏರ್ಪಾಟು ಮಾಡಿದೀನಿ

ಭೀಮ : ಭಲೇ, ಅದೀಗ ಮಾತು! ನಾಳೆ, ಹೊಟ್ಟೆ ತುಂಬ ಊಟ.... *(ದಿಗ್ಭ್ರಾಂತ ಬ್ರಾಹ್ಮಣ ಮರೆಯಿಂದ ಬಂದು ಭೀಮನಿಗೆ ನಮಸ್ಕಾರ ಹಾಕುತ್ತಾನೆ.)*



Downloaded from https:// www.studiestoday.com

Downloaded from https:// www.studiestoday.com

## ೨ನೇ ದೃಶ್ಯ

*ಸೂತ್ರಧಾರ ಕೈಗಳಲ್ಲಿ ಹೂವು ಹಿಡಿದುಕೊಂಡು ಸಂತೋಷದಿಂದ ಬರುತ್ತಾನೆ.*

ಸೂತ್ರಧಾರ : ಏಕಚಕ್ರ ನಗರದ ಪ್ರಜೆಗಳು ಇಂದು ನಿಜಕ್ಕೂ ಸ್ವತಂತ್ರರು. ಬಕಾಸುರನ ಪೀಡೆ ಭೀಮನ ಸಾಹಸದಿಂದ ನಿನ್ನೆಗೇ ಕೊನೆಯಾಯಿತು. ನಿರಂತರ ಸೂತಕ ಕವಿದಿದ್ದ ಮನೆಗಳಲ್ಲಿ ಇಂದು ಉಲ್ಲಾಸದ ಬೆಳಕು ಮೂಡುತ್ತಿದೆ. ಊರ ಬಾಗಿಲಿನಲ್ಲಿ ಪೆಟ್ಟು ತಿಂದ ಸತ್ತ ಬಕಾಸುರನ ದೇಹವನ್ನು ಕಂಡು ಜನ ಅವರ ಕಣ್ಣನ್ನು ಅವರೇ ನಂಬದಂತಾಗಿದ್ದಾರೆ. ಬಕಾಸುರನ ಸಾವಿನ ಸುದ್ದಿ ಊರಿನಲ್ಲೆಲ್ಲಾ ಕ್ಷಣಮಾತ್ರದಲ್ಲಿ ಹಬ್ಬಿ, ಜನರೆಲ್ಲಾ ಬೀದಿಗೆ ಓಡಿಬಂದು ಅವನ ಹೆಣವನ್ನು ನೋಡಿ ಸಂತೋಷದಿಂದ ಕುಣಿದು, ಕುಪ್ಪಳಿಸಿ, ಹಾಡಿ, ನಕ್ಕು ಸಂಭ್ರಮಪಡುತ್ತಿದ್ದಾರೆ. ತಾವು ಕಂಡದ್ದು ಕನಸಲ್ಲವೆಂದು ಮನದಟ್ಟು ಮಾಡಿಕೊಳ್ಳಲು, ಬಕಾಸುರನ ದೇಹವನ್ನು ಮತ್ತೆ ಮತ್ತೆ ನೋಡಿ ಬಂದರು. ಅಲ್ಲ, ಅವರು ಕಂಡದ್ದು ಕನಸಲ್ಲ, ಸತ್ಯ. ಯಾವ ಸಾಹಸವನ್ನು ನಾನು ಅತಿಮಾನವರಿಂದ ಮಾತ್ರ ಸಾಧಿಸಲು ಸಾಧ್ಯವೆಂದು ನಂಬಿದ್ದೆನೋ, ಅದನ್ನು ಭೀಮ ಲೀಲಾಜಾಲವಾಗಿ ಸಾಧ್ಯಗೊಳಿಸಿ ರಾಕ್ಷಸನ ದವಡೆಯಿಂದ ಸಾವಿರಾರು ಅಸಹಾಯಕ ಮನುಷ್ಯರನ್ನು ಪಾರುಮಾಡಿದ. ಆದರೆ, ಆ ಸಾಹಸಿಯನ್ನು ತಕ್ಕರೀತಿಯಲ್ಲಿ ಸನ್ಮಾನಿಸುವ ಭಾಗ್ಯ ನಮಗಿಲ್ಲ. ಅವನಾಗಲೇ ಈ ಊರನ್ನು ಬಿಟ್ಟು ಹೊರಟುಹೋಗಿದ್ದಾನೆ. ನಮ್ಮನ್ನು ಪಾರುಮಾಡಿದ ಮಹಾನುಭಾವನಿಗೆ ನಾವು ಏನು ಕೊಟ್ಟೂ ಋಣ ತೀರಿಸಲಾರೆವು. ನಮ್ಮ ಸುಖ ಸಂತೋಷಗಳಿಗೆಲ್ಲಾ ಕಾರಣನಾದ ಅವನನ್ನು ಬಾಯಿತುಂಬ ಹೊಗಳಲು ಕೂಡ ನಮಗೆ ಬಾರದು.... ಹಾಂ! ಸುಖ ಸಂತೋಷ ಎಂದೆ! ಆದರೆ ಬಕಾಸುರನ ಮರಣದಿಂದ ಅಪರಿಮಿತ ನಷ್ಟಕ್ಕೊಳಗಾದವರು ಕೆಲವರಿದ್ದಾರೆ. ತಡೆಯಿರಿ, ಅವರನ್ನು ಕರೀತೇನೆ. *(ರಂಗದಿಂದ ಒಂದು ಪಕ್ಕಕ್ಕೆ ಹೋಗಿ, ಜೋಲು ಮೋರೆಯ ವರ್ತಕರನ್ನು ಮತ್ತು ನಗರಪಾಲಕನನ್ನು ರಂಗಕ್ಕೆ ಕರೆದುತರುತ್ತಾನೆ.)* ಇವರಿಗೆ ವಿಪರೀತ ನಷ್ಟವಾಗಿದೆ. ಇವರ ವ್ಯಾಪಾರ ಇನ್ನು ತಲೆ ಎತ್ತುವಂತಿಲ್ಲ; ಅಥವಾ



Downloaded from https:// www.studiestoday.com

Downloaded from https:// www.studiestoday.com

ಬಕಾಸುರನ ಯುಗದಲ್ಲಿ ಅಭಿವೃದ್ಧಿ ಹೊಂದಿದಂತೆ ಆಗುವುದಂತೂ ಸಾಧ್ಯವಿಲ್ಲ. ಮತ್ತೊಬ್ಬ, ನಮ್ಮ ರಾಜ. ಅವನಿಗೆ ಪುನಃ ರಾಜ್ಯ ಭಾರದ ಹೊಣೆ ಹೆಗಲಿಗೆ ಬಿದ್ದಿದೆ. ಜನರನ್ನು ಸುಲಭವಾಗಿ ಎದುರುಹಾಕಿಕೊಳ್ಳುವುದು ಕಷ್ಟವಾಗಿದೆ. ಜನ ವಿಜಯೋತ್ಸಾಹದಲ್ಲಿದ್ದಾರೆ... ಅವರ ಸುಖಸಂತೋಷಗಳು ಹೆಚ್ಚಾಗಿ, ಪೂರ್ಣಬದುಕು ಅವರದಾಗಲಿ ಎಂದು ಹಾರೈಸಿ ನಮ್ಮ ಈ ರಾತ್ರಿಯ ನಾಟಕಕ್ಕೆ ಮಂಗಳ ಹಾಡುತ್ತೇನೆ. *(ಗಂಟಲು ಸರಿಮಾಡಿಕೊಳ್ಳುತ್ತಾನೆ. ರಂಗದ ಹಿಂಭಾಗದಲ್ಲಿ ಏನೋ ಗಲಭೆ ಕೇಳಿಸುತ್ತದೆ.)* ಏನಿದು, ಗಲಾಟೆ? *(ಬಿಳಿ ಪರದೆಯ ಹಿಂದೆ, ತಲೆ ಎತ್ತುವ ಹಲವಾರು ರಾಕ್ಷಸರ ನೆರಳುಗಳು ಕಾಣಿಸಿಕೊಳ್ಳುತ್ತವೆ. ಅವೆಲ್ಲಾ ಒಮ್ಮೆಲೇ ಭಯಂಕರವಾಗಿ ಕಿರಿಚುತ್ತಾ ಊರಿನತ್ತ ದಾಳಿ ಇಡುತ್ತವೆ. ಸಪ್ಪಗೆ ನಿಂತಿದ್ದ ವರ್ತಕರ ಮತ್ತು ನಗರಪಾಲಕನ ಮುಖದ ಮೇಲೆ ಕ್ರಮೇಣ ಪ್ರಸನ್ನತೆ ಬರುತ್ತದೆ. ಸೂತ್ರಧಾರ ದಿಗ್ಭ್ರಮೆಗೊಂಡು, ಕೈಲಿದ್ದ ಹೂಗಳನ್ನು ಕಿವುಚಿ ತಲೆಯಮೇಲೆ ಕೈ ಹೊತ್ತುಕೊಳ್ಳುತ್ತಾನೆ.)* ಅನಾಹುತ! ಮತ್ತೆ....! *(ರಂಗದ ಮೇಲಿನ ಬೆಳಕು ಕಮ್ಮಿಯಾಗುತ್ತಾ ವರ್ತಕರ ಮತ್ತು ನಗರಪಾಲಕನ ಮುಖದ ಮೇಲೆ ಮಾತ್ರ ಬೆಳಕು ಹೆಚ್ಚಾಗುತ್ತದೆ. ಪರದೆಯ ಮೇಲಿನ ರಾಕ್ಷಸರ ನೆರಳುಗಳು ಒಂದಾದಮೇಲೆ ಮತ್ತೊಂದು ಆರ್ಭಟಿಸುತ್ತಾ ಚಲಿಸುತ್ತಲೇ ಇರುತ್ತವೆ. ವರ್ತಕರು, ನಗರಪಾಲಕ, ಒಬ್ಬರನ್ನೊಬ್ಬರು ಅಭಿನಂದಿಸಿ, ಆಲಂಗಿಸಿ, ಒಬ್ಬರ ಹೆಗಲಮೇಲೆ ಒಬ್ಬರು ಕೈ ಹಾಕುತ್ತಾರೆ.)* ಇಲ್ಲ, ಇಲ್ಲಾ, ನಾಟಕ ಮುಗಿದಿಲ್ಲ. ಇದನ್ನು ಮುಗಿಸಲು ನನ್ನಿಂದ ಸಾಧ್ಯವಿಲ್ಲ!

## ೩ನೇ ದೃಶ್ಯ

*ವರ್ತಕರು ಕೈಲಿ ನಿಂಬೆಹಣ್ಣು, ಹಾರ, ತುರಾಯಿ ಹಿಡಿದು ಕಾಯುತ್ತಾ ನಿಂತಿದ್ದಾರೆ.*

೧ನೇ ವರ್ತಕ : ಓ! ಅಗೋ ಬಂದ್ರು!

೨, ೩ನೇ ವರ್ತಕರು : *(ಹಣೆಗೆ ಕೈಮಾಡಿ ನೋಡುತ್ತಾರೆ)* ಬಂದ್ರು, ಬಂದ್ರು!



Downloaded from https:// www.studiestoday.com

Downloaded from https:// www.studiestoday.com

*(ನಗರಪಾಲಕ ಇವರನ್ನು ಗಮನಿಸದೆ ಬಿರುಸಿನಿಂದ ಬರುತ್ತಾನೆ. ಅವನ ಮುಖದಲ್ಲಿ ವಿಜಯೋತ್ಸಾಹದ ಕಳೆ ಇದೆ. ಹಿಂದೆ ಇಬ್ಬರು ಭಟರು ಓಡಿ ಬರುತ್ತಾರೆ.)*

ವರ್ತಕರು : ಅಡ್ಡಬಿದ್ದೆ, ಮಹಾಸ್ವಾಮಿಗಳಿಗೆ!

ನಗರಪಾಲಕ : ಓ, ನೀವಾ? ಏನ್ರೀ ಮಾಡ್ತಿದೀರಿ ಇಲ್ಲಿ? ಏನು ಇದೆಲ್ಲಾ?

೧ನೇ ವರ್ತಕ : ತಮಗೇ ಕಾಯ್ತಾ ನಿಂತಿದೀವಿ....... ಒಪ್ಪಿಸಿಕೋಬೇಕು.

೨ನೇ ವರ್ತಕ : ಏನೋ, ನಮ್ಮ ಮರ್ಯಾದೆ..... ಅಲ್ಪ ಕಾಣಿಕೆ.....

*(ವರ್ತಕರು ಹಣ್ಣು, ಹೂವು, ತುರಾಯಿಗಳನ್ನು ಅರ್ಪಿಸುತ್ತಾರೆ. ಭಟರು ನಗರಪಾಲಕನಿಂದ ಅವನ್ನು ತೆಗೆದುಕೊಳ್ಳುತ್ತಾರೆ.)*

೧ನೇ ವರ್ತಕ : (ತವಕ) ಹೋದ ಕಾರ್ಯ ಹಣ್ಣೋ ಕಾಯೋ?

ನಗರಪಾಲಕ : ನಾನು ಹೋದಮೇಲೆ.......

೨ನೇ ವರ್ತಕ : ಕೇಳಬೇಕೇ!

೩ನೇ ವರ್ತಕ : ಮಹಾರಾಜರು ನಿಮ್ಮ ಜೊತೆ ಬಂದಿರಲಿಲ್ಲವೇ ಸ್ವಾಮಿ?

ನಗರಪಾಲಕ : (ಹೆಮ್ಮೆ) ಉಹುಂ! ನೀನೇ ಹೋಗಿ ಅದೇನು ಕರಾರು ಬೇಕೋ ಮಾಡಿಕೊಂಡು ಬಾ ಅಂದ್ರು.

೨ನೇ ವರ್ತಕ : ತಮ್ಮ ಮೇಲೆ ಅಷ್ಟು ನಂಬಿಕೆ, ಮಹಾರಾಜರಿಗೆ!

೧ನೇ ವರ್ತಕ : ಅಲ್ವೇ ಮತ್ತೆ! ಅಷ್ಟಲ್ಲದೆ ಮಹಾರಾಜರು ತಮ್ಮೊಬ್ಬರನ್ನೆ ರಾಕ್ಷಸರ ಬಳಿಗೆ ಕಳಿಸ್ತಾರೆಯೇ? ತಾವೇನು ಸಾಮಾನ್ಯರೇ, ಸಂಧಿವಿಗ್ರಹಿ, ಸಂಧಾನಚತುರ.......

೨ನೇ ವರ್ತಕ : ಇನ್ನೇನೂ ಯೋಚನೆ ಇಲ್ಲ ತಾನೇ?

ನಗರಪಾಲಕ : ಏನೂ ಇಲ್ಲ..... ಎಲ್ಲಾ ಸರಿಯಾಗಿ ಬಂದೋಬಸ್ತು ಮಾಡಿದೀನಿ.

೧ನೇ ವರ್ತಕ : ಎಷ್ಟೇ ಆದರೂ ತಾವು ಅನುಭವಸ್ಥರು, ತಿಳಿವಳಿಕಸ್ಥರು.... ಹ್ಯಾಗೆ ಮಾಡಬೇಕು ಅಂತ ಇನ್ನೊಬ್ಬರು ಹೇಳಿಕೊಡಬೇಕೇ?

೨ನೇ ವರ್ತಕ : ಅವರು ಏನೂ ತಕರಾರು ಮಾಡಲಿಲ್ಲವೇ ಸ್ವಾಮೀ?

ನಗರಪಾಲಕ : ಏನೋ ರಾಗ ಎಳದ್ರು.... ನಾನು ಉಪಾಯವಾಗಿ ಒಪ್ಪಿಸಿದೆ, ಎಲ್ಲಾ ಕರಾರಿಗೂ.....ಹುಂ! ಬರ್‍ತೀನಿ, ನಿಮ್ಮ ಹತ್ರ ಹರಟ್ತಾ ಇರೋಕೆ ಪುರುಸೊತ್ತಿಲ್ಲ. ಅರಮನೇಗೆ ಹೋಗಿ ಮಹಾರಾಜರಿಗೆ ವರದಿ ಒಪ್ಪಿಸಬೇಕು. ವಾಪಸ್ ಬಂದವೇಲೆ ನೋಡೋಣ.



Downloaded from https:// www.studiestoday.com

Downloaded from https:// www.studiestoday.com

*(ಗಹಗಹಿಸಿ ನಗುತ್ತಾ)* ಇನ್ನೇನು ಇದ್ದೇ ಇದ್ಯಲ್ಲ ಮಾಮೂಲಿ....ಅಂದ ಹಾಗೆ ನಾನು ವಾಪಸ್ ಬರೋವರೆಗೂ ಈ ಕರಾರಿನ ವಿಷಯ ಗುಟ್ಟಾಗಿರಲಿ.... *(ನಗರಪಾಲಕ ಮತ್ತು ಭಟರ ನಿರ್ಗಮನ.)*

೧ನೇ ವರ್ತಕ : ಓ ದೇವರೇ! ಏನು ನಿನ್ನ ಮಹಿಮೆ! ಏನು ನಿನ್ನ ಆಟ!

೨ನೇ ವರ್ತಕ : ಬಕ ಸತ್ತ ಮೇಲೆ ಎಲ್ಲಾ ಮುಗೀತು ಅಂದ್ಕೊಂಡಿದ್ದೆ. ಎಲ್ಲಿಂದ್‌ಲೋ ಬಂದ್ಬಿಟ್ರಲ್ಲ..... ಹ್ಯಾಗೆ ಬಂದ್ರು! ನೆನೆಸಿಕೊಂಡ್ರೆ ಈಗ್ಲೂ ಜುಂ ಅನ್ನುತ್ತೆ ಮೈ!

೧ನೇ ವರ್ತಕ : ಶ್! ಯಾರೋ ಬರ್ತ್ತಿದಾರೆ, ಸ್ವಲ್ಪ ನಿಲ್ಲಿಸಿ ಮಾತ್ನ!

*(ವರ್ತಕರು ಒಂದು ಮೂಲೆಯಲ್ಲಿ ಮರೆಯಾಗಿ ನಿಲ್ಲುತ್ತಾರೆ. ನಾಲ್ಕು ಜನ ಪ್ರಜೆಗಳು ಅವರಲ್ಲಿ ಒಬ್ಬ ಪಾಂಡವರಿಗೆ ಆಶ್ರಯ ಕೊಟ್ಟಿದ್ದ ಬ್ರಾಹ್ಮಣ– ಬಂದು ರಂಗದ ಮತ್ತೊಂದು ಬದಿಯಲ್ಲಿ ಸೇರುತ್ತಾರೆ.)*

೧ನೇ ಪ್ರಜೆ : *(ಬ್ರಾಹ್ಮಣನನ್ನು ದೂಷಿಸುತ್ತಾನೆ)* ಎಂಥಾ ಮನುಷ್ಯನಯ್ಯಾ ನೀನು! ಮಹಾನುಭಾವರನ್ನ ಮನೇಲಿಟ್ಟುಕೊಂಡು, ಅವರು ಯಾರು, ಎತ್ತ ತಿಳ್‌ಕೊಳ್ಳದೆ.... ಈಗ ಇಲ್ಲಿ ಅವರು ಇದ್ದಿದ್ರೆ ಈ ಸ್ಥಿತಿ ಬರ್ತಿತ್ತೆ?

ಬ್ರಾಹ್ಮಣ : ಅಯ್ಯೋ ನಂಗೇನು ಗೊತ್ತಿತ್ತು ಸ್ವಾಮಿ ಅವರ ಮಹಿಮೆ? ಇದು ಹೀಗೆ ಅಂತ ತಿಳಿದಿದ್ರೆ ಅವರು ಮನೆಬಿಟ್ಟು ಹೋಗದ ಹಾಗೆ ನೋಡಿಕೊತಿದ್ದೆ.

೨ನೇ ಪ್ರಜೆ : *(ಕೈ ಕೈ ಹಿಸುಕಿಕೊಂಡು)* ಛೇ, ಈಗ ಇರಬೇಕಿತ್ತು ಅವರು......

೩ನೇ ಪ್ರಜೆ : ನೋಡಿದ್ರೆ ತುಂಬಾ ರಾಕ್ಷಸರೇ ಬಂದಿರೋ ಹಾಗಿದೆ.

೨ನೇ ಪ್ರಜೆ : ಇನ್ನೂ ನಿಮಗ್ಯಾರಿಗೂ ಪೂರ್ತಿ ವಿಚಾರ ತಿಳಿದಹಾಗೆ ಕಾಣುಲ್ಲ.

೧ನೇ ಪ್ರಜೆ : ಅಂದ್ರೆ?

೨ನೇ ಪ್ರಜೆ : ಊರಿನ ಎಂಟು ದಿಕ್ಕುಗಳಲ್ಲೂ ಬಿಡಾರ ಹಾಕಿದಾರೆ.

ಬ್ರಾಹ್ಮಣ : ಆಂ! ನಿಜವಾಗ್ಲೂ?

೨ನೇ ಪ್ರಜೆ : ನಾನೇನು ಸುಳ್ಳು ಹೇಳ್ತೀನ್ಯೆ? ಯಾರೂ ಊರು ಬಿಟ್ಟು ಹೋಗೋ ಹಾಗೂ ಇಲ್ಲ....

೧ನೇ ಪ್ರಜೆ : ಏನ್ಗತಿ, ದೇವ್ರೆ!



Downloaded from https:// www.studiestoday.com

Downloaded from https:// www.studiestoday.com

೨ನೇ ಪ್ರಜೆ : ದೇವರೇ ಗತಿ! ಬಕಾಸುರನ್ನ ಕೊಂದ ಆ ಪುರುಷೋತ್ತಮನೇ ಬಂದು ನಮ್ಮನ್ನು ಕಾಪಾಡಬೇಕು....

೧ನೇ ಪ್ರಜೆ : ಬಕನ್ನ ಕೊಂದು ನಮಗೆ ಮಾಡಿರೋ ಉಪಕಾರಕ್ಕೆ ನಾವು ಅವರಿಗೆ ಸರಿಯಾದ ಮರ್ಯಾದೆ ಗೌರವ ತೋರಿಸಿ, ಮತ್ತೊಮ್ಮೆ ರಕ್ಷಿಸಿ ಅಂತ ಪ್ರಾರ್ಥಿಸಬೇಕು.

೨ನೇ ಪ್ರಜೆ : ಹೌದು, ಹೌದು. ಅದೊಂದೇ ಉಳಿದಿರೋ ದಾರಿ.... ಈ ಊರಲ್ಲೇ ಇರಬೇಕು, ಹುಡುಕೋದಕ್ಕೆ ಜನನ್ನ ಕಳಿಸಬೇಕು, ಈಗಲೇ.

ಬ್ರಾಹ್ಮಣ : ಒಂದಲ್ಲ ಹತ್ಸಲ ಹುಡುಕಾಯ್ತು...ಎಲ್ಲೂ ಇಲ್ಲ.

೧ನೇ ಪ್ರಜೆ : ಎಲ್ಲಾ ನಿನ್ನ ತಪ್ಪು! ನಿನ್ನ ಅತಿಥಿಗಳು ಯಾರು, ಎಲ್ಲಿ ಹೋದ್ರು ತಿಳ್ಕೊಳ್ದೆ....

೨ನೇ ಪ್ರಜೆ : ಈಗ ನಮ್ಮನ್ನ, ಇಡೀ ಏಕಚಕ್ರನಗರಾನ ಕಾಪಾಡೋ ಶಕ್ತಿ ಇರೋರು ಅವರೊಬ್ಬರು ಮಾತ್ರ...

೧ನೇ ಪ್ರಜೆ : ನಮಗಿರೋ ಆಶಾಕಿರಣ ಅವರೊಬ್ಬರೇ! ಈ ತಕ್ಷಣ 'ಏಕಚಕ್ರನಗರ ಭಾಗ್ಯ ವಿಧಾತ ಸನ್ಮಾನ ಸಮಿತಿ' ಅಂತ ಒಂದು ಸನ್ಮಾನ ಸಮಿತಿ ರಚಿಸಿ, ನಮ್ಮ ಶಕ್ತಿಮೀರಿ ಗೌರವ ಭಕ್ತಿ ಸಲ್ಲಿಸಬೇಕು. ಆ ಮಹಾಪುರುಷನ ಅಮೋಘ ಸೇವೆ, ಶೌರ್ಯ, ಧೈರ್ಯ ಸಾಹಸಗಳು ನಮ್ಮ ಕಣ್ಣೆದುರಿಗೆ ಸದಾ ಇರಬೇಕು.... ಅದಕ್ಕೆ ತಕ್ಕ ಸ್ಮಾರಕಗಳನ್ನು ನೀವು ನಗರದ ಮೂಲೆ ಮೂಲೆಗಳಲ್ಲೂ ಸ್ಥಾಪಿಸಬೇಕು.... ಅವನ ಮೂರ್ತಿಗಳನ್ನು ಪ್ರತಿಷ್ಠೆ ಮಾಡಬೇಕು.... ಆ ಅವತಾರ ಪುರುಷನ ಆಗಮನಕ್ಕೆ ಕಾಯಬೇಕಾಗಿದೆ. ಅವನ ದರ್ಶನಭಾಗ್ಯವನ್ನು ನಮ್ಮ ಪ್ರಜೆಗಳೆಲ್ಲರೂ ಪಡೆಯಬೇಕು.ನಮ್ಮ ಉದ್ಧಾರಕ್ಕೆ ಕಾರಣನಾದ ಆ ಯುಗಪುರುಷನ ದಿವ್ಯಸ್ಮರಣೆ ನಮ್ಮಲ್ಲಿ ಸದಾ ಜಾಗೃತವಾಗಿರ ಬೇಕು. *(ಈ ವೇಳೆಗೆ ಅವನ ಮಾತುಗಳು ಸಾರ್ವಜನಿಕ ಭಾಷಣದ ಧಾಟಿಯಲ್ಲಿರುತ್ತದೆ. ಅವರ ಗುಂಪಿಗೆ ಬೀದಿಯಲ್ಲಿ ಹೋಗುವ ಹತ್ತಾರು ಜನಗಳು ಬಂದು ಸೇರಿಕೊಂಡಿರುತ್ತಾರೆ. ಅವನ ಮಾತನ್ನು ಕೇಳಲು ಜನ ಮೆಟ್ಟಿಂಗಾಲು ನಿಂತು ಕತ್ತು ಉದ್ದಮಾಡುತ್ತಿರುತ್ತಾರೆ. ಸೂತ್ರಧಾರ*



Downloaded from https:// www.studiestoday.com

Downloaded from https:// www.studiestoday.com

*ಒಂದು ಮರದ ಪೆಟ್ಟಿಗೆ ತಂದು ಅವನ ಮುಂದಿಡುತ್ತಾನೆ. ಪೆಟ್ಟಿಗೆಯ ಮೇಲೆ ನಿಂತು ಭಾಷಣವನ್ನು ಮುಂದುವರಿಸುತ್ತಾನೆ.)*

ಮಹನೀಯರೇ ಮತ್ತು ಮಹಿಳೆಯರೇ, ಇಂದು ನಾವು ಸಂಪಾದಿಸಿರುವ ಸ್ವಾತಂತ್ರ್ಯದ ಬೆಲೆ ಎಷ್ಟು ಅಮೂಲ್ಯವಾದುದೆಂದು ನಾನು ನಿಮಗೆ ಒತ್ತಿ ಹೇಳಬೇಕಾಗಿಲ್ಲ. ಕ್ರಿಮಿಗಳಂತೆ ಬದುಕಿ ರಾಕ್ಷಸನಿಗೆ ಆಹಾರವಾಗಿ ಸಾಯುತ್ತಿದ್ದ ನಮಗೆಲ್ಲಾ ಒಂದು ಅರ್ಥಪೂರ್ಣವಾದ ಬದುಕನ್ನಿತ್ತು ಉಜ್ವಲ ಭವಿಷ್ಯದ ಬಾಗಿಲನ್ನೇ ತೆರೆದ ಮಹಾಮಹಿಮನ ಗುಣಗಾನವನ್ನು ನಾವೆಷ್ಟು ಮಾಡಿದರೂ ಸ್ವಲ್ಪವೇ. ಆದರೆ ನಿಮಗೆಲ್ಲಾ ಈಗಾಗಲೇ ತಿಳಿದಿರುವಂತೆ ನಮ್ಮ ನಗರದಮೇಲೆ ಪುನಃ ರಾಕ್ಷಸರ ಆಕ್ರಮಣವಾಗಿದೆ. ಹೇಗೆ ಈ ಮೊದಲು ನಮ್ಮನ್ನು ಉದ್ಧಾರ ಮಾಡಿದನೋ, ಅದೇ ರೀತಿ ಈಗಲೂ ಅವನು ಬಂದು ನಮ್ಮನ್ನು ರಕ್ಷಿಸಬೇಕು. ಏಕಚಕ್ರನಗರ ಭಾಗ್ಯವಿಧಾತ ಸನ್ಮಾನ ಸಮಿತಿಯ ಅಧ್ಯಕ್ಷನನ್ನಾಗಿ ನೀವೆಲ್ಲರೂ ಒಮ್ಮತದಿಂದ ನನ್ನನ್ನು ಆರಿಸಿರುವುದು ಸರಿಯಷ್ಟೆ. ಈ ಗೌರವಕ್ಕೆ ನಾನೆಷ್ಟರಮಟ್ಟಿಗೆ ಅರ್ಹನೋ ನನಗೆ ಗೊತ್ತಿಲ್ಲ. ಆದರೂ ನೀವೆಲ್ಲಾ ನನ್ನಮೇಲೆ ಇಟ್ಟಿರುವ ಅಭಿಮಾನಕ್ಕೆ ನಾನು ಚಿರಋಣಿ. ನನ್ನ ಕೈಲಾದ ಅಳಿಲುಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆಲ್ಲಾ ಮತ್ತೊಮ್ಮೆ ವಂದನೆಗಳು. ಎರಡನೆಯದಾಗಿ, ನಾವು ನಮ್ಮ ಭಕ್ತಿಗೌರವಗಳನ್ನು ನಮ್ಮ ಜೀವದಾತನಿಗೆ ಶ್ರದ್ಧೆಯಿಂದ ಅರ್ಪಿಸಬೇಕು. ಈಗ ನಾನು ಹೇಳುವುದೇನೆಂದರೆ, ಆ ಮಹಾತ್ಮನ ದಿವ್ಯಸ್ಮರಣೆಯ ಸ್ಫೂರ್ತಿಯಲ್ಲಿ ನಮ್ಮ ಇಂದಿನ ಭೀಕರ ಪರಿಸ್ಥಿತಿಯನ್ನು ಸಹಿಸಿಕೊಂಡಿರಬೇಕು. ಅದಕ್ಕಾಗಿ ನಾವು ಆ ಮಹಾನುಭಾವನ ಶೋಧನೆಯಲ್ಲಿ ಬಕಾಸುರ ವಧೆಯಾದಂದಿನಿಂದ ಶ್ರಮಿಸುತ್ತಿದ್ದೇವೆ. ಆದರೆ ನಮ್ಮ ದುರದೃಷ್ಟವೋ ಎಂಬಂತೆ ಅವರು ಎಲ್ಲಿದ್ದಾರೆ ನಮಗಿನ್ನೂ ತಿಳಿದು ಬಂದಿಲ್ಲ. ನಾವಂತೂ ಅವರು ಸಿಗುವವರೆಗೂ ಹುಡುಕುತ್ತಲೇ ಇರಬೇಕು. ಎಂದೆಂದೂ ನಮ್ಮ ಭಕ್ತಿ–ಗೌರವಗಳು ಒಣಗದಂತೆ



Downloaded from https:// www.studiestoday.com

Downloaded from https:// www.studiestoday.com

ಸದಾ ಅವರನ್ನೇ ಭಜಿಸುತ್ತಿರಬೇಕು.... ಅವರ ಸಾಹಸಗಳನ್ನು ಹಾಡಿ ಹೊಗಳಬೇಕು. *(ಭಜನೆ ಶುರುವಾಗುತ್ತದೆ.)*

ಭಕ್ಕಸುರನ ಕೊಂದನೋ
ಭಂಡಿ ಅನ್ನ ತಿಂದನೋ!
ಚಂಡಾ ಪ್ರಚಂಡನೋ
ಎಂಥಾ ಬಲವಂತನೋ!
ಬಿಕ್ಕೆ ಬೇಡಬಂದನೋ
ರಕ್ಕಸಾನ ಕೊಂದನೋ!
ಎಂಥಾ ಬಲವಂತನೋ
ಚಂಡಾ ಪ್ರಚಂಡನೋ!

*(ಭಜನೆ ಅತ್ಯಂತ ಉತ್ಸಾಹದಿಂದ, ತನ್ಮಯತೆಯಿಂದ ನಡೆಯುತ್ತದೆ.)*

೧ನೇ ಪ್ರಜೆ : ನಾವು ಆ ಮಹಾಮಹಿಮನ ಸ್ಮರಣಾರ್ಥ ಅವನ ಪ್ರತಿಮೆಗಳನ್ನು ಊರಿನ ಮೂಲೆಮೂಲೆಗಳಲ್ಲೂ ಪ್ರತಿಷ್ಠಾಪಿಸಬೇಕು.

*(ಜನರ ಗುಂಪಿನಿಂದ ಒಬ್ಬ ಶಿಲ್ಪಿ ಮುಂದೆ ಬರುತ್ತಾನೆ.)*

ಶಿಲ್ಪಿ : ನಾನಾಗ್ಲೇ ಆ ಪುರುಷೋತ್ತಮನ ಒಂದು ಭಾರೀ ವಿಗ್ರಹ ಕಡೆದಿದ್ದೇನೆ. ಊರಿನ ಮಧ್ಯದ ಉದ್ಯಾನವನದಲ್ಲಿ ಅದನ್ನು ಸ್ಥಾಪಿಸಬಹುದು.

*(ಜನರೆಲ್ಲಾ ಉತ್ಸಾಹದಿಂದ ಹೋ ಹೋ ಎಂದು ಕುಣಿಯುತ್ತಾರೆ. ಭಜನೆಯ ಗುಂಗು ಇನ್ನೂ ಅಲ್ಲಲ್ಲಿ ಕೇಳಿಸುತ್ತಿದೆ.)*

೧ನೇ ಪ್ರಜೆ : ಬಹಳ ಒಳ್ಳೇದು, ಅದರ ಸ್ಥಾಪನೆ ಕೆಲಸ ಈಗಲೇ ಶುರುವಾಗಲಿ.... ಅಷ್ಟೇ ಸಾಲದು, ಅಂತಹ ಇನ್ನೂ ಹತ್ತಾರು ಪ್ರತಿಮೆಗಳು ತಯಾರಾಗಬೇಕು.

ಶಿಲ್ಪಿ : ಅಗತ್ಯವಾಗಿ ಮಾಡ್ತೇನೆ.

೧ನೇ ಪ್ರಜೆ : ನಮ್ಮ ಉದ್ಧಾರಕನ ಬರುವಿಗಾಗಿ ನಾವೆಲ್ಲಾ ಭಕ್ತಿಯಿಂದ ಪ್ರಾರ್ಥನೆ ಮಾಡುವುದೊಂದನ್ನು ಬಿಟ್ಟು ಬೇರೇನು ಸಾಧ್ಯ? ಅವನು ಬಂದೇ ಬರುತ್ತಾನೆ, ನಮ್ಮನ್ನು ಕಾಪಾಡುತ್ತಾನೆ ಅನ್ನೋ ಅಚಲವಾದ



Downloaded from https:// www.studiestoday.com

Downloaded from https:// www.studiestoday.com

ಭರವಸೆ ನಮ್ಮೆಲ್ಲರಲ್ಲೂ ಪ್ರಾಮಾಣಿಕವಾಗಿ ಮೂಡಬೇಕು. ಈಗ ಧರ್ಮನಾಶ ಸನ್ನಿಹಿತವಾಗಿರುವುದರಿಂದ ಅವತಾರ ಆಗಲೇಬೇಕು.

೧ನೇ ವರ್ತಕ : ಬನ್ನಿ, ಬನ್ನಿ, ನಾವೂ ಭಜನೆ ಮಾಡೋಣ, ಅವರ ಜತೆ ಸೇರ್ಕೊಂಡು

೨ನೇ ವರ್ತಕ : ಹೌದು, ಹೌದು, ಬನ್ನಿ. ಇಲ್ದೆ ಇದ್ರೆ ನಮ್ಮ ಮೇಲೆ ವಿಷ ಕಾರ್ತಾರೆ.

೩ನೇ ವರ್ತಕ : ಪ್ರತಿಮೆಗಳನ್ನ ಸ್ಥಾಪಿಸೋಕೆ ಆಗೋ ಖರ್ಚನ್ನ ನಾವೇ ವಹಿಸಿಕೊಳ್ಳೋಣ ಅವರ್‍ಯಾರಿಗೂ ಅನುಮಾನ ಬರದ ಹಾಗೆ!

೧ನೇ ವರ್ತಕ : ಓ, ಅದೇನ್ ಮಹಾ! ಬೇಕಾದ್ರೆ ಒಂದ್ನಾಲ್ಕು ಗುಡಿಗಳನ್ನೂ ಕಟ್ಟಿಸೋಣ ತಗೊಳ್ಳಿ!

*(ವರ್ತಕರು ಬಂದು ಜನರ ಗುಂಪಿನಲ್ಲಿ ಪತ್ತೆಹಚ್ಚಲಾಗದಂತೆ ಸೇರಿಕೊಳ್ಳುತ್ತಾರೆ. ಜನ ತಮ್ಮ ಉದ್ಧಾರಕನ ಗುಣಗಾನ ಮಾಡುತ್ತಾ 'ಎಲ್ಲಿರುವೆ ತಂದೇ ಬಾರೋ' 'ಮನಸು ಕರಗದೇ ಸ್ವಾಮೀ2, ಮನಸು ಕರಗದೇ'! 'ಇಳಿದು ಬಾ ತಂದೆ, ಇಳಿದು ಬಾ!'– ಇತ್ಯಾದಿ ಹಾಡಿಕೊಂಡು ಮನಸ್ಸು ಬಂದಂತೆ ದಿಕ್ಕೆಟ್ಟು ಕುಣಿಯುತ್ತಾರೆ.)*

ಸೂತ್ರಧಾರ : ನನ್ನ ನಿರೀಕ್ಷೆ ಮತ್ತು ಉದ್ದೇಶಗಳನ್ನು ಮೀರಿ ನಾಟಕ ಬೆಳೆದಿದೆ. ಇಲ್ಲಿ ನಡೆಯುತ್ತಿರುವುದನ್ನು ನಾನು ನಿಮ್ಮಂತೆಯೇ ನೋಡುತ್ತಿದ್ದೇನೆ... ದುರಂತದ ಅಂಚಿನಲ್ಲಿ ನಿಂತಿರುವ ಜನ, ಆಸುರೀ ಶಕ್ತಿಯನ್ನು ಎದುರಿಸುವ ಬಲವಿಲ್ಲದೆ ನೈತಿಕ ಅವನತಿಯ ಪರಾಕಾಷ್ಠೆಯನ್ನು ಮುಟ್ಟಿ, ಭಜನೆ ಸಂಕೀರ್ತನೆಗಳಲ್ಲಿ ತಮ್ಮ ಉದ್ಧಾರಕನನ್ನು ನೆನೆಸುತ್ತಾ ಮುಳುಗಿದ್ದಾರೆ. ಬಹುಶಃ ನಾನು ಕೂಡ ಅವರ ಜೊತೆ ಸೇರಿಕೊಳ್ಳುವುದು ಒಳ್ಳೆಯದೇನೊ!

*(ಸೂತ್ರಧಾರ ಜನರ ಗುಂಪಿನಲ್ಲಿ ಬೆರೆತು ತಾಳಹಾಕುತ್ತಾನೆ.)*

### ಎಂ.ಎಸ್.ಕೆ. ಪ್ರಭು

ಆಧುನಿಕ ಸಣ್ಣಕತೆಗಳ ಜಗತ್ತಿನಲ್ಲಿ ಎಂ.ಎಸ್.ಕೆ. ಪ್ರಭು ವಿಶಿಷ್ಟವಾದ ಸ್ಥಾನದಲ್ಲಿ ನಿಲ್ಲುತ್ತಾರೆ. ಕಥೆ, ಸಣ್ಣಕಥೆ, ನಾಟಕ ಸಾಹಿತ್ಯ ಕ್ಷೇತ್ರಗಳಲ್ಲಿ ಇವರು ಪ್ರಸಿದ್ಧರಾಗಿದ್ದಾರೆ. ಹೊರ–ಒಳ ಜಗತ್ತನ್ನು ಕಾವ್ಯಾತ್ಮಕವಾಗಿ ಗ್ರಹಿಸುವ, ಕತೆ ಹೇಳುವ ಹೊಸಮಾರ್ಗವೊಂದನ್ನು ಇವರ



Downloaded from https:// www.studiestoday.com

Downloaded from https:// www.studiestoday.com

ರಚನೆಗಳಲ್ಲಿ ಗುರುತಿಸಬಹುದು. ಇವರು ಬರೆದಿರುವ ಹಲವಾರು ಕಥೆಗಳು ಕಸ್ತೂರಿ, ಮಯೂರ, ಸುಧಾ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮುಖಾಬಿಲೆ, ಬೆತ್ತಲೆ ಅರಸನ ರಾಜರಹಸ್ಯ ಇವರು ಬರೆದ ಸಣ್ಣಕತೆಗಳ ಸಂಕಲನಗಳಾಗಿವೆ. 'ಬಕ', 'ಮಾಹಾಪ್ರಸ್ಥಾನ' ಇವರ ಪ್ರಕಟಿತ ನಾಟಕ ಸಂಕಲನಗಳು. 'ಬಕ' ನಾಟಕ ಒಂದು ವಿಶಿಷ್ಟ ಪ್ರಯೋಗ. ಪುರಾಣದ ಚೌಕಟ್ಟಿನಲ್ಲಿ ವರ್ತಮಾನ ಜಗತ್ತಿನ ಸಾರ್ವಕಾಲಿಕ ಚಿತ್ರಣವನ್ನು ಇಲ್ಲಿ ಕಾಣಬಹುದು.

## ಶಬ್ದಾರ್ಥ ವಿವರಣೆ

ಬೇಗುದಿ – ತಳಮಳ; ಅಹವಾಲು – ದೂರು; ಅದಮನೀಯ – ದಮನಿಸಲಾಗದ; ಹೈದ – ಹುಡುಗ; ನಿಷ್ಕ್ರಮಿಸು – ತೆರಳು, ಹೊರಡು; ಕ್ಷೋಭೆ – ಗೊಂದಲ, ತೊಂದರೆ; ಹದ್‌ಬಸ್ತು – ನಿಯಂತ್ರಣ; ಖಟ್ಲೆ – ದಾವೆ; ಹಕ್ಳು – ಹೈಕಳು, ಮಕ್ಕಳು; ಒಸಾ – ಹೊಸ, ಹೊಸತು; ಚಿತಾವಣೆ – ಹುರಿದುಂಬಿಸುವಿಕೆ; ಸೂತಕ – ಮೈಲಿಗೆ, ಅಡ್ಡಿ; ಪಿಡುಗು – ಅಂಟುರೋಗ; ಫಜೀತಿ – ಪೇಚು; ಕಡಂಗ – ಒಂದು ರೀತಿಯ ಅಳತೆಯ ಪಾತ್ರ; ಸಬೂಬು – ವ್ಯರ್ಥ ಕಾರಣ.

- **ನಾಟಕದಲ್ಲಿ ಬಂದಿರುವ ಈ ಕೆಳಗಿನ ಮಾತುಗಳ ಸಂದರ್ಭವನ್ನು ಬರೆಯಿರಿ.**
  - ಮನುಷ್ಯರು ಬುದ್ಧಿವಂತರಾಗ್ತಿರೋ ಲಕ್ಷಣ ಕಾಣಿಸ್ತಿದೆ!
  - ಈ ಒಪ್ಪಂದಾನೇ ಇನ್ಮೇಲೆ ಸಂವಿಧಾನ.
  - ನಾವು ಇಷ್ಟೊಂದು ಅನುಕೂಲ ಮಾಡಿಕೊಟ್ಟುದಕ್ಕೆ ಜನ ನಮ್ಮ ಮೇಲೆ ಎಷ್ಟು ಕೃತಜ್ಞರಾಗಿರಬೇಕು.
  - ಕಾನೂನು ಮಾಡೋದು ಜನಗಳನ್ನು ಕೊಲ್ಲೋಕಲ್ಲ, ಬದುಕಿಸೋಕೆ.
  - ಬಕ ಊರೊಳಗೆ ನುಗ್ತಾನೆ! ಕರಾರು ಭಂಗವಾಗಿದೆ.

## ಸಂಕ್ಷಿಪ್ತವಾಗಿ ಬರೆಯಿರಿ

- ಏಕಚಕ್ರ ನಗರದ ಜನತೆ ತಮ್ಮ ಬದುಕಿನಲ್ಲಿ ಆಸಕ್ತಿಯನ್ನು ಕಳೆದುಕೊಂಡಿರಲು ಕಾರಣವೇನು? ವಿಶದಪಡಿಸಿರಿ.
- ರಾಜ ಮತ್ತು ಬಕರೊಳಗೆ ನಡೆದ ಒಪ್ಪಂದವೇನಾಗಿತ್ತು? ವಿವರಿಸಿ ಬರೆಯಿರಿ.
- ಜನರ ಅಸಹಾಯಕತೆಯನ್ನು ಬಂಡವಾಳಶಾಹಿಗಳು ತಮ್ಮ ಸ್ವಾರ್ಥ ಲಾಭಕ್ಕಾಗಿ ಬಳಸಿಕೊಂಡ ಬಗೆಯನ್ನು ನಾಟಕದ ಹಿನ್ನೆಲೆಯಲ್ಲಿ ವಿವರಿಸಿರಿ.



Downloaded from https:// www.studiestoday.com

Downloaded from https:// www.studiestoday.com

## ಚಟುವಟಿಕೆಗಳು

- 'ಬಕ ನಾಟಕವು ಪುರಾಣದ ಚೌಕಟ್ಟಿನಲ್ಲಿ ಮೂಡಿಬಂದ ವರ್ತಮಾನ ಸಮಾಜದ ಸ್ಥಿತಿಗತಿಗಳ ಪ್ರತಿಫಲನವಾಗಿದೆ.' ಈ ಮಾತಿನ ಹಿನ್ನೆಲೆಯಲ್ಲಿ ಒಂದು ಪ್ರಬಂಧ ಬರೆಯಿರಿ.
- ಪರಿಸ್ಥಿತಿಯ ಲಾಭವನ್ನು ಪಡೆದು ದುರ್ಬಲರ ಮೇಲೆ ಅಧಿಕಾರ ಚಲಾಯಿಸುವ ಮಂದಿಯನ್ನು ನಾಟಕದಲ್ಲಿ ವಿಡಂಬಿಸಲಾಗಿದೆಯೇ? ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿರಿ.
- ನಿಮ್ಮ ಶಾಲೆಯಲ್ಲಿ ನಡೆಯುವ ಸಾಹಿತ್ಯೋತ್ಸವದ ಸಂದರ್ಭದಲ್ಲಿ 'ಬಕ' ನಾಟಕವನ್ನು ಪ್ರದರ್ಶಿಸಿರಿ.
- ಶಾಲಾ ವಾರ್ಷಿಕೋತ್ಸವದಂದು 'ಬಕ' ನಾಟಕದ ಪ್ರದರ್ಶನ ನಡೆಯುವುದಕ್ಕಿದೆ. ಅದರ ಪ್ರಚಾರಕ್ಕೆ ಅಗತ್ಯವಾದ ಭಿತ್ತಿಪತ್ರವೊಂದನ್ನು ತಯಾರಿಸಿ ಪ್ರದರ್ಶಿಸಿರಿ.
- ಸಮಾಜದ ನೈತಿಕ ಅಧಃಪತನಕ್ಕೆ ಕಾರಣವಾಗುವ ಲಂಚಗುಳಿತನ, ಭ್ರಷ್ಟಾಚಾರದ ಸ್ವರೂಪವನ್ನು ನಾಟಕದಲ್ಲಿ ಚಿತ್ರಿಸಲಾಗಿದೆ. ಇವುಗಳಿಂದ ಮುಕ್ತವಾದ ಭಾರತದ ನಿರ್ಮಾಣ ಸಾಧ್ಯವೆ? ಈ ಕುರಿತು ಓದುಗರ ಓಲೆಯಲ್ಲಿ ಪ್ರಕಟಿಸಲು ಲೇಖನವೊಂದನ್ನು ಬರೆಯಿರಿ.

## ಭಾಷಾಭ್ಯಾಸ

- ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿ.
  - ನನ್ನ ಕೈಲಾದ <u>ಅಳಿಲಸೇವೆ</u> ಸಲ್ಲಿಸಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮಗೆಲ್ಲಾ ಮತ್ತೊಮ್ಮೆ ವಂದನೆಗಳು.
  - ಭೀಮನು ಬಕನ <u>ಕಪಿಮುಷ್ಟಿ</u>ಯಿಂದ ಏಕಚಕ್ರ ನಗರದ ಸಾವಿರಾರು ಅಸಹಾಯಕ ಮನುಷ್ಯರನ್ನು ಪಾರುಮಾಡಿದನು.

  – ಅಳಿಲ ಸೇವೆ, ಕಪಿಮುಷ್ಟಿ ಇವುಗಳು ನುಡಿಗಟ್ಟುಗಳಾಗಿವೆ.

ಈ ಕೆಳಗಿನ ನುಡಿಗಟ್ಟುಗಳ ಅರ್ಥವನ್ನು ಕಂಡುಕೊಂಡು ವಾಕ್ಯಗಳಲ್ಲಿ ಬಳಸಿರಿ.

- ಎಂಜಲಿಗೆ ಕೈಯೊಡ್ಡು
- ಒರೆಗೆ ಹಚ್ಚು
- ಕಣ್ಣಿಗೆ ಮಣ್ಣೆರಚು
- ಕಣ್ಣೀರಲ್ಲಿ ಕೈತೊಳೆ
- ಕಂಕಣ ಬದ್ಧನಾಗು



Downloaded from https:// www.studiestoday.com

Downloaded from https:// www.studiestoday.com

- ದಮನೀಯ, ಸಮರ್ಥ, ಶಕ್ತ ಮೊದಲಾದ ಪದಗಳಿಗೆ 'ಅ' ಎಂಬ ಉಪಸರ್ಗವು ಬಂದು ಸೇರಿದಾಗ ಕ್ರಮವಾಗಿ ಅದಮನೀಯ, ಅಸಮರ್ಥ, ಅಶಕ್ತ ಎಂದಾಗುತ್ತದೆ. 'ಅ' ಉಪಸರ್ಗವು ಸೇರಿದಾಗ ಪದ ನಿಷೇಧಾರ್ಥವನ್ನು ಸೂಚಿಸುತ್ತದೆ. ಇಂತಹ ಪದಗಳು ಕನ್ನಡ ಭಾಷೆಯಲ್ಲಿ ಧಾರಾಳವಾಗಿ ಕಂಡುಬರುತ್ತವೆ. ಅವುಗಳನ್ನು ಸಂಗ್ರಹಿಸಿ ಬರೆಯಿರಿ.
- ಈ ಕೆಳಗಿನ ಗ್ರಾಮ್ಯ ಭಾಷಾಪ್ರಯೋಗವನ್ನು ಶಿಷ್ಟ ಕನ್ನಡಕ್ಕೆ ಪರಿವರ್ತಿಸಿ ಬರೆಯಿರಿ. ಒಳ್ಳೇ ತಮಾಸೆಯಾಗಿತ್ತು. ಕೂಲೀಮಟದಲ್ಲಿ ಹೈಕ್ಳು ಅಯ್ನೋರ ತಾವ ಕಲೀತಾರಲ್ಲ, ಅಂಗೆ! ಅವರು ಏಳ್ಕೊಟ್ಟಿದ್ನೆಲ್ಲಾ ಅಂದೂ ಅಂದೂ ಗಂಟ್ಲೆಲ್ಲಾ ಒಣಗಿ ಬಿದ್ ಓಯ್ತ್! ಇಷ್ಟೊಂದು ದೊಡ್ ಡಂಗುರ ನಾನಿದುವರ್ಗೂ ಸಾರಿಲ್ಲ. ಬಿಡಿ ಸೋಮಿ! ನಂಗೇನೋ ಒಂದ್ಮಾತೂ ತಲೆ ಬುಡ ಆಗ್ನಿಲ್ಲ! ಆದ್ರೂ ಬೆಳಕಯ್ನೋರ್ ಒತ್ಗೆ ಮಾತೆಲ್ಲಾ ಸರ್ಯಾಗಿ ಗಟ್‌ಮಾಡ್ದೆ!.

## ಕಲಿಕಾ ಸಾಧನೆಗಳು

- ವರ್ತಮಾನ ಕಾಲದ ಸ್ಥಿತಿಗತಿಗಳನ್ನು ಸಮಕಾಲೀನ ಸಾಹಿತ್ಯಪ್ರಕಾರಗಳಿಂದ ಓದಿ ತಿಳಿದುಕೊಂಡು ಅವುಗಳನ್ನು ಪ್ರತಿಬಿಂಬಿಸುವ ಲೇಖನವನ್ನು ತಯಾರಿಸುವುದು.
- ಹೊಸಗನ್ನಡ ಕಾಲಘಟ್ಟದ ನವೋದಯ, ನವ್ಯ, ನವ್ಯೋತ್ತರ ಪ್ರಗತಿಶೀಲ ಮೊದಲಾದ ಸಾಹಿತ್ಯ ರಚನೆಗಳನ್ನು ಓದಿ ವಿಶ್ಲೇಷಿಸಿ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತರೂಪದಲ್ಲಿ ಮಂಡಿಸುವುದು.
- ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮ, ಅಂತರ್‌ಜಾಲ ಮೊದಲಾದವುಗಳ ಭಾಷೆ, ಶೈಲಿ ಇತ್ಯಾದಿಗಳನ್ನು ಕರಗತ ಮಾಡಿಕೊಂಡು ಭಾಷಾ ನೈಪುಣ್ಯಗಳನ್ನು ಬೆಳೆಸಿಕೊಳ್ಳುವುದು.
- ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಅಡಕವಾಗಿರುವ ಜೀವನ ಮೌಲ್ಯ, ಸಾಮಾಜಿಕ ನೀತಿ, ವಿಡಂಬನೆ ಮೊದಲಾದವುಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು.
- ಕನ್ನಡ ಭಾಷಾ ಪ್ರಭೇದಗಳನ್ನು ತಿಳಿದುಕೊಂಡು ಅವುಗಳ ವಿಶೇಷತೆಗಳನ್ನು ಕುರಿತು ಲಿಖಿತರೂಪದಲ್ಲಿ ಮಂಡಿಸುವುದು.
- ಪದನಿಷ್ಪತ್ತಿ, ಅರ್ಥ ವಿವರಣೆ, ಕ್ರಿಯಾಧಾತು, ನಾಮವಿಶೇಷಣ ಮೊದಲಾದ ವ್ಯಾಕರಣ ವಿಶೇಷತೆಗಳನ್ನು ತಿಳಿದುಕೊಂಡು ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುವುದು.



Downloaded from https:// www.studiestoday.com

Downloaded from https:// www.studiestoday.com

# ಅರಿವು ಕುರುಹು

ಸಾಹಿತ್ಯವೂ ಒಂದು ವಿಧದ ಸತ್ಯಾನ್ವೇಷಣೆಯೇ. ಅರಿವಿನ ಅನ್ವೇಷಣೆಯ ಪಥದಲ್ಲಿ ದೃಷ್ಟಿ ಹಾಯಿಸುವಾಗ ಕಂಡುಂಡ ಅನುಭವಗಳನ್ನು ಸಾಹಿತ್ಯ ರೂಪಗಳಲ್ಲಿ ದಾಖಲಿಸಿದಾಗ ಅವು ಅರಿವಿನ ಕುರುಹುಗಳಾಗಿ ಓದುವವರಿಗೂ ತಿಳಿವನ್ನು ನೀಡುತ್ತವೆ. ಸುನಾಮಿಯೆಂಬ ಮಹಾ ದುರಂತಕ್ಕೆ ಮರುಗಿದ ಕವಿ ಮನಸ್ಸು ಅದನ್ನು ಜಗತ್ತಿನ ಪಾಪದ ಪಿಂಡವಾಗಿ ಕಾಣುವಲ್ಲಿ ಆ ಅರಿವಿನ ಕುರುಹು ಗೋಚರಿಸುತ್ತದೆ. ನಿಸರ್ಗವನ್ನು ಮಿತಿಮೀರಿ ಕೊಳ್ಳೆಹೊಡೆಯುವ, ಭೂಮಿಯ ಅಂತರ್ಜಲಕ್ಕೆ ಕನ್ನ ಕೊರೆಯುವ ಅಜ್ಞಾನಿಗಳ ಮಧ್ಯೆ ಖಾದ್ರಿಕಾಕನ ಅರಿವಿನಿಂದ ಕೂಡಿದ ಶ್ರದ್ಧೆಯ ಕಾರ್ಯ ಕಥೆಗಾರರಲ್ಲೂ ಅರಿವಿನ ಒಸರನ್ನು ಮೂಡಿಸಿದೆ. ಬ್ಲೆನ್‌ಹಿಮ್ ಕದನ ಎಂಬ ದೊಡ್ಡ ಯುದ್ಧದಿಂದ ಕಡೆಗೆ ಸಾಧಿಸಿದ್ದಾದರೂ ಏನು ಎಂಬ ಮುಗ್ಧ ಪ್ರಶ್ನೆಯನ್ನು ಅಜ್ಜನ ಮುಂದಿರಿಸಿದ ಮೊಮ್ಮಗಳು ಯುದ್ಧಗಳ ನಿರರ್ಥಕತೆಯ ಕುರಿತಾದ ಅರಿವನ್ನು ಮೂಡಿಸುತ್ತಾಳೆ. ಸಮಾಜದಲ್ಲಿ ಹಸಿವಿನ ಸಮಸ್ಯೆ ಇದೆ. ಬಡತನದ ದಾರುಣತೆಯಿದೆ. ಅದರ ಸುಳಿಯಲ್ಲಿ ಸಿಲುಕಿದ ಸಮುದಾಯದ ಎಳೆಯ ಜೀವಗಳನ್ನು ತಮ್ಮ ಸುಖಕ್ಕಾಗಿ ಬಲಿ ತೆಗೆದುಕೊಳ್ಳುವ ಕರಾಳ ಶಕ್ತಿಗಳಿವೆ. ಅವುಗಳಿಂದ ತಪ್ಪಿಸಿಕೊಳ್ಳುವುದರಲ್ಲಿ ಬಿಡುಗಡೆಯಿದೆ, ಭವಿಷ್ಯವಿದೆ ಎಂಬ ಅರಿವನ್ನು 'ಹುಗ್ಗಿ' ಕತೆಯು ನೀಡುತ್ತದೆ.







Downloaded from https:// www.studiestoday.com

Downloaded from https:// www.studiestoday.com

# ಸುನಾಮಿಯ ಹಾಡು

*ಡಾ. ಎಚ್.ಎಲ್. ಪುಷ್ಪ*

ಪ್ರಳಯದ ಭೀಕರತೆಯನ್ನು ವರ್ಣಿಸುವ ಈ ಕವನವು ಪ್ರಳಯವನ್ನು ಪಾಪದ ಕೊಡ ತುಂಬಿದ 'ಜಗಪ್ರಳಯ'ವೆಂದು ಸಾರುತ್ತದೆ. ಮನುಷ್ಯನ ಮಿತಿಮೀರಿದ ಭೋಗಾಸಕ್ತಿ, ನಿಸರ್ಗದ ಮೇಲಿನ ನಿರಂತರ ದೌರ್ಜನ್ಯ ಜಗತ್ತಿನ ವಿನಾಶಕ್ಕೆ ಕಾರಣವಾಗುವುದು. ಮನುಷ್ಯ ಎಷ್ಟೇ ಬಲಿಷ್ಠನಾಗಿ ಬೆಳೆದರೂ ನಿಸರ್ಗದೆದುರು ನಿಲ್ಲಲಾರ. ಸುನಾಮಿಯಂತಹ ವಿದ್ಯಮಾನಗಳೇ ಅದಕ್ಕೆ ದೃಷ್ಟಾಂತಗಳು. ಜಗತ್ತು ಸಂಪೂರ್ಣ ನಾಶವಾಗಿ ಮತ್ತೆ ಮೊದಲಿಂದ ಆರಂಭಗೊಳ್ಳುವುದೇನೋ ಎಂಬ ಅನಿಸಿಕೆ ಕವನದಲ್ಲಿ ವ್ಯಕ್ತವಾಗಿದೆ.



ಭೂಮಿಯೊಳಗಿನ ಜಲದ ತೆರೆ
ಸರಿಯುತ್ತ, ಮೆಲ್ಲನೆ ಒಳಗೊಳಗೆ ನುಂಗುತ್ತ
ಕಾಣದಿದ್ದಷ್ಟೇ ಮೋಸ ಕಂಡದ್ದೂ ಕೂಡ
ಮೊಸಳೆ ಬಾಯಂತೆ ಜಲದ ಕಣ್ಣು ತೆರೆದು
ಕುಸಿಯುತ್ತಾ ಮಣ್ಣ ಪದರ
ಎಲ್ಲ ಜೀವಚರಗಳು ಸಮಾಧಿಯೊಳಗೆ ಜಾರುತ್ತಾ
ಅಹಾ, ಪ್ರಳಯ! ಇದು ಜಲಪ್ರಳಯ!
ಪಾಪದ ಕೊಡ ತುಂಬಿದ ಜಗಪ್ರಳಯ!

ಕುದಿವ ಕಡಲು
ಉಗಿದು ಎಲ್ಲ ಜೀವಚರಗಳ ಹೊರಕ್ಕೆ
ನುಂಗುತ್ತಿದೆ ಎಲ್ಲ ಮನುಕುಲವ ಒಳಕ್ಕೆ
ಒಡಲ ಒಳಗೆ ಇನ್ನೇನಿದೆ
ಸತ್ತವರ ಎಲ್ಲ ಸತ್ತೆ ಹೊರಬೀಳುತ್ತಿದೆ.
ಮಾಯವಾಗಿದೆ ಎಲ್ಲ ಹವಳಗಳ ದ್ವೀಪ
ಮಿನುಗುವ ಬಿಳಿಮುತ್ತುಗಳು.



Downloaded from https:// www.studiestoday.com

Downloaded from https:// www.studiestoday.com

ಕರೆವ ಮಕ್ಕಳ ಕೊರಳು
ಹಕ್ಕಿಗಳ ಪಿಸುಮಾತು, ಮೀನುಗಾರನ
ಬಲೆ, ಬಲೆಯೊಳಗಿನ ಮೀನು
ನೀರಿನಲ್ಲಿ ನರಳಿಕೆಯಾಗಿ
ಅಲೆಯಬ್ಬರದ ಎದುರು ದನಿ ಕಳಕೊಂಡು
ನೋವು, ವಿಷಾದ, ನಶ್ವರತೆ
ಅಲುಗಿಸುವ ಜೀವದ ಭಯ.

ಎಲ್ಲೋ ದೂರದಲ್ಲಿ ಭೂಮಿ ಕಂಪಿಸಿದರೆ
ಕಡಲು ಎಲ್ಲೆ ಮೀರಿ ಮೊರೆದರೆ
ಇಟ್ಟಿಗೆ ಮೇಲೆ ಇಟ್ಟಿಗೆ ಜೋಡಿಸಿದ
ಗುಡಿ, ಚರ್ಚು, ಮಸೀದಿಗಳೆಲ್ಲಾ
ಹಾರಿ ಹೋಗುತ್ತವೆ ಸಾಕ್ಷಿಯಿಲ್ಲದಂತೆ
ಕುಸಿದು ಹೋದ ಸಮಾಧಿಯ ಸುತ್ತ
ನಾಳೆ ಉತ್ಖನನ ನಡೆಸುವವರು ಪಿಕಾಸಿ ಹಿಡಿದು
ಎಲ್ಲಿಂದ ಅಗೆಯಬೇಕೆಂದು ನಕಾಶೆ ಹುಡುಕುತ್ತಾರೆ.

ವಾಸ್ಕೋಡಗಾಮನ ನಾವೆ, ಟೈಟಾನಿಕ್‌ನ
ಅವಶೇಷಗಳು ಕಾಗದದ ದೋಣಿಗಳಾಗಿ ತೇಲುತ್ತಾ
ಮಂಗಳವೋ, ಶುಕ್ರವೋ ಯಾವುದಾದರೊಂದು
ಗ್ರಹ ಹುಡುಕಲೇ ಬೇಕು
ಉಳಲು, ಬಿತ್ತಲು, ಮನೆಯ ಕಟ್ಟಲು
ಮತ್ತೆ ತೊಟ್ಟಿಲು ತೂಗಲು
ಹೌದು ಇತಿಹಾಸದ ಚಕ್ರ ಸುತ್ತಲೇಬೇಕು
ಅಣುಯುಗದಿಂದ ಶಿಲಾಯುಗಕ್ಕೆ
ಶಿಲಾಯುಗದಿಂದ ಮತ್ತೊಂದು ಯುಗಕ್ಕೆ.



Downloaded from https:// www.studiestoday.com

Downloaded from https:// www.studiestoday.com

## ಡಾ.ಎಚ್.ಎಲ್. ಪುಷ್ಪ



ಡಾ. ಎಚ್.ಎಲ್. ಪುಷ್ಪ ದೊಡ್ಡಬಳ್ಳಾಪುರ ತಾಲೂಕಿನ ಹೊಸಹಳ್ಳಿಯವರು. ಬೆಂಗಳೂರು ವಿಶ್ವವಿದ್ಯಾಲಯ ದಿಂದ ಎಂ.ಎ. ಪದವಿ ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಿಂದ ಪಿ. ಎಚ್. ಡಿ. ಪದವಿ ಪಡೆದಿರುವ ಇವರು ಪ್ರಸ್ತುತ ಬೆಂಗಳೂರಿನ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಿಕೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಮೃತಮತಿಯ ಸ್ವಗತ, ಗಾಜುಗೋಳ, ಲೋಹದ ಕಣ್ಣು, ಮದರಂಗಿ ವೃತ್ತಾಂತ ಇವರ ಕವನಸಂಕಲನಗಳು. ಭೂಮಿಯಲ್ಲ ಇವಳು, ಪರ್ವಾಪರ್ವ, ಗೆಲ್ಲಲಾರ್ಕುಮೆ ಮೃತ್ಯುರಾಜನಂ–ಇವರು ಬರೆದ ನಾಟಕಗಳಾಗಿವೆ. ಒರಿಸ್ಸಾದ ಉದಯ ಭಾರತಿ ರಾಷ್ಟ್ರೀಯ ಪ್ರಶಸ್ತಿ, ಪುತಿನ ಕಾವ್ಯ ಪುರಸ್ಕಾರ, ಕಡೆಂಗೋಡ್ಲು ಶಂಕರ ಭಟ್ಟರ ಕಾವ್ಯ ಪ್ರಶಸ್ತಿ, ದಿನಕರ ದೇಸಾಯಿ ಕಾವ್ಯ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ಸಂದಿವೆ.

### ಶಬ್ದಾರ್ಥ ವಿವರಣೆ

ಸತ್ತೆ – ಇರುವಿಕೆ; ಹವಳ – ಕೆಂಪು ಬಣ್ಣದ ಮಣಿ, ನವರತ್ನಗಳಲ್ಲೊಂದು; ಮೊರೆ – ಗರ್ಜಿಸು, ಕೂಗು; ಉತ್ಖನನ – ಪ್ರಾಚೀನ ಅವಶೇಷಗಳ ಅಗೆತ; ಅವಶೇಷ – ಉಳಿಕೆ.

### ಸಂಕ್ಷಿಪ್ತವಾಗಿ ಬರೆಯಿರಿ

- 'ಮನುಷ್ಯ ಎಷ್ಟೇ ಬಲಿಷ್ಠನಾಗಿ ಬೆಳೆದರೂ ನಿಸರ್ಗದೆದುರು ನಿಲ್ಲಲಾರ' ಎಂಬುದನ್ನು ಕವನದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.
- 'ಸುನಾಮಿ ಪಾಪದ ಕೊಡ ತುಂಬಿದ ಜಗಪ್ರಳಯ' ಕವಯಿತ್ರಿಯ ಈ ಮಾತಿನ ಹಿನ್ನೆಲೆಯಲ್ಲಿ ಔಚಿತ್ಯವನ್ನು ತಿಳಿಸಿರಿ.
- 'ಇತಿಹಾಸದ ಚಕ್ರ ಸುತ್ತಲೇ ಬೇಕು' – ಈ ಮಾತಿನ ಸ್ವಾರಸ್ಯವನ್ನು ಬರೆಯಿರಿ.



Downloaded from https:// www.studiestoday.com

Downloaded from https:// www.studiestoday.com

## ಚಟುವಟಿಕೆಗಳು

- ಪ್ರಕೃತಿ ವಿಕೋಪಗಳಲ್ಲಿ 'ಲಾತೂರು ಭೂಕಂಪ' ಹಾಗೂ 'ಕೇದಾರನಾಥ ಜಲಪ್ರಳಯ' ಮರೆಯಲಾಗದ ದುರಂತಗಳಾಗಿವೆ. ಅವುಗಳ ಕುರಿತು ಸಮೂಹ ಮಾಧ್ಯಮಗಳ ನೆರವಿನಿಂದ ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ ಒಂದು ಸಾಕ್ಷ್ಯಚಿತ್ರ ತಯಾರಿಸಿರಿ.
- ಪ್ರಕೃತಿ ವಿಕೋಪ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಸಹಾಯವನ್ನು ಒದಗಿಸುವಂತೆ ಕೋರಿ ಮುಖ್ಯಮಂತ್ರಿಗೆ ಸಲ್ಲಿಸಲು ಒಂದು ಮನವಿ ಪತ್ರವನ್ನು ತಯಾರಿಸಿರಿ.
- ಸುನಾಮಿ, ಬರ, ಭೂಕಂಪ.... ಮುಂತಾದ ಪ್ರಾಕೃತಿಕ ವಿಕೋಪಗಳನ್ನು ತಡೆಯುವ ಸಲುವಾಗಿ ಕೈಗೊಳ್ಳುವ ಕೆಲಸಗಳ ಕುರಿತು ಪರಿಸರ ಸಂರಕ್ಷಣೆಯ ಕಾರ್ಯಯೋಜನೆಯೊಂದನ್ನು ತಯಾರಿಸಿರಿ.
- ಕವಿತೆಯೆಂದರೆ ನಲಿವಿನ ಅಭಿವ್ಯಕ್ತಿಯಾಗಿರುವಂತೆಯೇ ನೋವಿನ ಅಥವಾ ದುರಂತದ ಅಭಿವ್ಯಕ್ತಿಯೂ ಹೌದು. ಈ ಹಿನ್ನೆಲೆಯಲ್ಲಿ ಕುವೆಂಪುರವರ 'ಸುಗ್ಗಿ ಬರುತಿದೆ' ಕವನದೊಂದಿಗೆ ಈ ಕವನವನ್ನು ಹೋಲಿಸಿ ವೈಶಿಷ್ಟ್ಯವನ್ನು ಗುರುತಿಸಿರಿ.



Downloaded from https:// www.studiestoday.com

Downloaded from https:// www.studiestoday.com

# ಒಸರು

ಫಕೀರ್ ಮಹಮ್ಮದ್ ಕಟ್ಪಾಡಿ

ಪ್ರಕೃತಿಯು ಸಕಲ ಜೀವರಾಶಿಗಳ ಸೊತ್ತು. ಇದನ್ನು ನಾವು ಉಳಿಸಬೇಕು, ಬೆಳೆಸಬೇಕು. ಅದು ಮುಂದಿನ ಪೀಳಿಗೆಗೂ ಅತ್ಯವಶ್ಯಕ. ಅಭಿವೃದ್ಧಿಯ ಹೆಸರಿನಲ್ಲಿ ಇಂದು ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯ ಮೇಲೆ ನಿರಂತರ ದೌರ್ಜನ್ಯವೆಸಗುತ್ತಾ ಬಂದಿದ್ದಾನೆ. ಅದರ ಘೋರ ಪರಿಣಾಮವನ್ನು ಸಕಲ ಜೀವರಾಶಿಗಳು ಅನುಭವಿಸುತ್ತವೆ. ಇಂದು ನಾವು ಎದುರಿಸುತ್ತಿರುವ ನೀರಿನ ಸಮಸ್ಯೆಗೆ ಕೊಳವೆ ಬಾವಿಗಳನ್ನು ತೋಡುವುದೊಂದೇ ಪರಿಹಾರವಲ್ಲ. ಅದಕ್ಕೆ ಪರಿಸರ ಸ್ನೇಹಿಯಾದ ಅನೇಕ ಪರ್ಯಾಯ ಮಾರ್ಗಗಳಿವೆ ಎನ್ನುವುದನ್ನು ಈ ಕತೆಯು ಸಾರುತ್ತದೆ. ಖಾದ್ರಿಕಾಕನ ಧೀರೋದಾತ್ತ ನಿಲುವು ಇಲ್ಲಿ ಮನಮುಟ್ಟುತ್ತದೆ.



ಹಾಜಿಯಾರರ ಮಗಳು ಮದುವೆಯಾಗಿ ಗಂಡನ ಮನೆಗೆ ಹೋದಾಗಿನಿಂದ ಯಾರಾದರೂ ಮಾಟೆಯ ಖಾದ್ರಿ ಬ್ಯಾರಿಯನ್ನು "ಏನಜ್ಜಾ ಭಾಳ ಸಪ್ಪೆಯಾಗಿದ್ದಿ....?" ಅಂತ ಕೇಳಿದರೆ "ನನ್ನ ಒಂದು ಕೈಯೇ ಮುರಿದು ಹೋಯ್ತು ಮೋನೇ" ಅಂದಾನು. ಏಪ್ರಿಲ್ ತಿಂಗಳ ಉರಿಬಿಸಿಲಿನಲ್ಲಿ ಏದುಸಿರು ಬಿಡುತ್ತಾ ಹಾಜಿಯಾರರ ಬಂಗಲೆಯ ಗೇಟು ಮುಂದೆ ನಿಂತು. "ಮೋಳು ಬಂದಿದ್ದಾಳೇನು...? ಮೋಳು ಹೇಗಿದ್ದಾಳಂತೆ.... ಏನಾದರೂ ವರ್ತಮಾನ ಬಂತೇ?" ಎಂದು ಕೇಳಿಯಾನು. ನೂರಾರು ತಲೆಬಿಸಿಯ ವ್ಯವಹಾರದ ಗುಂಗಿನಲ್ಲಿ ಹಾಜಿಯಾರರು ಮುಳುಗಿರುವಾಗ ಶನಿ ಮುದುಕ ಗೇಟಿನ ಮುಂದೆ ನಿಂತದ್ದು ಕಂಡರೆ ಸಿಟ್ಟು ಮೂಗಿನ ಮುಂದೆ ಮೂಡುವುದು. "ನಿಮ್ಗೆ ಬೇರೇನೂ ಕಸುಬಿಲ್ವಾ ಖಾದ್ರಿಕಾಕಾ... ಈ ಮುದಿ ಪ್ರಾಯದಲ್ಲಿ ಸುಮ್ಮನೆ ಮಗ ಕಳುಹಿಸಿದ ಹಣವನ್ನು ಖರ್ಚು ಮಾಡುತ್ತಾ ಉಂಡುತಿಂದು ಮನೆಯಲ್ಲಿ ಮಲಗುವುದು ಬಿಟ್ಟು...." ಎಂದಾರು. ಖಾದ್ರಿ ಬ್ಯಾರಿ ತಾನು ಇವತ್ತು ಬೆಳಗ್ಗೆ ಏಳುವಾಗ ಸಲಾತ್ ಹೇಳಿಕೊಳ್ಳದೆ ಎಡಗಡೆ ತಿರುಗಿ ಎದ್ದಿರಬೇಕೆಂದು ತಕ್‌ದೀರನ್ನು ಹಳಿದುಕೊಳ್ಳುತ್ತಾ ಹಿಂತಿರುಗಿ ಹೋದಾನು.

ಎಲ್ಲಾದರೂ ಹಾಜಿಯಾರರ ಹೆಂಡತಿ ಹಲೀಮಾಬಿಯವರ ಕಣ್ಣಿಗೆ ಮುದುಕ ಬಿದ್ದರೆ ಆಳು ಮಗನನ್ನು ಕರೆಸಿ ಬಂಗಲೆಯ ಹೆಂಗಸರ ಬದಿಯ ಪಡಸಾಲೆಗೆ ಕರೆದು ತಾರೆಂದು



Downloaded from https:// www.studiestoday.com

Downloaded from https:// www.studiestoday.com

ಹೇಳಿಯಾಳು. ಮುದುಕನನ್ನು ಕೂರಿಸಿ ವೀಳ್ಯದ ಹರಿವಾಣ ಮುಂದಿಟ್ಟಾಳು. ಮಗಳು ಗಂಡನ ಮನೆಯಲ್ಲಿ ಸುಖವಾಗಿರುವುದನ್ನು, ಅವರ ಐಶ್ವರ್ಯದ ವಿವರಗಳನ್ನು ಹೇಳಿಕೊಂಡಾಳು. ಅವಳ ಗಂಡನ ಒಳ್ಳೆಯತನವನ್ನು ಕೊಂಡಾಡಿಯಾಳು. ಮುದುಕ ಕಣ್ಣು ಬಾಯಿಬಿಟ್ಟುಕೊಂಡು ಅವಳು ಹೇಳುವುದನ್ನೆಲ್ಲಾ ಕೇಳಿಕೊಂಡಾನು. "ಪಡಚ್ಚರಬ್ಬೇ...ಮೋಳು ಸುಖವಾಗಿರಲಿ....."ಎಂದು ದುವಾ ಹೇಳಿಯಾನು. ಮಗಳ ಗಂಡನ ಮನೆಯ ಸುಖ ಐಶ್ವರ್ಯಗಳ ವಿವರದೊಂದಿಗೆ "ಈ ಹಳ್ಳಿಯನ್ನು ಅವಳು ಮರೆತೇ ಬಿಟ್ಟಿದ್ದಾಳೇನೋ ಅನ್ನಿಸ್ತದೆ ಖಾದ್ರಿಕಾಕಾ" ಎಂದಾಗ ಮುದುಕನ ಎದೆಯೊಡೆದಂತಾಗುತ್ತದೆ. "ಮೋಳು.... ಹಾಗಾಗುವುದು ಸಾಧ್ಯವಿಲ್ಲ.... " ಎಂದು ಗೊಣಗುತ್ತಾ ಎದ್ದು ಹೋಗುತ್ತಾನೆ.

ಖಾದ್ರಿಬ್ಯಾರಿ ಹಾದಿಯಲ್ಲಿ ನಡೆಯುವಾಗ ಎದುರಾಗುವವರೆಲ್ಲ ತಮಾಷೆ ಮಾಡಿ ನಗುವವರೇ "ಎಲ್ಲಾ ಕಾಲ ಬದಲಾಯ್ತು ಖಾದ್ರಿಕಾಕಾ...." ಎಂದು ಅವನಾಡುವ ಮಾತನ್ನೇ ಅಣಕಿಸಿ ಹೇಳುತ್ತಾರೆ. "ಹೌದಲ್ಲ ಮಗಾ ....ಮತ್ತೆ ಹೀಗೇಕಾಗುತ್ತದೆ? ಮಳೆ ಬರುವ ಕಾಲಕ್ಕೆ ಮಳೆ ಬರುತ್ತಿಲ್ಲಾಂದ್ರೆ.... ತೋಟದ ತೋಡುಗಳೆಲ್ಲ ಬತ್ತಿ ಹೋಗುವುದಂದ್ರೆ... ಅಡಿಕೆ ಉದುರುವುದಂದ್ರೆ, ಹೂಗಳು ಒಣಗೂದಂದ್ರೆ. ತೆಂಗಿನ ಮರದ ತೆಂಡಲ್‌ಗಳು ಉದುರೂದಂದ್ರೆ...."ಎಂದು ಅವರ ಅಣಕ ತಿಳಿಯದೆ ಮುಗ್ಧನಾಗಿ ದನಿಗೂಡಿಸುತ್ತಾನೆ. ಮುದುಕನಿಗೆ ಅರಳು ಮರಳು ಎಂದು ಮತ್ತಷ್ಟು ಛೇಡಿಸುತ್ತಾರೆ. "ಅಜ್ಜಾ ನೀನ್ಯಾಕೆ ಇನ್ನೂ ಸಾಯೂದಿಲ್ಲ..." ಎಂದು ಕೇಳಿದರೆ ನಗುತ್ತಾ, "ಮಲಕ್‌ಗಳಿಗೆ ಇನ್ನೂ ಅಲ್ಲಾಹು ನೋಟೀಸು ಕೊಟ್ಟಿಲ್ಲಾಂತ ಕಾಣುತ್ತದೆ....." ಎನ್ನುತ್ತಾನೆ. "ನೀನು ಸತ್ತರೆ ಮಳೆ ಬರಬಹುದೋ ಏನೋ ಅಜ್ಜಾ....." ಎಂದು ಮತ್ತೆ ಅಣಕಿಸಿಯಾರು ಜನ. "ಹೌದೇನೋ...." ಎಂದು ಮುಗ್ಧನಂತೆ ಗೊಣಗಿದ ಮುದುಕನಿಗೆ ಮರುಕ್ಷಣವೇ ಅವರ ಅಣಕ ಗಮನಕ್ಕೆ ಬಂದಂತೆ ರೇಗಿ, "ನೀನೇನು ನನ್ನ ಫಾತಿಹಾದ ನೈಚೋರಿಗೆ ಕಾದು ಕೂತಿದ್ದೀಯೇನೋ..." ಎಂದು ಅರಚಿದಾಗ ಅವನು ಸಿಟ್ಟಾಗುವ ತಮಾಷೆಯನ್ನೇ ಕಾಯುತ್ತಿರುವ ಜನ ಜೋರಾಗಿ ನಗುತ್ತಾ ಸುತ್ತಲೂ ಸೇರುತ್ತಾರೆ. ತನ್ನನ್ನೊಬ್ಬ ಹುಚ್ಚನೆಂದು ತಿಳಿದಿದ್ದಾರೆ ಈ ಜನ ಎನ್ನುವುದು ಅನುಭವಕ್ಕೆ ಬರುತ್ತಲೇ ಮುದುಕ ಮುದುಡಿಕೊಳ್ಳುತ್ತಾನೆ. ಭಯದಿಂದ ದಾರಿಯ ಬದಿಯಲ್ಲಿ ನಡೆದು ಹೋಗುತ್ತಾನೆ. ಹೆಚ್ಚು ಜನರಿರುವ ಜಾಗವನ್ನು ತಪ್ಪಿಸಿಕೊಳ್ಳುತ್ತಾನೆ. ಒಂಟಿಯಾಗಿ ನಡೆಯಬಹುದಾದ ಹಾದಿಯನ್ನು ಆರಿಸಿಕೊಳ್ಳುತ್ತಾನೆ.

ಆಗೆಲ್ಲ ಹಾಜಿಯಾರರ ಮುದ್ದಿನ ಮಗಳು ಜಮೀಲಳನ್ನು ಖಾದ್ರಿಬ್ಯಾರಿ ನೆನೆಯುತ್ತಾನೆ. ಅವಳಾಡುವ ಮಾತುಗಳನ್ನು ಕಲ್ಪಿಸಿಕೊಂಡು ತನ್ನಷ್ಟಕ್ಕೇ ಮಾತಾಡುತ್ತಿರುತ್ತಾನೆ. ಇದನ್ನು ಕಂಡವರು ಮುದುಕನಿಗೆ ಅರಳು ಮರಳು ಎನ್ನುತ್ತಾರೆ. ಜಮೀಲಾ ಇದ್ದಿದ್ದರೆ 'ಯಾಕ್ರೋ



Downloaded from https:// www.studiestoday.com

Downloaded from https:// www.studiestoday.com

ನೀವು ಅಜ್ಜನನ್ನು ಮಸ್ಕಿರಿ ಮಾಡ್ತಿದ್ದೀರಿ...? ಬೇರಿನ್ನೇನೂ ಕಸುಬಿಲ್ವಾ ನಿಮ್ಗೆ....ಹೋಗ್ರೋ ಮನೆಕಡೆ... ' ಎಂದಾಳು. ತನ್ನ ಬಳಿ ಜಮೀಲಾ ಇಲ್ಲದಿರುವುದರಿಂದಲ್ವೇ ಈ ಬಚ್ಚಾಲಿಗಳಿಗೆ ಇಷ್ಟು ಕೊಬ್ಬು ಬಂದಿರೋದು?

ಕ್ಷಣ ಸಾವರಿಸಿಕೊಳ್ಳಲು ಮರಗಳ ನೆರಳಿಗಾಗಿ ಸುತ್ತ ನೋಡುತ್ತಾನೆ. ಅಮಟೆ ಮರವೊಂದು ಎಲೆಗಳನ್ನೆಲ್ಲಾ ಉದುರಿಸಿ ಬೋಳಾಗಿ ನಿಂತಿದೆ. ಅರಳಿಮರದ ಎಲೆಗಳೆಲ್ಲಾ ಹಳದಿ ಬಣ್ಣಕ್ಕೆ ತಿರುಗಿದೆ. ಮೈತುಂಬ ಹಲಸಿನಕಾಯಿಗಳನ್ನು ಬಿಟ್ಟುಕೊಂಡು ಹಲಸಿನ ಮರ ನೀರಿಗಾಗಿ ಬಾಯಿಬಿಟ್ಟು ನಿಂತಂತೆ ಮುದುಕನಿಗೆ ಅನ್ನಿಸುತ್ತದೆ. ಹೀಗೆಷ್ಟು ದಿನ ಮಳೆಗಾಗಿ ಕಾಯಬೇಕು? ಮಳೆ ಬಾರದಿದ್ದರೆ ತನ್ನ ಹಣ್ಣುಗಳನ್ನೇ ಕರಗಿಸಿ ಅರಗಿಸಿಕೊಂಡು ಈ ಮರ ಬದುಕಬೇಕಾಗುತ್ತದೋ ಏನೋ....! ರಬ್ಬೇ.... ನೀನು ಸೃಷ್ಟಿಸಿದ ಈ ದುನಿಯಾದಲ್ಲಿ ಇದನ್ನೂ ಕಾಣಬೇಕೆಂದಿರುವೆಯೇನು? ನೀನಲ್ಲವೇ ಆಕಾಶದಿಂದ ನೀರು ಸುರಿಸುವವನು... ಸುಂದರ ಪ್ರಕೃತಿಯನ್ನು ಸೃಷ್ಟಿಸಿದವನು... ಹಸಿರಾಗಿಸಿದವನು? ಇದನ್ನು ನೀನು ಹಾಳು ಮಾಡಲಾರೆ ರಬ್ಬೇ!

ಜಮೀಲಾಳಿಗೆ ಇಷ್ಟವಾದ ನೇರಳೆ ಮರದಲ್ಲಿ ಕಾಯಿಗಳೆಲ್ಲ ಮುಗಿದಿದ್ದು ಎಲೆಗಳುದುರಿ ಸೊರಗಿ ನಿಂತಿದೆ. ಗುಡ್ಡದ ಕೆಳಗೆ ಕಣಿವೆಯಲ್ಲಿ ತೆಂಗು ಕಂಗು ಬಾಳೆಯ ಗಿಡಗಳ ಹಚ್ಚ ಹಸಿರಿನ ಸಮೃದ್ಧತೋಟ ಮಾಸಿ ಹಳದಿ ಬಣ್ಣಕ್ಕೆ ತಿರುಗುತ್ತಿದೆ. ಹಾಜಿಯಾರರ ತೋಟವಲ್ಲವೇ ಇದು? ಇದರ ಪಕ್ಕದಲ್ಲಿರುವುದು ಸುಬ್ಬಯ್ಯಶೆಟ್ರ ತೋಟವಲ್ಲವೇ? ಹಾಗಾದರೆ ಗುಡ್ಡೆಯಿಂದ ಹರಿಯುವ ತೊರೆ ಬತ್ತಿದೆ ಎಂದಾಯಿತು. ಹಾಜಿಯಾರ ದೊಡ್ಡ ಬಾವಿ, ಕೊಳಗಳ ನೀರೂ ಸಾಲದಾಗಿದೆ ಎಂದಾಯಿತು. ಹಿಂದೆ ಇಂತಹ ಸಂದರ್ಭದಲ್ಲೆಲ್ಲ ಊರವರು ಖಾದ್ರಿಬ್ಯಾರಿಯ ಬಳಿಗೆ ಬರುತ್ತಿದ್ದರು. ನಮ್ಮ ಗುಡ್ಡೆಯಲ್ಲೆಲ್ಲಾದರೂ ನೀರಿನ ಒಸರು ಇದೆಯೇ ನೋಡಿ ಖಾದ್ರಿಕಾಕಾ ಎನ್ನೋರು. ಗುಡ್ಡದ ಪದರುಗಳನ್ನು ಪರೀಕ್ಷಿಸಿ, ನೀರಿನ ಜಾಡು ಹಿಡಿದು ಖಾದ್ರಿಬ್ಯಾರಿ ಸುರಂಗ ಕೊರೆಯುತ್ತಾ ಹೋಗುತ್ತಾನೆ. ಒಸರು ಸಿಕ್ಕಿದಾಗ ಸುರಂಗದ ಮೂಲಕ ತೋಟಕ್ಕೆ ಹರಿದು ಬರುತ್ತದೆ. ಸುತ್ತಲಿನ ತೋಟ ಹಸಿರಾದಾಗಲೇ ಖಾದ್ರಿಬ್ಯಾರಿಗೆ ತೃಪ್ತಿ.

ಮೋಳು ಜಮೀಲಾ ಬಂದು ನಿಂತು "ಅಜ್ಜಾ... ನೀನು ಮಾಟೆ ತೋಡಿ ನೀರು ಬರಿಸುತ್ತಿಯಂತೆ... ಉಮ್ಮಾ ಹೇಳುತ್ತಾರೆ. ಅದ್ಹೇಗೆ ಕಂಡುಹಿಡೀತಿ ಅಜ್ಜಾ... ಭೂಮಿಯೊಳಗಿನ ನೀರು? ಹೇಳಜ್ಜಾ....." ಎನ್ನುತ್ತಾ ಮುದ್ದಾಗಿ ನಕ್ಕಾಳು.

"ಮೋಳೆ, ಅಲ್ಲಾಹ ಸೃಷ್ಟಿಸಿದ್ದು ಈ ಭೂಮಿ ಮತ್ತೆ ಅದರ ಮೇಲಿನದ್ದು ಮಾತ್ರ ಅಂದ್ಕೊಂಡಿದಿಯಾ.... ಭೂಮಿಯ ಏಳೇಳು ಪದರಗಳ ಕೆಳಗೆ ದೊಡ್ಡ ದೊಡ್ಡ ಕೊಳಗಳಿವೆ,



Downloaded from https:// www.studiestoday.com

Downloaded from https:// www.studiestoday.com

ತೊರೆಗಳಿವೆ, ನದಿಗಳಿವೆ. ಎತ್ತರ ತಗ್ಗುಗಳ ಸುಂದರ ಉದ್ಯಾನವಿದೆ. ತಾಮ್ರ, ಬೆಳ್ಳಿ, ವಜ್ರ, ಬಂಗಾರದ ಸಂಪತ್ತಿನ ಕೊಪ್ಪರಿಗೆಗಳಿವೆ... ಅದಲ್ಲವೆ ಪಡಚ್ಚ ರಬ್‌ನ ಖುದ್ರತ್! ಸೃಷ್ಟಿರಹಸ್ಯ!" ಎಂದು ಅದ್ಭುತವೆನಿಸುವ ಭೂಗರ್ಭದ ಲೋಕದೊಳಗೆ ಮುಗ್ಧ ಜಮೀಲಳನ್ನು ಕೊಂಡೊಯ್ದಾನು.

"ಅದ್ವೇಗೆ ನೆಲದೊಳಗಿರುವುದು ನಿಂಗೆ ಗೊತ್ತಾಗ್ತದೆ?" ಅಜ್ಜಾ – ನಂಗೇನೂ ಕಾಣೂದೇ ಇಲ್ಲ. ಅಲ್ಲಾಹ ನಿಂಗೆ ವಹ್ಯ್ ಕಳಿಸುತ್ತಾನೇನು....?" ಎನ್ನುತ್ತಾ ತನ್ನ ಉದ್ದದ ಲಂಗವನ್ನು ಹಸಿರು ಹುಲ್ಲಿನ ಚಾಪೆಯಲ್ಲಿ ಹರಡಿ ಕೂರುತ್ತಾಳೆ. ತಲೆಯ ಜರಿಯಂಚಿನ ತಟ್ಟವನ್ನು ಹೆಗಲ ಮೇಲೆ ಇಳಿಬಿಟ್ಟು ಅದರೆಡೆಯಿಂದ ಎರಡು ಜಡೆಗಳು ಇಣುಕುತ್ತಿರುವಂತೆ ಗಲ್ಲಕ್ಕೆ ಕೈಗೊಟ್ಟು ಉತ್ಸಾಹದಿಂದ ಕೇಳುತ್ತಾಳೆ.

"ಮೋಳೇ, ನಂಗೆ ಅಲ್ಲಾಹ ವಹ್ಯ್‌ಕೊಡಲು ನಾನೇನು ನಬಿಯೇ....? ನಾನೊಬ್ಬ ಸಾಮಾನ್ಯ ಕೂಲಿ. ಅಲ್ಲಾಹ ನಮಗೆ ಎರಡು ಕಣ್ಣುಗಳನ್ನು ಕೊಟ್ಟಿದ್ದಾನೆ ನೋಡ್ಲಿಕ್ಕೆ ಮಗೂ... ಆದರೆ ಮನುಷ್ಯನಿಗೆ ನೋಡಲಿಕ್ಕೆ ತಿಳೀಬೇಕಲ್ಲಾ! ಭೂಮಿಯ ಒಳಗಿರುವುದನ್ನು ಸೂಚಿಸುವ ಹಲವು ಚಿಹ್ನೆಗಳನ್ನು ಭೂಮಿಯ ಮೇಲೆ ಅಲ್ಲಾಹ ಸೃಷ್ಟಿಸಿದ್ದಾನೆ. ಇದಲ್ಲವೇ ಅವನ ಕಣ್ಣು ಮುಚ್ಚಾಲೆ ಆಟ! ಅದನ್ನು ನಾವು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಷ್ಟೆ".

ಜಮೀಲಳ ಮುಖದಲ್ಲಿ ನಸುನಗು ಮೂಡುತ್ತದೆ. ಅದರಲ್ಲಿ ಅಡಗಿರುವ ಅಜ್ಜನ ಮೇಲಿರುವ ಅಭಿಮಾನವನ್ನು ಮುದುಕ ಕಂಡುಕೊಳ್ಳುತ್ತಾನೆ. ಎತ್ತೆರೆತ್ತರ ಗುಡ್ಡಗಳ ಬದಿಯಲ್ಲಿ ಭೂಮಿ ಬಗೆದು ಅಜ್ಜ ತೋಡಿದ ಮಾಟೆಗಳು ಅದರಿಂದ ಒಸರುತ್ತಿರುವ ತಿಳಿಯಾದ ನೀರು, ಬಾಪಾನ ದೊಡ್ಡ ತೆಂಗಿನ ತೋಟ, ಸುಬ್ಬಯ್ಯ ಶೆಟ್ಟರ ಕಂಗಿನ ತೋಟಗಳನ್ನು ಹಸಿರಾಗಿಸಿದ್ದು ಅಜ್ಜನ ಪರಿಶ್ರಮದಿಂದಲೇ ಅಲ್ಲವೇ? ಬಹಳ ವರ್ಷಗಳ ಹಿಂದೆ ಬೆಳ್ಳಕ್ಕಾರ ರಾಜಾವು ಕಿನ್ಯಾ ಗ್ರಾಮಕ್ಕೆ ಬಂದವನು ಅಜ್ಜನನ್ನು ಕರೆಸಿ ಮಾಟೆತೋಡುವ ಬಗ್ಗೆ ವಿವರಗಳನ್ನು ತನ್ನ ಪುಸ್ತಕದಲ್ಲಿ ಬರೆದುಕೊಂಡು ಹೋದದ್ದು ಚಿಲ್ಲರೆ ಸಂಗತಿಯೇ? ಅಜ್ಜನ ಒಂದೊಂದು ಸಾಧನೆಗಳನ್ನು ಹೇಳಿಕೊಳ್ಳುವ ಅವಳ ಸಂಭ್ರಮ ಕಂಡಾಗ ಖಾದ್ರಿ ಬ್ಯಾರಿ ತಾನೂ ಒಬ್ಬ ಮನುಷ್ಯನಾದೆನೆಂದು ಉಬ್ಬಿಕೊಳ್ಳುತ್ತಿದ್ದ.

ಸೃಷ್ಟಿಕರ್ತನಾದ ಅಲ್ಲಾಹನ ನಿಮಯಗಳನ್ನು ಈ ಜನಗಳೆಲ್ಲ ಉಲ್ಲಂಘಿಸಿದ್ದರಿಂದಲ್ಲವೇ ಈ ರೀತಿಯ ಅನಾಹುತಗಳು ಭೂಮಿಯ ಮೇಲೆ ಒಂದೊಂದಾಗಿ ಬಂದೆರಗುತ್ತಿರುವುದು? ಮೇಲೆ ಹಸಿರು ಉದ್ಯಾನವನ್ನು ಸೃಷ್ಟಿಸಿದವನು ಭೂಗರ್ಭದಲ್ಲಿ ಸಿಹಿನೀರಿನ ಕಾಲುವೆಗಳನ್ನು ನದಿಗಳನ್ನು ಸೃಷ್ಟಿಸಿಲ್ಲವೇ? ಅದನ್ನು ಕಂಡುಕೊಂಡ ಮನುಷ್ಯನ ಆಸೆಗೆ ಮಿತಿ ಇದೆಯೇ?



Downloaded from https:// www.studiestoday.com

Downloaded from https:// www.studiestoday.com

ಖಾದ್ರಿ ಬ್ಯಾರಿಗೆ ಮಾಟೆ ತೋಡುವ ವಿದ್ಯೆಯನ್ನು ಕಲಿಸಿಕೊಟ್ಟವನು ಅವನೇ ಅಲ್ಲವೇ? ಗುಡ್ಡದ ತಳದಲ್ಲಿ ಸುರಂಗ ತೋಡುತ್ತಾ ಭೂಗರ್ಭದ ನೀರಿನ ಕೊಳ ತಲಪಿದರೆ ಬೇಕಾದಷ್ಟು ನೀರು ಒಸರುವುದಿಲ್ಲವೇ? ಹರಿದು ಬರುವುದಿಲ್ಲವೇ? ತಗ್ಗಿನಲ್ಲಿ ಬಾವಿ ತೋಡಿದವರಿಗೆ ಅಲ್ಲಾಹನ ಸ್ವರ್ಗದ ನೀರು ಹನಿಯುವುದಿಲ್ಲವೇ? ಇದೆಲ್ಲಾ ಬಿಟ್ಟು ಈ ಮೂರ್ಖ ಜನ ಇಂದು ಮಾಡುತ್ತಿರುವುದು ಏನನ್ನು?

ದೊಡ್ಡ ದೊಡ್ಡ ಲಾರಿಗಳಲ್ಲಿ ರಾಕ್ಷಸಾಕಾರದ ಮೆಶೀನುಗಳನ್ನು ತಂದು ಭೂಮಿಯನ್ನು ಕೊರೆಯತೊಡಗಿದರು. ಪಂಪ್‌ಸೆಟ್ಟುಗಳೆಂಬೋ ದೊಡ್ಡ ಫಿರಾವುನ್‌ನಂತಹ ಸೈತಾನ ಮಿಶಿನ್ನುಗಳನ್ನು ತರಿಸಿದರು. ಅವುಗಳಾದರೋ ಭೂಗರ್ಭದ ನೀರೆಲ್ಲವನ್ನೂ ಒಮ್ಮೆಲೆ ಹೀರಿ ಕಕ್ಕುವ ಸೈತಾನ ಶಕ್ತಿಯವುಗಳು. ಎಲ್ಲವನ್ನೂ ಹೀರಿ ಹಿಗ್ಗಿದವು. 'ಭೂಗರ್ಭದ ಮೇಲೆ ಅತ್ಯಾಚಾರ ಮಾಡಬೇಡಿರೋ ಮಕ್ಕಳೇ...ಶಾಪ ಕೊಟ್ಟಾವೋ! ಅದನ್ನೆ ನಂಬಿದ ಈ ಮರಗಿಡಗಳು....' ಎಂದೆಲ್ಲಾ ಹೇಳುವ ಖಾದ್ರಿ ಬ್ಯಾರಿಯ ಮಾತಿಗೆ ಪಡ್ಡೆ ಹುಡುಗರು ಅಣಕಿಸಿ ನಕ್ಕಾರು.

ಈಗ ಗುಡ್ಡ ದಿಣ್ಣೆಗಳಲ್ಲಿ ತಗ್ಗು ಬಯಲಲ್ಲಿ ಹಸಿರುಹೊತ್ತು ಕುಣಿಯುವ ಕಿನ್ಯಾ ಗ್ರಾಮಕ್ಕೆ ನೀರಿನ ತೊಟ್ಟೂ ಕೊಡಲಾರೆನೆಂದು ಭೂಮಿ ತನ್ನ ಗರ್ಭದಲ್ಲಿನ ನೀರಿನ ಅಗಾಧ ಭಂಡಾರವನ್ನು ಅಡಗಿಸಿಕೊಂಡಿದೆಯೇನೋ! ದೈತ್ಯಾಕಾರದ ಯಂತ್ರಗಳು ಕಲ್ಲು ಬಂಡೆಗಳನ್ನು ಕೊರೆದು ಸುಸ್ತಾದವು. ತೆಂಗು ಕಂಗುಗಳಿಗೆ ಬಿಡಿ, ಎತ್ತರದ ಮನೆಗಳಿಗೆ ಕುಡಿಯುವ ನೀರಿಗೂ ತತ್ವಾರ ಬಂತು. ಕುಡಿಯೋ ನೀರಿಗೂ ಹಾಹಾಕಾರ ಮೂಡಿತೋ... ಹೆಮ್ಮಕ್ಕಳು ಮೈಲುಗಟ್ಟಲೆ ಕೊಡಹಿಡಿದು ನಡೆದು ನೀರಿಗಾಗಿ ಪರದಾಡಿದರೋ....

ಇದೆಲ್ಲಾ ಜಮೀಲಾ ಮೋಳು ತನ್ನಿಂದ ದೂರವಾಗಿದ್ದರಿಂದಲ್ಲವೇ ಆದದ್ದು? ಇಲ್ಲವಾಗುತ್ತಿದ್ದರೆ ಇಷ್ಟರಲ್ಲೇ ನಾಲ್ಕೈದು ಕಡೆ ಜಾಗ ನೋಡಿ ಮಾಟೆ ತೋಡುತ್ತಿದ್ದನೇನೋ ಖಾದ್ರಿ ಬ್ಯಾರಿ. ಜಮೀಲಾಳ ಮದುವೆಯ ದಿನ ಎಲ್ಲರೊಂದಿಗೆ ಖಾದ್ರಿ ಬ್ಯಾರಿಯೂ ಸಂಭ್ರಮಪಟ್ಟಿದ್ದ. ತವರಿನಿಂದ ಅಪ್ಪ, ಅಮ್ಮನನ್ನು ಬೀಳ್ಕೊಡುವಾಗ ಅವಳ ಕಣ್ಣುಗಳು ಅಜ್ಜನನ್ನೇ ಹುಡುಕುತ್ತಿದ್ದವು. ದೂರದಲ್ಲಿ ಪೆಚ್ಚಾಗಿ ನಿಂತಿದ್ದ ಅಜ್ಜನ ಬಳಿಗೆ ಬಂದು ಕೈಸಲಾಮು ಕೊಡುತ್ತಾ "ಅಜ್ಜಾ ಅಳಬೇಡ, ಅಗಾಗ ಬರ್ತಾ ಇರ್ತೀನೆ...." ಎನ್ನುತ್ತಾ ಕಣ್ಣೊರೆಸಿಕೊಂಡಿದ್ದಳು.

ಮೊದಲ ಸಲ ತವರಿಗೆ ಬಂದವಳು ನೇರವಾಗಿ ಖಾದ್ರಿಬ್ಯಾರಿಯ ಮನೆಗೆ ಜಮೀಲಾ ಬಂದಿದ್ದಳು. "ಆ ಖಾದ್ರಿ ಕಾಕಾ ಏನು ನಮ್ಮ ಸಂಬಂಧಿಕನೇ? ಅಲ್ಲ, ನಮ್ಮ ಬಂಧುವೇ...?



Downloaded from https:// www.studiestoday.com

Downloaded from https:// www.studiestoday.com

ಈ ಜಮೀಲಾಳದ್ದೂ ಈ ಮುದುಕನದ್ದೂ ಅದೆಂತಾ ಬಾಂಧವ್ಯವೋ ನಂಗೊಂದೂ ಗೊತ್ತಾಗ್ತಾ ಇಲ್ಲ......" ಎಂದು ಹಾಜಿಯಾರರು ತಲೆಕೆರೆದುಕೊಂಡಿದ್ದರು.

ಜಮೀಲಾ ಬಂದವಳೇ, 'ಅಜ್ಜಾ, ನಾನು ಬಂದಿದ್ದೇನೆ....' ಎಂದು ಕೂಗಿದ್ದಳು. "ನೀನು ನನ್ನನ್ನು ಮರ್ತೇ ಬಿಟ್ಟಿದ್ದೀಯಾ ಮೋಳೇ.... ಇಷ್ಟು ದಿನಗಳು ಬೇಕೇನು ಗಂಡನ ಮನೆಯಿಂದ ತವರಿಗೆ ಬರ್ಲಿಕ್ಕೆ....?" ಮುದುಕನ ಮುನಿಸಿಗೆ ಜಮೀಲಾ ಮುದ್ದಾಗಿ ನಕ್ಕಾಳು. "ಏನು ಮಾಡ್ಲಿ ಅಜ್ಜಾ... ಅಲ್ಲಿದ್ರೂ ನಂಗೆ ನಿಂದೇ ನೆನಪು. ಅಜ್ಜಾ... ನೀನು ಹೇಳುವ ಕತೆಗಳು, ಸಂಗತಿಗಳು ಎಲ್ಲವನ್ನೂ ನೆನಪಿಗೆ ತಂದುಕೊಳ್ಳುತ್ತೇನೆ...." ಎಂದಿದ್ದಳು. 'ಬರಾತಿಗೆ ಬರುತ್ತೇನಜ್ಜಾ' ಎಂದು ಹೋದವಳು ಬರಲೇ ಇಲ್ಲ. ಮೂರು ನಾಲ್ಕು ಸಲ ಹಾಜಿಯಾರರ ಮನೆ ಕಡೆ ಹೋಗಿ ಖಾದ್ರಿ ಬ್ಯಾರಿ ವಿಚಾರಿಸಿಕೊಂಡು ಬಂದಿದ್ದ. 'ಬರಾತಿಗೆ ಇನ್ನೂ ಒಂದು ತಿಂಗಳಿಗೆ ಬಂದಾಳು, ಖಾದ್ರಿ ಕಾಕಾ' ಎಂದಿದ್ದಳು ಹಾಜಾರುಮ್ಮ.

ಊರಲ್ಲಿ ಒಣಗುತ್ತಿರುವ ಪೈರು, ಬತ್ತಿದ ತೊರೆ, ತೋಡುಗಳನ್ನು ಬಿಸಿಲಬೇಗೆ ತಡೆಯದೆ ಮುರಿದು ಬಿದ್ದ ಕಲಶಗಳ ತೆಂಗು ಕಂಗುಗಳನ್ನು ನೋಡಿದರೆ ಎಂಥವರ ಎದೆಯೂ ಒಡೆಯುವಂತಾದ್ದು. ಊರವರು ಸರಕಾರಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ ಮಾತನಾಡಿದರು. ಕೆಲವರು ಊರ ಮಸೀದಿಯಲ್ಲಿ ಮೌಲೂದು, ನೇರ್ಚೆ ಮಾಡೋಣ. ದುವಾ ಮಾಡೋಣ ಎಂದರು. ಕೆಲವರು ದೇವಸ್ಥಾನದಲ್ಲಿ ಪೂಜೆ ಮಾಡಿಸೋಣ ಮಳೆ ಬರುತ್ತದೆ ಎಂದರು. ಖಾದ್ರಿ ಕಾಕಾ "ಮರ ನೆಟ್ಟು ಬೆಳೆಸಿ, ಸಿಕ್ಕಾಪಟ್ಟೆ ನೀರನ್ನು ಹಾಳು ಮಾಡಬೇಡಿ. ಮರಗಳ ನೆರಳಲ್ಲಿ ತೋಡಿನ ನೀರು ಆವಿಯಾಗೋದಿಲ್ಲ....." ಎಂದೆಲ್ಲ ಗೊಣಗುತ್ತಾನೆ. ಕೆಲವರು ಖಾದ್ರಿಕಾಕಾ ಹೇಳೋದು ಸರಿ ಆದರೆ, ನೀರೇ ಇಲ್ಲದಾಗ ಮರಗಿಡಗಳನ್ನು ನೆಡುವುದು ಹೇಗೆ? ಎಂಬ ಪ್ರಶ್ನೆ ಎತ್ತಿ ಎಲ್ಲರನ್ನೂ ನಗಿಸುತ್ತಾರೆ.

'ಮಂಗಳೂರಿನಲ್ಲಿರುವ ಹಾಜಿಯಾರರ ಅಳಿಯನಿಗೆ ಹೇಳಿ ಕೊಳವೆ ಬಾವಿ ತೋಡಿಸುವ ಮಿಶಿನು ತರಿಸೋದು ಒಳ್ಳೆಯದಲ್ಲವೇ' ಎಂದು ಸುಬ್ಬಯ್ಯಶೆಟ್ಟರು ಅಭಿಪ್ರಾಯಪಟ್ಟಾರು. ಊರವರೆಲ್ಲ ಮನೆಗೆ ತಲಾ ಒಂದು ಸಾವಿರ ವಂತಿಗೆ ಮಾಡಬೇಕೆಂದಾರು. ಹಾಜಿಯಾರರು ಮಂಗಳೂರಿನಲ್ಲಿ ದೊಡ್ಡ ಕಂತ್ರಾಟುದಾರರಾದ ಅಳಿಯನಿಗೆ ಹಳ್ಳಿಗೆ ಬರಲು ಟೈಮು ಸಿಕ್ಕೀತೇ ಎಂದು ತಲೆಕೆರೆದುಕೊಂಡಾರು. ಸಬೇಬಾರಾತ್ ದಿನ ಹೇಗೂ ಬಂದೇ ಬರುತ್ತಾನೆ ಅಳಿಯ. ಆಗೆಲ್ಲ ಮಾತಾಡೋಣಾಂತ ಹಾಜಿಯಾರರು ಊರವರನ್ನು ಸಮಾಧಾನಪಡಿಸಿದರು.

ಈ ಕಾರಣದಲ್ಲಾದರೂ ಮೋಳು ಜಮೀಲಾ ಊರಿಗೆ ಬಂದು ನಾಲ್ಕು ದಿನ



Downloaded from https:// www.studiestoday.com

Downloaded from https:// www.studiestoday.com

ನಿಲ್ಲಲೆಂದು ಖಾದ್ರಿ ಬ್ಯಾರಿ ಹಾರೈಸಿಯಾನು. ಊರಿಗೆ ಬಂದ ಜಮೀಲಾ ಮೋಳು ನೀರಿಗಾಗಿ ಕೊಡಹಿಡಿದು ಮೈಲುಗಟ್ಟಲೆ ನಡೆಯುವ ಸ್ಥಿತಿ ಊರಲ್ಲಿ ಬಾರದಿರಲಿ ರಬ್ಬೇ ಎಂದು ಮುದುಕನ ಒಡಲು ಕೂಗಿಕೊಂಡಿತು.

* * * * * *

ಊರಿಗೆ ನೀರಿಲ್ಲದ ಸ್ಥಿತಿಯೆಂದರೆ ಖಾದ್ರಿಬ್ಯಾರಿಯ ತಾಕತ್ತಿಗೆ ಹಾಕಿದ ಸವಾಲಲ್ಲವೇ? ಪಾಳು ಬಿದ್ದ ಗೋಮಾಳವಾಗಿದ್ದ ದೊಡ್ಡಗುಡ್ಡದ ತಪ್ಪಲಲ್ಲಿ ಖಾದ್ರಿ ಬ್ಯಾರಿ ಹಾರೆ ಗುದ್ದಲಿ ಹಿಡಿದು ನಿಂತಿದ್ದಾನೆ. ಒಂಟಿಯಾಗಿ, ಹುಚ್ಚನಂತೆ, ಗುಡ್ಡ, ಬಯಲು ಗಿಡಮರಗಳ ಜೊತೆ ಮಾತಾಡುತ್ತಿದ್ದಾನೆ.

ಈ ಭೂಮಿಗೇನು ಧಾಡಿ! ಅಗಾಧ ಸಮುದ್ರವನ್ನು ನಿನ್ನೊಡಲಲ್ಲಿ ಹುದುಗಿಸಿಕೊಂಡು ಜನಗಳು ನೀರಿಗಾಗಿ ಪರದಾಡುವಂತೆ ಮಾಡಬಹುದೇ? ನಿನ್ನೊಡಲಲ್ಲಿರುವ ಸಂಪತ್ತು ನಿನ್ನದಲ್ಲ ಬಿಡು. ಅದನ್ನೆಲ್ಲಾ ಅಲ್ಲಾಹ ನಿನ್ನಲ್ಲಿ ತುಂಬಿಸಿಟ್ಟದ್ದು ಸತ್ಯ ವಿಶ್ವಾಸಿಗಳಿಗಾಗಿ ಅಲ್ಲವೇ? ಮೋಳು ಜಮೀಲಾ ಸಬೇ ಬಾರಾತ್ ದಿನ ಊರಿಗೆ ಬಂದಾಗ “ಅಜ್ಜಾ ನೀನಿದ್ದೂ ಈ ಊರಿನಲ್ಲಿ ಕುಡಿಯೋ ನೀರಿಗೆ ಬರಗಾಲ ಬಂತೇ” ಎನ್ನುವಂತಾಗಬಾರದು. ಈ ಮುದುಕನ ಕೈಯಲ್ಲಿ ಇನ್ನೂ ಶಕ್ತಿ ಉಳಿದಿದೆಯೇ? ಪಡಚ್ಚ ರಬ್ಬೆ! ಈ ಮುದುಕನ ಕೈಗೆ ಶಕ್ತಿ ಕೊಡು.... ಬಿಸ್ಮಿಲ್ಲಾ ಹಿರ್ರಹ್ ಮಾ ನಿರ್ರಹೀಮ್.... ಮೊದಲ ಪಿಕ್ಕಾಸು ಹಾಕುತ್ತಿದ್ದೇನೆ.

ಮುದುಕ ಮೈಮೇಲೆ ಬಂದವನಂತೆ ಒಂದೇ ಸಮನೆ ಗುಡ್ಡದ ತಪ್ಪಲಲ್ಲಿ ಸುರಂಗ ಕೊರೆಯುತ್ತಿದ್ದಾನೆ. ಊರ ಜನರು ನಗುತ್ತಾರೆ, ‘ಮುದುಕನಿಗೇನೋ ಹುಚ್ಚು ಹಿಡಿದಿದೆ’ ಎನ್ನುತ್ತಿದ್ದಾರೆ.

ಓ ಗುಡ್ಡವೇ, ಎಲ್ಲವೂ ನಿನ್ನೊಡಲಲ್ಲಿದೆ ಎಂಬ ಹಮ್ಮಿನಿಂದ ಬೀಗಿಕೊಳ್ಳಬೇಡ. ನಿನ್ನೊಡಲಲ್ಲಿ ಅಡಗಿರುವಿದೆಲ್ಲವೂ ನಿನಗಾಗಿ ಅಲ್ಲ... ನಿನ್ನ ತುದಿಯಲ್ಲಿರುವ ಪಾಲೆಯ ಮರ ಹೇಳುತ್ತಿದೆ. ನಿನ್ನೊಡಲಲ್ಲಿ ನೀರಿನ ಕೊಳವಿದೆ ಎಂದು, ಎಲ್ಲವನ್ನೂ ಇಲ್ಲಿಟ್ಟಿದ್ದೇನೆ. ಕಣ್ಣು ತೆರೆದು ಕಂಡುಕೊಳ್ಳಿ ಎಂದು ಅಲ್ಲಾಹ ಇಟ್ಟಿರುವ ಅಡಯಾಳ ಇದಲ್ಲವೇ?

ಕ್ಷಮಿಸು, ಸಬೇಬಾರಾತ್ ದಿನಕ್ಕಿಂತ ಮೊದಲು, ಜಮೀಲಾ ಮೋಳು ತವರಿಗೆ ಬರುವಾಗ ನೀನು ನಿನ್ನೊಡಲಿನ ನೀರನ್ನು ನನಗೆ ಕೊಡಲೇ ಬೇಕು. ಮುದುಕನ ರಕ್ತ ಇದಕ್ಕಾಗಿ ಬೇಕಾದರೆ ನೀರಾಗಿ ಹರಿಯಲಿ, ನನ್ನ ಹಾರೆಯೇಟು ನಿನ್ನ ನೋಯಿಸಿದರೆ ಕ್ಷಮಿಸು ದೊರೆಯೇ... ಏಕಿಷ್ಟು ಕಠಿಣವಾಗಿದ್ದಿಯೋ.. ಮೆತ್ತಗಾಗೋ ರಾಜಾ... ಹಾಂ... ಹಾಗೆ ಹಾರೆ ಹಾಕಿ ಎಳೆವಾಗ ಬುಟ್ಟಿತುಂಬಾ ಪುಡಿ ಮಣ್ಣು ಬರಬೇಕು...



Downloaded from https:// www.studiestoday.com

Downloaded from https:// www.studiestoday.com

ಜಮೀಲಾ ಮೋಳು ಸಬೇಬಾರಾತ್ ದಿನ ತವರಿಗೆ ಬಂದವಳು ಅಜ್ಜನನ್ನು ಹುಡುಕಿಕೊಂಡು ಬಂದಾಳು. 'ಅಜ್ಜಾ ಒಳ್ಳೆಯ ಕೆಲಸ ಮಾಡಿದಿ. ನೀನು ಕೈಹಾಕಿದ ನಂತರ ನೀರು ಸಿಗದಿರುತ್ತದೆಯೇ... ಕೆಲಸ ಮುಂದುವರಿಸು ಅಜ್ಜಾ' ಎಂದಾಳು. ಈ ಮುದುಕನಿಗೆ ಹುಚ್ಚು. ಗುಡ್ಡೆಯ ತಳದಲ್ಲಿ ನೀರು ಸಿಗುತ್ತದಂತೆ ಅಂಥಾ ಮಿಶಿನೇ ಬಂದು ಕೊರೆದರೂ ನೀರು ಸಿಗಲಿಲ್ಲ. ಇನ್ನು ಸುರಂಗ ತೋಡಿ ನೀರು ಬಂದ ಹಾಗೆ... ಇದೆಲ್ಲಾ ನೀರು ಸಮೃದ್ಧವಾಗಿದ್ದ ಕಾಲದಲ್ಲೆಲ್ಲಾ ಆಯ್ತು. ಈ ಬರಗಾಲದಲ್ಲಿ ಮಾಟೆಯ ನೀರು ಬಂದರೆ ಇನ್ನೇನು ಕಮ್ಮಿ... ಈ ಮುದುಕನಿಗೆ ಹುಚ್ಚು....! ಎನ್ನುವವರಿಗೆ ಜಮೀಲಾಳೇ ಬರಬೇಕು ಉತ್ತರಿಸಲಿಕ್ಕೆ 'ಅಜ್ಜಾ... ಇವರ ಮಾತು ಕೇಳಿ ನೀನು ಕೆಲಸ ನಿಲ್ಲಿಸಬೇಡ ಮುಂದುವರಿಸು' ಎಂದಾಳು....

ಉರಿಬಿಸಿಲು ಮುದುಕನ ಮೈ ಸುಡುತ್ತದೆ. ಮುದಿ ಕೈ ಸುಸ್ತಾಗುತ್ತದೆ. ಮುದುಕನ ಉತ್ಸಾಹಕ್ಕೆ ಭಂಗ ತರುತ್ತಿದೆ. ಮೋಳೇ ಇನ್ನೂ ತುಂಬಾ ಮಣ್ಣು ತೆಗೆಯಬೇಕಾಗಿದೆ. ನನ್ನ ಮುದಿ ತೋಳುಗಳಲ್ಲಿ ಇನ್ನೂ ಶಕ್ತಿ ಇದೆ. ಗುಡ್ಡದ ತುದಿಯಲ್ಲಿರುವ ಪಾಲೆಯ ಮರದ ನೇರಕ್ಕೆ ಸುರಂಗ ಹೋಗಬೇಕು. ಎಲ್ಲಿದ್ದರೂ ಒಸರು ಸುರಂಗಕ್ಕೆ ಬಂದೇ ಬರಬೇಕು ಮೋಳೆ.... ಊರಿಗೆ ಕುಡಿಯುವ ನೀರಾಗಿ, ಹಾಜಿಯಾರರ ಸುಬ್ಬಯ್ಯಶೆಟ್ಟರ ತೆಂಗು ಕಂಗುಗಳಿಗೆ ಅಮೃತಸಿಂಚನವಾಗಬೇಕು. ಮಳೆ ಬರುವ ತನಕ ನೀರು ಹರಿಯುತ್ತಿರಬೇಕು... ಲೈಲತುಲ್ ಖದರಿನ ರಾತ್ರಿ ಮೌನವಾಗಿ ಮರಗಿಡಗಳು, ಹಕ್ಕಿಗಳು ನನಗಾಗಿ ದುವಾ ಮಾಡುತ್ತವೆ ಮೋಳೇ....

ಅದೇಕೋ ಸುಸ್ತು...! ಇಲ್ಲ ಮೋಳೇ ಹಿಂದಿನಂತೆ ಹಾರೆ ಪಿಕ್ಕಾಸು ಹೊಡೆಯುವ ಶಕ್ತಿ ನನ್ನಲ್ಲಿ ಉಳಿದಿಲ್ಲವೆನಿಸುತ್ತದೆ. ಈ ಮುದಿತನವೊಂದು ಮನುಷ್ಯನಿಗೆ ಶಾಪ. ಪಳಗುತ್ತಾ ಹೋದಂತೆ ಇದರ ಮುಂದೆ ಸೋಲೊಪ್ಪಲೇ ಬೇಕು ಮೋಳೇ... ಹಿಂದೆಲ್ಲಾ ಮಾಟೆ ತೋಡುವಾಗ ಆಮಿನುಮ್ಮ ಬರುತ್ತಿದ್ದಳು. ಮಕ್ಕಳನ್ನು ಇಸ್ಕೂಲಿಗೆ ಕಳಿಸಿ ಬುತ್ತಿ ತರುತ್ತಿದ್ದಳು. ಅವಳ ಕೈಯ ಒಂದು ಗ್ಲಾಸು ಆಡಿನ ಹಾಲಿನಿಂದ ಮಾಡಿದ ಚಾ ಕುಡಿದರೆ ಎಂಥಾ ಶಕ್ತಿ ಬರುತ್ತಿತ್ತು ಅಂತಿಯಾ ಮೋಳೇ... ಹಿಂದೆ ಹೀಗೆ ನಾನು ಒಂಟಿಯಾಗಿರ್ಲಿಲ್ಲ ಮೋಳೇ... 'ಮಾಟೆಯ ಖಾದ್ರಿಬ್ಯಾರಿ ನೀರು ಕಂಡು ಹಿಡಿದಿದ್ದಾನಂತೆ' ಎಂಬ ಸುದ್ದಿ ಊರವರಿಗೆ ಎಂಥಾ ಸಂಭ್ರಮದ್ದಾಗಿತ್ತು ಗೊತ್ತಾ? ಸೈದು, ಅದ್ರಾಮ, ಕೇಶವ, ಚೀಂಕ್ರ ನಾಲ್ಕಾರು ಯುವಕರನ್ನು ನನಗೆ ಸಹಾಯ ಮಾಡಲೆಂದು ಊರವರು ಕಳುಹಿಸುತ್ತಿದ್ದರು. ಈಗ ನೋಡು ಅಮೀನುಮ್ಮಳನ್ನು ಅಲ್ಲಾಹ ಕರೆದುಕೊಂಡ. ಊರಲ್ಲಿ ಎಲ್ಲಾ ತಮಾಷೆ ಮಾಡೋರೆ... ನನ್ನ ಮಗ, ಅಬ್ದುಲ್ಲ ಈ ಹಳ್ಳಿಯಲ್ಲೇನಿದೆ ಮಣ್ಣು ಅಂತ ಮಂಗಳೂರಿಗೆ ಹೋಗಿಬಿಟ್ಟ. ಈ



Downloaded from https:// www.studiestoday.com

Downloaded from https:// www.studiestoday.com

ಹಳ್ಳಿಯಲ್ಲಿ ಒಂಟಿಯಾಗಿ ಯಾಕೆ ಸಾಯ್ತಿಯಾ ಮಂಗಳೂರಿಗೆ ಬಾ.. ಅಂತ ಹೇಳ್ತಾನೆ. ಅವನ ಮುದ್ದು ಮುದ್ದು ಮಕ್ಕಳನ್ನು ನೋಡಿದರೆ ಅಲ್ಲೇ ಹೋಗಿದ್ದು ಬಿಡೋಣ ಅಂತ ಅನಿಸ್ತದೆ. ಆದರೆ ಏನು ಮಾಡಲಿ ಮೋಳೇ... ಆಮೀನುಮ್ಮಳನ್ನು ಮಣ್ಣು ಮಾಡಿದ ಈ ಕಿನ್ಯಾಗ್ರಾಮದ ನೆಲವನ್ನು ಹೇಗೆ ಬಿಟ್ಟು ಹೋಗಲಿ... ನನಗೆ ಅವಳ ಪಕ್ಕದಲ್ಲೇ ಒಂದಿಷ್ಟು ಜಾಗ ಸಿಕ್ಕರೆ ಸಾಕು...

ಓ... ಯಾವುದೋ ಮರದ ಬೇರು ತಂಬಾ ತೊಂದರೆ ಕೊಡುತ್ತಿದೆಯಲ್ಲಾ.. ಕಡಿದಲ್ಲಿ ಹಾಲೊಸರುತ್ತದೆಯೇ... ಇಲ್ಲ. ಇದು ಪಾಲೆಯ ಮರದ ಬೇರಲ್ಲ. ಇದೇನೋ ಬೇರೆ ಇರಬೇಕು. ಮಾವಿನ ಮರದ್ದೋ... ಹುಣಸೆ ಮರದ್ದೋ ಅಷ್ಟು ಗಟ್ಟಿ. ಕಡಿದು ತೆಗೆಯಬೇಕಾದರೆ ಸುಸ್ತು ಹೊಡೆಯಿತು ಮೋಳೇ... ಈವತ್ತು ಪಕ್ಕದ ಮನೆಯ ನಫೀಸಾ ಕರೆದು ಅನ್ನ ಮೀನಿನ ಸಾರು ಹೊಟ್ಟೆ ತುಂಬಾ ಹಾಕಿದ್ಲು. ಇದೆಲ್ಲಾ ಯಾಕೆ ಅಂತ ಕೇಳಿದ್ದಕ್ಕೆ ನೀವು ಊರಿಗಾಗಿ ಈ ಪ್ರಾಯದಲ್ಲೂ ಕೆಲಸ ಮಾಡುತ್ತಿರುವಾಗ ನಾನೊಂದಿಷ್ಟು ಅನ್ನ ಹಾಕುವುದು ದೊಡ್ಡ ಸಂಗತಿಯಾ... ಅಂದ್ಲು ಮೋಳೇ... ಊರಲ್ಲಿ ನನ್ನ ಕೆಲಸವನ್ನು ಗುರುತಿಸುವವರಿದ್ದಾರೆ ಮೋಳೇ...

ಹೀಗೆ ಬಾ... ಈಗ ಬಂದಿದೆ ಪುಡಿಕಲ್ಲು, ಪೊಟ್ಟುಪಾದೆ.... ಇದಲ್ಲವೇ ನೀರಿನ ಸೂಚನೆ ಕೊಡುವ ಪದರ? ಮೋಳೇ... ನಾನು ತಲುಪಿದ್ದೇನೆ... ಅಲ್ಲಾಹನ ನೀರಿನ ಖಜಾನೆಯ ಬಳಿಗೆ... ಸೂಚನೆ ನೀಡಿದ್ದಾನೆ. ಇನ್ನು ಸ್ವಲ್ಪ ... ಸ್ವಲ್ಪವೇ ತೋಡಿದರೆ ನೀರು ಸಿಗುತ್ತದೆ.. ಎಷ್ಟು ದಿನಗಳಾದವು.... ಹದಿನೈದಾಯಿತೋ.... ಹದಿನಾರೋ...? ಸಬೇಬಾರಾತಿನ ದಿನ... ಊರಿಗೆಲ್ಲಾ ನೀರು ಸಿಗುವಂತಾಗಬೇಕು. ಬರಾತಿನ ದಿನ... ಮರಗಿಡಗಳು.. ಹಕ್ಕಿಗಳು, ಪ್ರಾಣಿಗಳು, ಮನುಷ್ಯರು ಮೌನವಾಗಿ ಅಲ್ಲಾಹನನ್ನು ಪ್ರಾರ್ಥಿಸುವ ದಿನ. ಅಲ್ಲಾಹ್! ಆ ದಿನ ... ನಿನ್ನ ಸ್ವರ್ಗದ ನೀರಿನ ಒರತೆ ಹರಿದು ಬರಲಿ! ಹೆಚ್ಚೇನಿಲ್ಲ, ಇನ್ನೊಂದು ಹತ್ತು ಪೆಟ್ಟು.... ಬಿದ್ದರೆ ಸೆಲೆಯೊಡೆದು ಬರುತ್ತದೆ.

ಸಬೇಬಾರಾತಿನ ದಿನ ಊರಿಗೆ ಬಂದ ಜಮೀಲಾ ಅಜ್ಜನನ್ನು ಹುಡುಕಿಕೊಂಡು ಬಂದಾಳು.

'ಅಜ್ಜಾ... ನಾನು ಬಂದಿದ್ದೇನೆ.....'

ಅದ್ಯಾರ ಧ್ವನಿ! ಅಹಾ... ಜಮೀಲಾ ಮೋಳು ಬಂದಿದ್ದಾಳೆ. ನಾನಿಲ್ಲಿ ಸುರಂಗದೊಳಗಿದ್ದೇನೆ ಮೋಳೇ... ನೀನು ಮಾತಾಡಿದ್ದೆಲ್ಲಾ ಕೇಳುತ್ತದೆ ಮೋಳೇ.. ಕೇಳದಿದ್ದರೂ ನೀನೇನು ಹೇಳುತ್ತಿದ್ದಿ ಎನ್ನೋದನ್ನೂ ಕಲ್ಪಿಸಬಲ್ಲೆ... ಹೇಳು ಮೋಳೇ...



Downloaded from https:// www.studiestoday.com

Downloaded from https:// www.studiestoday.com

"ಎಲ್ಲೆಲ್ಲಾ ಹುಡುಕಿದೆ ಅಜ್ಜಾ ನಿನ್ನನ್ನು... ನಿನ್ನ ಮನೆಯ ಬಳಿಯಿರುವ ನಫೀಸಾ ತೋರಿಸಿದ್ಲು. ನೀನಿಲ್ಲಿದ್ದೀಯಾಂತ.. ಅಜ್ಜಾ ಸುರಂಗ ತೋಡುವ ನಿನ್ನ ಉತ್ಸಾಹವನ್ನು ಎಲ್ಲರೂ ಹೊಗಳ್ತಿದ್ದಾರೆ... ನಿನ್ನ ಕೆಲಸ ಮುಂದುವರಿಸು. ಊರಿಗೆ ಊರೇ ನಿನ್ನ ನೀರಿಗಾಗಿ ಬಾಯಾರಿ ನಿಂತಿದೆ... ನೀನು ಖಂಡಿತಾ ನೀರು ತರುತ್ತಿ ಅಂತ ನನಗೆ ಭರವಸೆ ಇದೆ."

ಸುರಂಗದ ಬಾಗಿಲಿಗೆ ಕಿವಿಯಾನಿಸಿ ಜಮೀಲಾ ಖಾದ್ರಿಬ್ಯಾರಿಯ ಗುದ್ದಲಿಯ ಸದ್ದು ಕೇಳಿಸಿಕೊಳ್ಳುತ್ತಾಳೆ. ಅಜ್ಜ ಒಳಗೆ ಕೆಲಸ ಮಾಡುತ್ತಿರುವುದು ಖಾತ್ರಿಯಾಗುತ್ತದೆ.

ಅಜ್ಜಾ... ನಮ್ಮ ಬಾಪಾ ತರಿಸಿದ ಕೊಳವೆ ಬಾವಿ ತೋಡುವ ಯಂತ್ರ ಬರೀ ದಂಡಕ್ಕೆ. ಮಾಟೆಗೀಟೆಯೆಲ್ಲ ತೋಡಿ ನೀರು ತೆಗೆಯುವ ಕಾಲ ಇದಲ್ಲ ಎನ್ನುವವರಿಗೆ ನೀನು ಪಾಠ ಕಲಿಸಬೇಕು. ಅಜ್ಜಾ... ಇಂದು ಬರಾತಿನ ದಿನ.... ಅಲ್ಲಾಹ ಕಲ್ಪಿಸಿದ ಒಳ್ಳೆಯ ದಿನ... ನೀನು ನೀರು ಕೊಡಿಸು. ನಿನ್ನ ತಾಕತ್ತಿನ ಬಗ್ಗೆ ಅನುಮಾನ ಪಡುವವರಿಗೆಲ್ಲಾ ನೀನು ಸವಾಲು ಹಾಕಬೇಕು..... ಭೂಮಿಯಡಿಯಲ್ಲಿ ಅಲ್ಲಾಹು ಇಟ್ಟಂತಹವರಿಗೆಲ್ಲಾ ನಿರ್ಮಲ ನೀರಿನ ನದಿಯನ್ನು ಮೇಲಕ್ಕೆ ತರಬೇಕು ಅಜ್ಜಾ! ಜಮ್‌ನಮ್‌ನಂತಹಾ ನೀರು ತೊರೆಯಾಗಿ ಹರಿಯಬೇಕು.

ಅಜ್ಜಾ... ನೀನ್ಯಾಕೆ ಮಾತಾಡ್ತಾ ಇಲ್ಲ? ನನ್ನ ಮಾತು ನಿನಗೆ ಕೇಳಿಸುತ್ತಿದೆ ತಾನೇ? ನೀನು ಸುರಂಗ ಕೊರೆಯೋ ಸದ್ದು ನನಗೆ ಕೇಳಿಸುತ್ತಿದೆ.

ಹೇಳು ಮೋಳೇ.. ನನಗೆಲ್ಲಾ ಕೇಳಿಸುತ್ತಿದೆ....

ಅಜ್ಜಾ... ನಿನ್ನೊಂದಿಗೆ ತುಂಬಾ ಮಾತನಾಡಬೇಕು... ನಾನು ಈ ಸಲ ಬರಲು ತುಂಬಾ ತಡಮಾಡಿದೆ ಅಂತ ಬೇಸರ ಮಾಡಬೇಡ. ಏನು ಮಾಡ್ಲಿ ಹೇಳಿ... ಗಂಡನ ಮನೆಗೆ ಹೋದನಂತರ ಬೇಗ ಹಿಂತಿರುಗಿ ಬರಲಿಕ್ಕಾಗ್ತದಾ... ನೀನೇ ಹೇಳ್ತಿದ್ದೀಯಲ್ಲಾ... ಅಯ್ಯೋ ನಾನು ನನ್ನ ಬಗ್ಗೆಯೇ ಹೇಳ್ತಿದ್ದೇನೆ.... ನಿನ್ನ ಬಗ್ಗೆ ಕೇಳಲೇ ಇಲ್ಲ... ಅಜ್ಜಾ ನಿನ್ನ ಮಗ ಅಬ್ದುಲ್ಲಾ ಬಂದಿದ್ನಾ? ಈ ಸಲನೂ ಮಂಗಳೂರಿಗೆ ಬಾ ಅಂತ ಕರೆದಿದ್ನೇನು? ನೀನು ಮತ್ತೆ ಈ ಮಣ್ಣಲ್ಲೇ ಮಣ್ಣಾಗಬೇಕೆಂದು ಹಿಂದಕ್ಕೆ ಕಳಿಸಿದ್ದಿಯೇನು?

ಮೋಳೇ... ನೀರು ಸಿಕ್ಕಿತು....! ಒಸರು ಬರ್ತಾ ಇದೆ... ನಿಂಗೆ ಕೊಟ್ಟ ಮಾತಿನಂತೆ ನೀರು... ಸಾಕಷ್ಟು ಒರತೆ ಇದೆ... ಸಂತೋಷದಿಂದ ಕುಣಿಯುವಂತಾಗಿದೆ ಮೋಳೇ... ಅಯ್ಯೋ....!

ಅಜ್ಜಾ... ಅದೇನು ಸದ್ದು? ನಿಂಗೇನೂ ಅಪಾಯವಿಲ್ಲ ತಾನೇ... ಅರೇ ಮಣ್ಣು ಕುಸಿದ ಹಾಗೆ ಕಾಣುತ್ತಿದೆ.... ಅಜ್ಜಾ ನೀನು ಹೊರಗೆ ಬರುವುದು ಹೇಗೆ, ಅಜ್ಜಾ....



Downloaded from https:// www.studiestoday.com

Downloaded from https:// www.studiestoday.com

ಅಯ್ಯೋ... ಬಾಪಾ, ಉಮ್ಮಾ... ಯಾರಲ್ಲಿ ಬನ್ನಿ ಅಜ್ಜ ಮಣ್ಣಿನಡಿ ಸಿಕ್ಕಿ ಬಿದ್ದಿದ್ದಾನೆ... ಉಳಿಸಿ ಅವನನ್ನು ಉಳಿಸಿ.. ಯಾ ಅಲ್ಲಾಹ್! ಅಜ್ಜನನ್ನು ಕಾಪಾಡು...

ಅಜ್ಜಾ ಭಯಪಡಬೇಡ, ಊರವರೆಲ್ಲರೂ ಓಡಿ ಬರುತ್ತಿದ್ದಾರೆ.

ಜಮೀಲಾಳ ಕೂಗು ಬೆಟ್ಟಗುಡ್ಡಗಳಲ್ಲಿ ಪ್ರತಿಧ್ವನಿಸುತ್ತದೆ. ಮರಗಿಡಗಳು ಹಕ್ಕಿಗಳು ದನಿಗೂಡಿಸುತ್ತವೆ.

ಅಜ್ಜಾ ಧೈರ್ಯ ಮಾಡಿಕೋ... ಹಾರೆಗುದ್ದಲಿ ತಂದು ಊರವರು ಮಣ್ಣು ಎಳೆದು ಹಾಕುತ್ತಿದ್ದಾರೆ.

ಆಳಿಗೊಂದು ಮಾತು–ಯಾರಿಗೂ ತಿಳಿಸದೆ ಇಲ್ಲಿ ಬಂದು ಈ ಮುದುಕ ಈ ಅವಾಂತರ ಮಾಡಿಕೊಳ್ಳಬಹುದೇ? ತುಂಬಾ ಘಾಟಿ ಮುದುಕ!

ಜಮೀಲಾ ನಡುಗುತ್ತಾ ನಿಂತಿದ್ದಾಳೆ.

ಹಾಜಿಯಾರರ ಮಗಳಲ್ಲದಿದ್ದರೆ ಈ ಮುದುಕ ಮಣ್ಣು ಪಾಲಾಗಿರೋದು ಯಾರಿಗೆ ಗೊತ್ತಾಗುತ್ತಿತ್ತು! ಮುದುಕ ನೀರು ಕಂಡುಹಿಡಿದಿರಬೇಕು. ಇಲ್ಲದಿದ್ದರೆ ಮಣ್ಣು ಜರಿದು ಬೀಳುವುದಕ್ಕೆ ಕಾರಣವಿಲ್ಲ... ಬೇಗ ಬೇಗ ಮಣ್ಣು ತೆಗೆಯಿರೋ....

ಅಜ್ಜಾ... ನಮಗಾಗಿ ಅಲ್ಲೇ ಕಾದಿರು... ಮಣ್ಣು ತೆಗೆಯುವಾಗ ಜಾಗ್ರತೆ..... ಅಜ್ಜನ ಮೈಗೆಲ್ಲಾದರೂ ಗುದ್ದಲಿ ತಾಗೀತು....

ಮಣ್ಣು ಸರಿಸಿದಾಗ ಮುದುಕನ ಕಾಲು... ಕೈ... ಅರೇ ... ನೋಡಲ್ಲಿ... ಮಣ್ಣಿನಲ್ಲಿ ಹುದುಗಿದ್ದ ಮುದುಕನನ್ನು ಎತ್ತುತ್ತಿದ್ದಾರೆ... ಎಂಥಾ ಅದ್ಭುತ! ಅವನ ಜೊತೆಗೆ ನೀರೂ ಹರಿದು ಬರುತ್ತಿದೆ.

ಅಜ್ಜಾ ನೀನು ಮಾತಾಡು... ನಿನಗೇನೂ ಆಗಿಲ್ಲ ತಾನೇ.. ನೋಡು ನೀನು ತೋಡಿದ ಸುರಂಗದಲ್ಲಿ ನೀರು ಹೇಗೆ ಹರಿದು ಬರುತ್ತಿದೆ. ನೀರು ಮಣ್ಣನ್ನು ಕೊಚ್ಚಿ ಹರಿಯುತ್ತಿದೆ... ಎಲ್ಲರೂ ನಿನ್ನ ಸಾಹಸಕ್ಕೆ ದಂಗಾಗಿದ್ದಾರೆ... ಕಣ್ಣು ತೆರೆ ಅಜ್ಜಾ...

ಯಾರಿಗೂ ಬೇಡವಾಗಿದ್ದ ಗುಡ್ಡದಿಂದ ನೀರು ಜುಳು ಜುಳು ಹರಿಯುತ್ತಿದೆ. ಹಾಜಿಯಾರರು, ಸುಬ್ಬಯ್ಯಶೆಟ್ಟರು ಬಂದು ದಂಗಾಗಿ ನಿಂತಿದ್ದಾರೆ.

ಈ ಅದ್ಭುತವನ್ನು ನೋಡುತ್ತಾ ನಿಂತ ಜನ ವಾಸ್ತವಕ್ಕೆ ಬಂದಂತೆ ಪ್ರಶ್ನೆಯೊಂದು ಧುತ್ತನೆ ಬಂದು ನಿಲ್ಲುತ್ತದೆ.

ನೀರಿನ ಒಸರು ಇರುವ ಈ ಗುಡ್ಡ ಯಾರ ಪಾಲಿನ ಆಸ್ತಿಯ ಪಾಲಿಗೆ ಸೇರಿದ್ದು?



Downloaded from https:// www.studiestoday.com


Downloaded from https:// www.studiestoday.com

ಹಾಜಿಯಾರರಿಗೆ ಸೇರಿದ್ದೇ? ಸುಬ್ಬಯ್ಯಶೆಟ್ಟರ ಆಸ್ತಿಯೇ?

ಜಮೀಲಾ ಅಜ್ಜ ಮಲಗಿದ್ದಲ್ಲಿ ಕೂತು "ಅಜ್ಜಾ... ನೀರು ನೋಡು, ಹೇಗೆ ಹರಿದು ಬರುತ್ತಿದೆ... ಕಣ್ಣು ತೆರೆ ಅಜ್ಜಾ..." ಎನ್ನುತ್ತಿದ್ದಾಳೆ.

ಗುಡ್ಡದ ತಳದಿಂದ ಜುಳು ಜುಳು ಹರಿಯುತ್ತಿರುವ ನೀರು ತನಗಿಷ್ಟ ಬಂದಂತೆ ಹಾದಿ ಮಾಡಿಕೊಂಡು ಹರಿಯುತ್ತಿದೆ... ಮಣ್ಣಿನೊಂದಿಗೆ ಬೆರೆತು ಕೆಂಪು ಕೆಂಪಾದ ನೀರು... ಹರಿಯುತ್ತಾ ಹೋದಂತೆ ತಿಳಿಯಾಗುತ್ತಾ... ತಿಳಿಯಾಗುತ್ತಾ...

## ಫಕೀರ್ ಮುಹಮ್ಮದ್ ಕಟ್ಪಾಡಿ



ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿಯಾಗಿರುವ ಫಕೀರ್ ಮುಹಮ್ಮದ್ ಕಟ್ಪಾಡಿ ಅವರು "ನೋಂಬು", "ಗೋರಿಕಟ್ಟಿಕೊಂಡವರು", "ದಜ್ಜಾಲ" ಎಂಬ ಕಥಾಸಂಕಲನಗಳನ್ನೂ, "ಸರಕುಗಳು", "ದಂಬರಿ", "ಕಚ್ಚಾದ" ಎಂಬ ಕಾದಂಬರಿಗಳನ್ನೂ ಬರೆದಿರುವರು. "ಕೇರಳದಲ್ಲಿ ೧೫ ದಿನಗಳು", "ಕಯ್ಯೂರಿನ ರೈತ ವೀರರು", "ರಾಷ್ಟ್ರೀಯತೆ ಮತ್ತು ಮುಸ್ಲಿಮರು" ಅವರ ಇತರ ಕೃತಿಗಳು.

ಶುದ್ಧ ಅಂತಃಕರಣದ ಮಾನವೀಯ ತುಡಿತವು 'ಒಸರು' ಕಥೆಯ ಕೇಂದ್ರಬಿಂದು. ಕಥೆಯಲ್ಲಿ ಅಲ್ಲಾಹುವಿನ ಸ್ವರ್ಗದ ನೀರನ್ನೇ ಹರಿಸುವ ಖಾದ್ರಿಬ್ಯಾರಿಯ ಕನಸು ವಾಸ್ತವಗಳ ನಡುವಿನ ಹಾದಿಯಲ್ಲಿ 'ಮಿಥ್' (ಪುರಾಣ) ನ ಹರಿದಾಟವಿದೆ. ಇಸ್ಲಾಂ ಸಂಸ್ಕೃತಿಯೊಳಗಿನ ಮಿಥ್‌ಗಳೆಡೆಗೆ ಮುಖಮಾಡಿರುವುದರಿಂದಲೇ ಈ ಕಥೆ ಧ್ವನಿಪೂರ್ಣತೆಯನ್ನೂ ಹೊಸತನವನ್ನೂ ತಂದುಕೊಂಡಿದೆ. ಅಂತರಂಗದಲ್ಲಿ ಮಿಡಿವ ಬದುಕಿನ ಸಂಘರ್ಷ ಕ್ಷಣಗಳ ಸೂಕ್ಷ್ಮವನ್ನು ಈ ಕಥೆಯಲ್ಲಿ ಕಾಣಬಹುದು. 'ದಜ್ಜಾಲ' ಕಥಾಸಂಕಲನದಿಂದ ಈ ಕತೆಯನ್ನು ಆರಿಸಲಾಗಿದೆ.

## ಶಬ್ದಾರ್ಥ ವಿವರಣೆ

ಒಸರು – ಒರತೆ; ಪಡಚ್ಚರಬ್ಬೇ – ದೇವರೇ; ಮೋಳು – ಮಗಳು; ಮಲಕ್ – ದೇವದೂತ; ದುನಿಯಾ – ಜಗತ್ತು; ಕಾಕ – ಅಣ್ಣ, ಮಾವ; ಬಚ್ಚಾಲಿ – ಪೋಲಿ; ಮಾಟೆ–ಸುರಂಗ; ಖುದ್ರತ್ – ಲೀಲೆ; ವಹ್ಯ್ – ಸಂದೇಶ; ಬೆಳ್ಳಕ್ಕಾರ – ಬಿಳಿಯರು, ಬ್ರಿಟಿಷರು; ಅಡಯಾಳ – ಗುರುತು



Downloaded from https:// www.studiestoday.com

Downloaded from https:// www.studiestoday.com

## ವಿಶದೀಕರಣ

- ಮೌಲೂದ್ : ಪೈಗಂಬರರು – ಸೂಫಿ ಸಂತರುಗಳ ಜೀವನ ಚರಿತ್ರೆ, ವೃತ್ತಾಂತಗಳನ್ನು ಓದುವ ಒಂದು ಧಾರ್ಮಿಕ ಸಮಾರಂಭ.
- ಫಿರಾವುನ್ : ಹಜ್ರತ್ ಮೂಸಾನಬಿಯ (ಮೋಸೆಸ್) ಕಾಲದಲ್ಲಿ ಈಜಿಪ್ಟನ್ನು ಆಳಿದ ಫೆರೋಹ ಚಕ್ರವರ್ತಿಗಳಲ್ಲಿ ಒಬ್ಬ. ಹಜ್ರತ್ ಮೂಸರವರ ಪ್ರಮುಖ ವಿರೋಧಿಯಾಗಿದ್ದ ಇವನು ಕೆಂಪು ಸಮುದ್ರದಲ್ಲಿ ಮುಳುಗಿ ಸಾವನ್ನಪ್ಪಿದ್ದ.
- ಸಬೇಬರಾತ್ / ಬರಾತ್ : ರಂಸಾನ್ ತಿಂಗಳಿಗಿಂತ ಮೊದಲು ಬರುವ ಶಹಬಾನ್ ತಿಂಗಳ 15ನೇ ರಾತ್ರಿ. ಅಂದು ಒಬ್ಬನ ಆಯುಷ್ಯ, ಆಹಾರ, ಸಂಪತ್ತನ್ನು ದೇವರು ನಿರ್ಧರಿಸುವನು ಎಂಬುದು ಮುಸಲ್ಮಾನರ ನಂಬಿಕೆ. ಆದುದರಿಂದ ಆ ರಾತ್ರಿ ಪ್ರತ್ಯೇಕ ಪ್ರಾರ್ಥನೆ ನಡೆಯುವುದು. ಮರುದಿನ ಹಗಲು ವ್ರತವನ್ನು ಕೈಗೊಳ್ಳುವರು.
- ಫಾತಿಹ / ಫಾತಿಹಾಸೂರತ್ : ಪ್ರಾರಂಭ. ಖುರಾನಿನ ಆರಂಭದ ಅಧ್ಯಾಯ.
- ವಹ್ಯ್ : ಅಲ್ಲಾಹುವಿನಿಂದ ಪ್ರವಾದಿಗಳ ಮೂಲಕ ಜನರಿಗೆ ತಲುಪಿದ ದಿವ್ಯಸಂದೇಶ.
- ಸಲಾತ್ : ಸ್ವಸ್ತಿ ವಚನ. ಪ್ರವಾದಿಯವರ ಮೇಲೆ ಅಲ್ಲಾಹುವಿನ (ದೇವರ) ಕೃಪೆಯಿರಲಿ ಎಂಬ ಶುಭ ಹಾರೈಕೆಯ ವಚನ.
- ಲೈಲತುಲ್ ಖದರ್ : ಪವಿತ್ರ ಖುರಾನನ್ನು ಮೊದಲು ಪ್ರಸ್ತುತಪಡಿಸಿದ ದಿನ.

## ಸಂಕ್ಷಿಪ್ತವಾಗಿ ಬರೆಯಿರಿ

- ಭೂಮಿಯ ರಹಸ್ಯದ ಬಗ್ಗೆ ಖಾದ್ರಿಕಾಕ ಜಮೀಲಾಳಿಗೆ ಏನೆಂದು ವಿವರಿಸಿದರು?
- 'ಪ್ರಕೃತಿಯ ಶೋಷಣೆ ಜೀವಸಂಕುಲಕ್ಕೆ ಹಾನಿ' ಎಂಬುದನ್ನು 'ಒಸರು' ಕಥೆಯಲ್ಲಿ ಹೇಗೆ ಪ್ರತಿಪಾದಿಸಲಾಗಿದೆ? ವಿವರಿಸಿರಿ.

## ಚಟುವಟಿಕೆಗಳು

- ಕಥೆಯಲ್ಲಿ ಬರುವ ಖಾದ್ರಿ ಬ್ಯಾರಿಯ ಪಾತ್ರಚಿತ್ರಣ ಮಾಡಿರಿ.
- ನೀರಿಗಾಗಿ ಸುರಂಗ ತೋಡುವ ಖಾದ್ರಿಬ್ಯಾರಿಯ ಪ್ರಯತ್ನಕ್ಕೆ ಊರಿನವರ ಸಾಮಾನ್ಯ ಪ್ರತಿಕ್ರಿಯೆಯೊಡನೆ ಜಮೀಲಳ ಪ್ರತಿಕ್ರಿಯೆಯನ್ನು ಹೋಲಿಸಿ ಬರೆಯಿರಿ.
- ಊರಿನ ಒಳಿತಿಗಾಗಿ ತುಡಿವ ಕಾಳಜಿ ಖಾದ್ರಿಬ್ಯಾರಿಯಲ್ಲಿ ಮೇಳೈಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಹೇಳಿರಿ.
- 'ಗುಡ್ಡದ ತಳದಿಂದ ಜುಳು ಜುಳು ಹರಿಯುತ್ತಿರುವ ನೀರು ತನಗಿಷ್ಟ ಬಂದಂತೆ ಹಾದಿ ಮಾಡಿಕೊಂಡು ಹರಿಯುತ್ತಿದೆ... ಮಣ್ಣಿನೊಂದಿಗೆ ಬೆರೆತು ಕೆಂಪು ಕೆಂಪಾದ



Downloaded from https:// www.studiestoday.com

Downloaded from https:// www.studiestoday.com

ನೀರು... ಹರಿಯುತ್ತಾ ಹೋದಂತೆ ತಿಳಿಯಾಗುತ್ತಾ... ತಿಳಿಯಾಗುತ್ತಾ...' ಕಥೆಯ ಮುಂದಿನ ತಿರುವು ಹೇಗಾಗಿರಬಹುದು ಎಂಬುದನ್ನು ಊಹಿಸಿ ಬರೆಯಿರಿ.

- ಕೊಳವೆ ಬಾವಿಯ ಅತಿಯಾದ ನಿರ್ಮಾಣದಿಂದ ಭೂಮಿಯ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ. ಆ ಕುರಿತು ಜನಜಾಗೃತಿ ಮೂಡಿಸುವ ಸಲುವಾಗಿ ಕರಪತ್ರವೊಂದನ್ನು ತಯಾರಿಸಿರಿ.

## ಭಾಷಾಭ್ಯಾಸ

- ಪ್ರಪಂಚದ ಭೂಪಟದಲ್ಲಿ ಏಳು ಭೂಖಂಡಗಳೂ ಐದು ಸಾಗರಗಳೂ ಇವೆ.
- ತಾಜ್‌ಮಹಲ್ ಜಗತ್ತಿನ ಏಳು ಅದ್ಭುತಗಳಲ್ಲಿ ಒಂದು.
- ಲೋಕದಲ್ಲಿ ಜನಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚುತ್ತಾ ಇದೆ.

ಮೇಲಿನ ಮಾದರಿಯಂತೆ ಕೆಳಗೆ ಕೊಟ್ಟಿರುವ ಪದಗಳ ಪರ್ಯಾಯ ಪದಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸಿರಿ.

ಆಕಾಶ, ಭೂಮಿ

- ಪೊಯ್ಯೆಗಿಯ್ಯೆ, ಮಾಟೆಗೀಟೆ – ಇಂತಹ ಪ್ರತಿಧ್ವನಿ ಪದಗಳನ್ನು ಸಂಗ್ರಹಿಸಿ ಬರೆಯಿರಿ.

- ಒಂದು ಜೀವಂತ ಭಾಷೆಯ ಕೋಶದಲ್ಲಿರುವ ಪದಗಳನ್ನು ದೇಶ್ಯ/ದೇಶೀಯ ಮತ್ತು ಅನ್ಯದೇಶೀಯ ಎಂದು ವಿಭಾಗಿಸಲಾಗುತ್ತದೆ. ಒಂದು ಭಾಷೆಯ ತನ್ನದೇ ಆದ ಪದಗಳನ್ನು ದೇಶ್ಯ/ದೇಶೀಯ ಎನ್ನುತ್ತಾರೆ. ನೆಲ, ಮನೆ, ಮರ, ಮಣ್ಣು ಮೊದಲಾದವು ಕನ್ನಡದ ದೇಶೀಯ ಪದಗಳು. ಕೆಳಗಿನ ಪದಗಳನ್ನು ದೇಶ್ಯ ಮತ್ತು ಅನ್ಯದೇಶೀಯ ಎಂಬುದಾಗಿ ವರ್ಗೀಕರಿಸಿರಿ.

ಕೆಳಗಿನ ಪದಗಳನ್ನು ಗಮನಿಸಿರಿ. ಅವುಗಳನ್ನು ದೇಶೀಯ ಮತ್ತು ಅನ್ಯದೇಶೀಯ ಪದಗಳಾಗಿ ವರ್ಗೀಕರಿಸಿ ಬರೆಯಿರಿ.

ಕಲಮು, ನೀರು, ನೋಟೀಸು, ನೆಲ, ತಲೆ, ಪಿತೃ, ಕಾಗದ, ಬ್ಯಾಂಕು, ಪುತ್ರ, ಯಾತ್ರಾ, ಮೂಡಣ, ಶಿಖರ, ಕಾರ್ಡ್, ಸಾಬೂನು, ಮೊಸರು, ಆಕಾಶ.

| ದೇಶ್ಯ | ಅನ್ಯದೇಶೀಯ |
|---|---|
| ತಲೆ | ಸಾಬೂನು |



Downloaded from https:// www.studiestoday.com

Downloaded from https:// www.studiestoday.com

# ಬ್ಲೆನ್‌ಹೀಮ್ ಕದನ

ಬಿ.ಎಂ.ಶ್ರೀ

ಯುದ್ಧವೆಂಬುದು ಘೋರ. ಅದು ಮನುಕುಲದ ವಿನಾಶ. ಅನಾದಿಕಾಲದಿಂದಲೂ ಯುದ್ಧ ನಡೆಯುತ್ತಾ ಬಂದಿದೆ. ದೇಶ ದೇಶಗಳ ನಡುವಿನ ಯುದ್ಧ, ಆಂತರಿಕ ಕಲಹಗಳು ವರ್ತಮಾನದಲ್ಲೂ ಮುಂದುವರಿಯುತ್ತಿವೆ. ಯುದ್ಧದ ಘೋರ ಪರಿಣಾಮಗಳನ್ನು ಅರಿಯಬೇಕಾಗಿದೆ. ಅದರ ನಿರರ್ಥಕತೆಯನ್ನು ಮನವರಿಕೆಮಾಡಿಕೊಂಡು ಯುದ್ಧ ವಿಮುಖರಾಗಬೇಕು. ಮುಗ್ಧ ಪ್ರಶ್ನೆಯೊಂದರ ಮೂಲಕ ಯುದ್ಧದ ಅರ್ಥಹೀನತೆಯನ್ನು ಪ್ರತಿಪಾದಿಸಿದ ವಿಶಿಷ್ಟ ಕವನವಿದು.



ಬೇಸಗೆಯಲಿ ಸಂಜೆಯಾಯಿತು; ಕೆಲಸವ
ಮುತ್ತಜ್ಜ ತೀರಿಸಿಕೊಂಡ,
ಹಟ್ಟಿಯ ಬಾಗಿಲ ಬಳಿಯಲಿ ನೋಡುತ
ಹೊಂಬಿಸಲಲಿ ಕುಳಿತುಕೊಂಡ,
ಅಲ್ಲಿಯೆ ಹಸುರಮೇಲಾಡುತಲಿದ್ದಳು
ಅಜ್ಜನ ಮುದ್ದಿನ ಪುಟ್ಟ ಮೊಮ್ಮಗಳು.

ಕಂಡಳು ಕೂಗಿಕೊಂಡಣ್ಣನು ಬರುವುದ–
ಆಡುತ, ಹೊಳೆಯಂಚಿನಿಂದ
ದಪ್ಪಗೆ, ದುಂಡಗೆ, ಏನನೊ ಒಂದನು
ಉರುಳಿಸಿಕೊಂಡವ ತಂದ
ದಪ್ಪಗೆ ನುಣ್ಣಗೆ, ದುಂಡಗೆ ಇರುವುದು,
ಅಜ್ಜ ಇದೇನೆಂದು ಕೇಳಲು ಬಂದ.

ಅಜ್ಜ ತೆಗೆದುಕೊಂಡ ಕೈಗದ, ಹುಡುಗನು
ನಿಂತ ಹತ್ತಿರ ಕಿವಿಗೊಟ್ಟು
ನೋಡಿ, ಆ ಮುದುಕನು ತಲೆಯನಲ್ಲಾಡಿಸಿ
ಮರುಗುತ ನಿಟ್ಟುಸಿರಿಟ್ಟು
ಪಾಪ, ಇದಾರದೊ ತಲೆಯೋಡು – ಯಾವನೊ
ಬಿದ್ದವನಾ ದೊಡ್ಡ ಜಯದಲಿ ಎಂದ



Downloaded from https:// www.studiestoday.com

Downloaded from https:// www.studiestoday.com

ಎಷ್ಟೋ ನೋಡಿರುವೆನು ನಮ್ಮ ತೋಟದಲೆಲ್ಲ,
ಬಿಸುಡುವೆನೊಕ್ಕಡೆಗಿಕ್ಕಿ.
ಉಳುತ ಹೋದಾಗೆಲ್ಲ ಮೇಲಕೆ ಬರುವುವು
ನೇಗಿಲ ಕುಳದಲಿ ಸಿಕ್ಕಿ.
ಸಾವಿರಗಟ್ಟಳೆ ಜನಗಳು ಕೊಲೆಯಾಗಿ
ಬಿದ್ದವರಾ ದೊಡ್ಡ ಜಯದಲಿ ಎಂದ.

ಆ ಕಥೆ ಏನದು? ನಮಗೆಲ್ಲ ಹೇಳಜ್ಜ,
ಎಂದನು ಪುಟ್ಟ ಮೊಮ್ಮಗನು.
ಅಚ್ಚರಿ ಕಾಯುತ, ಅರಳಿದ ಕಣ್ಣೆತ್ತಿ
ನಿಂದಳು ಪುಟ್ಟ ಮೊಮ್ಮಗಳು.
ಯುದ್ಧದ ಕಥೆಯೇನು ನಮಗೆಲ್ಲ ಹೇಳಜ್ಜ
ಏತಕೆ ಕಾದಾಡಿದರೋ ಅದ ಹೇಳು.

ಮುತ್ತಜ್ಜ ಹೇಳಿದ –ಇಂಗ್ಲಿಷರಿರುವರೆ
ಮುರಿದರು ಫ್ರೆಂಚರ ಪಡೆಯ
ಏತಕೆ ಕಾದಾಡಿದರೊ ಅದ ನಾ ಬೇರೆ
ಕಾಣೆನು ಚೆನ್ನಾಗಿ ಅಡಿಯ.
ಆದರೆ ಯಾರನೆ ಕೇಳವರೆಲ್ಲರು
ಲೋಕಪ್ರಸಿದ್ಧಿಯ ಜಯವೆಂಬರೆಂದ.

ನಮ್ಮಯ್ಯ ಗುಡಿಸಲ ಮಾಡಿಕೊಂಡಿದ್ದನು
ಆ ಹೊಳೆಯಂಚಿನಲಾಗ.
ಸೂರೆ ಹೊಡೆದು ಬೀಡ ನೆಲಸಮ ಸುಟ್ಟರು;
ತಲೆಯ ತಪ್ಪಿಸಿಕೊಂಡು ಬೇಗ
ಹೆಂಡತಿ ಮಕ್ಕಳ ಕಟ್ಟಿಕೊಂಡೋಡಿದ
ನಿಂತಲ್ಲಿ ನಿಲ್ಲದೆ ನೆಲೆಗಾಣದಲೆದ.



Downloaded from https:// www.studiestoday.com

Downloaded from https:// www.studiestoday.com

ಬೆಂಕಿಯ, ಕತ್ತಿಯ ಬಾಯಿಗೆ ಬಲಿಯಾಗಿ
ದೇಶವೆ ಹಾಳಾಯಿತೆಲ್ಲ.
ತುಂಬು ಬಸಿರಿಯರು, ಹಾಲುಮಕ್ಕಳು ಸತ್ತ
ಲೆಕ್ಕವ ದೇವರೆ ಬಲ್ಲ
ಆದರಂತಹುದೆಷ್ಟೋ ಆಗಲೇಬೇಕಲ್ಲ
ಲೋಕಪ್ರಸಿದ್ಧಿಯ ಜಯದಲಿ ಎಂದ.

ನೋಡಲುಬಾರದು ಎಂಬರು ಘೋರವ
ಗೆದ್ದ ಮೇಲಾರಣದಲ್ಲಿ
ಸಾವಿರಗಟ್ಟಳೆ ಹೆಣಗಳು ಕೊಳೆಯುತ
ಬಿಸಿಲಲಿ ಬಿದ್ದಿದ್ದುವಲ್ಲಿ.
ಆದರಂತಹುದೆಷ್ಟೋ ಆಗಲೇಬೇಕಲ್ಲ
ಲೋಕಪ್ರಸಿದ್ಧಿಯ ಜಯದಲಿ ಎಂದ.

ದೇಶವೆ ಹೊಗಳಿತು ಗೆದ್ದ ನಾಯಕರನು,
ಸುರಿದವು ಹೂವು ಮಳೆಗಳು–
ಛೀ, ತೆಗೆ, ಏನದು, ಬಲು ಕೆಟ್ಟ ಕೆಲಸವು!
ಎಂದಳು ಪುಟ್ಟ ಮೊಮ್ಮಗಳು.
ಅಲ್ಲವೆ, ಅಲ್ಲವೆ, ಪುಟ್ಟ ಹುಡುಗಿ, ಕೇಳು,
ಲೋಕಪ್ರಸಿದ್ಧಿಯ ಜಯವದು ಎಂದ.

ಎಲ್ಲರು ಹೊಗಳಿದರಾ ದೊಡ್ಡ ಯುದ್ಧವ
ಗೆದ್ದವರನು ಶೂರರನ್ನು–
ಒಳ್ಳೆಯದದರಿಂದ ಕಡೆಗಾದುದೇನಜ್ಜ?
ಎಂದನು ಪುಟ್ಟ ಮೊಮ್ಮಗನು.
ಅದ ನಾನು ಬಲ್ಲೆನೆ? ಯಾರನೆ ಕೇಳದು
ಲೋಕಪ್ರಸಿದ್ಧಿಯ ಜಯವೆಂಬರೆಂದ



Downloaded from https:// www.studiestoday.com

Downloaded from https:// www.studiestoday.com

## ಬಿ.ಎಂ.ಶ್ರೀ.



ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ (ಬಿ.ಎಂ.ಶ್ರೀ.) ಕನ್ನಡ ನವೋದಯ ಹರಿಕಾರರಲ್ಲಿ ಮೊದಲಿಗರು. ಶ್ರೀಯವರು ಮೈಸೂರು ವಿಶ್ವವಿದ್ಯಾನಿಯಲದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. 1928ರಲ್ಲಿ ಕಲುಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿದ್ದು, ಅಲ್ಲಿ ಕನ್ನಡ ಎಂ.ಎ. ತರಗತಿಗಳನ್ನು ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಕರ್ನಾಟಕದ ಏಕೀಕರಣಕ್ಕೆ ಅವಿಶ್ರಾಂತವಾಗಿ ದುಡಿದ ಮಹನೀಯರು.

ಇವರ 'ಇಂಗ್ಲಿಷ್ ಗೀತಗಳು' ಕನ್ನಡದಲ್ಲಿ ನವೋದಯದ ಹೆಬ್ಬಾಗಿಲನ್ನು ತೆರೆಸಿತು. ಅಶ್ವತ್ಥಾಮನ್, ಗದಾಯುದ್ಧ ನಾಟಕಂ, ಪಾರಸಿಕರು, ಹೊಂಗನಸುಗಳು ಮೊದಲಾದವುಗಳು ಇವರ ಇತರ ಕೃತಿಗಳು.

ಪ್ರಸ್ತುತ ಕವಿತೆಯನ್ನು ಇವರ 'ಇಂಗ್ಲಿಷ್ ಗೀತಗಳು' ಸಂಕಲನದಿಂದ ತೆಗೆದುಕೊಳ್ಳಲಾಗಿದೆ. ಇದು ಇಂಗ್ಲಿಷಿನ ಕವಿ ಸದೆ (Southey 1774-1843) ರಚಿಸಿದ 'After Blenheim' ಕವನದ ಅನುವಾದವಾಗಿದೆ. ಯುದ್ಧಗಳ ನಿಷ್ಫಲತೆಯನ್ನು ಸಾರುವ ಆಶಯ ಈ ಕಥನ ಕವನದಲ್ಲಿದೆ. ಪ್ರಬುದ್ಧರಿಗಿಂತ ಹೆಚ್ಚಾಗಿ ಮುಗ್ಧರಾದ ಎಳೆಯರ ಮೂಲಕ ಇಂತಹ ಚಿಂತನೆಯನ್ನು ಹರಿಯಬಿಟ್ಟಿರುವುದು ಇಲ್ಲಿ ಗಮನಾರ್ಹವಾಗಿದೆ.

### ಶಬ್ದಾರ್ಥ ವಿವರಣೆ

ಹೊಂಬಿಸಿಲು – ಹೊಂಬಣ್ಣದ ಬಿಸಿಲು; ನಿಟ್ಟುಸಿರು – ದೀರ್ಘವಾದ ಉಸಿರು;
ತಲೆಯೋಡು – ತಲೆಬುರುಡೆ; ಸೂರೆ ಹೊಡೆಯು – ಕೊಳ್ಳೆ ಹೊಡೆಯು

### ಸಂಕ್ಷಿಪ್ತವಾಗಿ ಉತ್ತರಿಸಿರಿ

- ತಲೆಯೋಡನ್ನು ನೋಡಿದಾಗ ಅಜ್ಜನ ಪ್ರತಿಕ್ರಿಯೆ ಏನಾಗಿತ್ತು?
- ಲೋಕ ಪ್ರಸಿದ್ಧಿಯ ಜಯದ ಅನಾಹುತಗಳನ್ನು ಅಜ್ಜ ಹೇಗೆ ನಿರೂಪಿಸಿದ್ದಾನೆ?
- ಯುದ್ಧದ ಭೀಕರತೆ ಕವನದಲ್ಲಿ ಹೇಗೆ ನಿರೂಪಿತವಾಗಿದೆ? ವಿವರಿಸಿರಿ.



Downloaded from https:// www.studiestoday.com

Downloaded from https:// www.studiestoday.com

## ಚಟುವಟಿಕೆಗಳು

- 'ಬ್ಲೆನ್‌ಹಿಮ್ ಕದನ' ಕವನದಲ್ಲಿ ಬರುವ ಅಜ್ಜನ ನಿರೂಪಣೆಗೆ ಮೊಮ್ಮಗಳ ಪ್ರತಿಕ್ರಿಯೆಯ ಮುಖಾಮುಖಿಯ ಸ್ವಾರಸ್ಯವನ್ನು ನಿರೂಪಿಸಿರಿ.
- 'ನೆರೆರಾಷ್ಟ್ರಗಳೊಂದಿಗೆ ಶಾಂತಿಯುತ ಸಹಬಾಳ್ವೆ ಯಾಕೆ ಮತ್ತು ಹೇಗೆ?' ಎಂಬ ವಿಷಯದ ಮೇಲೆ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಅಗತ್ಯವಾದ ಪ್ರಬಂಧವೊಂದನ್ನು ಬರೆಯಿರಿ.
- ಕಯ್ಯಾರ ಕಿಞ್ಞಣ್ಣ ರೈಯವರ 'ಆಟಮಾಟ' ಕವನದ ಕೆಲವು ಸಾಲುಗಳನ್ನು ಕೆಳಗೆ ಕೊಡಲಾಗಿದೆ. ಇದನ್ನು 'ಬ್ಲೆನ್‌ಹಿಮ್ ಕದನ' ದಲ್ಲಿ ಬರುವ ಸಮಾನ ಆಶಯವುಳ್ಳ ಸಾಲುಗಳೊಂದಿಗೆ ಹೋಲಿಸಿ ಬರೆಯಿರಿ.

ಪ್ರಳಯ ಲೀಲೆ ಜ್ವಲನ ಜ್ವಾಲೆ
ಜ್ವಲಿಸಿ ಜಗವನಪ್ಪಿತು:
ವಾಯು ವಿಷಂ ನೀರು ವಿಷಂ
ಜೀವ ಸುಟ್ಟು ಸತ್ತಿತು!

ಹಿರೋಶಿಮಾ ನಾಗಸಾಕಿ
ಶಾಂತಿ ಪೂಜೆ ಮುಗಿಯಿತು
ಆಟಮಾಟ ಕಾಲ ಕೂಟ
ವಿಷಸಂಸ್ಕೃತಿ ಧಗಿಸಿತು

ನಿನ್ನೆ ಜಪಾನ್ ಮತ್ತೆ ತುಫಾನ್
ಕೊರಿಯದಲ್ಲಿ ಕಂಡಿತು
ನಾಳೆ ಚೀನ ಮತ್ತೆ ಏನ?
ಏಶ್ಯ ದೇಶ ಹಬ್ಬಿತು..

ಧನದ ಶಕ್ತಿ ಜಗದ ಶಕ್ತಿ
ಹಚ್ಚೆ ಹುಚ್ಚು ಹಿಡಿಯಿತು;
ಜನರ ಸುಡುವ ಜಗವ ಸುಡುವ
ಬುದ್ಧಿ ಪ್ರಳಯ ತಂದಿತು.



Downloaded from https:// www.studiestoday.com

Downloaded from https:// www.studiestoday.com

## ಭಾಷಾಭ್ಯಾಸ

- ಕೆಳಗೆ ಕೊಟ್ಟಿರುವ ಗದ್ಯದ ತುಣುಕನ್ನು ಕನ್ನಡಕ್ಕೆ ಭಾಷಾಂತರಿಸಿರಿ.

  The Vijayanagara and the Bahmani kingdoms dominated the political scene of South India during the period between the forteenth and sixteenth centuries. The particular contribution of this age are the beautiful cities, palatial buildings, growth of trade, works of craftsmanship and the growth of literature and arts.

  (Palatail - ರಾಜ ಮಹಲು, ಅರಮನೆಯಂಥ ಸೌಧ)

- ದಪ್ಪಗೆ, ದುಂಡಗೆ, ನುಣ್ಣಗೆ, ತಟ್ಟನೆ, ಅಂತು, ಇಂತು, ಬಳಿಕ ...... ಇವೇ ಮೊದಲಾದವುಗಳು ಅವ್ಯಯಗಳು. ಇವುಗಳಲ್ಲಿ ಕೆಲವು ಕ್ರಿಯೆಗೆ ವಿಶೇಷಣಗಳಾಗಿವೆ. ಪಾಠಭಾಗಗಳಿಂದ ಇಂತಹ ಪದಗಳನ್ನು ಗುರುತಿಸಿ ಅವುಗಳನ್ನು ಬಳಸಿಕೊಂಡು ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ.




Downloaded from https:// www.studiestoday.com

Downloaded from https:// www.studiestoday.com

# ಹುಗ್ಗಿ

ಕುಂ. ವೀರಭದ್ರಪ್ಪ

ಸಮಾಜದಲ್ಲಿ ಹಸಿವು, ಬಡತನ, ಶೋಷಣೆ ಮುಂತಾದ ಬದುಕಿನ ಮೂಲಭೂತವಾದ ಸಮಸ್ಯೆಗಳನ್ನು ನಾವು ದಿನನಿತ್ಯ ಕಾಣುತ್ತೇವೆ. ಇಂತಹ ಸಮಸ್ಯೆಗಳ ಒಂದೊಂದು ಎಳೆಯನ್ನು ಬಳಸಿಕೊಂಡು ಕೆಲವು ಸಾಹಿತ್ಯ ರಚನೆಗಳು ಮೂಡಿಬರುತ್ತವೆ. ವೀರಭದ್ರಪ್ಪನವರು ತಮ್ಮ 'ಹುಗ್ಗಿ' ಕತೆಯಲ್ಲಿ ದಲಿತರು ಮೌನವಾಗಿ ಅನುಭವಿಸುವ ನೋವನ್ನೂ ಹಸಿವಿನ ತೀವ್ರತೆಯನ್ನೂ ಮನ ಮಿಡಿಯುವಂತೆ ಚಿತ್ರಿಸಿದ್ದಾರೆ.



ಅಪ್ಪ ಬಂದ ಎಂದು ಕೇಳಿ ಬಸವ ಒಂದೇ ಉಸಿರಿಗೆ ಚಣ್ಣ ಏರಿಸಿಕೊಂಡು ಹೊಸ್ತಿಲು ದಾಟಿದ್ದ. ನಿನ್ನೆಯಿಂದ ಹೊಟ್ಟೆ ಚುರುಗುಡುತ್ತಿದ್ದುದರಿಂದ ಈ ದಿನ ಅಪ್ಪನೇನಾದರೂ ತಂದಿರಬಹುದೆಂದು ಅವನ ಲೆಕ್ಕ. ಅಪ್ಪ ಕಟ್ಟೆಯ ಒಂದು ಪಕ್ಕ ಕುಕ್ಕುರಗಾಲಿಲೆ ಕುಂತುಕೊಂಡು ಬೆಳಿಗ್ಗೆ ಅರ್ಧ ಸೇದಿ ಬಿಟ್ಟಿದ್ದ ಬೀಡಿಯನ್ನು ಒಣಗಿರುವ ತುಟಿ ನಡುವೆ ಸಿಕ್ಕಿಸಿಕೊಂಡು ಕಡ್ಡಿಗೀರಿದ. "ಅಪ್ಪನ ಮುಖ ಯಾಕ ಸಪ್ಪಗೈತಿ" ಎಂಬುದರ ಬಗ್ಗೆ ಬಸವ ಯೋಚಿಸಿದನಾದರೂ ಅರ್ಥವಾಗಲಿಲ್ಲ. "ನಾನ್ ಕಂಡ್ಕೂಡ್ಲೆ ಬೆನ್ನು ಸವ್ರಿ ಐದು ಪೈಸೆ ಹತ್ತು ಪೈಸಿ ಕೊಡ್ತಿದ್ದ ಅಪ್ಪ ಈ ಹೊತ್ತು ಯಾಕೆ ಹಿಂಗಿದ್ದಾನೆ?" ಎಂದು ಬಸವನ ಪಾಲಿಗೆ ದೊಡ್ಡ ಸಮಸ್ಯೆಯಾಗೆ ಉಳಿಯಿತು. ಒಂದೊಂದೇ ಹೆಜ್ಜೆ ಇಡುತ್ತ ಅಡುಗೆ ಮನೆ ಬಾಗಿಲು ದಾಟಿದ ಕೂಡಲೆ ಅಲ್ಲಿ ನಡೆಯುತ್ತಿರುವುದನ್ನು ನೋಡಿ ಉಬ್ಬಿ ಹೋದ. ಎರಡು ಮೊರಗಳಲ್ಲಿ ಬೆಲ್ಲ, ಕಡ್ಲಿಬೇಳೆ ಇದ್ದವು. ಕಡ್ಲಿಬೇಳೆ ಮೊರ



Downloaded from https:// www.studiestoday.com

Downloaded from https:// www.studiestoday.com

ಹಿಡಿದುಕೊಂಡು ಹಸನು ಮಾಡತೊಡಗಿದ ಅಮ್ಮನ ಬೆನ್ನ ಮೇಲೆ ಬಿದ್ದು, "ಅಮ್ಮಾ ಈ ಹೊತ್ತು ಉಣ್ಣಾಕ ಏನ್ಮಾಡ್ರಿ?" ಎನ್ನುತ್ತ ಸಪ್ಪಳವಿಲ್ಲದಂತೆ ಒಂದು ಬೆಲ್ಲದ ಚೂರನ್ನು ಎತ್ತಿಕೊಂಡು ಬಾಯಲ್ಲಿ ಹಾಕಿಕೊಂಡ. ನಿನ್ನೆಯಿಂದ ನೀರು ಕೂಡಾ ಕಂಡಿರದಿದ್ದ ಹೊಟ್ಟೆ ಆ ಬೆಲ್ಲದ ಚೂರಿನಿಂದ ತುಂಬಿ ಹೋದಂತೆನಿಸಿತು. ಆ ಬೆಲ್ಲದ ಮೊರದ ಸುತ್ತ ಚಂದ್ರ, ಕೊಟ್ರ, ತಿಮ್ಮಿ ಮೂವರೂ ಅಮ್ಮಗೆ ಹೆದರಿ ಬರೀ ಜೊಲ್ಲು ಸುರಿಸುತ್ತ ಕುಂತಿದ್ದರು. ತಿಮ್ಮಿಯನ್ನು ಎದೆಗವುಚಿಕೊಂಡು ಅಳತೊಡಗಿದ್ದು ಕಂಡು ಬಸವನಿಗೆ ಆಶ್ಚರ್ಯವಾಯಿತು. "ಹಿಂಗ್ಯಾಕ ಅಳತಾಳ ಅಮ್ಮ" ಎಂದು ಮಣ್ಣು ತುಂಬಿದ ತಲೆಯನ್ನು ಕೆರೆದುಕೊಂಡನಾದರೂ ಉತ್ತರ ಸಿಗಲಿಲ್ಲ. ಇನ್ನೊಂದು ಚೂರು ಬೆಲ್ಲಕ್ಕೆ ಕೈ ಹಚ್ಚಿ "ಅಮ್ಮಾ ಈ ಹೊತ್ತು ಉಣ್ಣಾಕ ಏನ್ ಮಾಡ್ರಿ?" ಎಂದು ಸ್ವಲ್ಪ ಗಟ್ಟಿಯಾಗಿಯೇ ಕೇಳಿದ. ಕಣ್ಣುಗಳ ತಗ್ಗಿನಿಂದ ಜಿನುಗತ್ತಿದ್ದ ನೀರನ್ನು ಹರಿದಿದ್ದ ಸೆರಗಿನ ತುಂಗಿನಿಂದ ಒರೆಸಿಕೊಳ್ಳುತ್ತ "ಹುಗ್ಗಿ" ಎಂದಷ್ಟೇ ಅಂದು ಮೊರಕ್ಕೆ ತಲೆ ತಗ್ಗಿಸಿದಳು. ಇದನ್ನು ಕೇಳಿ ಬಸವ ಮನಸ್ಸಿನಲ್ಲಿಯೇ "ಹುಗ್ಗೀ, ಹುಗ್ಗೀ" ಎಂದು ಮೂರು ನಾಲ್ಕು ಬಾರಿ ಅಂದುಕೊಂಡು ಖುಷಿಪಟ್ಟ. ಹುಗ್ಗಿ ಹೊಡೆಯುವುದನ್ನು ಭೀಮ, ಸೊಚ್ಚ ಎಲ್ಲರಿಗೂ ಹೇಳಿ ಬರಬೇಕೆಂದುಕೊಂಡ. ಚಣ್ಣ ಏರಿಸುತ್ತ ಪಡಸಾಲೆಗೆ ಬಂದಾಗ ಅಪ್ಪ ಕರೆದು ಪಕ್ಕಕ್ಕೆ ಕುಳಿರಿಸಿಕೊಂಡು ನಿಟ್ಟುಸಿರಿಟ್ಟ. "ನಮಗೆಲ್ಲಾ ಕೂಳು ಜೋಡಿಸಲಾರದೆ ಅಪ್ಪ ಅಳಾಕ ಹತ್ಯಾನ" ಎಂದುಕೊಳ್ಳುತ್ತ ಬಸವ ಅಪ್ಪನ ಮುಖವನ್ನೇ ನೋಡಿದ, ಅರ್ಥವಾಗಲಿಲ್ಲ. ಕಲ್ಲಿ ಜೇಬಿನಲ್ಲಿ ಕೈ ಇಳಿಸಿ ಹತ್ತು ಪೈಸೆ ತೆಗೆದು ಬಸವನ ಕೈಗಿಟ್ಟ. ಅಂಗೈ ತುಂಬಿದ ಬೆಳ್ಳಿಯಂಥ ಹತ್ತು ಪೈಸೆಯನ್ನು ನೋಡಿದ ಬಸವನ ಮುಖ ಹಿಗ್ಗಿತು. ಅದನ್ನು ಹಿಡಿದುಕೊಂಡು ಒಂದೇ ಉಸುರಿಗೆ ಅಂಗಳಕ್ಕಿಳಿದು ಸೊಚ್ಚನ ಹಟ್ಟಿ ಕಡೆ ಹೊರಟ. ಬೇವಿನ ಮರದ ಕೆಳಗೆ ಬುಗುರಿಗೆ ಹಗ್ಗ ಸುತ್ತುತ್ತಿದ್ದ ಸೊಚ್ಚನ ಮುಂದೆ ನಿಂತಾಗ ಬಸವನಿಗೆ "ಕೂಳೀಗೆ ಗತಿ ಇಲ್ದೋನೆ" ಎಂದು ನಿನ್ನೆ ಇದೇ ಸೊಚ್ಚ ಹೇಳಿದ್ದ ಮಾತುಗಳು ನೆನಪಿಗೆ ಬಂದವು. "ಸೊಚ್ಚ ಈ ಹೊತ್ತು ನಮ್ಮನ್ಯಾಗ ಹುಗ್ಗೀ ಮಾಡ್ತೇವಲೇ"ಎಂದು ಹತ್ತು ಪೈಸೆಯನ್ನು ಅವನಿಗೆ ಕಾಣುವಂತೆ ಹಿಡಿದುಕೊಂಡು ಹೇಳಿದ. ಸೊಚ್ಚ ನೆಲಕ್ಕೆ ಬುಗುರಿ ಬೀಸಿ ಅಲಕ್ಷ್ಯ ಪ್ರಕಟಿಸಿದ್ದು ಬಸವನಿಗೆ ಸರಿ ಕಾಣಲಿಲ್ಲ. ಗುಯ್ ಅಂತ ತಿರುಗುತ್ತಿದ್ದ ಬುಗುರಿಯನ್ನೊಮ್ಮೆ ನೋಡಿ ಎಂಕಪ್ಪ ಶೆಟ್ಟಿ ಅಂಗಡಿ ಕಡೆ ಓಡಿದ. ಗಲ್ಲಾ ಪೆಟ್ಟಿಗೆಗಾತು ಎದೆ ಸೆಟಿಸಿ ಜನಿವಾರದ ಸಹಾಯದಿಂದ ಬೆನ್ನನ್ನು ತಿಕ್ಕಿಕೊಳ್ಳುತ್ತಿದ್ದ ಸೆಟ್ಟಿಯ ಮುಂದೆ ಠೀವಿಯಿಂದ ಹತ್ತು ಪೈಸೆ ಚಾಚಿ " ಹುರ್ಕಡ್ಲಿ ಹಾಕ್ರಿ ಹತ್ತು ಪೈಸ್ದಾವು"



Downloaded from https:// www.studiestoday.com

Downloaded from https:// www.studiestoday.com

ಎಂದ. ಶೆಟ್ಟಿ "ರಾಮ್ರಾಮಾs" – ಎನ್ನುತ್ತ ಮುಂದಕ್ಕೆ ಬಾಗಿ ಚಟಾಕಿನಲ್ಲಿ ಕಡ್ಲೆ ತುಂಬಿದ. ಜೇಬಿನಲ್ಲಿ ಕಡ್ಲೆ ಹಾಕಿಸಿಕೊಂಡು ಒಂದಿಷ್ಟು ಬಾಯಲ್ಲಿ ಎಸೆದು ಜಮಡಿ ರುಚಿನೋಡಿದ. "ಇವಿಷ್ಟು ಕಡ್ಲಿ ತಿಂದ್ರೆ ಹುಗ್ಗಿ ಕಡ್ಮಿ ಓಗ್ತದಲ್ಲಾ" ಎಂದು ಯೋಚಿಸಿ ಕಡ್ಲೆ ತಿನ್ನುವುದನ್ನು ಕಡಿಮೆ ಮಾಡಿದ. ಕಡ್ಳೆ ಎಗರದಂತೆ ಎಡಗೈಯಿಂದ ಜೇಬನ್ನು ಭದ್ರವಾಗಿ ಹಿಡಿದುಕೊಂಡು ಉಸಿರುಗಟ್ಟುವಂತೆ ಮನೆ ಕಡೆ ಓಡಿದ.

ಬಸವ ಬುಸುಗರಿಯತ್ತ ಹೊಸ್ತಿಲು ದಾಟಿದಾಗ ಅವರಪ್ಪ ಬಗ್ಗಿ ಇಣಕಿದ. ಮನೆತುಂಬ ಹೊಗೆ ದಟ್ಟವಾಗಿ ಕವಿದಿತ್ತು. ಹೊಗೆಯಿಂದಾಗಿ ಅಪ್ಪನ ಕಣ್ಣುಗಳಲ್ಲಿ ನೀರು ಸುರಿಯುತ್ತಿವೆ ಎಂದುಕೊಂಡ. ಚಂದ್ರು, ಕೊಟ್ರ, ತಿಮ್ಮಿ ಮುವ್ವರು ಕಣ್ಣು ಮೂಗುಗಳಿಂದ ಹರಿಯುತ್ತಿದ್ದ ನೀರನ್ನು ಲೆಕ್ಕಿಸದೆ ಬೆಲ್ಲಕ್ಕಾಗಿ ಅಳುತ್ತ ಕುಂತಿದ್ದರು. ಹೊಗೆ ಕಾರುತ್ತಿದ್ದ ಒಲೆಯಲ್ಲಿ ಮುಖ ತುರುಕಿ ಉಫ್ ಉಫೆಂದು ಊದಿ ಅಮ್ಮ ಕ್ಕೊ ಕ್ಕೊ ಕೆಮ್ಮಿದಳು. ಅವಳ ಬೆನ್ನ ಹಿಂದೆ ಹರಿದ ಕುಬಸದಿಂದ ಕಾಣಿಸುತ್ತಿದ್ದ ಎಲುಬುಗಳನ್ನು ನೋಡಿ ಮೇಲೆ ಬೀಳಲು ಮನಸ್ಸಾಗದೆ ಅಲ್ಲೆ ನಿಂತ. ಹೊಗೆಯ ನಡುವೆ ಬೆಂಕಿ ನಾಲಿಗೆ ಕಾಣಿಸಿದ್ದರಿಂದ ಅಮ್ಮ ಮುಖ ಮೇಲೆತ್ತಿ ಸೆರಗಿನಿಂದ ಮೂಗು ಒರೆಸಿಕೊಂಡು ಬಸವನ ಕಡೆ ಒಮ್ಮೆ ನೋಡಿ ಸುಯ್ಯಂತ ನಿಟ್ಟುಸಿರು ಬಿಟ್ಟಳು. ಬಸವ ತಂಗಿ ತಮ್ಮರಿಗೆಲ್ಲ ಕಡ್ಲೆ ಹಂಚಿ ಅಪ್ಪನಿಗಂಚಿ ಕುಳಿತಾಗ ಅವನ ತಲೆಯಲ್ಲಿ ಹುಗ್ಗಿಯ ಚಿಂತೆ ಎದ್ದೆದ್ದು ಕುಣಿಯುತ್ತಿತ್ತು. ಅಪ್ಪನ ಮುಖವನ್ನೊಮ್ಮೆ ಅಮ್ಮನ ಮುಖವನ್ನೊಮ್ಮೆ ಪ್ರಶ್ನಾರ್ಥಕವಾಗಿ ನೋಡಿದ. ಮಾತು ಕಳೆದುಕೊಂಡವರಂತೆ ಕುಳಿತಿದ್ದ ಅವರ ನಡುಲ ತಮ್ಮ ತಂಗಿಯರಷ್ಟೆ "ಹುಗ್ಗಿ...... ಒಟ್ಟಿ ಅಸದೈತಿ" ಎಂದು ಅಳುತ್ತಿರುವುದು ನೋಡಿ ಬಸವ "ಅಪ್ಪ ಹುಗ್ಗಿ ಯಾವಾಗ ಆಗೋದು?" ಎಂದು ಕೇಳಿದ. "ಈಗಾಗ್ತದ ತಡ್ಕಳ್ರಿ" ಬಸವನ ಬೆನ್ನು ಸವರುತ್ತ ಅಂದ ಅವನಪ್ಪ.

ಠಿಸ್ ಎಂದು ಶಬ್ದ ಮಾಡುತ್ತಿದ್ದ ಒಲೆ ಮೇಲಿದ್ದ ಪಾತ್ರೆಗೆ ಅಮ್ಮ ಬೆಲ್ಲ ಜಜ್ಜಿ ಹಾಕಿದಳು. ಜೇಬಿನಲ್ಲಿ ಕಡ್ಲೆ ಮುಗಿದು ಹೋದದ್ದರಿಂದ ಅವನು ಲಖಸವೆಲ್ಲ ಹುಗ್ಗಿ ಕಡೆಗೇ ಇತ್ತು. ಆಗಾಗ್ಗೆ ಬಾಯಿತುಂಬ ತುಂಬಿ ಬಿಡುತ್ತಿದ್ದ ಜೊಲ್ಲಿನ ರಸವನ್ನು ನುಂಗಿದ. "ಬಸವ" ಎಂದು ಅಪ್ಪ ಕರೆದದ್ದರಿಂದ ಬಸವ ಅಪ್ಪನ ತೊಡೆಗೆ ಕೈಯೂರಿ ಕಿವಿಚಾಚಿ ಕುಳಿತ. ಬೆನ್ನುಸವರುತ್ತ "ಬಸ್ವ ಈ ಹೊತ್ತು ನಾವೆಲ್ಲ ಊರಿಗ್ಹೊಕ್ತೀವಿ...... ನೀನೊಬ್ನೆ ಗೌಡ್ರ ಮನ್ಯಾಗಿರು..... ಅವ್ರಿಗೆ ಹೇಳ್ತೀನಿ" ಎಂದು ಹೇಳಿದ್ದು ಕೇಳಿ ಆಶ್ಚರ್ಯವಾಯಿತು.



Downloaded from https:// www.studiestoday.com

Downloaded from https:// www.studiestoday.com

"ಇಲ್ಲ ನಾನ್ ಗೌಡ್ರ ಮನಿಯಾಗಿರೋದಿಲ್ಲss....... ನಾನೂ ಬರ್ತೀನಿ ಊರ್ಗೆ" ಅತ್ತಂತೆ ನಟಿಸುತ್ತ ಅಪ್ಪನ ಭುಜ ಹಿಡಿದು ಅಲ್ಲಾಡಿಸತೊಡಗಿದ. ಅಪ್ಪ ಅಮ್ಮ ಕಣ್ಣಿನ ಮೂಲಕ ಏನೋ ಮಾತನಾಡುತ್ತಿದ್ದಾರೆ ಎಂಬುದು ಗೊತ್ತಾಗಿ ಬಸವ ಸ್ವಲ್ಪ ಹುಷಾರಾದ. ಮೊನ್ನೆ ನಿಜ್ಲಿಂಗನ ಬಳಿ ಬದುಕುವುದಕ್ಕೆ ಹೊಸಪೇಟೆ ಕಡೆ ಹೋಗಬೇಕೆಂದು ಅಪ್ಪ ಮಾತಾಡುತ್ತಿದ್ದುದನ್ನು ಜ್ಞಾಪಿಸಿಕೊಂಡ. "ಇಲ್ಲಿ ಉಪ್ವಾಸ ಸಾಯೋದ್ಕಿಂತ ಎಲ್ಲಿಗಾದ್ರು ಹಾಳಾಗಿ ಹೋಗೋಣ" ಎಂದು ಅಪ್ಪ ನಿನ್ನೆ ಗಂಜಿ ಕಾಯಿಸುತ್ತಿದ್ದ ಅಮ್ಮನ ಮುಂದೆ ಮಾತಾಡಿದ್ದ. ಅಷ್ಟು ಜಲ್ದಿ ನನ್ಬುಟ್ಟು ಊರಿಗೆ ಓಗ್ತಾರ? ಎಂದು ಯೋಚಿಸುತ್ತ ಒಲೆ ಕಡೆಯಿಂದ ಕೇಳಿಬರುತ್ತಿದ್ದ ಹುಗ್ಗಿಯ ರಿಸ್'s....... ಶಬ್ದಗಳನ್ನು ಕೇಳುತ್ತ ಮೈಮರೆತ. ಅಮ್ಮ ಮುಂದಿದ್ದ ಕೋಲನ್ನೆತ್ತಿಕೊಂಡು ಬಗ್ಗಿ ತಿರುವತೊಡಗಿದಾಗ ಚಂದ್ರು, ಕೊಟ್ರ, ತಿಮ್ಮಿಯರೆಲ್ಲ ತಟ್ಟೆಗಳಿಗಾಗಿ ಹೊಡೆದಾಡತೊಡಗಿದರು. ಬಸವ ಕೂಡ ತಟ್ಟೆ ಹೋರಾಟ ನಡೆಸಿ ನೆಗ್ಗಿ ನುಗ್ಗಿಕಾಯಿಯಾಗಿದ್ದ ಒಂದುಸಿಲವಾರ ತಟ್ಟೆಯನ್ನು ಗಿಟ್ಟಿಸಿಕೊಂಡ. ಎಲ್ಲರೂ ಕಣ್ಣುಮುಚ್ಚದಂತೆ ತೆರೆದುಕೊಂಡು ಹುಗ್ಗಿ ಪಾತ್ರೆಯನ್ನೇ ನೋಡುತ್ತ ಕುಳಿತರು. ಅಪ್ಪ ಮಾತ್ರ ಮೊಣಕಾಲ ಮೇಲೆ ಮುಖ ಇಟ್ಟುಕೊಂಡು ಏನೋ ನೋಡುತ್ತ ಕುಳಿತಿದ್ದ. ಆತನ ಮೂಗಿನಿಂದ ಬರುತ್ತಿದ್ದ ನಿಟ್ಟುಸಿರುಗಳನ್ನಷ್ಟೆ ಕೇಳುತ್ತಿದ್ದರೂ ಬಸವನ ದೃಷ್ಟಿ ಹುಗ್ಗಿ ಕಡೆಗೇ ಇತ್ತು. ಅಮ್ಮ ಮಸಿ ಅರಿಬೆ ಹಿರಿದುಕೊಂಡು ಹುಗ್ಗಿ ಪಾತ್ರೆಯನ್ನು ಒಲೆಯ ಮೇಲಿಂದ ಕೆಳಗಿಳಿಸಿದಳು. ಅದರ ಬಾಯಿಯಿಂದ ಹೊರ ಹಾರತೊಡಗಿದ ವಾಸನೆ ಎಲ್ಲರ ಮೂಗುಗಳನ್ನು ಕೆರಳಿಸತೊಡಗಿತು. ಹುಡುಗರೆಲ್ಲರು "ನಂಗೆ ನಂಗೆ" ಎಂದು ತಟ್ಟೆಗಳನ್ನು ಚಾಚಿ ಮುಂದೆ ಬಂದಾಗ ಅಮ್ಮ ಅಪ್ಪನ ಮುಖವನ್ನೇ ನೋಡುತ್ತಿದ್ದಳು. "ಅಮ್ಮ ಹುಗ್ಗೀss......" ಬಸವ ಮುಗಿಬಿದ್ದು ತಟ್ಟೆಯನ್ನು ಅಮ್ಮನ ಮುಖಕ್ಕೆ ಹಿಡಿದ. "ಸಣ್ಣ ಹುಡ್ಗ ಮಾಡಿದಂಗ ಮಾಡ್ತೀಯಲ್ಲಾ ನೀನು ಆಮ್ಯಾಕ ಉಣ್ಣುವಂತೆ, ಮೊದ್ಲು ಈ ಗುಂಡಾಲು ಒಯ್ದು ಗೌಡ್ರೀಗೆ ಕೊಟ್ಬಾ ಓಗು"ಎಂದು ಅಮ್ಮ ಹೇಳಿದ್ದು ಕೇಳಿ ಬಸವನಿಗೆ ಸಿಟ್ಟು ಕಣ್ಣೀರು ಎಲ್ಲೂ ಜೊತೆಯಾಗೆ ಬಂದವು. "ನಂಗೆ ಒಟ್ಟೆ ಅಸ್ತದೆ ಮೊದ್ಲು ಹುಗ್ಗೀ ನೀಡು ಉಂಡಮ್ಯಾಲೆ ಕೊಟ್‌ಬರ್ತೀನಿ" ಎಂದುಹಟ ಹಿಡಿದ ಮೇಲೆ ಅಪ್ಪ "ಓಗ್ಲಿ ಸ್ವಲ್ಪ ನೀಡಿ ಕಳ್ಸು" ಎಂದದ್ದು ಕೇಳಿ ಸಂತೋಷವಾಯಿತು ಬಸವನಿಗೆ, ಉಸಿರು ಬಿಗಿಹಿಡಿದು ತಟ್ಟೆ ಚಾಚಿದ. ಅಮ್ಮ ಎರಡು ಸೌಟು ಹುಗ್ಗಿ ಹಾಕಿ "ಸಾಕ್ಹೋಗು" ಎಂದು ಹೇಳಿದಳು. ಆದರೂ ಹಟ ಮಾಡಿ ಇನ್ನೂ ಸ್ವಲ್ಪ ಹಾಕಿಸಿಕೊಂಡು ಕೈ ಸುಡುತ್ತಿದ್ದುದರಿಂದ ಹ್ಹ..... ಆ..... ಎನ್ನುತ ಮೂಲೆಗೆ ಸರಿದು



Downloaded from https:// www.studiestoday.com

Downloaded from https:// www.studiestoday.com

ಉಫ್ ಉಫೆಂದು ಆರಿಸಿಕೊಳ್ಳುತ್ತ ಇಷ್ಟಿಷ್ಟೆ ಗಂಟಲಿಗೆ ಕಳಿಸತೊಡಗಿದ. "ಎಲ್ಡು ದಿನ ಉಪ್ವಾಸ ಇದ್ದರೂ ಹುಗ್ಗಿ ಸಿಕ್ತು" ಎಂದುಕೊಳ್ಳುತ್ತ ತಟ್ಟೆಯ ತಗ್ಗಿನಲ್ಲಿ ಅಂಟಿದ್ದ ಹುಗ್ಗಿಯನ್ನೆಲ್ಲ ಬೆರಳಿಂದ ಗೀಚಿಕೊಂಡು ಬೆರಳುಗಳನ್ನು ನೆಕ್ಕಿಕೊಳ್ಳುತ್ತ ಮತ್ತೆ ಹುಗ್ಗಿಗಾಗಿ ಅಮ್ಮನ ಹತ್ತಿರ ಓಡಿ ತಟ್ಟೆ ಚಾಚಿ ನಿಂತ. "ಈಗ ಸಾಕು ಮೊದ್ಲು ಗುಂಡಾಲು ಕೊಟ್ಬಾ ಓಗು" ಎಂದು ಗುಂಡಾಲು ಕೊಟ್ಟಳು. ಬಸವ "ಉಹುs......" ಎಂದ. "ಒದಿ ಬೇಕೇನ್ಲೆ ಬಸ್ಯ ಕೊಟ್ಬಾ ಅಂದ್ರ ಹಂಗ್ಯಾಕ ಹಟಮಾಡ್ತಿ" ಎಂದು ಸ್ವತಃ ಅಪ್ಪನೇ ಗದರಿಸಿದ ಮೇಲೆ ಬಸವ ಗುಂಡಾಲು ಹಿಡಿದುಕೊಂಡು ಅಳುಮುಖ ಮಾಡಿಕೊಂಡು ಹೊಸ್ತಿಲು ದಾಟಿದ. ಅಮ್ಯಾಲೆ ಹುಗ್ಗಿ ಸಿಕ್ತದೋ ಇಲ್ಲೋ ಎಂಬುದು ಅವನ ಯೋಚನೆ. "ಜಲ್ದಿ ಕೊಟ್ಟು ಬರಾಣು" ಎಂದು ಓಡಲು ಹವಣಿಸಿದಾಗ "ಬಸ್ಯ" ಅಂತ ಅವನ ಅಮ್ಮ ಕರೆದದ್ದು ಕೇಳಿಸಿಕೊಂಡು ಸಟ್ಟನೆ ಹಿಂದಿರುಗಿ ನೋಡಿದ. ಅಮ್ಮ ಸೆರಗಿನಿಂದ ಬಾಯಿಮುಚ್ಚಿಕೊಂಡು ನಿಂತಿರುವುದು ಕಾಣಿಸಿತು, ಮತ್ತೆ ಹುಗ್ಗಿ ಉಣ್ಣಲು ಏನಾದರೂ ಕರೆಯುತ್ತಿದ್ದಾಳೆಂದು ಓಡಿದ. ಆದರೆ ಅಮ್ಮ ತುಟಿಪಿಟಕ್ಕೆನ್ನದೆ ಕೇವಲ ಅವುಚಿಕೊಂಡು ಅತ್ತು ತಲೆಸವರಿ 'ಓಗು'ಎಂದಿಷ್ಟೇ ಅಂದಳು. ಅಳುವ ಅಮ್ಮನ ಮುಖ ನೋಡುತ್ತ ಬಸವ 'ಅಮ್ಮ ನೀನ್ಯಾಕ ಅಳ್ತಿ' ಎಂದು ಕೇಳಿದ. ಅದಕ್ಕೆ ಉತ್ತರ ಬಾರದೇ ಹೋದಾಗ ನಿರ್ವಾಹವಿಲ್ಲದೆ 'ಹುಗ್ಗಿ ಉಳ್ಸು' ಎಂದು ಜೋರಾಗೇ ಹೇಳುತ್ತ ಗುಂಡಾಲು ಎತ್ತಿಕೊಂಡು ಗೌಡರ ಮನೆ ಕಡೆ ಓಡಿದ. ಉಣ್ಣುವುದಕ್ಕಿಂತ ಮೊದಲು ಗುಂಡಾಲು ಕೊಟ್ಟು ಬಾ ಎಂದೇನಾದರೂ ಅಮ್ಮ ಹೇಳಿದ್ದರೆ ಖಂಡಿತ ಬಸವನಿಂದ ಹೊರಲು ಆಗುತ್ತಿರಲಿಲ್ಲ. ಎರಡು ದಿನ ಉಪವಾಸವಿದ್ದುದರಿಂದ ಅವನ ಮೈಯನ್ನೆತ್ತಿಕೊಂಡು ಅವನೇ ನಡೆದಾಡುವುದು ಕಷ್ಟವಿತ್ತು.

ಗುಂಡಾಲು ಹೆಗಲ ಮೇಲಿಟ್ಟುಕೊಂಡು ತಾಯವ್ವನ ಗುಡಿ ಸಂದಿಗೆ ಬಂದಾಗ ಬಸವನ ಕಣ್ಣಿಗೆ ಭೀಮ ಬಿದ್ದ. ಭೀಮನ ಜೊತೆ ಮಾತಾಡಬೇಕೆನಿಸಿ ಬಸವ 'ಏನ್ಲೇ ಭೀಮ್ಯಾ ಇತ್ಯಾಗ ಹೊಂಟಿ' ಎಂದು ಕೇಳುತ್ತ ಅವನಿಗೆ ಕೇಳಿಸಲೇಂದೇ ಒಂದು ಡೇಗನ್ನು ಜೋರಾಗಿ ಡೇಗಿದ. ಅವನು ಏನುಂಡಿ ಎಂದು ಕೇಳದೇ ಹೋದ್ದರಿಂದ ಬಸವನೇ 'ಈ ಹೊತ್ತು ನಮ್ಮನ್ಯಾಗ ಹುಗ್ಗಿ ಮಾಡೀವಲೇ' ಎನ್ನುತ್ತ ಗೌಡರಮನೆ ಕಡೆ ಜೋರಾಗೇ ಕಾಲು ಹಾಕಿದ. ಯಾವ ದಾರಿಯಿಂದ ಹೋದರೆ ಗೌಡರಮನೆ ಸಮೀಪ ಎಂಬುದು ಬಸವನಿಗೆ ಗೊತ್ತಿಲ್ಲ ಎನ್ನುವಂತಿಲ್ಲ. ಪ್ರತಿದಿನ ಅಮ್ಮ ಮುಸುರೆ ಪಾತ್ರೆ ತಿಕ್ಕಲು ಗೌಡರ ಮನೆಗೆ ಹೋದಾಗ ಬಸವ ಹಿತ್ತಿಲ ಬಾಗಿಲಲ್ಲಿ ನಿಂತು ಅಮ್ಮ ಪಾತ್ರೆಗಳಲ್ಲಿಂದ ಬಳಿದು ಅನ್ನಗಿನ್ನ ಏನಾದರೂ



Downloaded from https:// www.studiestoday.com

Downloaded from https:// www.studiestoday.com

ಕೊಟ್ಟರೆ ನಾಲ್ಕು ಗುಕ್ಕು ನುಂಗಿ ಡೇಗುತ್ತ ಬರುತ್ತಿದ್ದ. ರಾಶಿ ಮುಸುರೆ ಪಾತ್ರೆಗಳ ನಡುವೆ ಅಮ್ಮ ಗುಬ್ಬಚ್ಚಿಯಂತೆ ಕಂಡಾಗ ಅವನು ಅತ್ತದ್ದೂ ಉಂಟು.

ಗೌಡರ ಮನೆಯ ಮುಳ್ಳುಗೇಟಿನ ಬಳಿ ಮೈಕೊಡವಿ ಮೇಲೇಳುತ್ತಿದ್ದ ಕಂದುಬಣ್ಣದ ನಾಯಿಯನ್ನು ನೋಡಿ ಬಸವ ಏದುಸಿರು ಬಿಡುತ್ತ ನಿಲ್ಲಬೇಕಾಯಿತು. ತನ್ನ ಗುರ್ತು ಹಿಡಿದು ಅದು ಬಾಲ ಅಲ್ಲಾಡಿಸಿದ್ದರಿಂದ ಮೈಬಿಗಿಹಿಡಿದು ಒಂದೊಂದೆ ಹೆಜ್ಜೆ ಇಡುತ್ತ ಗೇಟು ದಾಟಿದ. ಧಂಧಕ್ಕಿ ದಾಟಿ ಮೆಟ್ಟಲುಗಳನ್ನೇರಿ ಗುಂಡಾಲು ಕೆಳಗಿಡುವಾಗ ಆರಾಮ ಚೇರಿಗೊರಗಿದ್ದ ಗೌಡರು 'ಬಾರ್ಲೆ ಬಸ್ಯ ನಿಮ್ಮಪ್ಪ ಹೇಳ್ದಂಗೆ ಬಂದ್ಬಿಡು' ಎಂದು ಹೇಳುವಾಗಲೂ ನಾಯಿಗಿಂತ ಭಯಂಕರವಾಗಿ ಕಂಡರು. ಹೆದರಿ ಒಂದೆರಡು ಹೆಜ್ಜೆ ಹಿಂದೆ ಸರಿದು "ನಮ್ಮಮ್ಮ ಗುಂಡಾಲು ಕೊಟ್ಟ ಜಲ್ದೀ ಬಾ ಅಂದ್ಲು....... ಇಲ್ಲಿಟ್ಟೇನಿ ನೋಡ್ರಿ" ಎಂದು ಹೊರಡಲು ಅನುವಾದ. ಅವನು ತಪ್ಪಿಸಿಕೊಳ್ಳುತ್ತಾನೆಂದು ಭಾವಿಸಿದ ಗೌಡರು ಎದ್ದುನಿಂತು 'ಎಲ್ಲಿಗೊಕ್ಕೀ ನಿಮ್ಮಪ್ಪ ಸಾಲಕ್ಕ ನಿನ್ ಸಂಬ್ಳ ಇಟ್ಟಾನ.............. ಈಗೆಲ್ಲಿರ್ತಾರೆ ನಿಮ್ಮಪ್ಪ ನಿಮ್ಮಮ್ಮ ಎಲ್ರು ಊರ್ಗೆ ಹೊಂಟೋಗಿರ್ತಾರೆ" ಎಂದಾಗಂತೂ ಬಸವ ನಡುಗಿದ. ಜೋರಾಗಿ ಅಳಬೇಕೆನಿಸಿದರೂ ಗೌಡರ ಮೀಸೆ ನೋಡಿ ಒಳಗಷ್ಟೇ ಅಳತೊಡಗಿದ. 'ಇಲ್ಲ ಗೌಡ್ರೆ ನಾನೂ ನಮ್ಮಪ್ಪನ್ಜೊತೆ ಊರಿಗೊಕ್ಕಿನಿ' ಎನ್ನುತ್ತ ಅಂಗಿ ಚುಂಗಿನಿಂದ ಕಣ್ಣೊರಿಸಿಕೊಳ್ಳುತ್ತ ಹಿಂದೆ ಸರಿಯತೊಡಗಿದ. 'ನಿಮ್ಮಪ್ಪನ ಜೊತೆ ನೀನೂ ಊರ್ಗೆ ಹೋದ್ರೆ, ಬಾಕಿ ತೀರ್ಸೊರ್‍ಯಾರ್ಲೆ ಬಸ್ಯ, ಇಲ್ಲೇನು ನಿಂಗ ಭಾಳ ಕೆಲ್ಸ ಐತಿ, ಸೆಗಣಿ ಬಳಿಯೋದು ದನ ಕಾಯೋದು ಕಮ್ಮಗ ಉಂಡಿರೋದು ಬಿಟ್ಟು ಊರ್ಗೆ ಯಾಕ ಹೋಗ್ತಿ' ಎನ್ನುತ್ತ ಮುಂದೆ ಬರತೊಡಗಿದ. ಗೌಡ ಇನ್ನೇನು ತನ್ನನ್ನು ಹಿಡಿದೇಬಿಡುತ್ತಾನೆಂಬ ಭಯದಿಂದ 'ಇಲ್ಲಾss....... ನಿಮ್ಮನಿಯಾಗ ಸಂಬ್ಳಕ್ಕ ಇರಾದಿಲ್ಲ....... ನಾನೂ ....... ನಮಪ್ಪನ್ಜೊತೆ ಊರಿಗೊಕ್ಕೀನಿ, ಊರಿಗೋಕ್ಕೀನಿ ಎಂದು ಕೂಗುತ್ತ ಕುಪ್ಪಳಿಸಿ ಓಡತೊಡಗಿದ. ಹೊರಗೆ ನಾಯಿ ಸ್ವಲ್ಪ ದೂರ ಬೊಗಳುತ್ತ ಹಿಂಬಾಲಿಸಿತಾದರೂ ಬಸವ ಸಿಗದಂತೆ ಓಡಿದ. 'ಮುನಿ ಮುಟ್ಟೊದ್ರೊಳ್ಗೆ ಎಲ್ರೂ ಊರಿಗೋಗಿದ್ರೆ?' ಅಂತ ಕಾಲು ಇನ್ನೂ ಜೋರಾಗಿ ಹಾಕಿದ. 'ಊರಿಗೋಗಿದ್ರೆ' ಎಂಬ ಪ್ರಶ್ನೆ ಮಾತ್ರ ಬಸವನ ಮನಸ್ಸಿನಲ್ಲಿ ಕರಕಿ ಬೆಳೆದಂತೆ ಮಾರಗಲ ಹಬ್ಬಿ ಬೀಳುಬಿಟ್ಟಿತು.



Downloaded from https:// www.studiestoday.com

Downloaded from https:// www.studiestoday.com

## ಕುಂ. ವೀರಭದ್ರಪ್ಪ



ಕುಂ. ವೀರಭದ್ರಪ್ಪ ಎಂಬ ಹೆಸರು ಸಮಕಾಲೀನ ಕನ್ನಡ ಕಥೆಗಾರರಲ್ಲಿ ಎದ್ದು ಕಾಣುತ್ತದೆ. ಕಪ್ಪು, ಬೇಲಿ ಮತ್ತು ಹೊಲ, ಕೊಟ್ರ ಹೈಸ್ಕೂಲಿಗೆ ಸೇರಿದ್ದು, ಕೆಂಡದ ಮಳೆ ಮುಂತಾದ ಕಾದಂಬರಿಗಳನ್ನೂ, ಇನ್ನಾದರೂ ಸಾಯಬೇಕು, ಡೋಮ ಮತ್ತು ಮತ್ತಿತರ ಕತೆಗಳು, ಭಗವತಿಕಾಡು ಮೊದಲಾದ ಕಥಾಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಸಾಮಾಜಿಕ ಸಂದರ್ಭಗಳ ನಿಷ್ಠುರ ಸತ್ಯಗಳನ್ನು, ಗ್ರಾಮೀಣ ಬದುಕಿನ ಒಳಪದರುಗಳಲ್ಲಿರುವ ಸಾಂಸ್ಕೃತಿಕ ನೆಲೆಗಳನ್ನು ಇವರು ಯಥಾವತ್ತಾಗಿ ಚಿತ್ರಿಸಿದ್ದಾರೆ. ಇವರ ಬರಹಗಳಲ್ಲಿ ಆಡುನುಡಿಯ ಸೊಗಡು ದಟ್ಟವಾಗಿದೆ.

'ಕಪ್ಪು' ಕಾದಂಬರಿಗೆ ಸಾಹಿತ್ಯ ಅಕಾಡೆಮಿಯ ಬಹುಮಾನ 'ಬೇಲಿ ಮತ್ತು ಹೊಲ'ಕ್ಕೆ ವರ್ಧಮಾನ ಪ್ರಶಸ್ತಿ 'ಭಗವತಿ ಕಾಡು' ಕಥಾ ಸಂಕಲನಕ್ಕೆ ಮುದ್ದಣ, ರತ್ನಾಕರವರ್ಣಿ ಪ್ರಶಸ್ತಿ ದೊರೆತಿವೆ. 'ಕೆಂಡದ ಮಳೆ', 'ಕೊಟ್ರೇಶಿ ಕನಸು' ಚಲನಚಿತ್ರವಾಗಿರುವ ಕಾದಂಬರಿಗಳು.

### ಶಬ್ದಾರ್ಥ ವಿವರಣೆ

ಸಿಲವಾರ ತಟ್ಟೆ – ಅಲ್ಯುಮಿನಿಯಂ ತಟ್ಟೆ (ಲೋಹದ ತಟ್ಟೆ), ಗುಂಡಾಲು – ಅಗಲ ಬಾಯಿಯ ದೊಡ್ಡ ಪಾತ್ರೆ, ಧಂಧಕ್ಕಿ – ಮನೆಯ ಮುಂದೆ ಅಂಗಳದ ಸಮೀಪವೇ ಇರುವಂತಹ ದನಗಳ ಹಟ್ಟಿ (ಸಿರಿವಂತ ಗೌಡರ ಮನೆಗಳಲ್ಲಿ ಕಾಣಬಹುದಾದ ಹಟ್ಟಿ).

### ಸಂಕ್ಷಿಪ್ತವಾಗಿ ಉತ್ತರಿಸಿರಿ

- 'ಹುಗ್ಗಿ' ಕಥೆಯಲ್ಲಿ ಹಸಿವೆಯ ಘೋರ ಚಿತ್ರಣ ಹೇಗೆ ಮೂಡಿಬಂದಿದೆ?
- "ನಿಮ್ಮಪ್ಪ ಸಾಲಕ್ಕೆ ನಿನ್ನ ಸಂಬ್ಳ ಇಟ್ಯಾನ" ಗೌಡರ ಈ ಮಾತಿಗೆ ಬಸವನ ಪ್ರತಿಕ್ರಿಯೆ ಏನಾಗಿತ್ತು?



Downloaded from https:// www.studiestoday.com

Downloaded from https:// www.studiestoday.com

## ಚಟುವಟಿಕೆಗಳು

- 'ಬಾಲಕಾರ್ಮಿಕತನ' ಒಂದು ಸಾಮಾಜಿಕ ಪಿಡುಗು, ಅದನ್ನು ಬೇರುಸಹಿತ ಕಿತ್ತೊಗೆಯಬೇಕಾಗಿದೆ. ನಿಮ್ಮ ಸುತ್ತುಮುತ್ತಲಲ್ಲಿ ಇರುವ ಬಾಲಕಾರ್ಮಿಕರನ್ನು ರಕ್ಷಿಸಲು 'ಮಕ್ಕಳ ಹಿತಸಂರಕ್ಷಣಾ ಆಯೋಗ'ಕ್ಕೆ ಒಂದು ಪತ್ರ ಬರೆಯಿರಿ.
- ಹಸಿವು ಅಥವಾ ಬಾಲಕಾರ್ಮಿಕತನದ ಘೋರ ಚಿತ್ರಣವನ್ನು ಪ್ರತಿಬಿಂಬಿಸುವ ಲೇಖನವನ್ನು ತಯಾರಿಸಿ ಬ್ಲೋಗಿನಲ್ಲಿ ಪ್ರಕಟಿಸಿರಿ.

## ಭಾಷಾಭ್ಯಾಸ

- ಈ ಕೆಳಗಿನ ಮಾತುಗಳನ್ನು ಶಿಷ್ಟ ಕನ್ನಡಕ್ಕೆ ಪರಿವರ್ತಿಸಿರಿ.
  - 'ಬಸವ ಈ ಹೊತ್ತು ನಾವೆಲ್ಲ ಊರಿಗ್ಹೋಕ್ತೀವಿ. ನೀನೊಬ್ನೆ ಗೌಡ್ರ ಮನ್ಯಾಗಿರು, ಅವ್ರಿಗೆ ಹೇಳ್ತೀನಿ'
  - 'ಸಣ್ಣ ಹುಡ್ಗ ಮಾಡಿದಂಗ ಮಾಡ್ತೀಯಲ್ಲಾ ನೀನು ಆಮ್ಯಾಕ ಉಣ್ಣುವಂತೆ, ಮೊದ್ಲು ಈ ಗುಂಡಾಲು ಒಯ್ದು ಗೌಡ್ರೀಗೆ ಕೊಟ್ಬಾ ಹೋಗು'
  - 'ಎಲ್ಲಿಗೋಕ್ಕಿ ನಿಮ್ಮಪ್ಪ ಸಾಲಕ್ಕ ನಿನ್ನ ಸಂಬ್ಳ ಇಟ್ಟಾನ...... ಈಗೆಲ್ಲಿತ್ತಾರೆ ನಿಮ್ಮಪ್ಪ ನಿಮ್ಮಮ್ಮ ಎಲ್ರು ಊರ್ಗೆ ಹೊಂಟೊಗಿರ್ತಾರೆ'




Downloaded from https:// www.studiestoday.com

Downloaded from https:// www.studiestoday.com

## ಕಲಿಕಾ ಸಾಧನೆಗಳು

- ಅನುವಾದಿತ ಕೃತಿಗಳನ್ನು ಓದುವುದರ ಮೂಲಕ ಅನ್ಯದೇಶದ ಸಾಂಸ್ಕೃತಿಕ, ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಂಡು, ಭಾಷಾಂತರ ಮೊದಲಾದ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವುದು.
- ಹೊಸಗನ್ನಡ ಕಾಲಘಟ್ಟದ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ, ಮೊದಲಾದ ಸಾಹಿತ್ಯ ರಚನೆಗಳನ್ನು ಓದಿ ವಿಶ್ಲೇಷಿಸಿ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತರೂಪದಲ್ಲಿ ಮಂಡಿಸುವುದು.
- ಓದಿದ ಗದ್ಯ-ಪದ್ಯ ಕೃತಿಗಳ ವಸ್ತು, ಭಾಷೆ, ಶೈಲಿ ಮೊದಲಾದವುಗಳ ವೈವಿಧ್ಯಗಳನ್ನು ಗ್ರಹಿಸಿಕೊಂಡು ಬಹುಮುಖ ರಚನಾ ಸಾಮರ್ಥ್ಯವನ್ನು ಗಳಿಸುವುದು.
- ಕನ್ನಡ ಭಾಷಾ ಪ್ರಭೇದಗಳನ್ನು ತಿಳಿದುಕೊಂಡು ಅವುಗಳ ವಿಶೇಷತೆಗಳನ್ನು ಕುರಿತು ಲಿಖಿತರೂಪದಲ್ಲಿ ಮಂಡಿಸುವುದು.
- ಪದನಿಷ್ಪತ್ತಿ, ಅರ್ಥ ವಿವರಣೆ, ಕ್ರಿಯಾಧಾತು, ನಾಮವಿಶೇಷಣ ಮೊದಲಾದ ವ್ಯಾಕರಣ ವಿಶೇಷತೆಗಳನ್ನು ತಿಳಿದುಕೊಂಡು ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುವುದು.
- ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಅಡಕವಾಗಿರುವ ಜೀವನ ಮೌಲ್ಯ, ಸಾಮಾಜಿಕ ನೀತಿ, ವಿಡಂಬನೆ ಮೊದಲಾದವುಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು.





Downloaded from https:// www.studiestoday.com

Downloaded from https:// www.studiestoday.com

# ಹಿಂದಣ ಹೆಜ್ಜೆ

ಹಿಂದಣ ಹೆಜ್ಜೆಯನರಿಯದೆ ಮುಂದಿನ ಹೆಜ್ಜೆಯನಿಡಲಾಗದು ಎಂಬ ವಚನದ ಸಾಲಿನಂತೆ ನಿನ್ನೆಯನ್ನು ಅರ್ಥಮಾಡಿಕೊಳ್ಳದೆ ಇಂದುನಾಳೆಗಳನ್ನು ಅರ್ಥಮಾಡಿಕೊಳ್ಳಲಾಗದು. ಕನ್ನಡ ಸಾಹಿತ್ಯಕ್ಕೆ ಒಂದೂವರೆ ಸಾವಿರ ವರ್ಷಗಳ ಇತಿಹಾಸವಿದೆ. ದೀರ್ಘವಾದ ಈ ಕಾಲಪ್ರವಾಹದಲ್ಲಿ ಸಾಹಿತ್ಯದ ಬೇರೆ ಬೇರೆ ಸ್ವರೂಪಗಳು ಗೋಚರವಾಗಿವೆ. ಚಂಪೂ, ಷಟ್ಪದಿ, ವಚನಗಳು ಇತ್ಯಾದಿ. ಯಾವ ಪ್ರಕಾರದ ಸಾಹಿತ್ಯವಿದ್ದರೂ ಅದು ಸಮಾಜದ ಕುಂದು, ಕೊರತೆಗಳನ್ನು ತಿದ್ದಿ ಜನಜೀವನವನ್ನು ಸುಭಗಗೊಳಿಸಿ ಸುಂದರಗೊಳಿಸಲು ಕಟಿಬದ್ಧವಾಗಿದೆ ಎನ್ನುವುದು ವಾಸ್ತವ.

ಕನ್ನಡದ ಅತ್ಯಂತ ಜನಪ್ರಿಯಕವಿ ಕುಮಾರವ್ಯಾಸ. ಅವನ "ಕರ್ಣಾಟಕ ಭಾರತ ಕಥಾಮಂಜರಿ" ಕರ್ನಾಟಕದ ಉದ್ದಗಲಕ್ಕೂ ಗಮಕ ಕಲೆಯ ಪ್ರಚಾರಕ್ಕೆ ಜನಪ್ರಿಯವಾದ ಕೃತಿ. ಅವನು ತನ್ನ ಮಹಾಕಾವ್ಯದಲ್ಲಿ ಅನೇಕ ಪುರಾಣಪಾತ್ರಗಳನ್ನು ಬಹು ಸುಂದರವಾಗಿ ಕಡೆದಿದ್ದಾನೆ. ಅವುಗಳಲ್ಲಿ ಕರ್ಣನ ಪಾತ್ರ ಪ್ರಧಾನವಾದುದು. "ನಿನ್ನ ವೀರರ್ವೈರರ ನೋಯಿಸೆನು" ಎಂಬ ಕಾವ್ಯಭಾಗದಲ್ಲಿ ಕರ್ಣನ ತ್ಯಾಗ, ಗೆಳೆತನದ ಮನೋಭಾವ, ಸ್ವಾಮಿನಿಷ್ಠೆಗಳನ್ನು ಗಮನಿಸಬಹುದು.

ಸಾಮಾಜಿಕ ಬದುಕಿನಲ್ಲಿ ಅಹಿಂಸೆ ಮತ್ತು ಜೀವದಯೆಯನ್ನು ಎತ್ತಿಹಿಡಿದವರು ಜೈನರು. ಕವಿ ಜನ್ನ ಸರಳವಾದ ಕಂದ ಪದ್ಯದಲ್ಲಿ 'ಯಶೋಧರ ಚರಿತೆ' ಕಾವ್ಯದಲ್ಲಿ ಈ ಆದರ್ಶಗಳನ್ನು ಪ್ರತಿಪಾದಿಸಿದ್ದಾನೆ.

ವಚನವಾಙ್ಮಯ ಕನ್ನಡ ಸಾಹಿತ್ಯದಲ್ಲಿ ಗಟ್ಟಿಯಾಗಿ ನಿಂತ ಒಂದು ಪ್ರಕಾರ. ಅಪಾರ ಶಿವಾನುಭವವುಳ್ಳ ಶಿವಶರಣರಿಂದ, ಶಿವಶರಣೆಯರಿಂದ ಇದು ಸೃಷ್ಟಿಯಾಯಿತು. ಬಸವಣ್ಣನವರು ಶರಣರಾಗಿ ಕೀರ್ತಿವೆತ್ತಂತೆ, ಆಯ್ದಕ್ಕಿ ಲಕ್ಕಮ್ಮಳೂ ಮಾನ ಸಮ್ಮಾನಗಳನ್ನು ಪಡೆದುಕೊಂಡವಳಾಗಿದ್ದಾಳೆ.



ಪದ್ಯ ಕಾವ್ಯಗಳು ಪ್ರಚಾರಕ್ಕೆ ಬಂದಂತೆ ಗದ್ಯಕಾವ್ಯಗಳು ಹಿಂದೆ ಬಂದಿರಲಿಲ್ಲ. ಕಥೆ ಎಂದಿಗೂ ಎಲ್ಲಾ ವಯೋಮಾನದವರನ್ನೂ ಆಕರ್ಷಿಸುವ ಜನಪ್ರಿಯ ಸಾಹಿತ್ಯ ಪ್ರಕಾರವಾಗಿದೆ. 'ಪಂಚತಂತ್ರದ ಕಥೆಗಳು' ಬಹು ಪ್ರಸಿದ್ಧ. ಸಂಸ್ಕೃತದಿಂದ ಅನುವಾದಗೊಂಡ ಈ ಕಥೆಗಳಲ್ಲಿ ನೀತಿ, ತತ್ವಗಳು ಮುಖ್ಯವಾಗಿವೆ. ಮಿತ್ರದ್ರೋಹ, ವಂಚನೆ, ಸ್ವಾರ್ಥ ಇತ್ಯಾದಿಗಳಿಂದ ಮನುಷ್ಯ ದೂರವಿರಬೇಕು ಎನ್ನುವ ಸಂದೇಶವನ್ನು ಸಾರುವ 'ವಟವೃಕ್ಷಮೇ ಸಾಕ್ಷಿ' ಎನ್ನುವ ಕಥೆ ತುಂಬ ಸುಂದರವಾಗಿದೆ.





Downloaded from https:// www.studiestoday.com

Downloaded from https:// www.studiestoday.com

# ನಿನ್ನಯು ಮೌರ್ತ್ಯವರ ಸೋಲಿಸೇನು

**ಕುಮಾರವ್ಯಾಸ**

ಮಾನವನ ಬದುಕಿನಲ್ಲಿ ಸಮಸ್ಯೆಗಳು ಸಹಜವಾದುದು. ಪ್ರತಿ ಸಮಸ್ಯೆಗೂ ಉತ್ತರ ಇದ್ದೇ ಇರುತ್ತದೆ. ಸಂಕೀರ್ಣ ಬದುಕಿನಲ್ಲಿ ತಾಳ್ಮೆ ತುಂಬಾ ಮುಖ್ಯ. ಎಂತಹ ಕಷ್ಟ–ನಷ್ಟಗಳು ಸಂಭವಿಸಿದರೂ ಮನುಷ್ಯ ತನ್ನ ಮೂಲ ಸಾತ್ವಿಕ ಗುಣಗಳನ್ನು ಕಳೆದುಕೊಳ್ಳಬಾರದು. ಬರುವ ಎಡರು ತೊಡರುಗಳು ನಮ್ಮ ವ್ಯಕ್ತಿತ್ವವನ್ನು ಪರೀಕ್ಷೆಗೆ ಒಡ್ಡುವುದರಿಂದ ಅವುಗಳನ್ನೆದುರಿಸಿ ನಾವು ಜಯಶಾಲಿಗಳಾಗಬೇಕು. ಪರರಿಗೆ ಪ್ರಯೋಜನವಾಗದ ಬದುಕು ಇದ್ದೂ ವ್ಯರ್ಥ. ಎಷ್ಟೇ ಆಸೆ, ಆಮಿಷಗಳನ್ನೊಡ್ಡಿದರೂ ಅವೆಲ್ಲವನ್ನೂ ನಯವಾಗಿ ತಿರಸ್ಕರಿಸಿ ತನ್ನ ದಾತಾರನಾದ ದುರ್ಯೋಧನನಲ್ಲಿ ನಿಷ್ಠೆಯನ್ನು ಪ್ರದರ್ಶಿಸುವ ಕರ್ಣನ ವ್ಯಕ್ತಿತ್ವವನ್ನು ಪ್ರಸ್ತುತ ಭಾಗದಲ್ಲಿ ಕಾಣಬಹುದಾಗಿದೆ.



ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ
ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವೆ
ನೆನಲು ತೊಡೆ ಸೋಂಕಿನಲಿ ಸಾರಿದು ಶೌರಿಯಿಂತೆಂದ

ಭೇದವಿಲ್ಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವಡನ್ವಯದ ಮೊದಲೆರಡಿಲ್ಲ ನಿನ್ನಾಣೆ
ಮೇದಿನೀಪತಿ ನೀನು ಚಿತ್ತದೊ
ಳಾದುದರಿವಿಲ್ಲೆನುತ ದಾನವ
ಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ



Downloaded from https:// www.studiestoday.com

Downloaded from https:// www.studiestoday.com

ದಾನವಾಂತಕ ಬೆಸಸು ವಂಶ ವಿ
ಹೀನನನು ನಿಮ್ಮಡಿಗಳೊಡನೆ ಸ
ಮಾನಿಸುವರೇ ಸಾಕೆನುತ ರವಿಸೂನು ಕೈಮುಗಿಯೆ
ಮಾನನಿಧಿ ನಿನ್ನಾಣೆ ಬಾರೈ
ನೀನು ನಮ್ಮೆಲ್ಲರ ಹವಣೆ ವರ
ಭಾನುವಂಶಲಲಾಮ ನೀ ರಾಮಂಗೆ ಸರಿಯೆಂದ

ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು.

ಆದರಿನಾ ಪಾಂಡವರಲೈವರ
ಮೊದಲಿಗನು ನೀನಿರಲು ಧರಣಿಯ
ಕದನವಿತ್ತಂಡಕ್ಕೆ ಕಾಮಿತವಲ್ಲ ಭಾವಿಸಲು
ಇದು ನಿಧಾನವು ಕರ್ಣ ನಿನ್ನ
ಭ್ಯುದಯವನೆ ಬಯಸುವೆನು ನಿನ್ನಯ
ಪದಕೆ ಕೆಡಹುವೆನೈವರನು ನಡೆ ತನ್ನ ಸಂಗಾತ

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ



Downloaded from https:// www.studiestoday.com

Downloaded from https:// www.studiestoday.com

ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡು ತನಯರ
ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು
ನಡುವೆ ನೀನೋಲಗದೊಳೊಪ್ಪುವ
ಕಡು ವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ

ಶೌರಿಯದಲಿದಿರಿಲ್ಲ ಕುಲದಲಿ
ಸೂರಿಯನ ಮಗನೊಡನೆ ಹುಟ್ಟಿದ
ವೀರರೈವರು ಪಾಂಡುತನಯರು ನಿನ್ನ ವೈಭವಕೆ
ಆರು ಸರಿಯೈ ಕರ್ಣ ನಡೆ ನಡೆ
ಧಾರುಣೀಪತಿಯಾಗು ನೀನಿರೆ
ವೈರವಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಕಾದಿ ಕೊಲುವೊಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದೊಡೆ ಕೌರವಂಗವನಿಯಲಿ ಹೊಗಲಿಲ್ಲ
ಭೇದದಲಿ ಹೊಕ್ಕಿರಿದನೋ ಮಧು
ಸೂದನಕಟಕಟೆನುತ ಘನ ಚಿಂ
ತೋದಧಿಯಲದ್ದವೊಲು ಮೌನದೊಳಿದ್ದನಾ ಕರ್ಣ



Downloaded from https:// www.studiestoday.com

Downloaded from https:// www.studiestoday.com

ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ
ಹಾನಿಯಿಲ್ಲೆನ್ನಾಣೆ ನುಡಿ ನುಡಿ
ಮೌನವೇತಕೆ ಮರಳುತನ ಬೇ
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ

ಮರಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

ವೀರ ಕೌರವರಾಯನೇ ದಾ
ತಾರನಾತನ ಹಗೆಯೆ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ
ಶೌರಿ ಕೇಳೈ ನಾಳೆ ಸಮರದ
ಸಾರದಲಿ ತೋರುವೆನು ನಿಜ ಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ

ಹಲವು ಮಾತೇನಖಿಳ ಜನಕೆ
ನ್ನುಳಿವು ಸೊಗಸದು ಕೌರವೇಶ್ವರ
ನೊಲುಮೆ ತಪ್ಪಿಸಿ ಭುವನದೊಳಗೆನಗಾಪ್ತ ಜನವಿಲ್ಲ
ಸಲಹಿದನು ಮನ್ನಣೆಯಲೆನಗ
ಗ್ಗಳಿಕೆಯಲ್ಲದೆ ಹೀನ ವೃತ್ತಿಯ
ಬಳಸಿ ನಡೆಸನು ಕೌರವೇಂದ್ರನನೆಂತು ಮರೆದಪೆನು



Downloaded from https:// www.studiestoday.com

Downloaded from https:// www.studiestoday.com

ನೋಡಿ ದಣಿಯನು ಬಿರುದ ಹೊಗಳಿಸಿ
ಹಾಡಿ ದಣಿಯನು ನಿಚ್ಚಲುಚಿತವ
ಮಾಡಿ ತಣಿಯನು ಮಾನನಿಧಿಯನದೆಂತು ಮರೆದಪೆನು
ಕಾಡಲಾಗದು ಕೃಷ್ಣ ಖಾತಿಯ
ಮಾಡಲಾಗದು ಬಂದೆನಾದೊಡೆ
ರೂಢಿ ಮೆಚ್ಚದು ಕೌರವನ ಹಗೆ ಹರಿಬ ತನಗೆಂದ

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ರುಣ ಹಿಂಗೆ ರಣದಲಿ ಸುಭಟ ಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

ಎನಲು ಕರ್ಣನ ದೃಢವ ಕಂಡನು
ಮನದೊಳುತ್ಸಾಹಿಸಿದನಾದೊಡನೆ
ತನಯರೈವರ ಹದನು ನಿನ್ನದು ಬಲುಹ ಮಾಡುವೊಡೆ
ಮನಕೆ ಖತಿಯಹುದರುಹದಿರ್ದೊಡೆ
ತನಗೆ ಗುಣವಲ್ಲೆಂಬ ಕಾರಣ
ವಿನಿತನೊಡ್ಡೈಸಿದೆನು ನೀ ಸುಖಿಯಾಗು ಹೋಗೆಂದ

### ಕುಮಾರವ್ಯಾಸ

'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂಬ ಹಿರಿಮೆಗೆ ಪಾತ್ರನಾದ ಕುಮಾರವ್ಯಾಸ (ಕ್ರಿ. ಶ ೧೪೦೦) ನಡುಗನ್ನಡ ಕಾವ್ಯಪರಂಪರೆಯಲ್ಲಿ ಶಿಖರ ಪ್ರಾಯವಾದ ಕೃತಿ ರಚಿಸಿದ ಮಹಾಕವಿ. ಗದುಗಿನ ಬಳಿ ಇರುವ ಕೋಳಿವಾಡ ಈತನ ಜನ್ಮ ಸ್ಥಳ. ಈತನ ನಿಜನಾಮ ನಾರಣಪ್ಪ. ಗದುಗಿನ ವೀರನಾರಯಣ ಈತನ ಅರಾಧ್ಯ ದೈವ. ಸಂಸ್ಕೃತ ವ್ಯಾಸಭಾರತವನ್ನು ಆಧರಿಸಿ ಕನ್ನಡದಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ. ಇದಕ್ಕೆ 'ಗದುಗಿನ ಭಾರತ' ಎಂಬ ಹೆಸರೂ ಇದೆ. ವ್ಯಾಸರ ಬಗೆಗೆ ತನಗಿರುವ ಭಕ್ತಿಯನ್ನು ವ್ಯಕ್ತಪಡಿಸುವ ಸಲುವಾಗಿ ತನ್ನನ್ನು 'ಕುಮಾರವ್ಯಾಸ' ಎಂದು ಕರೆದುಕೊಂಡಿದ್ದಾನೆ. ಇವನ ಈ 'ಗದುಗಿನ ಭಾರತ' ಕಲಿಯದವರಿಗೂ ಕಾಮಧೇನುವೆಂಬ ಖ್ಯಾತಿಗೆ ಪಾತ್ರವಾಗಿದೆ.



Downloaded from https:// www.studiestoday.com

Downloaded from https:// www.studiestoday.com

## ಶಬ್ದಾರ್ಥ ವಿವರಣೆ

ಇನತನೂಜ – ಸೂರ್ಯನ ಮಗ (ಕರ್ಣ); ರಿಪು – ಶತ್ರು; ಸಾರು – ಸಮೀಪಿಸು; ಅನ್ವಯ– ವಂಶ; ಮೇದಿನಿ – ಭೂಮಿ; ಸೂನು – ಮಗ; ಹವಣೆ – ಸರಿಸಾಟಿ; ಲಲಾಮ – ಶ್ರೇಷ್ಠ; ಕೆಡಹು – ಬೀಳಿಸು; ಗಡಣ – ಗುಂಪು; ಓಲಗ – ರಾಜಸಭೆ; ವಿಲಾಸ – ವೈಭವ; ಹಸಾದ – ಅನುಗ್ರಹ; ಸೆರೆ – ನರ, ರಕ್ತನಾಳ; ಉರುಹು – ಸುಡು; ಅರುಹಿ – ತಿಳಿಸಿ; ಕಾದು – ಹೋರಾಡು; ಅವನಿ– ಭೂಮಿ; ಹೊಗು – ಪ್ರವೇಶಿಸು; ಉದಧಿ – ಸಾಗರ; ಗ್ಲಾನಿ – ದುಃಖ, ಖಿನ್ನತೆ; ನಿಚ್ಚ – ನಿತ್ಯ (ಸಂ); ಉಚಿತ – ಯೋಗ್ಯ; ಹರಿಬ – ಕರ್ತವ್ಯ; ಖಾತಿ – ಕೋಪ; ಸುಭಟ – ಸೈನಿಕ.

## ಸಂಕ್ಷಿಪ್ತವಾಗಿ ಬರೆಯಿರಿ

- ಕೃಷ್ಣ – ಕರ್ಣರ ಭೇಟಿಯಲ್ಲಿ ಕೃಷ್ಣನ ಭೇದೋಪಾಯವನ್ನು ವಿಶದಪಡಿಸಿರಿ.
- ತನ್ನ ಜನ್ಮ ವೃತ್ತಾಂತವನ್ನು ಅರಿತಾಗ ಕರ್ಣನಲ್ಲಿ ಉಂಟಾದ ಮಾನಸಿಕ ಸಂಘರ್ಷವನ್ನು ಚಿತ್ರಿಸಿರಿ.
- ಕರ್ಣನ ಅಂತಿಮ ನಿರ್ಧಾರ ಆತನ ಸ್ವಾಮಿನಿಷ್ಠೆಗೆ ಪೂರಕವೇ? ಚರ್ಚಿಸಿರಿ.

## ಚಟುವಟಿಕೆಗಳು

- ಈ ಕಾವ್ಯಭಾಗವನ್ನು ವಾಚನ – ಪ್ರವಚನ ರೂಪದಲ್ಲಿ ತರಗತಿಯಲ್ಲಿ ಪ್ರಸ್ತುತಪಡಿಸಿರಿ.
- ಕಾವ್ಯಭಾಗದಲ್ಲಿ ಬಂದಿರುವ ಕೃಷ್ಣ ಕರ್ಣರ ಭೇಟಿಯ ಸಂಭಾಷಣೆಯನ್ನು ನಾಟಕ ರೂಪಕ್ಕೆ ಪರಿವರ್ತಿಸಿ ಬರೆಯಿರಿ.

## ಭಾಷಾಭ್ಯಾಸ

- ಕೆಳಗಿನ ಪದಗಳನ್ನು ಮಾದರಿಯಂತೆ ವರ್ಗೀಕರಿಸಿರಿ.

ಮದನ, ರಾವಣ, ಗರಗಸ, ಜಾಮಾತ, ರಾಮ, ರಾಕ್ಷಸ, ಉಪಮನ್ಯು, ಅಧ್ಯಯನ, ತಂಗಿ, ಜನನಿ, ಅನುಗ್ರಹ, ಭಾರತ.

| ಮೂರು ಮಾತ್ರೆ | ನಾಲ್ಕು ಮಾತ್ರೆ | ಐದು ಮಾತ್ರೆ |
|---|---|---|
| ಮದನ | ರಾವಣ | ಜಾಮಾತ |



Downloaded from https:// www.studiestoday.com

Downloaded from https:// www.studiestoday.com

- ಕೆಳಗಿನ ಪದಗಳಿಗೆ ಮಾದರಿಯಂತೆ ಪ್ರಸ್ತಾರ ಹಾಕಿರಿ.
  ಕಿಶೋರ, ಸಮಯ, ಅಗ್ನಿ, ಕಾವ್ಯ, ಕಷ್ಟ, ಸಂಪನ್ನ, ತಕ್ಷಕ, ಪರೀಕ್ಷಿತ, ಮಹರ್ಷಿ, ಭೀಷಣ, ಮಾತಾರ, ಶಕುಂತಲೆ

| ಮೂರು ಮಾತ್ರೆ | ನಾಲ್ಕು ಮಾತ್ರೆ | ಐದು ಮಾತ್ರೆ |
|---|---|---|
| – ∪<br>ಕಾವ್ಯ | – ∪ ∪<br>ಭೀಷಣ | – – ∪<br>ಮಾತಾರ |

- ಕಾವ್ಯಭಾಗದ ಯಾವುದಾದರೂ ಒಂದು ಪದ್ಯವನ್ನು ಆಯ್ದುಕೊಂಡು ಪ್ರಸ್ತಾರ ಹಾಕಿ ಗಣವಿಭಜನೆ ಮಾಡಿ ಛಂದಸ್ಸಿನ ಲಕ್ಷಣವನ್ನು ಬರೆಯಿರಿ.

- ಕೆಳಗಿನ ಪದಗಳನ್ನು ಬಿಂಗಡಿಸಿ ಬರೆಯಿರಿ.

ಸಂವಾದಿಸುವಡನ್ವಯದ, ಪಡೆದೀಯ್ಯೆದು, ಕದನವಿತ್ತಂಡಕ್ಕೆ, ಮಂತ್ರದೊಳಿಬ್ಬರುದಿಸಿದರು, ಜನಪರೋಲೈಸುವರು, ನೀನೋಲಗದೊಳೊಪ್ಪುವ, ಶೌರಿಯುದಲಿದಿರಿಲ್ಲ, ಕೌರವಂಗವನಿಯಲಿ, ಶಿರವನರಿದೊಪ್ಪಿಸುವೆನೆಂಬೀ, ಮಾರಿಗೌತಣವಾಯ್ತು



Downloaded from https:// www.studiestoday.com

Downloaded from https:// www.studiestoday.com

# ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ

ಜನ್ನ

'ಯಾರಿಗೆ ಜೀವ ಕೊಡಲು ಸಾಧ್ಯವಿಲ್ಲವೋ, ಅಂಥವರಿಗೆ ಜೀವ ತೆಗೆಯುವ ಹಕ್ಕು ಇಲ್ಲ'. ಗಾಂಧೀಜಿಯವರ ಈ ಮಾತಿನಂತೆ, ಜಗತ್ತಿನಲ್ಲಿ ಸಕಲ ಜೀವರಾಶಿಗಳಿಗೂ ಬದುಕುವ ಹಕ್ಕು ಇದೆ. ಇಂದು ಎಲ್ಲಾ ಕಡೆ ಹಿಂಸೆ ತಾಂಡವವಾಡುತ್ತಿರುವುದರಿಂದ ಅಹಿಂಸೆಯ ಮಹತ್ವವನ್ನು ತಿಳಿಯಪಡಿಸುವುದು ಅನಿವಾರ್ಯವಾಗಿದೆ. ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಹೆದರದೆ ಅದನ್ನು ಧೈರ್ಯದಿಂದ ಎದುರಿಸುವ ಗುಣವನ್ನು ಬೆಳೆಸಬೇಕು. ಮಾನವೀಯ ಮೌಲ್ಯಗಳು ನೆಲೆನಿಲ್ಲಬೇಕು. ಅವುಗಳನ್ನು ಜೀವನದಲ್ಲಿ ಅಳವಡಿಸಿ ಎಂಬ ಆಶಯ ಈ ಕಾವ್ಯಭಾಗದಿಂದ ಸೂಚಿತವಾಗುತ್ತದೆ.

ಶೀರ್ಷಾಭರಣಂ ಧರೆಗು
ತ್ಕರ್ಷ ವಿಳಾಸನದ ಭೂಮಿ ಸಕಳ ಜನಕ್ಕಂ
ಹರ್ಷಮನೀವುದು ಭಾರತ
ವರ್ಷದಯೋಧ್ಯಾ ಸುವಿಷಯದೊಳ್ ರಾಜಪುರಂ

ಅದು ಪಿರಿಯ ಸಿರಿಯ ಬಾಟ್ಬೊ
ಲದು ಚಾಗದ ಭೋಗದಾಗರಂ ಸಕಲಸುಖ
ಕ್ಕದು ಜನ್ಮಭೂಮಿಯೆನಿಸಿದು
ದದನಾಳ್ವಂ ಮಾರಿದತ್ತನೆಂಬ ನೃಪಾಲಂ

ಆ ಪುರದ ತೆಂಕವಂಕದೊ
ಳಾವೊತ್ತುಮನೇಕ ಜೀವಹತಿ ತನಗೆ ಸುಖೋ
ದ್ದೀಪನಮೆನಿಸುವ ಪಾಪಕ
ಳಾಪಂಡಿತೆ ಚಂಡಮಾರಿ ದೇವತೆಯಿರ್ಪಳ್





Downloaded from https:// www.studiestoday.com

Downloaded from https:// www.studiestoday.com

ತನಗರಸುವೆರಸುಪುರಜನ
ಮನಿತುಮಿಷಂ ಚೈತ್ರಮೆಂಬ ತಿಂಗಳೊಳಖಿಳಾ
ರ್ಚನೆವೆರೆಸು ಜಾತ್ರೆ ನೆರೆಯದೊ
ಡನಿತುಮನೊರ್ಮೊದಲೆ ವಿಳಯದೊಳ್ ನೆರೆಯಿಸುವಳ್

ಅಂತು ದೊರೆವೆತ್ತು ಬಂದ ಬ
ಸಂತದೊಳಾ ಮಾರಿದತ್ತನುಂ ಪುರಜನಮುಂ
ತಂತಮಗೆ ಚಂಡಮಾರಿಗೆ
ಸಂತಸಮಂ ಮಾಡಲೆಂದು ಜಾತ್ರೆಗೆ ನೆರೆದರ್

ನಿಂದು ನರಪತಿ ತಳಾಱಿಂ
ಗೆಂದಂ ನೀಂ ಬರಿಸು ಮನುಜಯುಗಮಂ ಮುನ್ನಂ
ಕೊಂದರ್ಚಿಸುವೆಂ ಪೂಜೆಯೊ
ಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್

ಮುನಿಸಮುದಾಯಸಮೇತಂ
ವಿನೇಯಜನ ವನಜವನ ದಿವಾಕರನಂತಾ
ಮುನಿಪನುಪವಾಸಮಂ ಪ
ರ್ವ ನಿಮಿತ್ತಂ ಕಳೆದು ಬೞಿಕ ಬಾಲಕಯುಗಮಂ

ಚರಿಗೆಗೆ ಬೇೞ್ಕೊಡೆ ಗುರುಗಳ
ಚರಣಕ್ಕಾ ಯುಗಳಮೆಱಗಿ ಪೊಱಮಟ್ಟಾಗಳ್
ತರುಣ ವನಹರಿಣಯುಗಮಂ
ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ

ಅಭಯರುಚಿಯಭಯಮತಿಯೆಂ
ಬುಭಯಮನಾ ಪಾಪಕರ್ಮನುಯ್ವೆಡೆಯೊಳ್ ಮ
ತ್ತಭಯರುಚಿ ತಂಗೆಗೆಂದಪ
ನಭೀತೆಯಾಗೆಲಗೆತಾಯೆ ಮರಣದ ದೆಸೆಯೊಳ್

ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇೞ್ಕೋಡೆರಡೊಳವೇ



Downloaded from https:// www.studiestoday.com

ಅಣ್ಣನ ಮಾತಂ ಮನದೊಳ್
ತಿಣ್ಣಂ ತಳೆದೆಂದಳನುಜೆ ಮಾಡಿದುದಂ ನಾ
ವುಣ್ಣದೆ ಪೋಕುಮೆ ಭಯಮೇ
ಕಣ್ಣ ಭವಪ್ರಕೃತಿ ವಿಕೃತಿ ನಾವಱಿಯದುದೇ

ಎನಿತೊಳವಪಾಯಕೋಟಿಗ
ಳನಿತರ್ಕಂ ಗೇಹಮಲ್ತೆ ದೇಹಮಿದಂ ನೆ
ಟ್ಟನೆ ಪೊತ್ತು ಸುಖಮನಱಿಸುವ
ಮನುಜಂ ಮೊರಡಿಯೊಳೆ ಮಾದುಪೞಿಮನಱಿಸದಿರಂ

ಇಂತಿಂತೊರ್ವರನೊರ್ವರ್
ಸಂತೈಸುತ್ತುಂ ನೃಪೇಂದ್ರತನುಜಾತರ್ ನಿ
ಶ್ಚಿಂತಂ ಪೊಕ್ಕರ್ ಪಸಿದ ಕೃ
ತಾಂತನ ಬಾಣಸುವೊಲಿರ್ದ ಮಾರಿಯ ಮನೆಯಂ

ಭೈರವನ ಜವನ ಮಾರಿಯ
ಮೂರಿಯವೊಲ್ ನಿಂದ ಮಾರಿದತ್ತಂ ಲಲಿತಾ
ಕಾರರ ಧೀರರ ಬಂದ ಕು
ಮಾರರ ರೂಪಿಂಗೆ ಠಕ್ಕುಗೊಂಡಂತಿರ್ದಂ

ಅರಸನ ಕೆಲಬಲದವರ್ಗಳ್
ಪರಸಿರೆ ಪರಸಿರೆ ನೃಪೇಂದ್ರನಂ ನೀವೆನೆ ಮಂ
ದರಧೀರನಭಯರುಚಿ ನೃಪ
ವರ ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ

ಎಂದು ಪರಸಿದೊಡೆ ಪೊಯ್ಯದೆ
ನಿಂದು ನೃಪಂ ಮನದೊಳೆಂದನೀ ದೇಗುಲಮಂ
ಬಂದು ಪುಗಲೊಡನೆ ಜೀವಂ
ನಿಂದಱಿಯದು ಮುನ್ನಮಿನ್ನರಂ ಕಂಡಱಿಯೆಂ

ಕಿೞ್ತು ಕರವಾಳ್ಗಮೆನಗಂ
ಮಿೞ್ತುವಿನಂತಿರ್ದ ಮಾರಿಗಂ ಬೆದಱದೆ ನಿಂ
ದೞ್ತಿಯನೆ ನುಡಿದರಿವರ ನೆ
ಗೞ್ತಿಕರಂ ಪಿರಿದು ಧೀರರಕಟ ಕುಮಾರರ್


Downloaded from https:// www.studiestoday.com

Downloaded from https:// www.studiestoday.com

## ಜನ್ನ

ಚಂಪೂ ಕವಿಗಳಲ್ಲಿ ಜನ್ನನೂ ಒಬ್ಬ ಪ್ರಮುಖ ಕವಿ. ಈತನ ತಂದೆ ಶಂಕರ, ತಾಯಿ ಗಂಗೆ. ಹೊಯ್ಸಳ ವೀರ ಬಲ್ಲಾಳನ ಆಸ್ಥಾನ ಕವಿಯಾದ ಈತ 'ಕವಿ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದನು. 'ಯಶೋಧರ ಚರಿತೆ' ಮತ್ತು 'ಅನಂತನಾಥ ಪುರಾಣ' ಈತನ ಉಪಲಬ್ಧ ಕೃತಿಗಳು. ಪ್ರಸ್ತುತ ಕಾವ್ಯಭಾಗವನ್ನು 'ಯಶೋಧರ ಚರಿತೆ' ಯಿಂದ ಆಯ್ದುಕೊಳ್ಳಲಾಗಿದೆ. ಜೈನ ಧರ್ಮದ ತಿರುಳಾದ ಜೀವದಯೆಯ ಪ್ರತಿಪಾದನೆ ಈ ಕಾವ್ಯದ ವಸ್ತು.

ಅಯೋಧ್ಯಾಪುರದ ರಾಜಧಾನಿ ರಾಜಪುರ. ಅಲ್ಲಿನ ರಾಜ ಮಾರಿದತ್ತ. ಆ ಪುರದ ದೇವತೆ ಪಾಪಕಳಾಪಂಡಿತೆಯಾದ ಚಂಡಮಾರಿ. ಪ್ರತಿ ಚೈತ್ರ, ಆಶ್ವಯುಜಗಳಲ್ಲಿ ಜಾತ್ರೆ ನಡೆದು ಈ ದೇವತೆಗೆ ಪಶುಬಲಿಯಲ್ಲದೆ ಮನುಷ್ಯಯುಗಳದ ಬಲಿಕೊಡುವುದು ಅಲ್ಲಿನ ಪದ್ಧತಿ. ಆ ವರ್ಷ ನರಬಲಿ ಕೊಡುವುದಕ್ಕಾಗಿ ಜಾತ್ರೆ ಸೇರಿದ್ದಾರೆ. ಇಬ್ಬರು ಮಕ್ಕಳನ್ನು ಕರೆತರುವಂತೆ ತನ್ನ ತಳಾರನಾದ ಚಂಡಕರ್ಮನಿಗೆ ಮಾರಿದತ್ತನು ಸೂಚಿಸುತ್ತಾನೆ.

### ಶಬ್ದಾರ್ಥ ವಿವರಣೆ

ವಿಷಯ – ದೇಶ, ಆಗರ – ಆಶ್ರಯ, ಇಷಂ – ಆಶ್ವಯುಜ, ವಿಳಯ – ಪ್ರಳಯ; ಅಳವು – ಸಾಮರ್ಥ್ಯ, ವಿನೇಯಜನ – ಜೈನಭಕ್ತರು, ಚರಿಗೆ – ಭಿಕ್ಷೆ, ತರಕ್ಷು – ಹುಲಿ, ನಿಯತಿ – ವಿಧಿ, ಮುಟ್ಟು – ಆಪತ್ತು, ಪರೀಷಹ – ವಿಘ್ನ, ತಿಣ್ಣಂ – ಚೆನ್ನಾಗಿ; ತೀಕ್ಷ್ಣ, ಭವ – ಹುಟ್ಟು, ಮೊರಡಿ – ಕಲ್ಲುಗುಡ್ಡ, ಗೇಹ – ಮನೆ, ಭೈರವ – ಶಿವ, ಮೂರಿ – ಕೋಣ, ಠಕ್ಕುಗೊಳ್ಳು – ಆಶ್ಚರ್ಯಗೊಳ್ಳು, ಕಿೞ್ತು – ಕಿತ್ತ; ಒರೆಯಿಂದ ಕಿತ್ತ, ಮಿೞ್ತು – ಮೃತ್ಯು, ಅೞ್ತಿ – ಪ್ರೀತಿ.

### ಸಂಕ್ಷಿಪ್ತವಾಗಿ ಬರೆಯಿರಿ

- ಕೆಳಗೆ ಕೊಟ್ಟಿರುವ ಪದ್ಯದ ಆಶಯವನ್ನು ಬರೆಯಿರಿ.

  ಎನಿತೊಳವಪಾಯಕೋಟಿಗ  
  ಳನಿತರ್ಕಂ ಗೇಹಮಲ್ತೆ ದೇಹಮಿದಂ ನೆ  
  ಟ್ಟನೆ ಪೊತ್ತು ಸುಖಮನಱಸುವ  
  ಮನುಜಂ ಮೊರಡಿಯೊಳೆ ಮಾದುಪೞಿಮನಱಸದಿರಂ

- ಮಾರಿದತ್ತನು 'ಮುನ್ನಮಿನ್ನರಂ ಕಂಡರಿಯೆನ್' ಎಂದು ಭಾವುಕನಾಗಿ ನುಡಿಯಲು ಕಾರಣವೇನು?



Downloaded from https:// www.studiestoday.com

Downloaded from https:// www.studiestoday.com

## ಚಟುವಟಿಕೆಗಳು

- ಕಾವ್ಯಭಾಗವನ್ನು ಕಥಾರೂಪಕ್ಕೆ ಪರಿವರ್ತಿಸಿ ಬರೆಯಿರಿ.
- ಅಭಯರುಚಿ – ಅಭಯಮತಿ ಪರಸ್ಪರ ಸಂತೈಸಿಕೊಳ್ಳುವ ಭಾಗದ ಮಾತುಕತೆಯನ್ನು ಸಂಗ್ರಹವಾಗಿ ಬರೆಯಿರಿ.
- 'ವಿನೇಯಜನ ವನಜವನ ದಿವಾಕರನ್' – ಈ ಮಾತಿನ ಕಾವ್ಯ ಸೌಂದರ್ಯವನ್ನು ಗುರುತಿಸಿ ಬರೆದು ಮಂಡಿಸಿರಿ.

## ಭಾಷಾಭ್ಯಾಸ

- ಕೆಳಗಿನ ಕಾವ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿರಿ.

  ಆ ಪುರದ ತೆಂಕವಂಕದೊ  
  ಳಾವೊತ್ತುಮನೇಕ ಜೀವಹತಿ ತನಗೆ ಸುಖೋ  
  ದ್ದೀಪನಮೆನಿಸುವ ಪಾಪಕ  
  ಳಾಪಂಡಿತೆ ಚಂಡಮಾರಿ ದೇವತೆಯಿರ್ಪಳ್

- ಱ > ರ (ಶಕಟರೇಫ > ರೇಪವಾಗಿರುವುದು) ೞ > ಳ (ರಳ > ಕುಳವಾಗಿರುವುದು) ಇದು ಕನ್ನಡದಲ್ಲಿ ಐತಿಹಾಸಿಕವಾಗಿ ನಡೆದ ಒಂದು ಪ್ರಮುಖ ಧ್ವನಿವ್ಯತ್ಯಾಸ. ಈ (ಱ, ೞ) ಧ್ವನಿಗಳು ಉಚ್ಚರಣೆಯಲ್ಲಿ ಅಸ್ತಿತ್ವವನ್ನು ಕಳಕೊಂಡು ರ, ಳ ಗಳೊಂದಿಗೆ ಸೇರ್ಪಡೆಗೊಂಡಿವೆ.

  ಉದಾ: ಬೞಿಕ > ಬಳಿಕ  
  ಬೇಱೆ > ಬೇರೆ

  ಱ, ೞ ಕಾರವಿರುವ ಪದಗಳನ್ನು ಪಾಠಭಾಗಗಳಿಂದ ಸಂಗ್ರಹಿಸಿ ಪರಿವರ್ತಿಸಿ ಬರೆಯಿರಿ.

- ಈ ಕೆಳಗಿನ ಪದಗಳನ್ನು ವಿಂಗಡಿಸಿ ಬರೆಯಿರಿ.
  - ಜನ್ಮಭೂಮಿಯೆನಿಸಿದುದದನಾಳ್ವಂ
  - ತೆಂಕವೆಂಕದೊಳಾವೊತ್ತುಮನೇಕ
  - ನೆರೆಯದೊಡನಿತುಮನೊರ್ಮೊದಲೆ
  - ಅಭಿರುಚಿಅಭಯಮತಿಯೆಂಬುಭಯಮನ್
  - ತಂಗೆಗೆಂದಪನನಭೀತೆಯಾಗೆಲಗೆ
  - ಎನಿತೊಳವಪಾಯಕೋಟಿಗಳನಿತರ್ಕಂ



Downloaded from https:// www.studiestoday.com

Downloaded from https:// www.studiestoday.com

# ವಚನಗಳು

ಬದುಕು ಅಸ್ಥಿರವೆಂಬುದು ಗೊತ್ತಿದ್ದೂ ಕ್ಷಣಿಕ ಸುಖದ ಆಸೆಗಾಗಿ, ಮನುಷ್ಯ ಸಲ್ಲದ ರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಅಂತಹವನು ದುರ್ಮಾರ್ಗದಲ್ಲಿ ಸಾಗುತ್ತಾನೆ. ಲೋಕವನ್ನು ತಿದ್ದುವ ಮೊದಲು ಪ್ರತಿಯೊಬ್ಬ ವ್ಯಕ್ತಿಯೂ ತಾನು ಸರಿಯಾಗಿರುವುದು ಮುಖ್ಯ. ಬಾಹ್ಯ ಆಚರಣೆಗೆ ಪ್ರಾಧಾನ್ಯವೀಯದೆ ಅಂತರಂಗ ಶುದ್ಧಿಗೆ ಮಹತ್ವ ಕೊಡಬೇಕು. ಹಾಗಾದರೆ ಸಮಾಜ ಜೀವನವು ಸುಖಮಯವಾಗುವುದು. ಈ ಹಿನ್ನೆಲೆಯಲ್ಲಿ ವಚನಗಳನ್ನು ಓದಬೇಕು.

## ಮನೆಯೊಳಗೆ ಮನೆಯೊಡೆಯನಿಲ್ಲಾ

*ಬಸವಣ್ಣ*

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ,
ಕೂಡಲ ಸಂಗಮ ದೇವ!



ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ?
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು,
ಮನದ ಕೋಪ ತನ್ನ ಅರಿವಿನ ಕೇಡು,
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರಮನೆಯ ಸುಡದು ಕೂಡಲಸಂಗಮ ದೇವ!

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರಮನೆಯ ದುಃಖಕ್ಕೆ ಅಳುವವರ
ಮೆಚ್ಚ ಕೂಡಲ ಸಂಗಮದೇವ!



Downloaded from https:// www.studiestoday.com

Downloaded from https:// www.studiestoday.com

## ಬಸವಣ್ಣ

ಬಸವಣ್ಣನವರು (ಕ್ರಿ.ಶ ೧೧೬೦) ಹನ್ನೆರಡನೇ ಶತಮಾನದ ಪ್ರಸಿದ್ಧ ವಚನಕಾರರಲ್ಲಿ ಒಬ್ಬರು. ಬಿಜಾಪುರ ಜಿಲ್ಲೆಯ ಬಾಗೆವಾಡಿಯಲ್ಲಿ ಮಾದರಸ ಮತ್ತು ಮಾದಲಾಂಬಿಕೆಯರ ಮಗನಾಗಿ ಜನಿಸಿದರು. ಬಿಜ್ಜಳನ ಆಸ್ಥಾನದಲ್ಲಿ ಕರಣಿಕರಾಗಿದ್ದ ಅವರಿಗೆ 'ಕಾಯಕವೇ ಕೈಲಾಸ' ಎಂಬುದು ಮೂಲ ಮಂತ್ರವಾಗಿತ್ತು. 'ಕೂಡಲ ಸಂಗಮದೇವ' ಎಂಬುದು ಅವರ ಅಂಕಿತ. ಭಕ್ತಿ ಭಂಡಾರಿ ಎಂದೇ ಪ್ರಸಿದ್ಧರಾದ ಅವರು ಜಡ ಸಂಪ್ರದಾಯನಿಷ್ಠ ಸಮಾಜದಲ್ಲಿ ನೆಲೆಯೂರಿರುವ ವರ್ಣಭೇದ, ಲಿಂಗ, ಜಾತಿ ಆಧಾರಿತ ಅಸಮಾನತೆಗಳನ್ನು ವಿರೋಧಿಸಿ ಅವುಗಳನ್ನು ತೊಡೆದು ಹಾಕಿದರು. ಇವರ ವಚನಗಳಲ್ಲಿ ಭಕ್ತನ ಅಂತರಂಗದ ಶೋಧನೆ, ಮನದಾಳದ ಚಂಚಲತೆ, ಜಂಗಮಭಕ್ತಿ, ಸಮಾಜ ವಿಮರ್ಶೆ, ಕಾಯಕನಿಷ್ಠೆ, ಇವುಗಳನ್ನು ಕಾಣಬಹುದು. ಒಟ್ಟಿನಲ್ಲಿ ಇವರು ೧೨ನೇ ಶತಮಾನದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ರಾಂತಿಯ ನೇತಾರರಾಗಿ ವಚನ ಸಾಹಿತ್ಯದ ಬೆಳವಣಿಗೆಗೆ ಕಾರಣರಾದರು.

### ಶಬ್ದಾರ್ಥ ವಿವರಣೆ

ರಜ – ಧೂಳು; ಆಗೇನು ಚೇಗೇನು – ಆಯವೇನು ವ್ಯಯವೇನು

ಕಿಚ್ಚು – ಬೆಂಕಿ; ಮೆಚ್ಚ – ಮೆಚ್ಚಲಾರ

### ಸಂಕ್ಷಿಪ್ತವಾಗಿ ಬರೆಯಿರಿ

- 'ಮನೆಯೊಳಗೆ ಮನೆಯೊಡೆಯನಿಲ್ಲಾ' – ಎಂಬುದನ್ನು ಬಸವಣ್ಣನವರು ಹೇಗೆ ಸಮರ್ಥಿಸಿದ್ದಾರೆ?
- ಕೋಪವು ಉಂಟುಮಾಡಬಲ್ಲ ದುಷ್ಪರಿಣಾಮಗಳನ್ನು ಬಸವಣ್ಣನವರು ಹೇಗೆ ನಿರೂಪಿಸಿದ್ದಾರೆ?

### ಚಟುವಟಿಕೆಗಳು

- 'ಮನೆ–ಮನಸ್ಸು' ಇವುಗಳ ಕುರಿತಾಗಿರುವ ಬಸವಣ್ಣನವರ ಚಿಂತನೆಗಳನ್ನು ವಚನಗಳ ಆಧಾರದಲ್ಲಿ ಸಂಗ್ರಹಿಸಿ ಟಿಪ್ಪಣಿ ಬರೆಯಿರಿ.
- 'ಕೋಪದಿಂದ ವ್ಯಕ್ತಿ ತನ್ನ ಹಾಗೂ ಇತರರ ನಾಶಕ್ಕೆ ಕಾರಣನಾಗುತ್ತಾನೆ'– ವ್ಯಕ್ತಿತ್ವ ವಿಕಾಸ ಶಿಬಿರದಲ್ಲಿ ಈ ಕುರಿತು ಭಾಷಣ ಮಾಡಬೇಕಾಗಿದೆ. ನೀವು ಓದಿದ ವಚನವನ್ನು ಹಿನ್ನೆಲೆಯಾಗಿರಿಸಿಕೊಂಡು ಒಂದು ಲಿಖಿತ ಭಾಷಣ ತಯಾರಿಸಿರಿ.
- ಬಸವಣ್ಣನವರ ಯಾವುದಾದರೂ ಎರಡು ವಚನಗಳನ್ನು ಎತ್ತಿಕೊಂಡು ವಸ್ತು, ಭಾಷೆ, ಶೈಲಿ ಇವುಗಳ ಕುರಿತು ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ.
- ಪಾಠಭಾಗದಲ್ಲಿ ಕೊಡಲಾದ ವಚನಗಳ ಕೊನೆಯ ಎರಡು ಸಾಲುಗಳನ್ನು ಗಮನಿಸಿರಿ. ವಚನದ ಸ್ವರೂಪದಲ್ಲಿ ಅವುಗಳ ಸ್ಥಾನವನ್ನು ಕುರಿತು ಚರ್ಚಿಸಿರಿ.



Downloaded from https:// www.studiestoday.com

Downloaded from https:// www.studiestoday.com

# ಈಸಕ್ಕಿಯಾಸೆ ನಿಮಗೇಕೆ?

**ಆಯ್ದಕ್ಕಿ ಲಕ್ಕಮ್ಮ**

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯಾ

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದೆ ನುಡಿ ಅರಿವಿಂಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯಪ್ರಿಯ ಅಮಲೇಶ್ವರಲಿಂಗವ ಮುಟ್ಟದ ಭಕ್ತಿ

ಮನಶುದ್ಧವಿಲ್ಲವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು.
ಮಾರಯ್ಯಪ್ರಿಯ ಅಮಲೇಶ್ವರಲಿಂಗದ ಸೇವೆಯುಳ್ಳನ್ನಕ್ಕರ

## ಆಯ್ದಕ್ಕಿ ಲಕ್ಕಮ್ಮ

ಶಿವಶರಣರ ವಚನ ಕ್ರಾಂತಿಯ ಸಂದರ್ಭದಲ್ಲಿ ಅಕ್ಕಮಹಾದೇವಿ ಮಾತ್ರವಲ್ಲದೆ ಅನೇಕ ಶಿವಶರಣೆಯರು ವೈಚಾರಿಕವಾಗಿ ಕ್ರಿಯಾಶೀಲರಾದುದು ಕನ್ನಡ ವಚನಸಾಹಿತ್ಯದ ವಿಶೇಷ. ಶತಶತಮಾನಗಳಿಂದ ಮೂಕರಾಗಿದ್ದ ಸ್ತ್ರೀಯರು ಇದೀಗ ಸೈದ್ಧಾಂತಿಕ ಹಿನ್ನೆಲೆಯಿಂದ ವಚನ ರಚನೆಗೆ ತೊಡಗಿದರು. ಇಂಥ ಒಬ್ಬ ಶರಣೆ ಆಯ್ದಕ್ಕಿ ಲಕ್ಕಮ್ಮ. ಮಾರಯ್ಯಪ್ರಿಯ ಅಮಲೇಶ್ವರಲಿಂಗ ಈಕೆಯ ವಚನಗಳ ಅಂಕಿತ.

ರಾಯಚೂರ ಜಿಲ್ಲೆಯ ಅಮರೇಶ್ವರದ ಲಕ್ಕಮ್ಮನ ಪತಿ ಆಯ್ದಕ್ಕಿ ಮಾರಯ್ಯ. 'ಪತಿ–ಪತ್ನಿಯರೊಂದಾದ ಭಕ್ತಿ ಶಿವಂಗೆ ಹಿತವಪ್ಪುದು' ಎನ್ನುವ ಆದರ್ಶ ಪಾಲಿಸಿದ ದಂಪತಿಗಳಿವರು. ನೆಲದಲ್ಲಿ ಬಿದ್ದಿರುವ ಕಾಳುಗಳನ್ನು ಆಯ್ದು ತರುವ ಕಾಯಕವನ್ನು ಇವರು ಗೌರವ–ಶ್ರದ್ಧೆಯಿಂದ ಅನುಸರಿಸಿದರು.



Downloaded from https:// www.studiestoday.com

Downloaded from https:// www.studiestoday.com

(ಕಾಯಕ ತತ್ವದಿಂದ ರೂಪಿತವಾದ ಸಂಪಾದನೆ, ದೃಢವಿಲ್ಲದ ಭಕ್ತಿಯ ನಿಷ್ಪ್ರಯೋಜಕತೆ, ಶಿವಸೇವೆಯಲ್ಲಿ ತಲ್ಲೀನರಾದವರಿಗೆ ಬಡತನವಿಲ್ಲ, ಶರಣರ ಭಕ್ತಿ ಶ್ರೇಷ್ಠ ಎಂಬ ನಿಲುವನ್ನು ಈ ವಚನಗಳಲ್ಲಿ ಕಾಣಬಹುದು.)

## ಶಬ್ದಾರ್ಥ ವಿವರಣೆ

ಅಜಾತ – ಹುಟ್ಟು ಇಲ್ಲದ; ಈಸಕ್ಕಿ – (ಈಸು + ಅಕ್ಕಿ) ಇಷ್ಟೊಂದು ಅಕ್ಕಿ; ದ್ರವ್ಯ – ಸಂಪತ್ತು; ಒಪ್ಪನು – ಒಪ್ಪಲಾರನು.

## ಸಂಕ್ಷಿಪ್ತವಾಗಿ ಬರೆಯಿರಿ

- 'ಶರಣರ ಕಾಯಕ ತತ್ವದಲ್ಲಿ ಆಸೆಗೆ ಸ್ಥಾನವಿಲ್ಲ' – ಈ ಆಶಯವನ್ನು ಆಯ್ದಕ್ಕಿ ಲಕ್ಕಮ್ಮ ಹೇಗೆ ಪ್ರತಿಪಾದಿಸಿದ್ದಾಳೆ? ವಿವರಿಸಿರಿ.
- 'ದೃಢವಿಲ್ಲದ ಭಕ್ತಿ' ಮತ್ತು 'ಕಾಯಕ ನಿಷ್ಠೆ' ಇವುಗಳ ಕುರಿತು ಆಯ್ದಕ್ಕಿ ಲಕ್ಕಮ್ಮನ ವಿಚಾರಧಾರೆಗಳನ್ನು ಪ್ರಸ್ತುತಪಡಿಸಿರಿ.

## ಚಟುವಟಿಕೆಗಳು

- ಅಗತ್ಯಕ್ಕಿಂತ ಹೆಚ್ಚು ವಸ್ತುಗಳನ್ನು ಕೊಂಡುಕೊಳ್ಳುವ ಹಾಗೂ ಕೂಡಿಡುವ ಇಂದಿನ ಕೊಳ್ಳುಬಾಕ ಮನೋಧರ್ಮವನ್ನು ಆಯ್ದಕ್ಕಿ ಲಕ್ಕಮ್ಮನ ವಚನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.
- ವಚನಗಳ ವೈಶಿಷ್ಟ್ಯವನ್ನು ತಿಳಿಸುವ ಲೇಖನವೊಂದನ್ನು ಬರೆದು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿರಿ.
- ವೆಬ್‌ಸೈಟ್ ಹಾಗೂ ಇನ್ನಿತರ ಮೂಲಗಳಿಂದ ಶರಣರ ವಚನಗಳನ್ನು ಸಂಗ್ರಹಿಸಿ 'ವಚನಗಳಲ್ಲಿ ಸಮಾಜ ವಿಮರ್ಶೆ' ಎಂಬ ವಿಷಯದ ಮೇಲೆ ಕಿರು ಪ್ರಬಂಧವೊಂದನ್ನು ಬರೆಯಿರಿ.

## ಭಾಷಾಭ್ಯಾಸ

- 'ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ' – ಇಲ್ಲಿರುವ ಅಲಂಕಾರವನ್ನು ಗುರುತಿಸಿರಿ.
- ರೋಷ, ಕುಂಭ, ಚಿತ್ತ – ಈ ಪದಗಳಿಗೆ ಸಂವಾದಿಯಾಗಿ ಬಳಸಬಹುದಾದ ಪದಗಳನ್ನು ಬರೆಯಿರಿ.




Downloaded from https:// www.studiestoday.com

Downloaded from https:// www.studiestoday.com

# ವಟವೃಕ್ಷಮೇ ಸಾಕ್ಷಿ

*ದುರ್ಗಸಿಂಹ*

ವಿಶ್ವಾಸವೇ ನಮ್ಮ ಸಮಾಜದ ಅಡಿಗಲ್ಲು. ವಿಶ್ವಾಸದ್ರೋಹದಿಂದ ವ್ಯಕ್ತಿ ತನ್ನ ಪತನದೊಂದಿಗೆ ಇತರರ ನಾಶಕ್ಕೂ ಕಾರಣವಾಗುತ್ತಾನೆ. 'ಧರ್ಮೋ ಜಯತಿ ನಾ ಧರ್ಮಃ' – ಇದು ಸಾರ್ವಕಾಲಿಕ ಸತ್ಯ. ಧನದ ಲೋಭಕ್ಕೆ ಒಳಗಾಗಿ, ಆಪ್ತಮಿತ್ರನನ್ನು ವಂಚಿಸಿ, ಸ್ನೇಹಿತನನ್ನು, ತಂದೆಯನ್ನು ಕಳೆದುಕೊಂಡ ದುಷ್ಟಬುದ್ಧಿಯ ವೃತ್ತಾಂತವು ಇಲ್ಲಿ ವರ್ಣಿತವಾಗಿದೆ.



ಮಧುರೆಯೆಂಬುದು ನಗರಮಂತಾನಗರದೊಳಗೆ ಧರ್ಮಬುದ್ಧಿಯುಂ ದುಷ್ಟಬುದ್ಧಿಯುಮೆಂಬರಿರ್ವರ್ ವಣಿಕ್ಪುತ್ರರ್ ಪದುವಿನೊಳ್ ಪರದುವೋಗಿ ಪಿರಿದಪ್ಪ ಪೊನ್ನ ಪಡೆದು ಮಗುೞ್ದು ಬಂದು ನಿಜಜನ್ಮಭೂಮಿಯಪ್ಪ ಮಧುರಾಪುರದ ಬಹಿರುದ್ಯಾನವನದೊಳಗೆ ಬೀಡಂ ಬಿಟ್ಟರ್ಧರಾತ್ರಿಯೊಳ್ ಧರ್ಮಬುದ್ಧಿ ದುರ್ಬುದ್ಧಿಯಪ್ಪ ದುಷ್ಟಬುದ್ಧಿಯಂ ಕರೆದು, ಪೊನ್ನಂ ಪಚ್ಚುಕೊಳ್ವಮೆನೆ; ದುಷ್ಟಬುದ್ಧಿ ಪಾಪಬುದ್ಧಿಯಾಗಲ್ಬಗೆದಿಂತೆಂದಂ. ನಾವೀ ಪೊನ್ನಂ ಪಚ್ಚುಕೊಂಡು ಮನೆಯೊಳೆ ಸ್ವೇಚ್ಛೆಯಿಂದಿರ್ಪವರಲ್ಲಂ, ಮತ್ತಂ ಪರದು ವೋಗಲ್ವೇೞ್ಕುಮದು ಕಾರಣದಿಂ ನಿನಗಮೆನಗಂ ಬೀಯಕ್ಕೆ ತಕ್ಕನಿತು ಪೊನ್ನಂ ಕೊಂಡುಮಿಕ್ಕ ಪೊನ್ನನೆಲ್ಲಮನಿಲ್ಲಿಯೆ ಮಡಂಗುವಮೆನೆ.

ಧರ್ಮಬುದ್ಧಿಯಾಪಾಪಕರ್ಮನಂ ತನ್ನ ಮನದನ್ನನೆಂದೆ ಬಗೆದುಮದರ್ಕೊಡಂಬಟ್ಟೊಂದು ಮಹಾವಟವಿಟಪಿಯ ಕೆಲದೊಳ್ ಪೊನ್ನಂ ಪೂೞ್ದು ಮಱುದಿವಸಮಿರ್ವರುಂ ಪೊೞಲಂ ಪೊಕ್ಕು ಸುಖಂಗಳನನುಭವಿಸುತಿರ್ದು ದುಷ್ಟಬುದ್ಧಿ ಧರ್ಮಬುದ್ಧಿಯಂ ವಂಚಿಸಿ ಪೋಗಿ ಪೊನ್ನನೆಲ್ಲಮಂ ಕೊಂಡು



Downloaded from https:// www.studiestoday.com

Downloaded from https:// www.studiestoday.com

ಕುೞಿಯಂ ಮುನ್ನಿನಂತೆ ಪೂೞ್ದು ಕೆಲವಾನು ದಿವಸಕ್ಕೆ ತಾನೆ ಧರ್ಮಬುದ್ಧಿಯಲ್ಲಿಗೆ ವಂದು– ಬೀಯಕ್ಕೆ ಪೊನ್ನಿಲ್ಲವಿನ್ನುಂ ಕಿಱಿದು ಪೊನ್ನಂ ತೆಗೆದುಕೊಳ್ವಂ ಬನ್ನಿಮೆಂದೊಡಂಗೊಂಡು ಪೋಗಿ ಪೂೞ್ದೆಡೆಯೊಳ್ ಪೊನ್ನಂ ಕಾಣದೆ ಇನ್ನುಸಿರದಿರ್ದೊಡೆ ಅನ್ಯತಂ ತನ್ನ ಮೇಲೆ ವರ್ಪುದೆಂದು ಪೊನ್ನನೆಲ್ಲಮಂ ನೀನೆ ಕೊಂಡೆಯೆಂಬುದುಂ.

ಅತಿ ಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ
ಮತಿಗೆಟ್ಟು "ತಸ್ಕರಸ್ಯಾ
ನೃತಂ ಬಲಂ" ಎನಿಪ ವಾಕ್ಯಮಂ ನೆನೆಯುತ್ತುಂ

ಅಂತು ದುಷ್ಟಬುದ್ಧಿ ಮುನ್ನಮೆ–ಹಾ! ಹಾ! ಕೆಟ್ಟೆನೆಂದು ಬಾಯಂ ಬಸಿಱಿಂ ಪೊಯ್ದುಕೊಂಡು ಪುಯ್ಲಿಟ್ಟು ಧರ್ಮಬುದ್ಧಿಯ ಮೇಲೆ ಕಳವನಿಟ್ಟು ಕಾಪಱಿದು ಕಾತರಿಸಿ ನುಡಿಯೆ; ಧರ್ಮಬುದ್ಧಿ ತಕ್ಕೂರ್ಮೆಗಿಡಲ್ನುಡಿದು ನೀಂಗೆಲೆ ಬಾಯಾರ್ದು ಪೋಗಲ್ವಡೆಯೆ ವಿಚಾರಗೆಯ್ವಮೆಂದು; ಧರ್ಮಾಧಿಕರಣರಲ್ಲಿಗೆ ಬಂದಿರ್ವರುಂ ತತ್ಪ್ರಪಂಚಮೆಲ್ಲಮಂ ಸವಿಸ್ತರಂ ನುಡಿದು ಕಡೆಯೊಳ್ ದುಷ್ಟಬುದ್ಧಿಯಿಂತೆಂದಂ:– ಪೊನ್ನನೆಲ್ಲಮನೀತನೆ ಕಳೆದು ಕೊಂಡುದರ್ಕೆ ಸಾಕ್ಷಿಯುಂಟೆನೆ; ಸಭಾಸದರ್ ಸಾಕ್ಷಿಯಂ ಪೇೞಿಮೆನೆ; ಪೊನ್ನಂ ಮಡಗುವಾಗಳೀತನುಮಾನುಮಲ್ಲದೆ ಮನುಷ್ಯರ್ ಪೆಱಱಿಲ್ಲ. ತತ್ಸನ್ನಿಧಾನಸ್ಥಿತಮಪ್ಪ ವಟವೃಕ್ಷಮೇ ಸಾಕ್ಷಿಯೆಂಬುದುಂ ಧರ್ಮಾಧಿಕರಣರ್ ವಿಸ್ಮಯಂಬಟ್ಟು ಈತನ ಮಾತು ಅಶ್ರುತಪೂರ್ವಮೀಚೋದ್ಯಮಂ ನೋಡುವಮೆಂದು ಧರ್ಮಬುದ್ಧಿಯಂ ಕರೆದು ನೀನೀಸಾಕ್ಷಿಯಂ ಕೈಕೊಳ್ವುದೆಂದೊಡಾತಂ ವೃಕ್ಷಂ ಸಾಕ್ಷಿಯೆಂದು ಮುನ್ನಂ ಪೇೞ್ದಿರುಂ ಕೇಳ್ದರುಮಿಲ್ಲಂ. ಮನುಷ್ಯರ ಸುಕೃತದುಷ್ಕೃತಂಗಳಂ ದೈವಂಗಳಱಿಗುಮದಱಿಂದೀ ಸಾಕ್ಷಿಯುಮುಚಿತಂ. ಮನುಷ್ಯಂ ಮೊದಲಾಗಿ ನುಡಿವುದರಿದೆಂದೊಡೆ ಮರನಂ ನುಡಿಸುವುದು ಪರಮ ಗಹನಮೀ ಸಾಕ್ಷಿಯಂ ಕೈಕೊಳ್ವುದೆನೆ–ಧರ್ಮಬುದ್ಧಿ ಕರಮೊಳ್ಳಿತ್ತು, ಕೈಕೊಂಡೆನೆನೆ; ಧರ್ಮಾಧಿಕರಣದವರಿಂದು ಪೊಳ್ತು ಪೋದುದು. ನಾಳೆ ಪೋಗಿ ಕೇಳ್ವಮೆನೆ; ತಮ್ಮ ತಮ್ಮ ಮನೆಗೆಲ್ಲರುಂ ಪೋದರ್.

ಅನ್ನೆಗಂ ದುಷ್ಟಬುದ್ಧಿಯುಂ ತನ್ನ ಮನೆಗೆ ಬಂದು ತಮ್ಮಯ್ಯನ ಕೈಯಂ ಪಿಡಿದು ಕಟ್ಟೇಕಾಂತಕ್ಕುಯ್ದು ತದ್ವೃತ್ತಾಂತಮೆಲ್ಲಮಂ ತಿಳಿಯೆ ಪೇೞ್ದು–ನಿಮ್ಮೊಂದು ವಚನ ಮಾತ್ರದಿಂ ನಮ್ಮ ಪರಿಗ್ರಹಮೆಲ್ಲಂ ಪಲವು ಕಾಲಂ ಪಸಿಯದುಂಡು ಬಾೞ್ವಂತರ್ಥಂ ಸಾರ್ದಪ್ಪುದು. ನೀವಾ ಮರದ ಪೊಟ್ಟಲೊಳಡಂಗಿರ್ದು, ಧರ್ಮಬುದ್ಧಿಯೆ ಪೊನ್ನಂ



Downloaded from https:// www.studiestoday.com

Downloaded from https:// www.studiestoday.com

ಕೊಂಡುಯ್ದನೆಂದು ನುಡಿಯಿಮೆಂದು ತನ್ನ ತಂದೆಯನೊಡಂಬಡಿಸುತಿರ್ಪಿನಮಾದಿತ್ಯನಪರ ಗಿರಿಯನೆಯ್ದುವುದುಂ ಅಂತು ಕವಿದ ಕೞ್ತಲೆಯೊಳ್ ದುಷ್ಟಬುದ್ಧಿ ತನ್ನ ತಂದೆಯಂ ಕೊಂದಲ್ಲದೆ ಮಾಣೆನೆಂದುಯ್ವಂತುಯ್ದು ಬಳಾರಿಯ ಮನೆಯಂ ಪಱಿಕೆಯ ಕುೞಿಯಂ ಪುಗಿಸುವಂತೆ ವಟವಿಟಪಿಕೋಟರಕುಟೀರಾಂತರಮಂ ಪುಗಿಸಿ ಬವರಮಂ ಗೆಲ್ದೆನೆಂದು ರಾಗಿಸಿ ಮನೆಗೆ ವಂದು ನಿದ್ರಾಸಕ್ತನಾದಂ.

ಆದಿತ್ಯೋದಯಮಾಗಲೊಡಂ ಧರ್ಮಬುದ್ಧಿ ದೇವಗುರುದ್ವಿಜಪೂಜೆಗಳಂ ಮಾಡುತ್ತುಂ ತಡೆಯೆ ದುಷ್ಟಬುದ್ಧಿ ಮುಖಮಂ ತೊಳೆಯದೆ ಬಂದು ಧರ್ಮಾಧಿಕರಣಕ್ಕಿಂತೆಂದು;– ಪ್ರತ್ಯರ್ಥಿ ಬಂದನಿಲ್ಲ, ಪಿರಿದು ಪೊೞ್ತುಪೋದುದು. ಎನಗೆ ಕರ್ತವ್ಯಮಾವುದೆಂದು ನುಡಿಯುತಿರ್ಪನ್ನೆಗಂ; ಧರ್ಮಬುದ್ಧಿಯ ಬರವಂ ಕಂಡಾಕ್ಷಣದೊಳ್ ಧರ್ಮಾಧಿಕರಣರ್ – ನಡೆಯಿಂ ನಿಮ್ಮಿರ್ವರ ಬವರಮಂ ತೀರ್ದುವಮೆಂದು ವಟವೃಕ್ಷದ ಸಮೀಪಕ್ಕೆವಂದಷ್ಟವಿಧಾರ್ಚನೆಯಿಂದರ್ಚಿಸಿ ತದನಂತರಮಾಯಿರ್ವರುಮಂ ನುಡಿಸಿ ಬೞಿಕ್ಕಾಮರನ ನಿಂತೆಂದರ್: ಸಾಕ್ಷಿಯಾಗಿ ತಪ್ಪಿನುಡಿವವರ್ಗೆ ಪಾಪಮೆ ಸಂಭವಿಸುವುದು. ನೀನಪ್ಪೊಡೆಯಕ್ಷಾದಿ ದಿವ್ಯದೇವತಾವಾಸಮುಂ ಸೇವ್ಯಮುಮಪ್ಪ ವೃಕ್ಷಮದುಕಾರಣದಿಂ ನಿನ್ನಂ ಸಾಕ್ಷಿಮಾಡಿ ಕೇಳ್ದಪೆವು. ನೀಂ ತಪ್ಪದೆ ನುಡಿಯೆಂದು ಧರ್ಮಾಧಿಕರಣರ್ ಧರ್ಮಶ್ರವಣಂಗೆಯ್ದುಸಿರದಿರ್ಪುದುಂ ಪೊೞಲೊಳಡಂಗಿರ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮಗತಿಯಂ ಬಿಟ್ಟು ಧರ್ಮಬುದ್ಧಿಯೆ ಧನಮಂ ತೆಗೆದುಕೊಂಡನೆಂದು ನುಡಿವುದುಂ ನೆರವಿಯುಂ ಧರ್ಮಾಧಿಕರಣಮುಂ ಚೋದ್ಯಂಬಟ್ಟಿರೆ ಧರ್ಮಬುದ್ಧಿ–

'ಧರ್ಮೋ ಜಯತಿ ನಾಧರ್ಮ ಇತ್ಯಮೋಘಕೃತಂ ವಚಃ' ಎಂಬೀ ವಾಕ್ಯಂ ತಪ್ಪಲಱಿಯದಪ್ಪುದಱಿಂದೆನಗಮಿದು ಚೋದ್ಯಮಿದು ದೈವಮಲ್ಲಕ್ಕುಮಂತಪ್ಪೊಡೆ ಸತ್ಯಮನೇಕೆ ನುಡಿಯದು? ಇದೇನಾನುಮೊಂದು ಕೃತ್ರಿಮ ಮಾಗಲೆವೇೞ್ಕುಮೆಂದಾಮರನಂ ಬಲವಂದು ನೋಡಿ ಪಿರಿದಪ್ಪ ಪೊೞಲುಮನಲ್ಲಿಯೆ ಮನುಷ್ಯ ಸಂಚಾರಮಾಗಿರ್ದುದುಮಂ ಕಂಡು ನಿಶ್ಚೈಸಿ ಧರ್ಮಬುದ್ಧಿ ಧರ್ಮಾಧಿಕರಣರ್ಗಿಂತೆಂದಂ :– ಹುಸಿಯದ ಬೇಹಾರಿಯೇ ಇಲ್ಲ. ನಾಂ ಬೇಹಾರಿಯಪ್ಪುದಱಿಂದೆಮ್ಮ ಜಾತಿ ಧರ್ಮಕ್ಕೆ ಧರ್ಮಬುದ್ಧಿಯ ಧರ್ಮಬುದ್ಧಿಯಾಗಿ ಧನಮಂ ಬಂಚಿಸಿಕೊಂಡೆನ್ನ ಮನೆಗುಯ್ವೆನೆಂಬನ್ನೆಗಂ ನೇಸರ್ಮೂಡಿದೊಡುಯ್ಯಲಿಂಬಿಲ್ಲದೆ ಮರದ ಪೊೞಲೊಳಗಿಟ್ಟು ಬಂದು ಮಱುದಿವಸಂ ಪೋಗಿ ನೋೞ್ಪನ್ನೆಗಂ, ಆ ಪೊನ್ನನೊಂದು ಪನ್ನಗಂ ಸುತ್ತಿಪಟ್ಟಿರ್ದೊಡೆ ಕೊಳಲಂಜಿ ಪೋದೆಂ; ನೀಮಿಲ್ಲಿರ್ದಂತೆ ನೋಡುತ್ತುಮಿರಿಂ, ಪೊೞಲೊಳಗೆ ಪೊಗೆಯನಿಕ್ಕಿ ಪಾವಂ ಪೊಱಮಡಿಸಿ



Downloaded from https:// www.studiestoday.com

Downloaded from https:// www.studiestoday.com

ಕಳ್ದುಕೊಂಡೊಡವೆಯಂ ಕುಡುವೆನೆಂದು ಧರ್ಮಬುದ್ಧಿ ಪುಲ್ಲಂ ಪುಳ್ಳಿಯಂ ತಱಿಸಿಯಾ ಪೊಱಲೊಳಡಗಿಸಿ ತುಂಬಿ ದುಷ್ಟಬುದ್ಧಿಯ ಮನೆಯೊಳ್ ಕಿಚ್ಚನಿಕ್ಕುವಂತೆ ಕಿಚ್ಚನಿಕ್ಕಲೊಡಂ ಪೊಗೆಸುತ್ತಿಯುರಿಯಟ್ಟಲ್ ಪ್ರೇಮಮತಿ ಧೃತಿಗೆಟ್ಟು ಪುಯ್ಯಲಿಟ್ಟು ಪೊಱಲೊಳಗಿಂದಂ ಸುರುಳ್ದುರುಳ್ದು ಕಂಠಗತ ಪ್ರಾಣನಾಗಿರ್ಪುದುಂ ಧರ್ಮಾಧಿಕರಣರ್ ಕಂಡು ದುಷ್ಟಬುದ್ಧಿಯ ತಂದೆಯಪ್ಪುದಂ ಸಂದೆಯಮಿಲ್ಲೆಂದಱಿದು–ಈ ಪಾಪಕರ್ಮನಪ್ಪ ದುಷ್ಪುತ್ರನಿಂ ನಿನಗಿಂತಪ್ಪ ದುರ್ಮರಣಂ ಸಮನಿಸಿದುದೆಂದು ನುಡಿವುದುಂ; ಪ್ರೇಮಮತಿಯಿಂತೆಂದಂ:– ಇನಿತನ್ಯಾಯಮನಾನೆ ಮಾಡಿದೆನೆನ್ನ ಮಗನ ಮೇಲೆ ದೋಷಮಾವುದುಮಿಲ್ಲೆಂದು ಲೋಕಾಂತರಿತನಾದಂ.

### ದುರ್ಗಸಿಂಹ

ಕನ್ನಡ ಪಂಚತಂತ್ರದ ಕರ್ತೃ ದುರ್ಗಸಿಂಹ. ಈತನು ಚಾಲುಕ್ಯ ಅರಸ 'ಸತ್ಯಾಶ್ರಯಕುಲ ತಿಲಕ' ನೆಂಬ ಬಿರುದಾಂಕಿತನಾದ ಜಗದೇಕಮಲ್ಲ ಅಥವಾ ಒಂದನೆಯ ಜಯಸಿಂಹನಲ್ಲಿ ಸಂಧಿ ವಿಗ್ರಹಿಯಾಗಿದ್ದನು. ಈತನ ಕಾಲ ಕ್ರಿ.ಶ. 1020 ಎಂದು ಊಹಿಸಲಾಗಿದೆ. ಸಂಸ್ಕೃತ ಕವಿ ವಸುಭಾಗ ಭಟ್ಟನಿಂದ ರಚಿತವಾದ 'ಸಂಸ್ಕೃತ ಪಂಚತಂತ್ರ'ವನ್ನು ಮೂಲವಾಗಿಸಿಕೊಂಡು 'ಕನ್ನಡ ಪಂಚತಂತ್ರ'ವನ್ನು ಬರೆದಿರುವನು. ನೈತಿಕತೆ, ರಾಜನೀತಿ ಹಾಗೂ ವ್ಯವಹಾರ ನೀತಿಗಳನ್ನು ಬೋಧಿಸುವ ಪಂಚತಂತ್ರದ ಕತೆಗಳು ಪ್ರಪಂಚದ ಹಲವಾರು ಭಾಷೆಗಳಿಗೆ ಅನುವಾದಗೊಂಡು ಬಹು ಜನಪ್ರಿಯವಾಗಿವೆ. ಪಂಚತಂತ್ರದಲ್ಲಿನ ಪಾತ್ರಗಳು ಪಶುಪಕ್ಷಿಮೃಗಗಳಿಂದ ಮೊದಲುಗೊಂಡು ಮನುಷ್ಯನವರೆಗೂ ಹರಡಿಕೊಂಡಿವೆ.

ಪ್ರಸ್ತುತ ಕಥಾಭಾಗವನ್ನು ಪಂಚತಂತ್ರದ 'ಭೇದಪ್ರಕರಣ' ದಿಂದ ಆರಿಸಿಕೊಳ್ಳಲಾಗಿದೆ. ಈ ಕಥೆಯಲ್ಲಿ ಧನದ ಲೋಭಕ್ಕೆ ಒಳಗಾಗಿ ತನ್ನ ಆಪ್ತಮಿತ್ರನನ್ನು ವಂಚಿಸಿ ಆತನ ಸ್ನೇಹವನ್ನಲ್ಲದೆ ತಂದೆಯನ್ನೂ ಕಳೆದುಕೊಂಡ ದುಷ್ಟಬುದ್ಧಿಯ ವೃತ್ತಾಂತವು ವರ್ಣಿತವಾಗಿದೆ.

### ಶಬ್ದಾರ್ಥ ವಿವರಣೆ

ವಣಿಕ–ವ್ಯಾಪಾರಿ; ಪದುವಿನೊಳ್– ಜೊತೆಯಲ್ಲಿಯೇ; ಪರದುವೋಗು – ವ್ಯಾಪಾರಕ್ಕೆ ಹೋಗು; ಪಚ್ಚುಕೊಳ್ವಂ–ಹಂಚಿಕೊಳ್ಳೋಣ, ಭಾಗಮಾಡಿಕೊಳ್ಳೋಣ;



Downloaded from https:// www.studiestoday.com

Downloaded from https:// www.studiestoday.com

ಬೀಯಕ್ಕೆ ತಕ್ಕನಿತು – ಖರ್ಚಿಗೆ ಸಾಕಾಗುವಷ್ಟು; ಬೀಯ – ವ್ಯಯ; ಆಯ– ಆದಾಯ; ಪೊನ್ – ಹೊನ್ನು; ಮಗುೞ್ದು – ಹಿಂತಿರುಗಿ; ನಿಜ–ತನ್ನ; ಬೀಡಂಬಿಟ್ಟು – ತಂಗಿ; ಮಡಂಗು–ಬಚ್ಚಿಡು; ತನ್ನ ಮನದನ್ನನ್–ತನ್ನಂತೆಯೆ ಮನವುಳ್ಳವನು ಎಂದು ತಿಳಿದು; ಮಹಾ + ವಟ + ವಿಟಪಿ – ಬಹುದೊಡ್ಡ ಆಲದ ಮರ; ಪೂೞ್ದಿ ಎಡೆಯೊಳ್ – ಹೂಳಿದ ಜಾಗದಲ್ಲಿ; ಕುೞಿ –ಗುಣಿ, ಹಳ್ಳ.

ಅನೃತಂ–ಸುಳ್ಳು; ಅತಿ ಕುಟಿಲ ಮನಂ – ಹೆಚ್ಚು ವಕ್ರವಾದ ಮನಸ್ಸಿನವ, ವಂಚನೆಯ ಮನಸ್ಸಿನವ; ಪುಯ್ಲಿಟ್ಟು – ಮೊರೆಯಿಟ್ಟು; ಪುಸಿ – ಸುಳ್ಳು ; ಮತಿಗೆಟ್ಟು (ಮತಿಯಂ + ಕೆಟ್ಟು) – ಬುದ್ಧಿಹೀನನಾಗಿ; ತಸ್ಕರಸ್ಯ ಅನೃತಂ ಬಲಂ – ಕಳ್ಳನಿಗೆ ಸುಳ್ಳೇ ಬಲವು; ಕಳವನಿಟ್ಟು (ಕಳವನ್ + ಇಟ್ಟು) – ಕಳ್ಳತನವನ್ನು ಹೊರಿಸಿ; ಕಾಪೞಿದು (ಕಾಪು + ಅಳಿದು) – ರಕ್ಷಣೆಯನ್ನು ನಾಶಮಾಡಿ; ಕಾತರಿಸು–ಕಳವಳಗೊಳ್ಳು; ತಕ್ಕೂರ್ಮೆ ಕಿಡಲ್– ಸಹಜವಾದ ಪ್ರೀತಿಯು ನಾಶವಾಗುವ ಹಾಗೆ; ಬಾಯಾರ್ದು – ಬಾಯಿ ಜೋರು ಮಾಡಿ; ಧರ್ಮಾಧಿಕರಣರ್ –ನ್ಯಾಯಾಧಿಕಾರಿಗಳು; ತತ್ ಪ್ರಪಂಚವುಮ್ ಎಲ್ಲಮಂ – ಆ ಸಂಗತಿಯುನ್ನೆಲ್ಲ; ಸಭಾಸದರ್ – ಸಭೆಯಲ್ಲಿರುವವರು, ಸಭಿಕರು; ತತ್ ಸನ್ನಿಧಾನ ಸ್ಥಿತಮಪ್ಪ – ಅಲ್ಲಿಯೇ ಸಮೀಪದಲ್ಲಿರುವ; ಅಶ್ರುತಪೂರ್ವ – ಹಿಂದೆಂದೂ ಕೇಳದೆ ಇರುವ; ಚೋದ್ಯ – ಆಶ್ಚರ್ಯ; ಮುನ್ನಂ – ಈ ಮೊದಲು; ಪರಮ ಗಹನಂ– ಅತಿ ಗಂಭೀರವಾದ; ಕರಂ – ಬಹಳ; ವೃತ್ತಾಂತ – ವಿಷಯ; ಪರಿಗ್ರಹಂ – ಬೇರೆಯವರ ಸ್ವತ್ತಿನ ಅಪಹರಣ; ಪೊೞಲ್ – ಪೊಟರೆ; ಬಳಾರಿಯ ಮನೆ– ಮಾರಿಯ ಗುಡಿ; ರಾಗಿಸಿ –ಸಂತೋಷಪಟ್ಟು; ವಟ ವಿಟಪಿ ಕೋಟರ ಕುಟೀರ ಅಂತರಮಂ – ಆಲದ ಮರದ ಪೊಟರೆಯಲ್ಲಿನ ಒಳಭಾಗವನ್ನು; ಪುಗಿಸಿ – ಹೊಗಿಸಿ.

ಪ್ರತ್ಯರ್ಥಿ– ಎದುರಾಳಿ, ಪ್ರತಿಪಕ್ಷದವ; ಬವರಮಂ ತಿರ್ದುವಂ – ಕಲಹವನ್ನು ಬಗೆ ಹರಿಸೋಣ; ಯಕ್ಷಾದಿ ದಿವ್ಯ ದೇವತಾ ಆವಾಸ – ಯಕ್ಷರೇ ಮೊದಲಾದ ಶ್ರೇಷ್ಠರಾದ ದೇವತೆಗಳ ವಾಸಸ್ಥಾನ; ನೆರವಿ – ಸೇರಿರುವ ಜನ ಸಮೂಹ; ಧರ್ಮ ಶ್ರವಣಂ – ಧರ್ಮ ಬೋಧೆ.

ಧರ್ಮೋ ಜಯತಿ ನಾಧರ್ಮ ಇತ್ಯಮೋಘಕೃತಂ ವಚಃ – ಧರ್ಮವು ಗೆಲ್ಲುವುದೇ ವಿನಾ ಅಧರ್ಮವಲ್ಲ ಎಂಬ ಮಾತು ವ್ಯರ್ಥವಾಗಲಿಲ್ಲ; ಬಲವಂದು – ಪ್ರದಕ್ಷಿಣೆ ಮಾಡಿ; ಬೇಹಾರಿ – ವ್ಯವಹಾರಿ; ಬಂಚಿಸು–ವಂಚಿಸು; ಪನ್ನಗ – ಸರ್ಪ; ಪಾವು–



Downloaded from https:// www.studiestoday.com

Downloaded from https:// www.studiestoday.com

ಹಾವು; ಪಟ್ಟಿರ್ದೊಡೆ–ಮಲಗಿರಲು; ನೇಸಱು–ಸೂರ್ಯ; ಪುಲ್ಲಂ ಪುಳ್ಳಿಯಂ–ಹುಲ್ಲು ಮತ್ತು ಕಡ್ಡಿಯನ್ನು; ಅಡಸಿ ತುಂಬಿ – ತುರುಕಿ; ಕಂಠಗತಪ್ರಾಣ – ಕುತ್ತಿಗೆಯವರೆಗೆ ಬಂದಿರುವ ಪ್ರಾಣ; ಅಟ್ಟಲ್ – ದಬ್ಬಲು; ಸಂದೆಯ – ಸಂದೇಹ; ಸಮನಿಸು–ಉಂಟಾಗು; ಲೋಕಾಂತರಿತನ್ ಆದಂ – ಮೃತನಾದನು, ಸತ್ತನು.

## ಸಂಕ್ಷಿಪ್ತವಾಗಿ ಬರೆಯಿರಿ

- 'ವಟವೃಕ್ಷಮೇ ಸಾಕ್ಷಿ' ಶೀರ್ಷಿಕೆಯ ಔಚಿತ್ಯದ ಕುರಿತು ಬರೆಯಿರಿ.
- ಧರ್ಮಬುದ್ಧಿಯು ತನ್ನ ವ್ಯವಹಾರ ಬುದ್ಧಿಯನ್ನು ಉಪಯೋಗಿಸಿಕೊಂಡ ಬಗೆಯನ್ನು ವಿವರಿಸಿರಿ.
- ಸಾವಿನ ದವಡೆಯಲ್ಲಿಯೂ ಮಗನ ರಕ್ಷಣೆಯನ್ನೇ ಮಾಡಿದ ಪ್ರೇಮಮತಿಯ ಪುತ್ರವಾತ್ಸಲ್ಯದ ಕುರಿತು ಬರೆಯಿರಿ.
- ಕೆಳಗಿನ ಮಾತುಗಳನ್ನು ಸಂದರ್ಭದೊಂದಿಗೆ ವಿವರಿಸಿರಿ.
  - ಮನುಷ್ಯನ ಸುಕೃತ ದುಷ್ಕೃತಂಗಳಂ ದೈವಂಗಳಱಿಗುಮ್
  - ವೃಕ್ಷಂ ಸಾಕ್ಷಿಯೆಂದು ಮುನ್ನಂ ಪೇೞ್ದಿರುಂ ಕೇಳ್ದರುಮಿಲ್ಲಂ
  - ಸಾಕ್ಷಿಯಾಗಿ ತಪ್ಪಿನುಡಿವರ್ಗೆ ಪಾಪಮೆ ಸಂಭವಿಸುವುದು.

## ಚಟುವಟಿಕೆಗಳು

- ಧರ್ಮಬುದ್ಧಿ, ದುಷ್ಟಬುದ್ಧಿ ಪಾತ್ರಗಳ ಗುಣಸ್ವಭಾವಗಳನ್ನು ತೌಲನಿಕವಾಗಿ ವಿಶ್ಲೇಷಿಸಿ ಪಾತ್ರಚಿತ್ರಣ ಮಾಡಿರಿ.
- ಕೆಳಗಿನ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳನ್ನು ಬಿಂಗಡಿಸಿ ಬರೆಯಿರಿ.

  ಉದಾ : ಮಧುರೆಯೆಂಬುದು <u>ನಗರಮಂತಾನಗರದೊಳಗೆ</u> ಧರ್ಮಬುದ್ಧಿಯುಂ <u>ದುಷ್ಟಬುದ್ಧಿಯುಮೆಂಬರಿರ್ವರ್</u> ವಣಿಕ್ಪುತ್ರರ್ ಪದುವಿನೊಳ್ ಪರದುವೋಗಿ ಪಿರಿದಪ್ಪ ಪೊನ್ನ ಪಡೆದು ಮಗೞ್ದುಬಂದು ನಿಜ ಜನ್ಮಭೂಮಿಯಪ್ಪ ಮಧುರಾಪುರದ <u>ಬಹಿರುದ್ಯಾನವನದೊಳಗೆ</u> ಬೀಡಂ <u>ಬಿಟ್ಟರ್ಧರಾತ್ರಿಯೊಳ್</u>......



Downloaded from https:// www.studiestoday.com

Downloaded from https:// www.studiestoday.com

## ಭಾಷಾಭ್ಯಾಸ

- ಕೆಳಗಿನ ಪದಗಳಲ್ಲಿ ಉಂಟಾದ ಬದಲಾವಣೆಯನ್ನು ಗಮನಿಸಿರಿ. ಈ ಬಗೆಯ ಇನ್ನು ಕೆಲವು ಪದಗಳನ್ನು ಪಾಠಭಾಗದಿಂದ ಸಂಗ್ರಹಿಸಿ ಬರೆಯಿರಿ.

  ಪರದ – ಹರದ

  ಪಾವು – ಹಾವು

  ಪೋಗು – ಹೋಗು

  ............................

- ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡದಲ್ಲಿ ಬರೆಯಿರಿ.

ನಾವೀಪೊನ್ನಂ ಪಚ್ಚುಗೊಂಡು ಮನೆಯೊಳ್ ಸ್ವೇಚ್ಛೆಯಿಂದಿರ್ಪವರಲ್ಲಂ, ಮತ್ತಂ ಪರದು ವೋಗಲೆವೇೞ್ಕುಮದು ಕಾರಣದಿಂ ನಿನಗಮೆನಗಂ ಬೀಯಕ್ಕೆ ತಕ್ಕನಿತು ಪೊನ್ನಕೊಂಡು ಮಿಕ್ಕ ಪೊನ್ನನೆಲ್ಲಮನಲ್ಲಿಯೆ ಮಡಂಗುವಮೆನೆ ಧರ್ಮಬುದ್ಧಿಯಾ ಪಾಪಕರ್ಮನಂ ತನ್ನ ಮನದನ್ನನೆಂದು ಬಗೆದುಮದರ್ಕೊಡಂಬಟ್ಟನ್.

### ಕಲಿಕಾ ಸಾಧನೆಗಳು

- ಕನ್ನಡ ಭಾಷಾ ಪ್ರಬೇಧಗಳನ್ನು ತಿಳಿದುಕೊಂಡು ಅವುಗಳ ವಿಶೇಷತೆಗಳನ್ನು ಕುರಿತು ಲಿಖಿತ ರೂಪದಲ್ಲಿ ಮಂಡಿಸುವುದು.
- ಪದನಿಷ್ಪತ್ತಿ, ಅರ್ಥ ವಿವರಣೆ, ನಾಮಪ್ರಕೃತಿ, ನಾಮವಿಶೇಷಣ, ಸರ್ವನಾಮ, ಧಾತು ಮೊದಲಾದ ವ್ಯಾಕರಣ ವಿಶೇಷತೆಗಳನ್ನು ತಿಳಿದುಕೊಂಡು ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುವುದು.
- ಓದಿದ ಗದ್ಯ – ಪದ್ಯ ಕೃತಿಗಳ ವಸ್ತು, ಭಾಷೆ, ಶೈಲಿ ಮೊದಲಾದವುಗಳ ವೈವಿಧ್ಯಗಳನ್ನು ಗ್ರಹಿಸಿಕೊಂಡು ಬಹುಮುಖಿ ರಚನಾ ಸಾಮರ್ಥ್ಯವನ್ನು ಗಳಿಸುವುದು.
- ಸಾಹಿತ್ಯ ಕೃತಿಗಳಲ್ಲಿ ಅಡಕವಾಗಿರುವ ಜೀವನ ಮೌಲ್ಯ, ಸಾಮಾಜಿಕ ನೀತಿ, ವಿಡಂಬನೆ ಮೊದಲಾದವುಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು.



Downloaded from https:// www.studiestoday.com